
ಪ್ರಬುದ್ಧ ಕರ್ಣಾಟಕ



೨೮೦

ಪ್ರಸಾರಾಂಗ :: ಮೈಸೂರು ವಿಶ್ವವಿದ್ಯಾನಿಲಯ

ಪ್ರಬುದ್ಧ ಕರ್ಣಾಟಕ

ಸಂಪುಟ ೭೧ ಸಂಚಿಕೆ ೨

೨೮೦

ಶ್ರೀಶುಕ್ಲ ಸಂವತ್ಸರ

ಆಷಾಢ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯

PRABUDDHA KARNATAKA, Kannada Quarterly of the *University of Mysore*, Volume 71, Number 2, July 1989, Edited by G. H. Nayak and Lakshminarayana Aurora.

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ಜಿ. ಎಚ್. ನಾಯಕ

ಲಕ್ಷ್ಮೀನಾರಾಯಣ ಅರೋರಾ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು

ಎಸ್. ಹನುಮಂತಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯ ಸೂಚಿ

೧	ಸಿದ್ಧನಂಜೇಶ್ವರ	ದಿ॥ ಎಂ. ಆರ್. ಶ್ರೀನಿವಾಸಮೂರ್ತಿ ಸಂ. ನಗುವನಹಳ್ಳಿ ಪಿ. ರತ್ನ	೧
೨	ಅರಿವಿನಾಚೆ (ಪದ್ಯ)	ಲತಾ	೨೨
೩	ಹಾಸನ ಜಿಲ್ಲೆಯ ಮಲೆನಾಡು ಗೌಡರ ಮದುವೆ ಸಂಪ್ರದಾಯಗಳು	ವೈ. ಸಿ. ಭಾನುಮತಿ	೨೩
೪	ಮಾಂತ್ರಿಕರು (ಪದ್ಯ)	ಕೆ. ಎಚ್. ಶ್ರೀನಿವಾಸ	೪೪
೫	ನಿತ್ಯಾತ್ಮ ಶುಕಯೋಗಿ	ಎಚ್. ಎಂ. ಶಂಕರನಾರಾಯಣ ರಾವ್	೪೫
೬	ವ್ಯಾಕರಣಶಾಸ್ತ್ರ	ಡಾ. ಕೆ. ಕೆಂಪೇಗೌಡ	೭೭
೭	ನನ್ನ ಅವ್ವ (ಪದ್ಯ)	ಚಂದ್ರಮತಿ ಸೋಂದಾ	೯೪
೮	ಹಾತಿಂ ತಾಯ್	ಎಂ. ಎಸ್. ಪುಟ್ಟಣ್ಣ ಸಂಗ್ರಹ: ಡಾ. ಎಚ್. ಎಸ್. ಸುಜಾತಾ	೯೫
೯	ಸ್ವಾಗತವ ಕೋರಿ (ಪದ್ಯ)	ಬಿ. ಜಿ. ಕನಕೇಶಮೂರ್ತಿ	೧೧೪
೧೦	ವೇಮನ	ರಾಳ್ಳಪಳ್ಳಿ ಅನಂತಕೃಷ್ಣಶರ್ಮ ಅನು: ಡಿ. ಆರ್. ವೆಂಕಟರಮಣನ್	೧೧೫
೧೧	ಅವಲೋಕನ		೧೨೭

ಲೇಖಕರು

೧	ನಗುವನಹಳ್ಳಿ ಪಿ. ರತ್ನ	ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬
೨	ಲತಾ	ಎಂ.ಎ. ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೩	ವೈ. ಸಿ. ಭಾನುಮತಿ	ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೫೭೦ ೦೦೬
೪	ಕೆ. ಎಚ್. ಶ್ರೀನಿವಾಸ	ಪಿ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಮುಂಬಾರಕ ಮೊಹಲ್ಲಾ, ಮೊಳಕಾಲ್ಮೂರು ೫೭೭ ೫೩೫
೫	ಎಚ್. ಎಂ. ಶಂಕರನಾರಾಯಣ ರಾವ್	ನಿವೃತ್ತ ಕನ್ನಡ ಪ್ರಾಧ್ಯಾಪಕರು, ಶಾರದಾ ಮಂದಿರ, ರಾಮಯ್ಯರ್ ರಸ್ತೆ ಕೃಷ್ಣಮೂರ್ತಿಪುರಂ ಮೈಸೂರು ೫೭೦ ೦೦೪
೬	ಡಾ. ಕೆ. ಕೆಂಪೇಗೌಡ	ಭಾಷಾವಿಜ್ಞಾನ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೭	ಚಂದ್ರಮತಿ ಸೋಂದಾ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೮	ಡಾ. ಎಚ್. ಎಸ್. ಸುಜಾತಾ	ಕನ್ನಡ ರೀಡರ್, ಡಿ. ಬನುಮಯ್ಯನವರ ಕಾಲೇಜು, ಮೈಸೂರು ೫೭೦ ೦೦೧
೯	ಬಿ. ಜಿ. ಕನಕೇಶಮೂರ್ತಿ	ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೧೦	ಡಿ. ಆರ್. ವೆಂಕಟರಮಣನ್	ಗೋಖಲೆ ಸಾರ್ವಜನಿಕ ಸಂಸ್ಥೆ, ನರಸಿಂಹ ರಾಜ ಕಾಲೋನಿ, ಬೆಂಗಳೂರು ೫೬೦ ೦೧೯
೧೧	ಡಾ. ಸೋಮಶೇಖರಗೌಡ	ಭಾಷಾವಿಜ್ಞಾನ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೧೨	ಡಾ. ವಿ. ಲಕ್ಷ್ಮೀನಾರಾಯಣ	ವೈದ್ಯಾಧಿಕಾರಿ, ಎಂ.ಐ.ಜಿ. ೫, ಗೋಕುಲಂ ೨ನೇ ಹಂತ, ಮೈಸೂರು ೫೭೦ ೦೦೨

ಡಾ|| ಎಂ. ಆರ್. ಶ್ರೀನಿವಾಸಮೂರ್ತಿ
ಸಂಗ್ರಹಣೆ : ನಗುವನಹಳ್ಳಿ ಪಿ. ರತ್ನ

ಸಿದ್ಧನಂಜೇಶ್ವರ

ಕವಿಗಳನ್ನು ಗಣಗಳಾಗಿ ಭಾವಿಸಿ ಅವರ ಜೀವನಚರಿತೆಗೆ ಪುರಾಣಸ್ವರೂಪವನ್ನು ಕೊಟ್ಟು ಕೃತಿರಚನೆ ಮಾಡಿರುವವರ ಪಂಗಡಕ್ಕೆ ವಿರಕ್ತ ತೋಂಟದಾರ್ಯನಂತೆ ಸಿದ್ಧನಂಜೇಶ್ವರನೂ ಸೇರಿದ್ದಾನೆ. ವೀರಶೈವಾಮೃತ ಮಹಾಪುರಾಣದ ಕರ್ತೃವಾದ ಮಲ್ಲಣಾರ್ಯನನ್ನು (೧೫೩೦) ಹೆಸರಿಸಿರುವುದರಿಂದಲೂ ಚತುರಾಚಾರ್ಯಪುರಾಣ ಕರ್ತೃವಾದ ಸಂಪಾದನೆಯ ಪರ್ವತೇಶನ (೧೬೭೫) ಗುರುವಿನ ಗುರುವಾದ ಸಂಪಾದನೆಯ ಸಿದ್ಧವೀರೇಶ್ವರಾಚಾರ್ಯನನ್ನು ಹೇಳಿರುವುದರಿಂದಲೂ ಈ ಕವಿ ಕವಿಚರಿತೆಕಾರರು ಹೇಳಿರುವಂತೆ ಸುಮಾರು ೧೬೫೦ರಲ್ಲಿ ಇದ್ದಿರಬೇಕು. ಹದಿನೇಳನೆಯ ಶತಮಾನದ ವೀರಶೈವ ಕವಿಗಳಲ್ಲಿ ಪ್ರಸಿದ್ಧರಾದ ಮೂರು ನಾಲ್ಕು ಮಂದಿಗಳಲ್ಲಿ ಇವನೂ ಒಬ್ಬನು. ಇವನ ಕವಿತಾ ಶೈಲಿ ಹೆಚ್ಚು ಕಡಮೆ ಮಹಾದೇವಿಯಕ್ಕನ ಪುರಾಣವನ್ನು ರೂಪಿಸಿದ ಚೆನ್ನಬಸವಾಂಕನ ಶೈಲಿಯನ್ನು ಹೋಲುತ್ತದೆ. ಪದ್ಯದ ಓಟ ಲಾಲಿತ್ಯ ಚಮತ್ಕಾರ —ಇವುಗಳೆಲ್ಲ ಚೆನ್ನಬಸವಾಂಕನ ಸ್ಮರಣೆಯನ್ನು ತರುತ್ತವೆ. ಇವನು ಬರೆದಿರುವ ಕೃತಿಗಳಲ್ಲಿ ರಾಘವಾಂಕನ ಕಾವ್ಯ ಮತ್ತು ಗುರುರಾಜಚಾರಿತ್ರ ದೊರೆತಿವೆ; "ಪಾವನಾತ್ಮಕ ತೋಂಟದ ಸಿದ್ಧದೇಶಿಕನ ಭಾವರತ್ನಾಭರಣಮುಂ ಬಸವಶತಕಗಳ" ಎಂದು ಗುರುರಾಜಚಾರಿತ್ರದಲ್ಲಿ ಹೇಳಿರುವ ಆ ಇನ್ನೆರಡು ಗ್ರಂಥಗಳು ದೊರೆತಿಲ್ಲ. ಈ ಕವಿ ಹುಬ್ಬಳ್ಳಿಯ ವೀರಶೈವ ಪೀಠದಲ್ಲಿ ಗುರುವಾಗಿದ್ದನೆಂದು ತೋರುತ್ತದೆ. "ಪೂವಲ್ಲಿಯಪುರದ ಸಿಂಹಾಸನಾಧಿಪ ಸಿದ್ಧನಂಜೇಶಚರಣಶತಪತ್ರಮಧುಕರ ಚಿಕ್ಕನಂಜೇಶ ವಿರಚಿಸಿದ ರಾಘವಾಂಕನ ಕೃತಿಯು" ಎಂದು ಹೇಳಿರುವುದರಿಂದ ಇವನಿಗೆ ಚಿಕ್ಕನಂಜೇಶನೆಂದೂ ಹೆಸರಿದ್ದಂತೆ ತಿಳಿಯಬೇಕು.

ರಾಘವಾಂಕ ಚಾರಿತ್ರ

ಪ್ರಾರಂಭದಲ್ಲಿ ನಂಜೇಶ್ವರ ಸ್ತೋತ್ರವಿದೆ. ಬಳಿಕ ಬಸವಾದಿಗಳನ್ನೂ ತೇರಸರು, ಷೋಡಶರು ಮೊದಲಾದವರನ್ನೂ ಸ್ಮರಿಸಿದ್ದಾನೆ. ಕವಿಗಳಲ್ಲಿ "ವರಜಕ್ಕಣಾಚಾರ್ಯ

ಚಾಮರಸ ಭೀಮರಸ ಗುರು ಮೊಗ್ಗೆಯಾಚಾರ್ಯ ಕಲ್ಲಮಠದಾಚಾರ್ಯ ಶೃಂಗಿರಾಜಾಚಾರ್ಯರು ಪರಮ ಪಾಲ್ಕುರಿಕೆ ಸೋಮಾಂಕ ಸಿದ್ಧಪ್ರಸಾದರು ಮಹಾದೇವಯ್ಯರೆನಿಪ ಸದ್ಬ್ರಹ್ಮಣ್ಯಾದಿರವಾದ ಗಣ್ಯಪುಣ್ಯರ ಚರಣಕೆನ್ನೆರ್ದೆಯನೊಸೆದು ಪಾದುಕೆಗೆಯ್ವೆನು" ಹೀಗೆ ಹಿಂದಿನವರ ಹೆಸರುಗಳನ್ನು ಹೇಳಿದ್ದಾನೆ. ಬಾಣ ಮಲುಹಣ ಕಾಲಿದಾಸಾದಿಗಳನ್ನೂ ಸ್ಮರಿಸಿದ್ದಾನೆ.

ಭಾಳಾಕ್ಷನಂ ಸ್ತುತಿಸಿ ಯೊಲಿಸಿಯನ್ಯಸಮಯ ಪ್ರ
ಜಾಲಮಂ ಗೆಲಿದ ಹಂಪೆಯ ಹರೀಶ್ವರನಮಳ
ಬಾಲಕನೆನಿಪ್ಪತಳ ರಾಘವಾಂಕ ಚರಿತ್ರಮಂ ಪೊಗಳಲಿಚ್ಛೈಸಿರ
ನಾಲಗೆಗಳೊಂದಿದ ಮಹಾಶೇಷಗರಿದೊಂದು
ನಾಲಗೆಯನಾಂತ ನರಗೆಂತು ಪವಣಕ್ಕು ಶಿವ
ಲೀಲಾಪ್ರಸಾದಮುಮನುಣ್ಣಲಾನಂದಮದ ತಲೆಗಡರಿಪೊಗಳ್ವೆನೊಲಿದು ೧–೧೭

ಈ ಮಹಾಕೃತಿಯನ್ನು ವರ್ಣಿಸಲು ತನ್ನಿಂದ ಸಾಧ್ಯವೇ "ಜಗನ್ನಾಥಗುರುಮೂರ್ತಿ ಸಿದ್ಧನಂಜೇಶ್ವರ ಎನ್ನ ಹೃತ್ಸರಸಿಜಾಲಯದ ಮಧ್ಯ ನಿಂದು" ಹೇಳಿನ್ನಲು "ಕನ್ನಡದ ಸಕ್ಕದದ ಪುರುಳರಿದು ಶಬ್ದಂಗಳನ್ನರಪಿ ಪ್ರಾಕೃತಾಪಭ್ರಂಶ ದೇಶೀಯ ವಿಭಕ್ತಿಗಳ ಬಳಿವಿಡಿವುತೆ" ಹೇಳಿದೆನು,

ಬಿಡದೆ ಸೋಡಂ ಬಾಡಮಿರದೂಳ್ದು ಕಬ್ಬಮಂ
ಜಡಿದು ಹೀನಂಗಳೆದು ಸವಿಯ ಸಣ್ಣಿಸಿ ಸುಖಮಂ
ನೆಡಹಿ ಜಾಣಂ ಕಾಣದ ಪ್ರೌಢಿಗೊಡವಿತ್ತು ಕರುಬನೆರೆ ಹುರಿಗೊಳಿಸುತೆ
ಕಡುದುರುಳತನದಿ ಮಚ್ಚರ ಮನೆಲಿದಿಚ್ಚೆಯಿಪ
ಮುಡಿಗಾರರೆದೆಗೆಗಿಚ್ಚಿಕ್ಕಿ ಶಿವಕವಿನಿಕರ
ದಡಿವಿಡಿದು ನಡಸುವೆನು ಮೃಡನೊಲ್ಮೆಯಂ ಪಡೆದ ರಾಘವಾಂಕನ ಚರಿತವಾ ೧–೧೮

ಅಣ್ಣಿವಾಲರಸಂಚೆಯುಂಬಂತೆ ಕೊತ್ತಳಿಗ —
ಳುಣ್ಣಬಲ್ಲುವೆ ವಸಂತದೊಳು ರಾಜಿಸುತಿರ್ಪ
ಪುಣ್ಣಿಮೆಯ ತಿಳಿಜೊನ್ನಮಂಚಕೋಗಿಗಳುಂಬವೋಲ್ ಬಕಂಗಳು ಕುಡಿಗುಮೇ
ಮಣ್ಣತಿಂಬೇಡಿ ತವರಾಜಮಂ ಬಲ್ಲುದೇ
ಪುಣ್ಯರ ಸುಜಿಹ್ವೆಯೊಳು ಶಿವಕಥಾಮೃತರಸವ
ಡೊಣ್ಣಿಗರ್ ಕಪಟಾಂಧರರಿವರೇ ಪರಮಸತ್ಕವಿಗಳರಿವಂದದಿಂ ೧–೧೯

ಇದುವೆ ರಸಿಕರ ರಸಾಯನ ಕಬ್ಬಿಗರ ಹಬ್ಬ
ವಿದು ಪ್ರೇಮದಿಂ ಕೇಳ್ವ ಜನದಕರ್ಣಾಭರಣ
ಮಿದುವೆ ಸೊಬಗರ ಸೊಬಗು ಕೋವಿದರ ಕೊರಲಹಾರಂ ಗಮಕಿಗಳಗಮಕವು
ಇದುವೆ ಭಾವದ ಪಕ್ಕೆಯಿದುವೆ ನವರಸದಿಕ್ಕೆ
ಯಿದು ಸದಾಚಾರ ಸುಖಸದನ ಮೋಹನವದನ
ಮಿದನೋದಿ ಕೇಳಿ ಲಾಲಿಸದರಾರ್ ಧರೆಯೊಳಗೆ ದಿವ್ಯ ಕಾವ್ಯಾಮೃತವನು ೧–೨೦

ಎಂದು ಕುಕವಿಗಳ, ದುರ್ಜನರ ನಿಂದೆಯನ್ನೂ ಆತ್ಮಪ್ರಶಂಸೆಯನ್ನೂ ಕಾವ್ಯ ಪ್ರಶಂಸೆಯನ್ನೂ ಮಾಡಿ ಮಹಾಭಾರತಕ್ಕೆ ಒಂದು ಪೆಟ್ಟು ಕೊಟ್ಟಲ್ಲದೆ ಮನಸ್ಸು ನಿಲ್ಲದಾಗಿ

"ಗುರು ತಂದೆ ತಾಯಿ ದಾಯಾದ್ಯರುಗಳಂ ಹತಿಸಿ
ನರಕಕಾಂತಾರಮಂ ಪೊಕ್ಕವರ ಕಥೆಯಲ್ಲ" ೧-೨೫

ಎಂದು ಜರೆದು ಪರ್ಯಾಯವಾಗಿ ಆ ಮಹಾಭಾರತದ ದಶಪರ್ವಗಳು ರಾಘವಾಂಕ ಚಾರಿತ್ರದಲ್ಲುಂಟೆಂದು ಜರೆದ ಕಾವ್ಯಕ್ಕೆ ಅಜ್ಞಾತವಾಗಿ ಪ್ರಾಶಸ್ತ್ಯವನ್ನೂ

ಶ್ರೀ ಮಹಾಲಿಂಗಸ್ಥಲಾದಿಪರ್ವಂ ಭಕ್ತಿ
ನಾಮ ವಿರಹಿತ ದುರ್ಮದಾಂಧಕರ್ಪುಗದ ಚಿ
ದ್ಧಾಮ ತತ್ವಾರಣ್ಯಪರ್ವ ಶಿವಲೀಲಾ ವಿಭಾಸಿತ ವಿರಾಟಪರ್ವಂ ೧-೨೩

ಎಂದು ಮುಂತಾಗಿ ಕೊಟ್ಟಿದ್ದಾನೆ. ಭೀಮಕವಿ ಬಸವಪುರಾಣವನ್ನು ಬರೆದಾಗ ಮೂಲದಲ್ಲಿ ಪಾಲ್ಕುರಿಕೆ ಸೋಮನಾಥನು ಬರೆದಿಲ್ಲದ ಈ ದಶಪರ್ವ ಕಥನವನ್ನು ಮಾಡಿ ದಾರಿ ತೋರಿಸಿದನಲ್ಲವೆ !

ಕವಿ ಬಳಿಕ ಸಮುದ್ರವನ್ನು ಸೇರುವ ಮುನ್ನ ಒಂದೊಂದು ಪದ್ಯದಲ್ಲಿ ಹಾರಿಸಿ ಭರತಖಂಡ ಅದರಲ್ಲಿರುವ ಅಂಗ ವಂಗ ಕಳಿಂಗ ಕರ್ಣಾಟಕಾದಿ ಹಲವು ದೇಶಗಳನ್ನು ಹೇಳಿ, "ಬಹು ದೇಶಂಗಳಾನೀಂಗಳಮಹಾ ಸೊಬಗ ಸೆರೆವಿಡಿದು ಕೊಂಡುರೆ ಬೆಡಂ ಗಾಂತು ಸಕಲ ಸೌರಂಭದಿಂದಿಹುದ ತಳಪಿಂಗಳ ಜಟಾಪಟಲನಮಲ ಪದಪದ್ಮದ್ಭೃಂಗ ಕುಂತಳದೇಶವು" ಎಂದು ಕುಂತಳದೇಶದ ವರ್ಣನೆಯನ್ನು ಮಾಡಿದ್ದಾನೆ.

ಸತಿಯರೆಲ್ಲರು ಪತಿವ್ರತೆಯರತಿಚೆಲುವೆಯರು
ಮತಿವಂತೆಯರು ಮನೋಹರವಿಲಾಸೆಯರು ಪಶು
ಪತಿಯಂಘ್ರಿ ಪರಿಚರಾರಂಭೆಯರು ಚಾತುರ್ಯಯುಕ್ತೆಯರು ಮೋಹಿನಿಯರು
ರತಿನಾಥಶಾಸ್ತ್ರ ಸಂಪನ್ನೆಯರು ಚೆನ್ನೆಯರು
ಮತಿಶಯದ ಜಾಣೆಯರು ಮಾಧುರ್ಯವಾಣಿಯರು
ಖತಿಯುಳಿದ ಮೆಲ್ಲೆರ್ದೆಯ ಮಾನಿನಿಯರುಂಟಲ್ಲದಿಲ್ಲವಾರಾಜ್ಯದಲ್ಲಿ ೧-೩೫

ತುಂಗಭದ್ರಾತೀರದಲ್ಲಿ ಪಂಪಾಪುರ. ಅಲ್ಲಿ "ಅರಿರಾಯಗಜಸಿಂಹ ದೇವರಾಜೇಂದ್ರ ಸಲೆ ಕೀರ್ತಿಕುವಲಯಚಂದ್ರನು" ಆಳುತ್ತಿದ್ದನು. ಆ ಪುರದಲ್ಲಿ ಮಹದೇವಭಟ್ಟ ಮತ್ತು ರುದ್ರಾಣಿ ಎಂಬ ಶೈವಬ್ರಾಹ್ಮಣ ದಂಪತಿಗಳು ಸುಖವಾಗಿ ಸಂಸಾರಮಾಡಿ ಕೊಂಡಿದ್ದರು.

ಹರ ಸುಪ್ರಸಾದ ಸದ್ಭಕ್ತಿ ಭೂತಳದಲ್ಲಿ
ಸ್ಫುರಿಸಿದರು ಸ್ತ್ರೀಪುರುಷರಾಗಿಯೆಂಬಂದದಿಂ
ಪರಿಶೋಭಿಸಿದರು ದಂಪತಿಗಳತಿಶಯಮೆನಿಪ ಮೋಕ್ಷಕ್ಕೆ ತವರಿದೆನಿಸಿ
ಪರಮಸುಜ್ಞಾನಿಗಳು ವಿಗತಾವಮಾನಿಗಳು
ಗುರುಪದಧ್ಯಾನಿಗಳುಮತುಳಾಭಿಮಾನಿಗಳು
ಚರಭಜನ ಸುಕೃತಿಗಳು ಲಿಂಗನಿಷ್ಠಾಮತಿಗಳಾಪುಣ್ಯದಂಪತಿಗಳು ೧-೪೬

ಹೀಗಿರುತ್ತಿರುವಾಗ ಮಹದೇವಭಟ್ಟನು "ಅಪುತ್ರಕಂಗಿಲ್ಲಗತಿ" ಎಂದು ಹೆಂಡತಿಗೆ ಹೇಳಲು ಆಕೆ ಚಿಂತಾಕ್ರಾಂತಳಾಗಿ ಶಿವನನ್ನು ಭಜಿಸಿ ಮಕ್ಕಳನ್ನು ಪಡೆದವರ ಕಥೆ ಗಳನ್ನು ಗಂಡನಿಂದ ತಿಳಿದು, ಸತಿಪತಿಗಳು ವಿರೂಪಾಕ್ಷನ ಸೇವೆಯನ್ನು ಮಾಡಿ

ಅನುಗ್ರಹ ಪಡೆದರು; ಶಿವನು “ಶಿರದಲಿಹ ನರುವಿರಿದ ಸೇವಂತಿಯೊಂದರಲನವರ ಮುಂದೆಸೆಗಿಟ್ಟನು.” ಇತ್ತ ಕೈಲಾಸದಲ್ಲಿ—

ಶಿವನು ತನ್ನಲ್ಲಿರ್ದ ಮಹಿಮೆ ರಾಘವವ ರಾ
ಘವವ ವೈರಾಗ್ಯದ ವಿವೇಕ ರಾಘವವ ರಾ
ಘವವ ಸರ್ವಜ್ಞತೆಯ ಸುಗುಣ ಶತರಾಘವವ ತೆಗೆದು ಪುತ್ಥಳಿಯ ಮಾಡಿ
ಅವನಿಯೊಳು ಶಿವಭಕ್ತದಾಸ್ಯರಾಘವವಂಕ
ವ ವಿರತಂ ನಿನಗಾಗಲೆಂದು ನೇಮಿಸಲು ಶಾಂ
ಭವ ಗಣಂ ರಾಘವಾಂಕನೆನುತ್ತ ಪೆಸರಿಟ್ಟು ಕರೆದರತಿಸಂತಸದೊಳು ‖ ೨–೨೧

ರಾಘವ ಗಣನಾಥನನ್ನು ನೀನು ಮಹದೇವಭಟ್ಟ ರುದ್ರಾಣಿಯರ ಗರ್ಭದಲ್ಲಿ ಜನಿಸೆಂದು ಶಿವನು ಅಪ್ಪಣೆಮಾಡಲು

ಹರ ಮಹಾದೇವ ನರಲೋಕದೊಳು ಜನಿಸಿ ನಿ
ನ್ನರುಮಹತ್ವವನೆಂತು ಕಾಣ್ಬೆನೆನೆ ನೀನಂಜ
ದಿರು ನಿನ್ನೊಳಿರ್ದು ಬಯಸಿದುದೀವೆನೆಂದು ನಂಬುಗೆಯಿತ್ತು ಬೀಳ್ಕೊಟ್ಟನು ೨–೨೨

ಹೀಗೆ ರಾಘವ ಗಣನಾಥನು ಭೂಮಿಯಲ್ಲಿ ಅವತಾರಮಾಡಿದನು. “ಸಂತಾನಲತೆಯಿಂದ ಪಕ್ವಫಲಮುದಯಾದ್ರಿಯಿಂ ತರುಣ ತರಣಿಯುದಯಿಸುವಂತೆ ಪುಂಭಾವ ಚಿಂತಾಮಣಿಯ ಚಿಣ್ಣನುದಯವಾಗಲುಜ್ಜುಗಿಸಿದನಿಳೆಮುದವಡೆಯಲು” ಆ ಪುತ್ರೋತ್ಪತ್ತಿಯಾಗುತ್ತಲೂ ಮಹದೇವಭಟ್ಟನು ಸಂತೋಷಭರಿತನಾಗಿ ತಮ್ಮ ವಂಶದ ಆಚಾರ್ಯನಾದ ಹರಿಹರಾಚಾರ್ಯನನ್ನು ಕರೆಸಿದನು.

ಮಿಸುಪಜಡೆಮುಡಿಯಿಂದೆ ಪಟ್ಟುಂಡಲದಿ ಶಿರದೊ
ಳೆಸೆವ ಲಿಂಗದಿ ಯಜ್ಞಸೂತ್ರದಿಂ ರುದ್ರಾಕ್ಷಿ
ವಿಸರಮಂ ತಳೆದವಯವಂಗಳಿಂ ಭಸಿತಾಂಗದಿಂದುಸುರ್ವಶಿವಮಂತ್ರದಿಂ
ಒಸೆದು ಕೈಗೆಯ್ದಕ್ಷಮಾಲೆಯಿಂ ಧೋತ್ರ ಶೋ
ಭಿಸುವ ಪಾವುಗೆ ಕಮಂಡಲು ಕೊಡೆಗಳಿಂದೆ ರಾ
ಜಿಸುತೆರಡನೆಯ ಶಿವನೋಯೆಂಬಂತೆ ಹರಿಹರೇಶ್ವರನಲ್ಲಿಗೈತಂದನು ೨–೩೪

ಹುಟ್ಟಿದ ಮಗುವಿಗೆ ಶೈವೋಪದೇಶವನ್ನು “ರಾಘವ, ರಾಘವಾಂಕ, ರಾಘವದೇವ” ಎಂಬ ಹೆಸರಿಟ್ಟನು. ಮಗುವಿಗೆ ತೊಟ್ಟಿಲಿಡುವುದು, ಹೆಂಗಸರ ಸಂಭ್ರಮ, ಆ ಮೇಲೆ ಬಾಲಲೀಲೆ, ಅಲಂಕಾರಾದಿಗಳು—ತಾಯಿಯ ಸಂತೋಷ—ಇವುಗಳನ್ನೆಲ್ಲ ಕವಿ ವರ್ಣಿಸಿ ಹುಡುಗನಿಗೆ ಏಳು ವರ್ಷಗಳಾಗುತ್ತಲೂ “ರಾಘವಾಂಕಂಗೆ ಮಿಗೆ ತಾಯಿ ತಂದೆಗಳು ಮನದೊಳಣುಗಂಗುಪನಯನ ಮಾಡುವೆವೆಂದು ನಿಶ್ಚೈಸುತೆ ಇಂದುಧರ ಭಕ್ತರಂಬರಿಸಿ ಹರಿದೇವರಂ ತಂದು ಗಾಯಿತ್ರಿಯುಪದೇಶಮಂ ಮಾಡಿಸಿ ಮುದಂದಳೆದು ಗಣನಿಕರಕಾರಾಧನೆಯ ಮಾಡಲನುವಾದ ಮಹದೇವ” ಎಂದು ಹೇಳಿದ್ದಾನೆ. ಹರಿಹರಾಚಾರ್ಯನು ಗಿರಿಜಾಕಲ್ಯಾಣ ಮತ್ತು ಶಿವಗಣಗಳ ರಗಳೆಯನ್ನು ಬರೆದ ಹರೀಶ್ವರನು. ಇವನ ವರ್ಣನೆಯಲ್ಲಿ ‘ಯಜ್ಞಸೂತ್ರದಿಂ’ ಎಂದೂ

ಮಹದೇವಭಟ್ಟನ ವಿಷಯದಲ್ಲಿ "ಶಿವ ಬ್ರಾಹ್ಮಣೋತ್ತಮ ಕುಲಪುನೀತ" ಎಂದೂ, ರಾಘವಾಂಕನ ವಿಷಯದಲ್ಲಿ ಉಪನಯವಾಗಿ 'ಗಾಯಿತ್ರಿಯುಪದೇಶಮಂ ಮಾಡಿಸಿ' ಎಂದೂ ಸಿದ್ಧನಂಜೇಶನು ಸ್ಪಷ್ಟವಾಗಿ ಹೇಳಿದ್ದಾನೆ. ವೀರಶೈವ ಮತದ ಸ್ವರೂಪ ವೇನು ? ಅದು ಕೇವಲ ಉಪನಯನ ತಿರಸ್ಕಾರದ, ಇಷ್ಟಲಿಂಗಾರಾಧನೆಯ ಸಂಕುಚಿತ ಸ್ವರೂಪದ್ದೋ ಅಥವಾ ಉಪನಯನಾದಿಗಳು ನಡೆದರೂ ವರ್ಣವ್ಯತ್ಯಾಸಗಳನ್ನು ಗಣಿಸದೆ ಇಷ್ಟಲಿಂಗವನ್ನೋ ಸ್ಥಾವರಲಿಂಗವನ್ನೋ ಅಥವಾ ಎರಡನ್ನೂ ಅಭೇದ ಭಾವದಿಂದ ಪೂಜಿಸುವ ವಿಶಾಲ ಸ್ವರೂಪದ್ದೋ ಎಂಬುದನ್ನು ಗೊತ್ತುಮಾಡುವುದು ಕಷ್ಟವಾಗಿದೆ. ಬಸವೇಶ್ವರನು ತಾನು ಹಾಕಿಕೊಂಡಿದ್ದ ಜನಿವಾರವನ್ನು ತೆಗೆದು ಹಾಕಿದನೆಂದು ಬಣ್ಣಿಸಿದ ಹರೀಶ್ವರನು ತಾನೇ ತನ್ನ ಶಿಷ್ಯ ರಾಘವಾಂಕನಿಗೆ ಯಜ್ಞ ಸೂತ್ರವನ್ನು ಹಾಕಿಸಿ ಗಾಯಿತ್ರಿಯುಪದೇಶವನ್ನು ಮಾಡಿಸಿದನು. ಇದರ ಸಾಂಗತ್ಯ ಹೇಗೆ ? ಎಂಬ ಪ್ರಶ್ನೆಗಳು ಬರುವುದರಿಂದ ವಿಶಾಲ ದೃಷ್ಟಿಯಿಂದ ಯಾವುದೊಂದು ಮುನ್ನೊಲವಾಗಲಿ ಪೂರ್ವ ದ್ವೇಷವಾಗಲಿ ಇಲ್ಲದೆ ಸಮಾಧಾನಚಿತ್ತದಿಂದ ಆಲೋಚಿಸ ಬೇಕಾದ ಅಂಶವಿದು ಎಂದು ಸೂಚಿಸಬೇಕಾಗಿದೆ.

ಉಪನಯನವಾದ ತರುವಾಯ ತಂದೆತಾಯಿಗಳು ತಮ್ಮ ಮಗನನ್ನು ಹರೀಶ್ವರನ ವಶಕ್ಕೆ ಒಪ್ಪಿಸಿ "ಚತುರ್ದಶವಿದ್ಯೆಗಳ ಕಲಿಸಿ ಪೊರೆವುದೆಮ್ಮಂ ಕರುಣದಿಂದ" ಎಂದು ಪ್ರಾರ್ಥಿಸಲು ಹಾಗೆಯೇ ಆಗಲೆಂದು ಆಶ್ರಮಕ್ಕೆ ಕರೆದುಕೊಂಡು ಹೋಗಿ ಎಲ್ಲ ವಿದ್ಯೆಗಳನ್ನೂ ಹೇಳಿಕೊಟ್ಟನು ; ವೀರಶೈವ ಸಿದ್ಧಾಂತದ ಭಾಗಗಳನ್ನು ತಿಳಿಸಿದನು. ಸಂಸ್ಕೃತ ಮತ್ತು ಕನ್ನಡ—ಎರಡು ಭಾಷೆಗಳಲ್ಲಿಯೂ ಕವಿತಾಶಕ್ತಿ ನಾಟಕ ವ್ಯಾಕರಣಾದಿಗಳಲ್ಲಿ ಪಾಂಡಿತ್ಯ—ಎಲ್ಲವನ್ನೂ ಪಡೆದು ಕವಿಶರಭ ಭೇರುಂಡನಾಗಿ ರಾಘವಾಂಕನು ಪ್ರಸಿದ್ಧನಾದನು.

ವಾರಿಜೋದ್ಭವನಮರ ಗುರುವಾಣಿ ಫಣಿರಾಜ
ನೀ ರಾಘವನ ಸತ್ಕವಿತ್ವಕ್ಕೆ ಚತುರತೆಯ
ಚಾರುಬುದ್ಧಿಗೆ ಸರಸವಾಕ್ಯಕ್ಕೆ ಬಹುವಿಧದ ವ್ಯಾಖ್ಯಾನ ಶಕ್ತಿಗಳ್ಗಿ
ಸಾರಿದಂ ಜಡಜಭವನಾವಮಮಂ ಸ್ವರ್ಗಮಂ
ಸೇರಿದಂ ಗಂಡನಮೊಗಂಬೊಕ್ಕಡಂಗಿದಳು
ಮಾ ರಸಾತಳಕಿಳಿದನೆನಲುಳಿದ ಬುಧಕುಲದ ವಾರ್ತೆಯೇನವನ ಮುಂದೆ ೨—೫೯

ರಾಘವಾಂಕನು ಗುರುಪೂಜೆ ಶಿವಪೂಜೆ ಚರಪೂಜಾದಿಗಳಲ್ಲಿ ನಿರತನಾಗಿದ್ದು ಶಿವನನ್ನು ಕುರಿತು ಕಾವ್ಯರಚನೆ ಮಾಡುತ್ತಾ ಒಂದು ದಿನ ವಿರೂಪಾಕ್ಷನಾಲಯಕ್ಕೆ ಹೋಗಿ ಮಹೇಶ್ವರನನ್ನು ಪೂಜೆಮಾಡಿ ಸ್ತೋತ್ರಮಾಡಿದನು :

ಏಣಾಂಕಶತಪತ್ರ ಮಿತ್ರ ಹುತವಹನೇತ್ರ
ಕ್ಷೋಣೀಧರಾತ್ಮಜೇಶ್ವರ ಶರಣಸುರಭೂಜ
ಬಾಣಮಲುಹಣ ಮಲಯರಾಜಾದಿ ವಿಮಲ ಸತ್ಕವಿ ಮನೋರಥದಾಯಕ

ವಾಣೀಶಶಾರ್ಙಿ ಪುರುಹೂತ ಮುಖ್ಯಾಮರ
ಶ್ರೇಣಿ ಮಣಿಮಕುಟ ಘಟಿತಾಂಘ್ರಿ ಪಂಕಜ ಪಂಚ
ಬಾಣ ತನುಕಕ್ಷ ಸಪ್ತಾರ್ಚಿ ಪಂಪಾಪುರಾಧೀಶ ಸಲಹೆನುತಿರ್ದನು ೩—೪

ಎಂದು ಮುಂತಾಗಿ ಸ್ತೋತ್ರಮಾಡಲು ವಿರೂಪಾಕ್ಷನು ಪ್ರತ್ಯಕ್ಷನಾಗಿ "ಕಂದ ಬಾರೆಂದಪ್ಪಿ ಮುಂಡಾಡಿ ತಲೆದಡಹಿಯುಂದವಹ ರತ್ನಕುಂಡಲ ಕಿರೀಟಕರಾಂಗದಂಗಳಂ ಕೊಟ್ಟಿನಲಿಸಿ", "ಎಲೆ ಮಗನೆವೊದಗುವುವು ನಿನಗೆ ಸಕಲಾಭೀಷ್ಟವಸ್ತುಗಳು ಇದಕ್ಕೆ ಸಂಶಯುಮೆ ಸಕಲಾರಾಧ್ಯವಹೆ ಶರಣರೆಂದಿದಂ ಮಿಾರದಿಹುದು ಪದಪಿಂಗೆ ನುಡಿದು ದೆಲ್ಲಂ ಸಿದ್ಧಿಯುಹುದಿಲ್ಲಿಗಧಿಪನಹ ರಾಜಸಭೆಗೆಯ್ದೆಂದು ಬೆಸಸಿ" ಲಿಂಗದಲ್ಲಡಗಿದನು. ಪರಮೇಶ್ವರನು ಅಪ್ಪಣೆ ಕೊಡಿಸಿದಂತೆ ರಾಜಸಭೆಯನ್ನು ಹೊಕ್ಕು ದೊರೆಗೆ ಆಶೀರ್ವಾದಮಾಡಿ ವಿಭೂತಿಯನ್ನು ಕೊಡಲು, ಅವನು ಕೈಹಿಡಿದು ಉನ್ನತಾಸನದಲ್ಲಿ ಕುಳ್ಳಿರಿಸಿ ವಿನಯೋಪಚಾರಮಾಡಿದನು ಮತ್ತು ರಾಘವಾಂಕನಿಂದ ಶಿವಮಹಾಧಿಕ್ಯ ವನ್ನು ಕೇಳಿ ಸಂತೋಷಿಸಿ "ಕವಿ ಶರಭ ಭೇರುಂಡನೆಂಬ ಪಾದದ ಪೆಂಡೆಯುವನಿತ್ತು... ಇಭಾರೋಹಣಂಗೈದನು" ಬಳಿಕ ದೊರೆಯ ಇಚ್ಛಾನುಸಾರ ಹರಿಶ್ಚಂದ್ರಕಾವ್ಯವನ್ನು ರಚಿಸಿದನು. ಅದರ ಸಂಗ್ರಹವನ್ನು ಸಿದ್ಧನಂಜೇಶನು ತನ್ನ ಕೃತಿಯಲ್ಲಿ ಕೊಟ್ಟಿದ್ದಾನೆ. ಆಗ "ತತ್ಕಾವ್ಯಮಂ ಪೊನ್ನಪರಿಯಾಣದೊಳಿರಿಸಿ ಪಲ್ಲಕ್ಕಿಯೊಳು ಮಡಗಿ ಮಿಗೆ ರಾಘವೇಶ್ವರನ ಗಜಮಸ್ತಕದ ಮೇಲೆ ಕುಳ್ಳಿರಿಸಿ ನೃಪ ವೇತ್ರಮಂ ಪಿಡಿದು" ಮುಂದೆ ಹೊರಟನು. ತರುವಾಯ ರಾಘವನು ತನ್ನ ಗುರುವಿನ ಬಳಿಗೆ ಬಂದು ವ್ಯೆಯಿಕ್ಕಿದನು. "ಖಂಡಪರಶುವಿನ ನಿಜರೂಪ ಹರಿಹರದೇವ ಪರಮ ಶಿವಭಕ್ತರುಗಳಾತಂಡಕ್ಕೆ ಬಸವ ಪ್ರಮುಖ ಗಣದಮಹಿಮೆಯುದ್ದಂಡತೆಯ ಪೇಳುತಿರೆ" ರಾಘವನು "ಪೊನ್ನ ಪರಿ ಯಾಣದೊಳು ಕೊಂಡೊಯ್ದು ಮುಂದಿಟ್ಟು ನಾನುಸುರ್ದುದೀ ಹರಿಶ್ಚಂದ್ರ ಕೃತಿ ಯೆಂದು" ಹೇಳಿದನು.

ಮಾನವರ ಕಥೆಯನ್ನು ಬರೆದೆಯಾ ಎಂದು ಹರೀಶ್ವರನು ಕೂಡಲೇ ಹಲ್ಲುಗಳ ನ್ನುದುರಿಸಲಿಲ್ಲ. ನೇರವಾದ ಕಾರಣ ಅದಲ್ಲ; ಮೂಲಕಾರಣವೇನೋ ಹರಿಶ್ಚಂದ್ರ ಕಾವ್ಯವೇ. ನಡೆದುದನ್ನು ಸಿದ್ಧನಂಜೇಶನ ಮಾತುಗಳಲ್ಲಿ ಕೇಳೋಣ :

ಮಡಗೆ ನೋಡದೆ ತನ್ನೊಡನೆ ಮಾತನಾಡದಿರ
ಲಡಿಗೆರಗಿ ದೇವ ನಿಮ್ಮಿಂದಲೀ ಕಾವ್ಯ ಜಸ
ವಡೆವುದೀ ಜಗದೊಳಗೆಯೆಂದಾನು ತರೆ ಸುಮ್ಮನಿರ್ಪುದೇಂ ಕಾರಣವೆನೆ
ಮೃಡಕಥಾಕಥನಕಲ್ಲದೆ ರಾಜಕಥೆಗೊಡಂ
ಬಡದೆಮ್ಮಮನವಿಲ್ಲಿಗೇಕೆ ತಂದ್ಯೆ ಕುಜನ
ರೆಡೆಗೊಯ್ದು ಕೇಳಿಸಿದೊಡವರು ನಿನ್ನ ಮನಕ್ಕೆ ಮುದವನಿತ್ತಪರೆಂದನು ೪—೧೪

ಸೋದರ ಮಾವನೂ ಗುರುವೂ ಆದವನು ತನ್ನ ಮನೋಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದನೇ ಹೊರತು ಕೋಪಗೊಂಡು ಕಪಾಳಕ್ಕೆ ಹೊಡೆಯಲಿಲ್ಲ. ರಾಘವಾಂಕನಿಗೆ

ನಮಗೆಲ್ಲ ತೋರುವ ವಾದವೇ ತೋರಿಬಂದು ಸ್ವಲ್ಪ ಮರ್ಯಾದೆ ಮೀರಿ ವಾದಿಸ ತೊಡಗಿದನು.

ನೊಂದು ಹರಿಹರನ ನುಡಿಗೇಳಿ ರಾಘವ ಮನಂ
ಗುಂದಿ ರಾಜ್ಯವನಾಳಿಯನ್ನೃತದಿಂ ನರಕಕ್ಕೆ
ಸಂದವರ ಕಥೆಯೇಂ ಸತ್ಯಕ್ಕಾಗಿ ಸತಿಯ ಸುತನಂ ರಾಜ್ಯಮಂ ತನ್ನುಮಂ
ಕುಂದದಿತ್ತೀಶನೊಲಿಸಿದವನ ಕಥೆಯನೇ
ನೆಂದು ಜರಿಮಿರಿ ಗುರುವರಾ ವಾದಿಸಲುಬಾರ
ದೆಂದಾಡಿ ತೋರುವೆನು ಚೋಳಾದಿಗಳ ಕಥೆಯನೇಕೆ ಪೇಳ್ದಿರಿಯೆಂದನು ೪–೧೫

ಆಗಲೂ ಹರಿಹರನು ಶಾಂತಿಗೆಡಲಿಲ್ಲ. ಪ್ರಶ್ನೆಗೆ ತಕ್ಕ ಸಮಾಧಾನವನ್ನು ಹೇಳಿದನು :

"ತರಳ ನೀನರಿಯೆ ಶಿವನೊಲಿದಾಗ ಕೈವಲ್ಯ
ದಿರವಿಂಗೆ ಮನವೀಯದಿರಲವರ ಪೊಗಳ್ದಪೆವೆ
ನರಪತಿ ಹರಿಶ್ಚಂದ್ರ ಶಂಭುವನೊಲಿಸಿ ಪಾಪಕೊಳಗಪ್ಪ ತದ್ರಾಜ್ಯದ
ಸಿರಿಯಂ ಪಡೆದನವಂ ಭಕ್ತರೊಳಗಲ್ಲ ೪–೧೬

ಎಂದು ಗುರು ಹೇಳಿದರೆ ರಾಘವಾಂಕನು ಸುಮ್ಮನಿರದೆ "ಗುರುವೆ ಕಿರಿಯರು ಹರಿಶ್ಚಂದ್ರಗಿಂದವರು" ಎಂದು ಚೋಳಾದಿ ಶಿವಶರಣರನ್ನು ತಿರಸ್ಕರಿಸಿ ನುಡಿದನು. ಹರಿಹರನು ಅದನ್ನು ಸೈರಿಸದೆ "ತರಹರಿಸದಿಡೆ ಪಾದುಕೆಯೊಳು ರಾಘವನ ಮುಂಬಲ್ಗಳ ಚಿ ಧರೆಗುರುಳ್ದವು". ರಾಘವಾಂಕನು ಶರಣನಿಂದಾಪರನೂ ಗುರುದ್ರೋಹಿಯೂ ಆದನು. ಹರೀಶ್ವರನಿಗೆ ಕರಣತತಿ ಕಲಕಿಹೋಯಿತು. ಹರಿಹರ ವಿರೂಪಾಕ್ಷ ಶಿವನಿಂದೆ ಗೇಳ್ದನೀ ಹರಣಂಗಳಿವೇನು ಎಂದು ತುಂಗಭದ್ರಾನದಿಗೆ ಹೊರಟು ಬೀಳಲುದ್ಯುಕ್ತನಾದನು. ಆಗ ಅಶರೀರವಾಣಿ ಆತ್ಮಘಾತವನ್ನು ಮಾಡಿಕೊಳ್ಳಬೇಡ, ಸೈರಿಸು, ಎಂದು ಹೇಳಲು ಸ್ವಲ್ಪ ಶಾಂತನಾಗಿ ಆಶ್ರಮಕ್ಕೆ ಹಿಂದಿರುಗಿದನು.

ಇತ್ತ ರಾಘವಾಂಕನ ಮನಸ್ಸು ಸಹ ಕಲಕಿಹೋಯಿತು. ರಾಜಸಭೆಯಲ್ಲಿ ಕವಿಗಳು ತನ್ನನ್ನು ಹೊಗಳಿ ದೇವರಾಜನು ತನ್ನನ್ನೂ ಕಾವ್ಯವನ್ನೂ ಮೆರೆಯಿಸಿದಾಗ ಆಕಾಶಕ್ಕೇರಿದ್ದವನು ಈಗ ಪಾತಾಳಕ್ಕೆ ಬಿದ್ದುಹೋದನು. ಗುರುವಿನೊಡನೆ ವಾದಿಸಿದ್ದು ಶರಣರನ್ನು ಧಿಕ್ಕರಿಸಿದ್ದು ಮಹಾಪರಾಧಗಳೆಂದು ಬೋಧೆಯಾಗಿ ಏನು ಮಾಡುವುದಕ್ಕೂ ತೋರದೆ ವಿರೂಪಾಕ್ಷಾಲಯಕ್ಕೆ ಹೋಗಿ ಸ್ವಾಮಿಯ ಮುಂದೆ ಗೋಳಾಡಿದನು. ಆದರೂ ಸ್ವಾಮಿಯು ಮೌನದಿಂದಿರಲು "ಕೊರಲಂ ತರಿದುಕೊಳ್ಳಲುಜ್ಜುಗಿಸಲು" ಹೋ ಹೋ ನಿಲ್ಲು ಗುರು ಮುನಿದಿರಲು ಹರನು ಕಾಯುವನೇ? ಗುರುವಿನ ಬಳಿಗೆ ಹೋಗಿ ಶರಣಾಗತನಾಗು—ಎಂಬ ಆಕಾಶವಾಣಿಯಾಯಿತು. ಶಿಷ್ಯನು ಗುರುವಿನ ಬಳಿಗೆ ಬಂದು ಪ್ರಸನ್ನನಾಗೆಂದು ಬೇಡಿಕೊಂಡನು. ಹರಿಹರನು ಪ್ರಸನ್ನನಾಗಿ "ನರಸ್ತುತಿಯ ದೆಸೆಯಿಂದಲಿಂತಪ್ಪ ಪರಿಭವಂಬಟ್ಟೆ ಸ್ವಪ್ನದೊಳಾದಡಿನ್ನು ಶಂಕರನ ತತ್ ಪ್ರಮಥರ ಪುರಾತನರನಲ್ಲದಿತರರ ತುತಿಸಬೇಡೆಂದನು." ಹಾಗೆಯೇ ಮುಂದಕ್ಕೆ ಅಷ್ಟಾವರಣಗಳ ಮಹಾತ್ಮೆಯನ್ನು ತಕ್ಕ ಶರಣರ ಕಥೆಗಳನ್ನು ಹೇಳುತ್ತಾ

ರಾಘವಾಂಕನಿಗೆ ತಿಳಿಸಿದನು. ಈ ವಿವರಣೆ ಐದನೆಯ ಸಂಧಿಯಿಂದ ಹಿಡಿದು ಹನ್ನೆರಡನೆಯ ಸಂಧಿ ಪೂರ್ತಿ ಇದೆ. ಹೀಗೆ ಎಲ್ಲವನ್ನೂ ಉಪದೇಶಿಸಿದ ಮೇಲೆ “ ಮತಿಗೆಡದೆ ಶಿವಭಕ್ತರಾಳಾಗುತಲಿ ಮನೋರಥಕರ ವಿರೂಪಾಕ್ಷನಂಘ್ರಿಯಂ ಭಜಿಸುತಪ್ರತಿಮರಹ ಶಿವಶರಣ ಚಾರಿತ್ರಗಳನುಸುರೆ ಪೂಜ್ಯನಹೆ ಭೂತಳದೊಳು ” ಎಂದು ಬುದ್ಧಿ ಹೇಳಿದನು. ರಾಘವನು ವಿರೂಪಾಕ್ಷನಲ್ಲಿಗೆ ಬಂದು ಸ್ತೋತ್ರಮಾಡಲು ಪರಮೇಶ್ವರನು ಪ್ರಸನ್ನನಾಗಿ ಹಿಂದೆ ನಾನು ಮೌನವಾಗಿದ್ದು ನಿನ್ನನ್ನು ಕಾಡಿದೆನು ಆಗ ನೀನು ಗುರುಕರುಣವನ್ನು ಕಳೆದುಕೊಂಡಿದ್ದೆ ಈಗ ಗುರು ಕಾರುಣ್ಯವನ್ನು ಪಡೆದು ಬಂದಿರುವೆ “ ಹರ ಮುನಿದೊಡಂ ಪರಮಗುರುಕಾಯ್ವ ಗುರು ಮುನಿಯೆ ಹರಕಾಯಲರಿಯ ನಗೆದೋರದಿಹಂ ” ಎಂದು ಹಿಂದೆ ನಾನು ಗಿರಿಜಾತೆಗೆ ಹೇಳಿದೆನು. ಆ ಮಾತಿಗೆ ಹೆದರಿ ನಾನು ಸುಮ್ಮನಿದ್ದೆ —ಎಂದು ಮುಂತಾಗಿ ಸಮಾಧಾನ ವಾಕ್ಯಗಳನ್ನಾಡಿ

ಅಮರ್ದಪ್ಪಿ ಹರನು ಕಾರುಣ್ಯ ಪ್ರಸಾದಮಂ
ಮಮತೆಯಿಂ ರಾಘವನ ಜಿಹ್ವೆಯೊಳು ನೀಡಿ ನೀಂ
ಪ್ರಮಥರ ಪದಾಂಬುಜವನೆರಡಳಿದು ತುತಿಸು ಶಿವಭಕ್ತರೊಳು ಗರ್ವ ಬೇಡ
ವಿಮಲಗುರುವಾಜ್ಞೆಯಂ ಮೀರದಿರು ಮಿಗೆ ಸಕಲ
ಕುಮತಿಗಳ ಗೆಲ್ವೆ ನೀಂ ನುಡಿವ ನುಡಿ ವೇದಾರ್ಥ
ಭ್ರಮೆಗೊಳ್ಳದಿರು ಸದಾ ನಾನು ನಿನ್ನೊಡನಿರ್ಪೆನೆಂದು ಶಂಕರ ಬೆಸಸಿದಂ ೧೩–೧೨

ಇದಾದ ತರುವಾಯ ರಾಘವಾಂಕನು ಸೋಮನಾಥ ಚಾರಿತ್ರವನ್ನು—ಆದಯ್ಯನ ಕಥೆಯನ್ನು—ಬರೆದನೆಂದು ಹೇಳಿ ಕವಿಯು ಅದರ ಸಂಗ್ರಹವನ್ನು ಯಥಾವತ್ತಾಗಿ ಕೊಟ್ಟಿದ್ದಾನೆ. ಬಳಿಕ “ ಶರಭಚಾರಿತ್ರಮಂ ಸಂತಸದಿ ಪೇಳ್ದನವನೀತಳಂ ಕೊಂಡಾಡೆ ರಾಘವೇಶ್ವರಸಂತತಿನೆ ” ಎಂದು ಅದರ ಸಂಗ್ರಹವನ್ನು ಹೇಳಿದ್ದಾನೆ. ಹೀಗಿರುತ್ತಿರಲು ರಾಘವಾಂಕನ ಕೀರ್ತಿ ನಾಲ್ಕು ದಿಕ್ಕುಗಳಲ್ಲೂ ಹರಡಿತು

ಸುರಸಭಾವನಯುತಂ ಕವಿತೆಯೊಳು ಹೃದಯದೊಳು
ಸುರಸಭಾವನಯುತಂ ಮನದೊಳು ಯುಕ್ತನು
ಸುರಸಭಾವನಯುತಂ ತಾನಲ್ಲದಿಲ್ಲೆನುತ ಸತ್‌ಪಂಡಿತರು ಸ್ತುತಿಸಲು
ಹರಿಹರ ಮಹೋದಯಂ ಶುಶ್ರೂಷೆಗೆಯ್ದು ನರ
ಹರಿಹರ ಮಹೋದಯಂ ಕಾಕತಿಪ ಸಭೆಯಲ್ಲಿ*
ಹರಿಹರ ಮಹೋದಯಂ ಶರಣಾಗತರ್ಗೆನಿಸಿ ಮೆರೆದನಾ ರಾಘವಾಂಕಂ ೧೪–೨೫

ಮತ್ತು “ ಗುರು ಶ್ರೀ ವಿರೂಪಾಕ್ಷನತಿಕೃತಿ ಪಡೆದು ಧರೆ ಪೊಗಳೆ ಶಿವಲೋಕವ ಓತ್ತೈದಿದುದ್ಭಟ ಮಹಾದೇವ ಶಿರಿಯಾಳ ಜಾತವೇದಯ್ಯ ಮೊದಲಾದವರ ಕಥೆಗಳಂ ಪ್ರೀತಿಯಿಂ ಪೇಳುತ್ತ ” ಎಂದಿರುವುದರಿಂದ ರಾಘವಾಂಕನು ತನ್ನ ಸೋದರಮಾವನು ರಗಳೆಗಳಲ್ಲಿ ಹೇಳಿದ ಕಥೆಗಳನ್ನು ತಾನೇನಾದರೂ ಷಟ್ಪದಿಗಳಲ್ಲಿ ಬರೆದನೇ ? ಹಾಗೆ ಬರೆದಿದ್ದರೆ ಆ ಕೃತಿಗಳು ಎಲ್ಲಿ ? ಎಂಬ ಸಂದೇಹವುಂಟಾಗುತ್ತದೆ. ಅದು ಹೇಗಾದರೂ

* ಇನ್ನೂ ಓರುಗಲ್ಲಿಗೆ ಹೋಗಿರಲಿಲ್ಲ. ವೀರೇಶಚರಿತೆಯನ್ನು ಬರೆದಿರಲಿಲ್ಲ. ಆದರೂ ಕವಿ ಈ ಹೆಸರುಗಳನ್ನು ಇಲ್ಲಿ ಸೇರಿಸಿದ್ದಾನೆ.

ಇರಲಿ. ಹರಿಹರ ಮತ್ತು ರಾಘವಾಂಕರ, ಮುಖ್ಯವಾಗಿ ಹರಿಹರನ, ಕೀರ್ತಿಯನ್ನು ಕೇಳಿ ಕುಮಾರವ್ಯಾಸನು ತನ್ನ ಗೋಷ್ಠಿಯೊಡನೆ ಪಂಪಾಪುರಕ್ಕೆ ಬಂದನಂತೆ. ನಮ್ಮ ಕನ್ನಡ ಸಾಹಿತ್ಯದಲ್ಲಿ ಭಕ್ತ್ಯುಪಾಸಕರಾಗಿ ಕೇಳುವವರನ್ನು ರೋಮಾಂಚಗಾತ್ರ ರನ್ನಾಗಿ ಮಾಡುತ್ತ ಕಾವ್ಯಾನಂದದಲ್ಲಿ ತಲ್ಲೀನರಾಗುವಂತೆ ಮಾಡುವ ಇಬ್ಬರು ಮಹಾ ಪ್ರತಿಭಾಶಾಲಿಗಳಾದ ಕವಿಗಳನ್ನು ತುಲನಮಾಡಬೇಕೆಂದು ಯಾವ ಕಾರಣದಿಂದಲೇ ಆಗಲಿ ಮನಸ್ಸಿಗೆ ಸ್ಫುರಿಸಿದ್ದು ಒಂದು ಆಶ್ಚರ್ಯ. ಹಿಂದೆ ಮತದ ಸಂಕುಚಿತ ದೃಷ್ಟಿ ಯಿಂದ ಕುಮಾರವ್ಯಾಸನನ್ನು ಕೀಳೆಂದೂ ಅವನ ಸೊಕ್ಕು ಮುರಿಯಿತೆಂದೂ ಹೇಳುವ ವೀರಶೈವ ಕವಿಗಳ ಮಾತು ಹಾಗಿರಲಿ, ಕುಮಾರವ್ಯಾಸನಂಥವನಿಂದ ಪ್ರಶಸ್ತಿ ಪಡೆಯ ಬೇಕೆಂಬ ಒಂದು ಆಕಾಂಕ್ಷೆಯೇ ಕುಮಾರವ್ಯಾಸನ ಉನ್ನತ ಸ್ಥಾನವನ್ನು ತೋರಿಸು ತ್ತದೆ. ಎರಡನೆಯದಾಗಿ ಅವನು ತಿರಸ್ಕಾರಭಾವದಿಂದ ಹರಿಹರನನ್ನು ನೋಡಲು ಬಂದನೆಂಬ ನಿಂದಾವಾಕ್ಯಗಳನ್ನು ನಾವು ಗಮನಿಸಬೇಕಾದ್ದಿಲ್ಲ ... ಯಾವ ಕಾರಣ ದಿಂದಲೇ ಆಗಲಿ ಹರಿಹರನನ್ನು ನೋಡಬೇಕೆಂಬ ಅಪೇಕ್ಷೆ ಕುಮಾರವ್ಯಾಸನಿಗುಂಟಾ ದುದೇ ಹರಿಹರನ ಉನ್ನತಸ್ಥಾನವನ್ನು ತಿಳಿಸುತ್ತದೆ. ಈ ಮತಾಂಧತೆಗಳ ವಿಷಮ ಪ್ರಭಾವಗಳಿಲ್ಲದೆ ಈ ಇಬ್ಬರು ಮಹಾಕವಿಗಳೂ ಪರಸ್ಪರವಾಗಿ ಸೇರಿ ಕಿರಾತಾರ್ಜು ನೀಯ ಭಾಗವನ್ನು ಕುಮಾರವ್ಯಾಸನೂ, ನಂಬಿಯಣ್ಣನ ರಗಳೆಯನ್ನು ಹರಿಹರನೂ ಒಬ್ಬರಿಗೊಬ್ಬರು ವಾಚಿಸಿದರೆಂದು ತಿಳಿಸಿದ್ದಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು. ಎಂತಹ ಆದರ್ಶವಾಗಿರುತ್ತಿತ್ತು. ಆದರೆ ಸಿದ್ಧನಂಜೇಶನು ಕುಮಾರವ್ಯಾಸನನ್ನು ಗೌರವದಿಂದಲೇ ಕಂಡಿದ್ದಾನೆ. ರಾಘವಾಂಕನಿಂದ ಯಾವ ಬಗೆಯ ಅಪಮಾನವನ್ನೂ ಮಾಡಿಸಲಿಲ್ಲ. ಸಾಮಾನ್ಯವಾಗಿ ಕೆಲವರು ವೀರಶೈವ ಕವಿಗಳು ಬರೆಯುವಂತೆ "ಪಲ್ಗಿರಿದು ಚರಣತಳದಲ್ಲಿ ಧೊಪ್ಪನೆ ಕೆಡೆದನು " ಎಂಬಂತಹ ಮುಕ್ತಾಯಗಳೇನೂ ಇಲ್ಲ. ಅದು ಸಂತೋಷದ ಸಂಗತಿಯಲ್ಲವೆ ?

ಕುಮಾರವ್ಯಾಸನಿಗೆ ಹರೀಶ್ವರನ ರಗಳೆಗಳು ಬಹಳ ಮನೋಹರವಾಗಿರುವು ವೆಂದೂ, ಜನಪ್ರಿಯವಾಗಿರುವುವೆಂದೂ ಹೇಗೋ ಸುದ್ದಿಯು ಮುಟ್ಟಿ

ಹರಿಯರಸನೆಂಬಾತ ಶಿವಕವೀಶ್ವರನು ಗಡ
ಹರಭಕ್ತಚರಿತೆಗಳ ಪೇಳುತಿಹನಾತ ಗಡ
ಪರಿರಚಿಸುತಿಹ ಕಬ್ಬ ರಗಳೆಗಿಗಳೆಗಳು ಗಡ ಪೇಳ್ವಡರಿಯಂ ಪೆರತನು
ಪಿರಿದು ಬಲ್ಲವನಂತೆ ಕಬ್ಬಿಗರನೆಲ್ಲರಂ
ಜರಿವುತಿಹ ಗಡ ಗರ್ವದುಬ್ಬಿನಿಂ ಕಾಣ್ಬೆನೆಂ
ದಿರದುಭಯಭಾಷಾಕವಿವ್ರಾತವೆರಸಿ ಬಂದಂ ಕುಮಾರವ್ಯಾಸನು ೧೪–೨೭

ವಿರೂಪಾಕ್ಷನಾಲಯದ ರಂಗಮಂಟಪದಲ್ಲಿ ರಾಘವಾಂಕನು ಮಂಡಿಸಿರಲು ಕುಮಾರ ವ್ಯಾಸನು ಅಲ್ಲಿಗೆ ಬಂದನು. ಅವನ ಜೊತೆಯಲ್ಲಿ ಬಂದ ಕವಿಗಳು ಹಾಗೆಯೇ ಈ ಮಾತು ಆ ಮಾತು ಆಡುತ್ತಾ ರಾಘವಾಂಕನನ್ನು ಕವಿತೆಯೊಂದರೊಳು ಪರಿಚಿತಿಯೋ ವೇದಾದಿ ವಿದ್ಯೆಯೊಳು ಕುಶಲರೋ ನೀವು" ಎಂದು ಕೇಳಿದರು. "ತ್ರಯಿಾ

ಕೋವಿದರು " ಎಂದು ರಾಘವಾಂಕನು ಉತ್ತರಕೊಟ್ಟು ಸ್ವರತ್ರಯಂ ಷಡಂಗ, ಪಾಳಿ, ಪದಕ್ರಮ ಸಹಿತವಾಗಿ ವೇದ ಪರೀಕ್ಷೆಯನ್ನು ಕೊಟ್ಟನು; ತರ್ಕ ಮೀಮಾಂಸಾದಿ ಶಾಸ್ತ್ರಗಳಲ್ಲಿ ಪಾಂಡಿತ್ಯ ತೋರಿದನು " " ಬ್ರಹ್ಮಸೂತ್ರಾರ್ಥವಂ ವಿಸ್ತರಿಪ ಕಡುಜಾಣ್ಮೆ ಗಮಮಯೆನುತಾ ಕುಮಾರವ್ಯಾಸನಕ್ಕಜಂಬಡುತಿರ್ದನು " ಶ್ರುತಿ ಸ್ಮೃತಿ ಪುರಾಣೇತಿ ಹಾಸಗಳಲ್ಲಿ ಇಪ್ಪತ್ತೆಂಟು ದಿವ್ಯಾಗಮಗಳಲ್ಲಿ ಅವನ ಪಾಂಡಿತ್ಯವನ್ನು ನೋಡಿ " ಕುಮಾರವ್ಯಾಸ ತಲೆದೊನೆದು ಬೆರಗಾಂತನು."

ಮೌನವೆ ವಿಭೂಷಣಮಪಂಡಿತರ್ಗೆಂದು ತಿಳಿ
ದೇನೆಂದು ನುಡಿಯಲಮ್ಮದೆ ಕುಮಾರವ್ಯಾಸ
ನಾನಂದವರತು ಮೊಗದೊಳ್ ತೋರ್ಪ ದುಗುಡಮಂ ಮಾಜಿ ಹುಸಿನಗೆಯನಾಂತು
ಆನೊರ್ವನೆಂದಿರ್ದೆನಿಂದುವರೆಗಂ ಕವಿ
ತ್ವಾನುಭವದೊಳ್ ಕಂಡೆನೀಗಖಿಳವಿದ್ಯಾನಿ
ಧಾನನೀ ರಾಘವಾಂಕಂ ವರ್ತಮಾನ ಕವಿಗಳೊಳೆಂದು ಸ್ತುತಿಗೆಯ್ದನು ೧೪—೪೧

"ಗುಣಕೆ ಮತ್ಸರಂಗೆಯ್ವ ಕವಿಯು ಸಟೆ ಮೂರ್ಖನಹನು ದುರ್ಗತಿಗಿಳಿವನೆನ್ನಮತಿ ಯೊಳಗುಗಾಣದು ನಿನ್ನತೊತ್ತೆಂದು ನುತಿಸಿ"ದನು. ಬಳಿಕ "ಕಂಗಳ ಹಬ್ಬವಾಗಿ ನಿನ್ನಯಗುರುವರನ ನೋಳ್ಪಡುಜ್ಜುಗಿಸಿ ಬಂದೆನೆಂದ"....ಆಗ ರಾಘವಾಂಕನು ಹರಿಹರನ—ತನ್ನ ಸೋದರಮಾವನ—ಮಹತ್ವವನ್ನು ಅವನು ಗಣಪುರುಷನವತಾರ ವೆಂಬುದನ್ನು ಅವನ ಪವಾಡಗಳನ್ನು—ಅವನ ಶರಣರಗಳೆಗಳನ್ನು ರಂಚಿಸುತ್ತ ಪಂಪಾ ವಿರೂಪಾಕ್ಷನ ಗೋಷ್ಠಿಯಲ್ಲಿರುವುದನ್ನು—ಎಲ್ಲವನ್ನೂ ವಿವರಿಸಿ ಅವನನ್ನು ಈಗ ನೀನು ನೋಡುವುದು ಸಾಧ್ಯವಿಲ್ಲ ಎಂದು ತಿಳಿಸುವನು. ಹರಿಹರ ಮಹತ್ವವನ್ನು ಕೇಳಿ "ಆಶ್ಚರ್ಯದಳೆದು ತಲೆದೂಗಿ ಸೊಕ್ಕಂತೊಲಗಿ ಕೈಯೆತ್ತಿ ಪೊಗಳ್ದರು ಚೈತ್ಯಧ್ವಾನದಿಂದ ಕವಿರಾಯನೆಂದು''—ಬಳಿಕ ಕುಮಾರವ್ಯಾಸಾದಿಗಳು ಹಿಂದಿರುಗಿದರು.

ಶ್ರೀಶೈಲದಕ್ಷಿಣದ್ವಾರವೆನಿಸುವ ಶುಭಾ
ವಾಸವಹ ಸಿದ್ಧವಟಪುರದೊಳಿಹನಾಂಧ್ರ ಭಾ
ಷಾಸತ್ಕವಿತ್ವ ಕೋವಿದನಪ್ಪ ಶಿವಕವಿಪ್ರವರ ಶಿವದೇವನೆಂಬ
ಭೂಸುರವರಂ ಲಿಂಗಗುರು ಚರಪದಾಬ್ಜಸೇ
ವಾಸದರ್ಥಂ ಶಿವಕ್ಷೇತ್ರಯಾತ್ರಾಭಿ
ಲಾಷೆಯಿಂ ಪಂಪಾಪುರಕ್ಕೆ ಬಂದಾ ಹರಿಹರಂಗೆ ಬಿನ್ನವಿಸಿದಂ ೧೫—೩

ಶಿವದೇವನೆಂಬ ತೆಲುಗು ಬ್ರಾಹ್ಮಣನು ಬಂದು ತನಗೆ ಸತ್ಪುತ್ರ ಜನಿಸಿದರೆ ರಾಘವನ ಸೇವೆ ಮಾಡಿಸುವೆನೆಂದು ಹರಕೆ ಹೊತ್ತು ಆಶೀರ್ವಾದವನ್ನು ಕೈಕೊಂಡು ಹಿಂದಿರುಗಿದನು. ಅವನಿಗೆ ಮಗನು ಹುಟ್ಟಲು ಭೀಮನೆಂದು ಹೆಸರಿಟ್ಟು ಎಂಟು ವರ್ಷಗಳಾದ ಮೇಲೆ ಹರಿಹರನ ಬಳಿಗೆ ಕರೆತಂದುಬಿಟ್ಟನು. ಹರಿಹರನು ಅವನನ್ನು ರಾಘವಾಂಕನಿಗೆ ಶಿಷ್ಯನನ್ನಾಗಿ ಮಾಡಿಸಲು ಎಲ್ಲ ವಿದ್ಯೆಗಳನ್ನು ಈ ಗುರು

ಹೇಳಿಕೊಟ್ಟನು. ಭೀಮಕವಿಯಾಗಿ ಭೃಂಗಿದಂಡಕವನ್ನು ರಚಿಸಿ ಹರಿಹರನಿಂದ ಪ್ರಶಸ್ತಿಯನ್ನೂ ಪಡೆದು ಸಿದ್ಧವಟಪುರಕ್ಕೆ ಹಿಂದಿರುಗಿದನು. ಈ ತೆಲುಗು ಹುಡುಗನು ಕನ್ನಡದಲ್ಲಿ ಪ್ರಸಿದ್ಧ ಕವಿಗಳಾದ ರಾಘವಾಂಕ ಮತ್ತು ಹರಿಹರರ ಸೇವೆ ಮಾಡಿ ಕನ್ನಡದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದು ಕನ್ನಡ ಸಾಹಿತ್ಯಕ್ಕೆ ಬಸವಪುರಾಣವನ್ನು ದೊರಕಿಸಿಕೊಟ್ಟಿತು. ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು ಭೀಮಕವಿ ಕನ್ನಡಕ್ಕೆ ಪರಿವರ್ತಿಸಿದನು.

ಇತ್ತ ರಾಘವಾಂಕನು ಸಿದ್ಧರಾಮಚಾರಿತ್ರವನ್ನು ಬರೆದನು. ಅದರ ಸಂಗ್ರಹ ವನ್ನು ಸಿದ್ಧನಂಜೇಶನು ಕೊಟ್ಟಿದ್ದಾನೆ ; ಆದರೆ ಮೂಲದಲ್ಲಿಲ್ಲದ ಸಿದ್ಧರಾಮನಿಗೆ ಚೆನ್ನಬಸವನಿಂದ ಲಿಂಗಧಾರಣೆಯಾಯಿತೆಂಬ—ಪ್ರಕರಣವನ್ನು ಸೇರಿಸಿಬಿಟ್ಟಿದ್ದಾನೆ. ಅಲ್ಲಮನು ಸೊನ್ನಲಾಪುರಕ್ಕೆ ಬಂದು ತನಗೆ ತಿಳಿವಳಿಕೆ ಕೊಟ್ಟಾಗ ಅವನ ಕೈಯಲ್ಲಿದ್ದ "ಲಿಂಗದಿರವಂ ಕೇಳೆ ಬಸವರಸರಿಂದಿದರ ಪರಿಯನೆಲ್ಲವ ತಿಳುಹಿ ಕೊಟ್ಟಪೆಂ ಪೋಪನಡೆ ಕಲ್ಯಾಣಕೆ"

ಎನಲು ನಾಂ ಬರ್ದುಕಿದೆಂ ಬಸವಾದಿಗಳ ಪಾದ
ವನಜಮಂ ತೋರಿ ಪಾಲಿಪುದೆನಲ್ಕೊಡಗೊಂಡು
ವಿನಯದಿಂ ಬಂದು ಕಲ್ಯಾಣಮಂ ಪೊಕ್ಕು ಬಸವೇಶನಡಿಗಳನು ಕಂಡು
ಘನಮಹಿಮ ಷಟ್‌ಸ್ಥಲಬ್ರಹ್ಮಿಯಹ ಚೆನ್ನಬಸ
ವನ ಕಯ್ಯ ವೀರಶೈವೋಪದೇಶವಕೊಡಿಸಿ
ದನು ಪ್ರಭುವರೇಣ್ಯಂ ಬಳಿಕ್ಕ ಸಿದ್ಧೇಂದ್ರ ಪ್ರಮಥಾನುಭವಸುಖರಸವನು ೧೫—೮೫

ರಾಘವಾಂಕನ ಸಿದ್ಧರಾಮಚಾರಿತ್ರವನ್ನು ಬೇಲೂರಿನಲ್ಲಿದ್ದ ಕೆರೆಯ ಪದ್ಮರಸನು ಹಳಿದನೆಂದು ಈಶ್ವರನೇ ಜಂಗಮನಾಗಿ ಬಂದು ಅವನಿಗೆ ತಿಳಿಸಿದನಂತೆ. ಕಾರಣ ಏನಿರಬಹುದು ? ಆದರೆ ಪದ್ಮರಸನ ಮನೋಭಿಪ್ರಾಯ ರಾಘವಾಂಕನ ಪದಕಮಲ ದರ್ಶನವೆಂದು ಸಿದ್ಧನಂಜೇಶನು ತಿಳಿಸಿದ್ದಾನೆ. ಮುಖ್ಯವಾಗಿ ರಾಘವಾಂಕನು ಸಿದ್ಧರಾಮಚಾರಿತ್ರದ ಕೊನೆಯಲ್ಲಿ ಹೇಳಿರುವ 'ಧರೆಗೆ ಸೊನ್ನಲಾಪುರವೆ ಕೈಲಾಸ.... ಅವನ ಶಿರದೊಳಿಳುಹುವೆನೆನ್ನ ವಾಮಪಾದುಕೆಯ ರುತವಿದು ಮದ್ಭಾಷೆ' ಎಂದು ಆಕ್ಷೇಪಣೆಯೆತ್ತಿ ವಾದಕ್ಕೆ ಕರೆಕೊಟ್ಟನೆಂದೂ "ರಾಘವಪಂಡಿತನ ಪಾದದಿಂ ನಿರೀಕ್ಷಿಸು ವೊಡೆನಗಿದು ಸಾಧನವಾದುದು'' ಎಂದು ಮನಸ್ಸಿನಲ್ಲಿ ಮಾಡಿಕೊಂಡನೆಂದೂ ಕವಿ ಹೇಳಿದ್ದಾನೆ. ಆ ಜಂಗಮನು ನಿನ್ನ ಕವಿತೆಯನ್ನು ಪದ್ಮರಸನ ಮುಂದೆ ಓದಿ ಅವಮಾನ ವಾಯಿತು " ವಿಚಾರಿಸದೆ ಕವಿತೆಯವೇಳ್ವನೆಗ್ಗನೆನೆ " ರಾಘವಾಂಕನು ರೋಷಭರಿತ ನಾಗಿ ಭಾಷೆಯಂತೆ ನಡೆಸುವೆನೆಂದು ನೇಣುದಂಡಾಗ್ರಹಕ್ಕೆ ತನ್ನೆಡದ ಪಾದುಕೆಯ ನಲ್ಲಿಂದಲೇ ಕಟ್ಟಿಸಿಯೆ ಪಿಡಿಸಿಕೊಂಡು ಭರದಿಂ ಬೇಲೂರಿಗೆ ಬಂದನು. ಆದರೆ ಪದ್ಮರಸನು ಭಕ್ತಗಣದೊಡನೆ ಬಂದು ಇದಿರ್ಗೊಂಡು ತಾನಾಗಿಯೇ ಆ ಪಾದುಕೆ ಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿಕೊಳ್ಳಲು ರಾಘವಾಂಕನು ನಾಚಿಕೆಗೊಂಡನು.

ಶಿವಭಕ್ತರೊಡನೆ ಗರ್ವಿಸುವುದತ್ಯಂತ ಕ
ಷ್ಟವು ದೇವ ನೀವು ಪಾದುಕೆಯು ಶಿರದೊಳು ತಾಳ್ದ
ನವದಿಯೆನ್ನಯ ಹೃದಯ ತಲ್ಲಣಿಸುತಿದೆ ಪಾಪ ಬಂದಿತಿನ್ನೇಗೆಯ್ವೆನು
ಶಿವಶಿವಾಯೆನಲಾವ ಪರಿಯಿದಲಾದೊಡಂ
ತವೆ ಜರೆದುದುಂಟು ಕವಿತೆಯ ಬಿರುದು ನಿನ್ನದೀ
ಭುವನದೊಳು ಸುಪ್ರತಿಷ್ಠಿತವಾಗವೇಳ್ಕೆಂದು ಪೊತ್ತೆನಿದಕಂಜಬೇಡ ೧೬–೪೧

ಹೀಗೆ ಒಬ್ಬರಿಗೆ ವಿಷಾದ ಮತ್ತೊಬ್ಬರಿಗೆ ಸಮಾಧಾನ–ಆಗಿ ರಾಘವಾಂಕನನ್ನು ಆನೆಯ ಮೇಲೆ ಏರಿಸಿ ಪದ್ಮರಸನು ಮೆರವಣಿಗೆ ಮಾಡಿಸಿದನು. ಬಳಿಕ ಪದ್ಮರಸನೊಡನೆ ಶಿವಾನುಭವಗೋಷ್ಠಿಯಲ್ಲಿದ್ದು ತಾನು ಮಾಡಿದ ಪಾಪ ಮನಸ್ಸನ್ನು ಕೊರೆಯುತ್ತಿರಲು ಪಂಪಾಪುರಕ್ಕೆ ಬಂದು ಹರಿಹರನಿಗೆ ಎಲ್ಲವನ್ನೂ ತಿಳಿಸಿದನು. ಹರಿಹರನು ಹಾಗೆಲ್ಲ ಗರ್ವಿಸಬಾರದು 'ಭಕ್ತರ ಭೃತ್ಯನಾಗಿ ಪಂಪಾಧಿಪತಿಯು ಒಲಿದು ಭಜಿಸುತ್ತಿರ್ಪರು' ಎಂದು ಬುದ್ಧಿ ಹೇಳಿದನು.

ವಸಂತ ಋತು ಪ್ರಾಪ್ತವಾಗಿ ಹುಣ್ಣಿಮೆಯ ದಿನದಲ್ಲಿ ಪಂಪಾ ವಿರೂಪಾಕ್ಷನ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ರಾಘವಾಂಕನೂ ಹರಿಹರನೂ ಅದರಲ್ಲಿ ಮಹೋತ್ಸಾಹದಿಂದ ಭಾಗಿಗಳಾಗಿದ್ದರು. ಒಂದು ದಿನ ವಿರೂಪಾಕ್ಷನ ಮಹಾ ಮಂಟಪದಲ್ಲಿ ರಾಘವಾಂಕನು ಬುಧರ ಸಂದೋಹದೊಡನೆ ಕುಳಿತಿರಲು ಓದುಗಲ್ಲಿನಿಂದ ಬಂದಿದ್ದ ಕವಿಯೊಬ್ಬನು "ನೋವಡಸಿ ಮುಖಕಂದಿ ಚತುರ ಕವಿಯೆನಿಪ ಬುಧನಾ ವೇಳೆಯೊಳಗಡ್ಡಬಿದ್ದು ನುತಿಸುತ್ತಿರ್ದನು" ರಾಘವನು ನಗುತ್ತ 'ಅಂಜಬೇಡ, ಇತ್ತ ಬಾರೆಂದು ತನ್ನಯ ಮೊರೆಗೆ ಕರೆದು ನಿನಗಾದ ದುಗುಡವೇನು ಉಸುರೆನಲು' ಆ ಕವಿಯು ಪ್ರತಾಪರುದ್ರನ ಸಭೆಯಲ್ಲಿರುವ ಏಕಸಂಧಿಗ್ರಾಹಿ, ದ್ವಿಸಂಧಿಗ್ರಾಹಿ, ತ್ರಿಸಂಧಿಗ್ರಾಹಿಗಳ ಕಿರುಕುಳವನ್ನೂ ಅವರು ಮಾಡುವ ಅಪಮಾನಗಳನ್ನೂ ವರ್ಣಿಸಿದನು.

ಅದರಿಂದ ರುದ್ರಪ್ರತಾಪ ಭೂಪನ ಸಭೆಯು
ಚದುರವಿದ್ವಾಂಸರಿಗೆ ಫಣಿಯ ಹೇಳಿಗೆಯಾಯ್ತು
ಹುದಿಲ ನೆಲೆವನೆಯಾಯ್ತು ಪಸಿದಿರ್ಪ ಪುಲಿಯ ಗವಿಯಾದುದವರಿಂದ ನೊಂದು
ಬೆದಕುತ್ತ ಬಂದೆನತ್ಯಧಿಕ ಸಾಮರ್ಥ್ಯಯುತ
ಬುಧಪುಂಗವನೆ ದುರುಳರುಕ್ಕು ಮುರಿವಡೆ ನಿಮ್ಮ
ಪದಯುಗವ ಮರೆಯೊಕ್ಕೆನಿದನುಪೇಕ್ಷಿಸಿದೊಡಾರುಂಟೆನಗೆ ಪೇಳಿಳೆಯೊಳು ೧೭–೨೩

ಎಂದು ಮೊರೆಯಿಡಲು ರಾಘವಾಂಕನು ತನ್ನ ಗುರುವಿನ ಮತ್ತು ಇಷ್ಟದೈವದ ಹರಕೆಯನ್ನು ಕೈಗೊಂಡು ಓರುಗಲ್ಲಿಗೆ ಹೊರಟು ದಾರಿಯಲ್ಲಿ ಶ್ರೀಶೈಲವನ್ನೂ ಮಲ್ಲಿಕಾರ್ಜುನನನ್ನೂ ಸಂದರ್ಶಿಸಿ ಅರಣ್ಯವೊಂದನ್ನು ಹೊಕ್ಕನು. ಆದರೆ, ಅಲ್ಲಿಯ ತಪೋಧನರು, ಶಬರರು ಶಬರಿಯರ ವರ್ಣನೆಗಳನ್ನು ಸಿದ್ಧನಂಜೇಶನು ಚೆನ್ನಾಗಿ ಮಾಡಿದ್ದಾನೆ.

ಪೊರಮಡದಿರಾ ಪೊದರ ಬಿಟ್ಟಬಲೆ ನಿನ್ನ ಬಂ
ಧುರ ದೀರ್ಘಲೋಚನಕೆ ಕುಚಯುಗಕೆ ಪೆಣಲಿಂಗೆ
ವರಮಧ್ಯಕಧರಕ್ಕೆವೆಯೆಂಲೆಯೆಂದುಂ ಮತ್ತ ಗಜದ ಮಸ್ತಕಮುಮೊಂದು
ಪಿರಿಯುರಗನೆಂದು ಕೇಸರಿಯೆಂದು ತಳಿರೆಂದು
ನಿರುತಂ ವ್ಯಾಘ್ರ ಹರಿ ಕೇಕಿ ಶರಭ ಶುಕಂಗ
ಳೆರಗಿ ಕೊಲ್ಲವೆ ಎನುತೆ ಶಬರವಧು ಸೊಸೆಗೆ ಬುದ್ಧಿಯಪೇಳ್ದು ಬೆಚ್ಚಿಸಿದಳು ೧೭—೬೩

ಇವುಗಳನ್ನೆಲ್ಲ ನೋಡುತ್ತ ರಾಘವಾಂಕನು ಪ್ರಮಾಣ ಮಾಡುತ್ತಿರಲು ಒಂದು ಜಿಂಕೆ ಅವನ ಅಂಗಳದ ಮುಂದೆ ಬಂದು ಬಿತ್ತು. ಒಡನೆಯೇ ಅದಕ್ಕೆ ಗಂಧರ್ವರೂಪ ಬಂದು ತನ್ನ ಪೂರ್ವ ಕಥೆಯನ್ನು ಹೇಳಿ ರಾಘವನ ಗುಣಕಥನ ಮಾಡಿ ಹೊರಟು ಹೋಯಿತು. ರಾಘವಾಂಕನು ಓರಗಲ್ಲಿಗೆ ಬಂದು ವಿಶ್ವೇಶ್ವರನ ದೇವಾಲಯದಲ್ಲಿ ಬಿಡಾರಮಾಡಿ ವಿಶ್ವೇಶ್ವರನನ್ನು ಸ್ತೋತ್ರಮಾಡಿದ ಅವನ ಚಾರಿತ್ರವನ್ನು ಉದ್ದಂಡ ಷಟ್ಪದಿಯಲ್ಲಿ ರಚಿಸಲು ಆ ವಿಾಸಲ ಕವಿತೆಯಿಂದ ಆ ದೇವಾಲಯವು ತಿರುಗಿಕೊಂಡು ರಾಘವನಿಗೇ ಅಭಿಮುಖವಾಯಿತು. ವೀರೇಶನಿಂದ ಅವನ ಆಭರಣವಾದ ಕಲ್ ಪದಕವನ್ನು ಪಡೆದನು. ವೀರೇಶ್ವರನೇ ರಾಘವನ ಬಳಿಗೆ ಬಂದನು. ಈ ಪವಾಡಗಳನ್ನೆಲ್ಲ ನೋಡಿ ರುದ್ರ ಪ್ರತಾಪನೂ ಅವನ ಪರಿವಾರವೂ ಬೆರಗಾಗಿ ಹೋದರು. "ಉದಾತ್ತ ಭಕ್ತಿಯೊಳು ರಾಘವನಂಘ್ರಿಯುಂ ಶಿರದಿ ಪೊತ್ತು ರುದ್ರಪ್ರತಾಪಂಪೊಗಳುತಿರ್ದನಭವನ ಪೊಗಳ್ವ ನಂದಿಯಂತೆ". ಬಳಿಕ "ದುರುಳಕಬ್ಬಿಗರ ಮೂಗಿನ ಕತ್ತಿ, ಮೂರ್ಖಕವಿಗಿರಿ ವಜ್ರದಂಡ, ತರ್ಕಕ್ಕೆ ಮಾರ್ಮಲೆವ ಕವಿಕರಿ ಪಂಚವದನ'' ಮೊದಲಾದ ಬಿರುದು ಗಳಿಂದ ಹೊಗಳಿಸಿಕೊಳ್ಳುತ್ತಾ ರಾಘವಾಂಕನು ರಾಜಸಭಾ ಪ್ರವೇಶಮಾಡಿ ವಿಾಸಲ ಕವಿತೆಯನ್ನು ಮುಂದಿಡಲು ಆ ಏಕಸಂಧಿಗ್ರಾಹಿ, ಮೊದಲಾದವರು ಅದರ ನಾಂದೀ ಪದ್ಯವನ್ನು ನೋಡಿ ದಿಗ್ಭ್ರಾಂತರಾಗಿ ಅದು ಯಾವ ಛಂದಸ್ಸು ಏನು ಎಂಬುವುದನ್ನಾ ವುದನ್ನೂ ಪತ್ತೆಮಾಡಲಾಗದೆ ಸೋತುಹೋದರು. 'ಪೂರ್ವದ ಕವಿತೆಯಲ್ಲಲಾ' ಎಂದು ರಾಘವನು ನಕ್ಕನು. ಆಗ ದೊರೆ ಆ ದುಷ್ಟರಿಗೆ ತಕ್ಕಶಾಸ್ತಿಯನ್ನು ಮಾಡಿದನು.

ಎನಲು ಮೂವರ ಕಾಲ ಪಿಡಿಸಿ ಸಭೆಯಿಂದೆಳೆಸಿ
ಶುನಕನುಚ್ಚೆಯ ಹೊಯ್ಸಿ ಮೀಸೆಗಳ ತರಿಸಿ ತಲೆ
ಯನೆ ಮೂರು ಪಟ್ಟೆಯಂ ಮಾಡಿ ಬೋಳಿಸಿ ಬಳಿಕ ಕಿವಿಮೂಗನೆಲ್ಲ ಕೊಯ್ಸಿ
ಘನಮಹಿಮ ರಾಘವನನೊಡನೆ ತರ್ಕಗೆಯ್ದ ಫಲ
ವನುಭವಿಸಿರೆಂದು ಕಳ್ತೆಯ ಮೇಲೆ ಕುಳ್ಳಿರಿಸಿ
ಜನದ ಕೈಯಿಂ ಲದ್ದಿಯಿಂದಿಡಿಸಿ ಪುರವ ಪೊರಮಡಿಸಿದಂ ಕಾಕತಿಪನು ೧೮—೪೨

ರುದ್ರಪ್ರತಾಪನು ರಾಘವಾಂಕನಿಗೆ ಮರ್ಯಾದೆಮಾಡಿ ವೀರೇಶ್ವರಾಲಯದಲ್ಲಿ ಕನಕಾಭಿಷೇಕವನ್ನು ವಿರಚಿಸಿ ಆ ಹೊನ್ನುಗಳನ್ನು ರಾಘವಾಂಕನಿಗೇ ಕೊಡ ಹೋಗಲು ಅವನು ವೀರೇಶ್ವರನನ್ನು ಸ್ತೋತ್ರಮಾಡಿ ಕನಕವೃಷ್ಟಿಯನ್ನು ಸುರಿಸಿದನು. ದೊರೆಗೆ ಶಿವಭಕ್ತರು ತಿರುಕರಲ್ಲ ಎಂಬ ದೃಷ್ಟವನ್ನು ಹೀಗೆ ತೋರಿ ತನ್ನ ಊರಿಗೆ

ಹಿಂದಿರುಗಿದನು. ಅಪಮಾನಿತರಾಗಿದ್ದ ಏಕಸಂಧಿಗ್ರಾಹಿ ಮೊದಲಾದವರು ಸಂಚು ಮಾಡಿ ರಾಘವನನ್ನು ಕೊಲ್ಲಬೇಕೆಂದು ಕಾಡಿನ ದಾರಿಯಲ್ಲಿ ಕಾದಿದ್ದರು. ಜಂಗಮಾಕಾರದಿಂದ ಒಬ್ಬನು ಎದುರಿಗೆ ಬರಲು ರಾಘವನು ಮರ್ಯಾದೆ ಮಾಡಿದನು. ಆದರೆ ಆ ಕಪಟ ಜಂಗಮನು ಕತ್ತಿಯಿಂದ ಇರಿದನು. ಆದರೆ ರಾಘವನಿಗೆ ಏನೊಂದು ಗಾಯವೂ ಆಗಲಿಲ್ಲ. ಕಪಟ ಜಂಗಮನನ್ನು ನಿಜ ಜಂಗಮನನ್ನಾಗಿ ಮಾಡಿ ರಾಘವನು ಕೈಲಾಸಕ್ಕೆ ಕಳುಹಿಸಿದನು.

ಪಂಪಾಪುರಕ್ಕೆ ಹಿಂದಿರುಗಿ "ಮರ್ತ್ಯಲೋಕದಲ್ಲಿ ಲೀಲೆ ಸಾಕಿನ್ನು ಹರನೊಳೈಕ್ಯಂಬಡೆದು ಬೇರಾಗದಿಹ ಪದವನುರೆ ಬಯಸುತಿರ್ದಪುದು" ಎಂದು ಗುರುವಿನಲ್ಲಿ ಕೇಳಿಕೊಳ್ಳಲು ಬೇಲೂರಿಗೆ ಹೋಗು ಪದ್ಮರಸನು ನಿನ್ನನ್ನು ಶಿವನಲ್ಲಿ ಕೂಡಿಸುತ್ತಾನೆ ಎಂದು ಹರಿಹರನು ಉತ್ತರ ಕೊಟ್ಟನು. ಅದರಂತೆ ಬೇಲೂರಿಗೆ ಹೊರಡಲುದ್ಯೋಗಿಸಿ ವಿರೂಪಾಕ್ಷನಲ್ಲಿಗೆ ಹೋಗಿ ಆ ದೇವೇಶನ ಅಪ್ಪಣೆಯನ್ನು ಪಡೆದು ಬೇಲೂರಿಗೆ ಬಂದು ಪದ್ಮರಸರೊಡನೆ ಶಿವಾನುಭವಗೋಷ್ಠಿಯಲ್ಲಿದ್ದು ನಿರ್ವಿಕಲ್ಪ ಸಮಾಧಿಯಿಂದ ಇಷ್ಟಲಿಂಗದಲ್ಲಿ ನೆಟ್ಟ ನೋಟವನ್ನು ತೆಗೆಯದೆ ರಾಘವನು ರಾಘವೇಶ್ವರಲಿಂಗವಾದನು.

ಮಿಳಿತವಾದಂತೆ ಪಾಲೊಳು ಪಾಲು ಘೃತ ತುಪ್ಪ
ದೊಳು ಕೂಡಿದಂತಬ್ಧಿಯೊಳು ಕರಕ ಬೆರೆದಂತೆ
ತೊಳಪ ಮಿಂಚಾಕಾಶದೊಳಗಡಗಿದಂತೆ ರಾಘವಲಿಂಗದೊಳಗೆ ಪೊಕ್ಕಂ
ನೆಲಸಿ ತಾನೆಂಬುದರಿಸದೆಯೈಕ್ಯವಾಗೆ ಪೂ
ಮಳೆಯನಮರರು ಸುರಿಯೆ ದುಂದುಭಿಗಳುಲಿಯೆ ಗಣ
ಕುಲ ನಲಿದುಘೇ ಉಘೇಯೆಂಬ ರವವಖಿಳರಂ ಮೂರ್ಛೆಗೊಳಿಸಿದುದಾಗಳು ೧೯—೩೯

ಪದ್ಮರಸನು ರಾಘವೇಶ್ವರಲಿಂಗವನ್ನು ಪೂಜಿಸಿ ಪುಷ್ಪಕದಲ್ಲಿ ಸಾಗಿಸಿ ಸಮಾಧಿ ಮಾಡಿಸಿದನು. ಸಮಾಧಿಯಸ್ಥಲದಲ್ಲಿ ದಾನಧರ್ಮಾದಿಗಳು ನಡೆದವು "ವಿಪ್ರರು ದಾನಕ್ಕರ್ಹರಲ್ಲೆಂದು" ಪದ್ಮರಸನು ಹೇಳಿದನು. ಇದರಿಂದ ಬ್ರಾಹ್ಮಣರು ಕೆರಳಿದರು. ರಾಘವನು ಬ್ರಾಹ್ಮಣನು ಅವನ ಶವವನ್ನು ದಹಿಸಬೇಕು ಎಂದು ಅವರು ಹಠ ಮಾಡಿದರು. ಬಳಿಕ ಪದ್ಮರಸನು ನಾವು ಭೂಮಿಯಲ್ಲಿ ನಿಕ್ಷೇಪಿಸುತ್ತೇವೆ. ಬಳಿಕ ನೀವು ಏನಾದರೂ ಮಾಡಿಕೊಳ್ಳಬಹುದು ಎಂದು ಅವರನ್ನು ಸಮಾಧಾನಪಡಿಸಿ ರಾಘವಾಂಕನನ್ನು ಸಮಾಧಿಮಾಡಿಸಿದನು. ಬಳಿಕ ಬ್ರಾಹ್ಮಣರು ಭೂಮಿಯನ್ನು ಅಗೆದು ನೋಡಲು ಅಲ್ಲಿ ವೃಷಭೇಶ್ವರನಿದ್ದನು. ಎಲ್ಲರೂ ಆಶ್ಚರ್ಯಪಟ್ಟು ರಾಘವಾಂಕನ ಮಹಾಮಹಿಮೆಯನ್ನು ಹೊಗಳುತ್ತ ತಂತಮ್ಮ ಮನೆಗಳಿಗೆ ಹಿಂದಿರುಗಿದರು.

ಕವಿ ಕೊನೆಯಲ್ಲಿ ಕೆಲವರು ಗುರುಗಳನ್ನು ಸ್ಮರಿಸಿ "ಸಂಸ್ಕೃತ ಪ್ರಾಕೃತೋಭಯ ಕವಿತ್ವ ಬಲ್ಲರ ಶಿರೋಮಣಿಯೆನಿಪ ನಂದೀಶ ಕವಿಯ ಕೃಪೆಯಿಂದ ಪ್ರಕಟವಂ ಮಾಡಿದನು", "ಮದ್ಗುರು ರಾಜವಟ್ಟಿಯಾರಾಧ್ಯ ನಿಮ್ಮಯ ಪೂರ್ಣಕರುಣಬಲದಿಂ ರಾಘವನ ಕೃತಿಯ ನಿರ್ವಿಘ್ನದಿಂ ಪಾರವೆಯ್ದಿಸಿದೆನು" ಎಂದೂ

ಗುರುಕರುಣದಿಂ ವಿರೂಪಾಕ್ಷನೊಲವಾಂತುಸುದರ್ಶ
ಸುರದನಗಳಂ ಪಡೆದು ಪ್ರಮಥಾಳಿಯಿಂ ಪೊಗಳ್ದು
ಪರವಾದಿಗಳ ಗೆಲ್ದು ಸುಮನಸರಿಗೊಲಿದು ವೀರೇಶನಿಂ ಕಲ್ಪದಕವಾ
ನೆರೆಪಡೆದು ದುಷ್ಕವಿಗಳಂ ಜಯಿಸಿ ಪೊಮ್ಮಳೆಯ
ಸುರಿಸಿ ಜಂಗಮಕೆ ಮೋಕ್ಷವನಿತ್ತು ಶಂಕರಂ
ಕರೆದೊಡೊಲ್ಲದೆ ಸಮಾಧಿಯೊಳು ತನುವಂ ಬಯಲಮಾಡಿ ರಾಘವ ಮೆರೆದನು ೧೯-೯೯

ಇಂತೀಪವಾಡಂಗಳಲ್ಲಿನಿತು ಸಂದೇಹ
ವಾಂತ ನರನೆಯ್ದುವಂ ಘೋರ ನರಕಾರ್ಣವವ
ಭ್ರಾಂತಿಯಿಂದಿನಿತಲ್ಲವೆಂದು ಸಂದೇಹಿಸಿದರಾದಧಿಕ ಪರವಾದಿಗೆ
ನಾಂ ತೊಡರ್ದು ಮುಡಿಗೆ ವಿಷಸರ್ಪ ಶಿರವುಡ್ದುಗಳು
ಮುಂತಾದ ದಿಬ್ಯಂಗಳುಂ ಗೆದ್ದು ತೋರ್ದವನ
ಕೊಂತಮಂ ಪಾಯಿಸುವೆನೀ ಪ್ರತಿಜ್ಞೆಗೆ ಮಲೆವ ಖಳ ನಿಲ್ಲನೀ ಧರೆಯೊಳು ೧೯-೧೦೦

ಹೀಗೆ ಸಿದ್ಧರಾಮಚಾರಿತ್ರದಲ್ಲಿ ರಾಘವಾಂಕನು ಪ್ರತಿಜ್ಞೆ ಮಾಡಿದಂತೆ ರಾಘವಾಂಕನ ಚರಿತ್ರದ ಕೊನೆಯಲ್ಲಿ ಸಿದ್ಧನಂಜೇಶನು ಪ್ರತಿಜ್ಞೆಮಾಡಿದ್ದಾನೆ. ನಮಗೆ ಈ ಕೃತಿ ಕೆಲವು ಕಾರಣದಿಂದ ಮುಖ್ಯವಾಗಿದೆ:

೧. ಈ ಚಾರಿತ್ರ ಉತ್ತಮವಾದ ಕಾವ್ಯ. ಕಥಾನಿರೂಪಣೆ ವರ್ಣನೆ ಮತ್ತು ಸನ್ನಿವೇಶಗಳು ಹೃದಯಂಗಮವಾಗಿವೆ. ರಾಘವ ಗಣನಾಥನ ಅವತಾರ ಚರಿತ್ರೆ ಯಾದರೂ ಅದರಲ್ಲಿ ಪವಾಡಗಳು ಹೆಚ್ಚಾಗಿಲ್ಲ. ಅಷ್ಟಾವರಣಗಳ ವಿವರಣೆಯನ್ನು ಹರಿಹರನ ಜೀವನ ಚರಿತ್ರೆಯನ್ನು ತೆಗೆದುಬಿಟ್ಟರೆ ರಾಘವಾಂಕನ ಚರಿತ್ರೆ ಮನುಷ್ಯ ಚರಿತ್ರೆಯಾಗಿ ಕಾಣುವುದಲ್ಲದೆ ಅದ್ಭುತವಾಗಿ ತೋರುವುದಿಲ್ಲ.

೨. ಕನ್ನಡ ಸಾಹಿತ್ಯದಲ್ಲಿ—ಮುಖ್ಯವಾಗಿ ವೀರಶೈವ ಸಾಹಿತ್ಯದಲ್ಲಿ—ಹರಿಹರ ಮತ್ತು ರಾಘವಾಂಕ ಪ್ರಸಿದ್ಧರಾದ ಕವಿಗಳು. ಹರಿಹರನಂತೂ ಕುಮಾರವ್ಯಾಸಾದಿ ಗಳಂತೆ ಪ್ರಥಮ ಶ್ರೇಣಿಗೆ ಸೇರಿದವನು. ಈ ಇಬ್ಬರು ಮಹಾಕವಿಗಳ ಸಂಪೂರ್ಣ ಜೀವನ ಚರಿತ್ರೆಯೂ ಈ ಕಾವ್ಯದಲ್ಲಿ ನಮಗೆ ದೊರೆಯುತ್ತದೆ.

೩. ಈ ಕಾವ್ಯದಲ್ಲಿ ಹಲವರು ಗುರುಗಳ ಶಿಷ್ಯರ ಮತ್ತು ಭಕ್ತರ ಹೆಸರುಗಳನ್ನು ಹೇಳಿರುವುದರಿಂದಲೂ ಸಿದ್ಧನಂಜೇಶನ ಕಾಲವನ್ನು ನಾವು ತಿಳಿಯಬಹುದಾದ್ದರಿಂದಲೂ ಆ ಇತರರ ಮೂಲವನ್ನು ಗೊತ್ತುಮಾಡುವುದಕ್ಕೆ ಈ ಕಾವ್ಯ ಸಹಾಯಮಾಡುತ್ತದೆ. ನಂದೀಶಕವಿಯೂ, ರಾಜವಟ್ಟೆಯಾರಾಧ್ಯನೂ ಸಿದ್ಧನಂಜೇಶನ ಸಮಕಾಲೀನರೆಂದು ಗೊತ್ತು ಮಾಡಬಹುದಾಗಿದೆ. ಸಂಪಾದನೆಯ ಸಿದ್ಧವೀರಣಾಚಾರ್ಯನು ಇವನಿಗಿಂತ ಹಿಂದೆ ಇದ್ದಿರಬೇಕೆಂದು ಹೇಳಬಹುದಾಗಿದೆ. ಹೀಗೆಯೇ ಇತರರ ವಿಚಾರ.

೪. ಕುಮಾರವ್ಯಾಸನು ಹರಿಹರನನ್ನು ನೋಡಲು ಬಂದ ಪ್ರಕರಣ ಸ್ವಾರಸ್ಯ ವಾಗಿದೆ. ದೇವರಾಜನ ಸಭೆಯಲ್ಲಿ ರಾಘವಾಂಕನಿದ್ದನೆಂಬುದೂ ಅವನು ಓರಗಲ್ಲಿನ ಪ್ರತಾಪರುದ್ರನ ಬಳಿಗೆ ಮತ್ತೆ ಬೇಲೂರಿನ ಪದ್ಮರಸನಲ್ಲಿಗೆ ಹೋಗಿದ್ದನೆಂಬುದೂ,

ಭೀಮಕವಿ ರಾಘವಾಂಕನ ಶಿಷ್ಯನೆಂಬುದೂ, ಭಾರತವ ಕೆಡೆಮೆಟ್ಟಿ ಕನಕಾಭಿಷೇಕವನ್ನು ತಪ್ಪಿಸಿ ಚಾಮರಸನು ಪ್ರಭುಲಿಂಗಲೀಲೆಯನ್ನು ಬರೆದನೆಂಬುದೂ ಚಾರಿತ್ರಿಕ ದೃಷ್ಟಿಯಿಂದ ವಿಚಾರಾರ್ಹವಾಗಿವೆ. ಹರಿಹರ, ಪದ್ಮರಸ ಮತ್ತು ರಾಘವಾಂಕರು ೧೩೦೦ರಲ್ಲಿ ಇದ್ದರೇ ಹೇಗೆ? ಎಂದೂ ಶೋಧಕರು ವಿಚಾರಮಾಡುತ್ತಿದ್ದಾರೆ.

ಗುರುರಾಜಚಾರಿತ್ರ

ಈ ಕೃತಿ ಕೆಲವು ದೃಷ್ಟಿಗಳಿಂದ ರಾಘವಾಂಕಚಾರಿತ್ರಕ್ಕೆ ಬಹಳ ಬೇಳಾಗಿದೆ. ಗುರುರಾಜ ಚಾರಿತ್ರ ಎಂಬುದರಿಂದ ಇದರಲ್ಲಿ ಪಂಡಿತಾರಾಧ್ಯರ ಚರಿತ್ರೆ ಇರಬಹುದೆಂದೋ ರೇಣುಕಾಚಾರ್ಯರ ಚರಿತ್ರೆ ಇರಬಹುದೆಂದೋ ಮೊದಲಿನಲ್ಲಿ ನಮಗೆ ಅನುಮಾನ ವುಂಟಾಗಬಹುದು. ಬಳಿಕ ಪಂಚಾಚಾರ್ಯರ ಜೀವನ ಚರಿತ್ರೆಯನ್ನೆಲ್ಲ ಹೇಳುತ್ತಾನೆಂದು ತಿಳಿದುಕೊಳ್ಳಬಹುದು.

ಒರೆವನಾಚಾರ್ಯರುದ್ಭವವನಾ ಪರಮ ಸ
ದ್ಗುರು ವಂಶವಂ ಶಿವನ ಪಂಚವಿಂಶತಿ ಲೀಲೆ
ಹರಪೂಜೆಯಂ ಪಂಡಿತಾರಾಧ್ಯರೊರೆದ ಗಣಸಾಹಸ್ರ ನಾಮಂಗಳಂ
ಧರೆಯಲ್ಲಿ ಮತ್ತೆ ಶಿವಕೃಪೆವಡೆದ ನೂತನರ
ಹರಪುರಾತನರ ಕಥೆಗಳ ಸಿದ್ಧನಂಜೇಶ
ಗುರುನಿರೂಪದೊಳೊಲಿದು ಗುರುರಾಜ ಚಾರಿತ್ರದೊಳು ಬುಧರ ಬಗೆ ಬಯಸಲು ೧—೮

ಎಂದು ಕವಿ ತಿಳಿಸಿದ್ದಾನೆ. ಇದರಲ್ಲಿ ಹದಿನಾರು ಸಂಧಿಗಳಿವೆ. ಪಂಚಾಚಾರ್ಯರ ಜೀವನ ಚರಿತ್ರೆಯೆಲ್ಲ ಒಂದೇ ಸಂಧಿಯಲ್ಲಿ ಮುಗಿದು ಹೋಗಿದೆ. ಅದರಲ್ಲಿಯೂ ವಿಶ್ವೇಶ್ವರಾಚಾರ್ಯರ ಚಾರಿತ್ರ ಇದರಲ್ಲಿ ಸೊನ್ನೆ. ಉಳಿದ ನಾಲ್ವರ ಚರಿತ್ರೆ ಮಾತ್ರ ಇದೆ. ರೇವಣಸಿದ್ಧನ ಚರಿತ್ರೆ ಎಂಟು ಪದ್ಯಗಳಲ್ಲಿ, ಮರುಳಸಿದ್ಧೇಶನ ಚರಿತ್ರೆ ಹತ್ತು ಪದ್ಯಗಳಲ್ಲಿ ಪಂಡಿತಾರಾಧ್ಯರ ಚರಿತ್ರೆ ನಲವತ್ತು ಪದ್ಯಗಳಲ್ಲಿ ಏಕೋರಾಮಾಚಾರ್ಯರ ಚರಿತ್ರೆ ಮೂವ್ವತ್ತುನಾಲ್ಕು ಪದ್ಯಗಳಲ್ಲಿ—ಒಟ್ಟು ಎಪ್ಪತ್ತು ನಾಲ್ಕು ಪದ್ಯಗಳಲ್ಲಿ ಯಥಾರ್ಥ ಗುರುರಾಜಚಾರಿತ್ರ ಮುಗಿದುಹೋಗಿದೆ. ಆ ಕಥನದಲ್ಲಿ ವಿಶೇಷಾಂಶಗಳೂ ಇಲ್ಲ. ಇದು ನಮಗೆಲ್ಲ ಆಶಾಭಂಗವನ್ನುಂಟುಮಾಡಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಿದ್ಧನಂಜೇಶನಂಥ ಸಾಮರ್ಥ್ಯಯುತನಾದ ಕವಿ ಆ ಆಚಾರ್ಯರುಗಳ ಚರಿತ್ರೆಯನ್ನು ವಿಸ್ತಾರವಾಗಿ ಬರೆಯಬಹುದಾಗಿತ್ತು.

ಆರಂಭದಲ್ಲಿ "ಪಾರ್ವತೀಶ ಗುರುಸಿದ್ಧನಂಜೇಶ ಜಯಿಸು ಪ್ರಕಾಶ" ಎಂದು ಶಿವಸ್ತುತಿ ಮತ್ತು ಗುರುಗಳ ಸ್ತೋತ್ರಮಾಡಿದ್ದಾನೆ. ನೂತನ ಪುರಾತನರಲ್ಲಿ ಬಸವೇಶನನ್ನೂ, ಕವಿಗಳಲ್ಲಿ ಹರಿಹರ ಕೆರೆಯಪದ್ಮರಸಾದಿಗಳನ್ನೂ ಸ್ಮರಿಸಿದ್ದಾನೆ. ಶಿವನು ಪಾರ್ವತಿಗೆ ಹೇಳಿದ ಪಂಚಾಚಾರ್ಯರ ಚರಿತ್ರೆಯನ್ನು "ಪಂಚವಣ್ಣಿಗೆಯಧೀಶ ನಂಜೇಶ ನಿಜಸತಿಗೆ ಸದ್ಗುಣವತಿಗೆ ಭಾಸುರಾಂಗಿಗೆ ಚೆನ್ನವೀರಾಂಬೆಗೆ ಪೇಳ್ದ ಕಥನಮಂ ಬಿತ್ತರಿಪೆನು" ಎಂದು ಹೇಳಿದ್ದಾನೆ. ಇದರಿಂದ ಮೊದಲಿನಲ್ಲಿ ಶಿವನು ಪಾರ್ವತಿಗೆ

ಹೇಳಿದನು, ಅದನ್ನೆ ತನ್ನ ಗುರುವಾದ ಸಿದ್ಧನಂಜೇಶನು ತನ್ನ ಹೆಂಡತಿಯಾದ ಚೆನ್ನವೀರಾಂಬೆಗೆ ಹೇಳಿದನು—ಅದನ್ನು ಈಗ ತಾನು ಹೇಳುತ್ತೇನೆ ಎಂದು ತಿಳಿಸಿದ್ದಾನೆ. ಸಮುದ್ರದವರ್ಣನೆ, ಕೈಲಾಸಾದಿಗಳ ವರ್ಣನೆಗಳು ಇಲ್ಲ. ಮೇರುವಿನ ದಕ್ಷಿಣ ಭಾಗದಲ್ಲಿ ಭರತಖಂಡ, ಅಲ್ಲಿ ಮಲಪ್ರಹಾರೀನದಿ ತೀರದಲ್ಲಿ ಸೋಮೇಶ್ವರನು ನೆಲಸಿದ್ದಾನೆ. ಅದಕ್ಕೆ ಪೂರ್ವದಲ್ಲಿ ನವಿಲು ತೀರ್ಥವಿದೆ. ಆಮೇಲೆ ಹೂಲಿಯ ಕ್ಷೇತ್ರವನ್ನು ಅಲ್ಲಿ ರೇವಣಸಿದ್ಧನು ಶಿವಯೋಗ ಸಮಾಧಿಯಲ್ಲಿ ಕುಳಿತಿದ್ದನೆಂಬುದನ್ನು ತಿಳಿಸಿದ್ದಾನೆ.

ಧರೆಯ ಪೊತ್ತಲಸಿ ಬಂದಾ ಮಹಾಶೇಷ ತಾಂ
ಪರಿವೇಷವಾಗಿ ಮಲಗಿರ್ದಪನೊ ಚಕ್ರಧರ
ವರಸುದರ್ಶನವನಾ ಕ್ಷೇತ್ರದೊಳು ಮಡಗಿದನೋಯೆನಲು ಭಾಪುಂಜಮಾಗಿ
ಪುರದ ಕೋಟೆಯು ವಿರಾಜಿಸುತಿರ್ದುದಮರತತಿ
ಪರಿಕಿಸಲ್ಕೈತಂದ ಪುಷ್ಪಕದ ಸಾಲುಗಳೊ
ಕರಮೆಸೆವ ತೆನೆಗಳಿಂ ಮುಗಿಲಟ್ಟೆಗಳ ಸಂದೋಹದಿಂ ಶೋಭೆವೆತ್ತು ೧—೨೮

ರಂಜಿಸುತ್ತಿತ್ತು. "ಆ ಪುರದ ಬಾಜಾರದೈಶ್ವರ್ಯಮಂ ಪೊಗಳಲಳವೆ" ಎಂದು ಉಪಕ್ರಮಿಸಿ ಅಂಗಡಿ ಬೀದಿಗಳನ್ನು ವರ್ಣಿಸಿದ್ದಾನೆ.

ಷೋಡಶಾಂಶುಂ ಸಹಸ್ರಾಂಶುಗಳ ರಾಹುವಿನ
ದಾಡೆಗಂ ಜೋಡಿ ಬಂದೀಮಳಿಗೆಗಳಲಿ ಮಂನೆ
ಮಾಡಿಕೊಂಡಿರ್ಪವೊಲು ಕಂಚುಗಾರರ ಪಸರವರಿಸು ಸರಮಾಗೆಸೆದುವು
ಮೂಡೆಗಟ್ಟಂ ಕಟ್ಟಿ ಹುಡುಕು ನೀರೊಳಗದ್ದಿ
ಕೂಡೆ ಮೂಗಂ ಕೊಯ್ದೊಡಳ್ಕದೇ ಬೀದಿಯೊಳು
ನಾಡೆ ನಾನಾಶೋಭನಕ್ಕೆ ಮುಂದೆನುತಿರ್ಪಯೆಲೆಯಂಗಡಿಗಳೆಸೆದವು ೧—೩೩

ಸರವ ತಿದ್ದಿಡುವ ಸರವಂದಿಗರ ಗಂಧಿಗರ
ಪಿರಿದು ತೈಲವ ತೆಗೆವ ಗಾಣಿಗರ ಸೇಣಿಗರ
ಇರದೆ ದವಸವನಳೆವ ಆವಟಿಗ ಕೋವಟಿಗ ದೀವಟಿಗ ಕಲ್ಲುಕುಟಿಗ
ಹರದರಂ ಮುಜ್ಜಿಸುವ ನರ್ತಕರ ವರ್ತಕರ
ಕರಸಣ್ಣಗಳನೆಯ್ವ ಜೇಡರಾ ಲಾಡರಾ
ಪರಿಮಳದ ಪೂವಿನಾ ಮಾಲೆಗಾರರ ನೀಲಿಗಾರರಾ ಪಸರವೆಸೆಗುಂ ೧—೩೪

ಆ ಪುರದಲ್ಲಿ ಪಂಚವಣ್ಣಿಗೆಯ ಸಿದ್ಧನಂಜೇಶ ಗುರು ಮತ್ತು ಚೆನ್ನವೀರಾಂಬೆ ಇದ್ದಾರೆ. ಆ ಗುರುವಿನ ಶಿಷ್ಯರು ಸಿದ್ಧಭದ್ರೇಶದೇವ, ನಂಜಯ್ಯ ಮೊದಲಾದ ಹಲವರು ಶುಶ್ರೂಷೆ ಮಾಡುತ್ತಿದ್ದಾರೆ. ಒಂದುದಿನ ಚೆನ್ನವೀರಾಂಬೆ ಗಂಡನನ್ನು ಕುರಿತು "ಗುರು ಸಂಪ್ರದಾಯಮಂ ಪೇಳ್ವುದೆನೆ" "ಲೇಸಾದುದೀ ಪ್ರಶ್ನೆಯೆಂದು" ಶಿವಧರ್ಮೋತ್ತರದಲ್ಲಿ ಪಾರ್ವತಿಗೆ ಶಂಕರನು ಹೇಳಿದುದನ್ನು ತಿಳಿಸುವುದಾಗಿ ಪೀಠಿಕೆ ಹಾಕಿಕೊಂಡು ಪಂಚಾಚಾರ್ಯರ ಕಥೆಗಳನ್ನು ಹೇಳುತ್ತಾನೆ. ಪಂಚಸಾದಾಖ್ಯಗಳಿಂದ ಪಂಚಾಚಾರ್ಯರು ಹುಟ್ಟಿದರು. ನಾಲ್ಕು ಯುಗಗಳಲ್ಲಿಯೂ ತಪ್ಪದೆ ಅವತಾರ ಮಾಡುತ್ತಾರೆ.

ಕಲಿಯುಗದಲ್ಲಿ ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿತಂದೆ ಪಂಡಿತಾರಾಧ್ಯ ಮತ್ತು ವಿಶ್ವೇಶ್ವರಾಚಾರ್ಯರಾಗಿ ಅವತರಿಸಿದ್ದಾರೆ.

ಇವರಲಾ ಶಿವನ ನಿಜ ಸಂಪ್ರದಾಯದ ಗುರುಗ
ಳಿವರ ಘನಮಹಿಮೆಯುಂ ಹೇಳುವಡೆ ಯುಬ್ಜಸಂ
ಭವಗಸಾಧ್ಯಂ ಲೋಕರಕ್ಷಕರು ವೀರಶೈವಪ್ರತಿಷ್ಠಾಚಾರ್ಯರು
ಭವಭಯವಿಭಾಡನರು ಸಕಲಾಗಮಸ್ತುತ್ಯ
ರವಿರಳ ಜ್ಞಾನಿಗಳು ಸದ್ಧರ್ಮಚರಿತರುಂ
ವಿವರಿಸಿದೆವಾ ನಿನಗೆ ಕೇಳೆಂದು ಗಿರಿಜಾತೆಯೊಡನೆ ಸೋಮೇಶನುಡಿದಂ ೧–೭೫

ರೇವಣಸಿದ್ಧನ ಚರಿತ್ರೆಯಲ್ಲಿ ಏನೇನೂ ಸ್ವಾರಸ್ಯಭಾಗಗಳಿಲ್ಲ ; ಬರಿಯ ಕಾರ್ಯಗಳ ಪಟ್ಟಿ. ಮರುಳಸಿದ್ಧೇಶ್ವರನ ಚರಿತ್ರೆಯೂ ಹೆಚ್ಚಾಗಿಲ್ಲ. ಎಲ್ಲಿಲ್ಲಿ ಉದಿಸಿದ್ದು ಮೊದಲಾದವುಗಳನ್ನು ಹೇಳದೆ—

ಸಜ್ಜನರ ರಕ್ಷಿಸುವ ದುರ್ಜನರ ಶಿಕ್ಷಿಸುವ
ಜಜ್ಜುಗಂಥೆಯ ಧರಿಸಿ ನಿರ್ಮಲ ಚರಿತ್ರನುಂ
ಬಜ್ಜರವ ಖಂಡಿಸುವ ಕೊಡಲಿ ಕರದೊಳು ಮೆರೆಯೆ ದೇಶಾಂತರಂಗೆಯ್ವುತಾ
ಪಜ್ಜಳಿಪ ಕಾಶಿ ಕೇದಾರ ಸೌರಾಷ್ಟ್ರ ಶ್ರೀ
ತಜ್ಜಲನಿಲಯ ನೀಲಕಂಠ ದ್ರಾಕ್ಷಾರಾಮ
ಚಿಜ್ಜ್ಯೋತಿ ಲಿಂಗಮಯ ಶ್ರೀಶೈಲ ಹಂಪೆ ಗೋಕರ್ಣ ಮುಖ್ಯಕ್ಷೇತ್ರಗಳೊಳು ೨–೧೨
ರಾಜಿಸುವ ಸಿದ್ಧಮುನಿಪುಂಗವರ ಕೈಯಿಂದ
ಪೂಜೆಯಂ ಕೈಗೊಂಡು ಇಷ್ಟಾರ್ಥವಿತ್ತು ಯತಿ
ರಾಜ ಬರುತಿರೆ ಸಕಲಸಿದ್ಧರಂ ಸೆರೆವಿಡಿದು ಕವಡೆಗಳ ಪೋಣಿಸುತ್ತಂ
ತೇಜವಹ ಮೂಗಿನೊಳು ಕಟ್ಟಿ ಸೇವೆಯ ಕೊಂಬ
ಳೌ ಜವ್ವನೆಯೆ ಕೇಳು ಕೊಲ್ಲಾಪುರದ ದೈತೆ
ಭ್ರಾಜಮಾನದೊಳಿರಲ್ಕವಳೆಡೆಗೆ ಬಂದನಾ ಮರುಳಸಿದ್ದೇಶದೇವಂ ೨–೧೩

ಆ ರಕ್ಕಸಿಯು ಮುಂದೆ ಸಿದ್ಧನು ನಿಂತುಕೊಂಡು ಭಿಕ್ಷಾ ಎನ್ನಲು ಘೋರತರವಾದ ಹಾಲಾಹಲವನ್ನು ಅವಳು ನೀಡಿದಳು. ಸಿದ್ಧನು ಅದನ್ನೇ ಉಂಡು ಅವಳನ್ನು ದಿಂಡುಗೆಡೆವಂತೆ ಒದ್ದು ಕೆಡವಿ ಎದೆಯುಂ ಮೆಟ್ಟಿ ಗಂಡುಗೊಡಲಿಯಿಂದ ಮೂಗನ್ನೂ ಮೊಲೆಯನ್ನೂ ಕೊಯ್ದು ದಂಡದಿಂದ ಹಲ್ಲುಗಳನ್ನು ನುಚ್ಚುಬಡಿದು ಎಲುವುಗಳನ್ನು ಖಂಡಿಸುತ್ತಾ ನರಗಳನ್ನು ತೆಗೆದು ಹಾಕಲು ಮಾಯೆ ಸಿದ್ಧನನ್ನು ಸ್ತೋತ್ರ ಮಾಡತೊಡಗಿದಳು. ಸಿದ್ಧನು ಹಾಗೆಯೇ ಮಾಡಿದನು. ಮತ್ತು ಮರುಳ ತಾಂಡವ ನೃತ್ಯವಾಡಿದನು. ಅಲ್ಲಿಂದ ಮುಂದಕ್ಕೆ ಕಗ್ಗಲ್ಲಗೌಡನ ಬಳಿಗೆ ಬಂದು “ಸುತರಿಲ್ಲದೆ ಬಾಯ್ಬಿಡುತ ಬಯಸುತಿರಲು”

ಸಲ್ಲೀಲೆಯಿಂದವಗೆ ಪೊಲದೊಳುಂ ಶಿಶುವೇಷ
ದಲ್ಲಿ ಪ್ರತ್ಯಕ್ಷಮಾಗಿರೆ ಕಂಡು ಸೋಲ್ಲಾಸ
ದಲ್ಲಿ ಕೊಂಡೊಯ್ದು ಸತಿಪುರುಷರುಂ ಸಲಹುತ್ತಲಿರ್ದರಾನಂದದಿಂದ ೨–೧೮

ಎನಿತೆನಿತು ಕೊಡವಾಲ ಪೊಯ್ದೊಡಂ ಸೇವಿಸುವ
ತನುಜಂಗೆ ದೃಷ್ಟಿಯಾದಪುದೆಂದು ಮೋಹದಿಂ
ಜನನಿ ದೃಷ್ಟಿಯ ಮುರಿದು ಕಾರ್ಬೊನ್ನ ಸೊಲ್ಲಿಗೆಯೊಳಂ ಪಾಲನೆರವುತಿರಲು
ಕನಕವಾಗಲು ಪುರುಷಗರುಪೆ ಸಂತಸದಿಂದ
ಮನೆಯೊಳಿಹ ಕಬ್ಬುನವನೆಲ್ಲಮುಟ್ಟಿಸಲು ಕಾಂ
ಚನಮಾಗಲಾರೆವು ಗೌಂಡ ಮುದವಡೆಯೆ ಮೂರ್ವರುಷದೆಳೆಯುವನಾದನು ೨–೧೯

ಬಳಿಕ ಕರುಗಳನ್ನು ಕಾಯುತ್ತ ಹಲವು ದೃಷ್ಟಗಳನ್ನು ತೋರುತ್ತಾ ಕಲ್ಲಗೌಡನಿಗೆ ಸಕಲಸಿದ್ಧಿಗಳನ್ನಿತ್ತು ಉಜ್ಜಯಿನಿಗೆ ಬಂದು ಲಿಂಗೈಕ್ಯನಾದನು.

ಪಂಡಿತಾರಾಧ್ಯನ ಚರಿತ್ರೆ ನೀರಸವಾಗಿದೆ. ಕೊನೆಯಲ್ಲಿ ಶ್ರೀಶೈಲದಿಂದ

ದೋನಮಯ್ಯಂ ಮರಳಿಬಂದು ಗುರುವಿನ ಪದಕೆ
ಸಾನುರಾಗದೊಳೆರಗಿ ಬಿನ್ನಪಂ ದೇವ ಶಿವ
ತಾನೆ ಸ್ವಪ್ನದಿ ಬಂದುಯೆನ್ನ ಕರವಿಡಿದೊಯ್ದು ತೋರಿದಂ ಪರ್ವತದೊಳು
ಏನೇನು ಮಹಿಮೆ ಸುಕ್ಷೇತ್ರಲಿಂಗಂಗಳುಂ
ಟಾ ನಿಧಾನವನೆಲ್ಲ ದಯದೊಳೊಂದುಳಿಯದೊಲು
ಮಾನನಿಧಿ ನಿಮ್ಮ ಕ್ಷೇಮವ ಕೇಳಿ ಹರಸಿದರುಯೆಂದು ಬಿನ್ನಪಗೆಯ್ದನು ೨–೩೯

ಆ ಮಾತ ಕೇಳಿ ಸಂತಸದಳೆದು ಸಜ್ಜನ
ಸ್ತೋಮ ಜಯ ಜಯಯೆನಲು ಲಿಂಗಗರ್ಭವಪೊಕ್ಕ
ನಾ ಮಹಾಪ್ರಮಥಗಣರಾನಂದಿಸಲು ದೇವದುಂದುಭಿಯು ಮೊಳಗುತಿರಲು ೨–೪೦

ಎಂದು ಮುಕ್ತಾಯ ಮಾಡಿದ್ದಾನೆ. ಏಕೋರಾಮಿ ತಂದೆಯ ಜೀವನ ಚರಿತ್ರೆ ಇದ್ದಿದರಲ್ಲಿ ಸ್ವಲ್ಪ ವಿಸ್ತಾರವಾಗಿದೆ.

ಚೆನ್ನವೀರಾಭದ್ರೆ ಕೇಳು ಸದ್ಭಕ್ತಿಯಿಂ
ಪನ್ನಗಾರಿಧ್ವಜನ ಮುಂದಲೆಯ ಕೊಯ್ದ ಸಂ
ಪನ್ನನೆನಿಸುವ ಶಂಕುಕರ್ಣಗಣನಾಥನೇಕೋರಾಮಿ ತಂದೆಯೆಂಬ
ಉನ್ನತದ ನಾಮದಿಂ ಲೋಕಹಿತ ಕಾರಣಂ
ಚೆನ್ನಮುದ್ರಾಪುರದ ಭಕ್ತರುದರದಿ ಜನಿಸಿ
ದುನಲವಿನಿಂ ಪರಮವೀರಶೈವದ ಮೂಲವೃಕ್ಷದಂಕುರವೆಂಬೊಲು ೨–೪೧

ಭೂಮಿಗೆಳ್ತಂದ ಘಂಟಾಕರ್ಣ ಗಣನಾಥ
ರಾಮನಾಥಾಚಾರ್ಯರೆಂಬಾಭಿಧಾನದಿಂ
ಪ್ರೇಮದಿಂದವರ ಕೈಯಿಂದ ಶ್ರೀ ವೀರಶೈವೋಪದೇಶವನು ಪಡೆದು
ಆ ಮಹಾವೇದಶಾಸ್ತ್ರಗಳು ಪುರಾಣಂಗ
ಳೀ ಮಹಿಯೊಳಿಲ್ಲೀತನೊಡನೆ ಪ್ರತಿಭಟಿಸುವತಿ
ಸಾಮರ್ಥ್ಯರೆಂದು ಸಕಲರು ಪೊಗಳುತಿರಲು ಏಕೋರಾಮಿ ತಂದೆಯೆಸೆದನು ೨–೪೨

ಮುಂದೆ ವ್ಯಾಸನೆಂಬ ವಿದ್ವಾಂಸನು ಆನೆಗಳ ಮೇಲೆ ಗ್ರಂಥಗಳನ್ನು ಹೇರಿಸಿಕೊಂಡು ಪುರಪ್ರವೇಶ ಮಾಡುತ್ತಾನೆ. ಅವನು ವೀರ ವೈಷ್ಣವನು. ದೊರೆಯಾದ ಭಾಸ್ಕರನು ಅವನನ್ನು ಎದುರುಗೊಂಡು ಮರ್ಯಾದೆ ಮಾಡಿ ಕರೆತರುತ್ತಾನೆ. ಆ ವೀರವೈಷ್ಣವನಿಗೂ ಈ ವೀರಶೈವನಿಗೂ ವಾಗ್ವಾದಗಳಾಗಿ ಏಕೋರಾಮಿ ತಂದೆಯೂ ಹರಿಯ

ನಿರಾಕರಣೆಯನ್ನೂ ಶಿವಾಧಿಕ್ಯವನ್ನೂ ಸ್ಥಾಪಿಸುವನು. ಆಗ ವ್ಯಾಸಪಂಡಿತನು ಸೋತು ಶರಣಾಗತನಾದನು.

ಸಾಮವೇದಿಗಳು ಶ್ವಪಚಯ್ಯಂಗೆ ಸೋತು ಬಳಿ
ಕಾ ಮಹಾಲಿಂಗಧಾರಕನಾದ ಮಾಳ್ಕೆಯಾ
ಮೀಮಾಂಸಕಂ ಬಸವರಾಜನೊಳು ಸೋತು ಲಿಂಗವ ಧರಿಸಿದಂತೆಯೇಕೋ
ರಾಮಿತಂದೆಯೊಳು ವಾದವಮಾಡಿ ಲಿಂಗಮಂ
ಪ್ರೇಮದಿಂ ಧರಿಸಿದಂ ವ್ಯಾಸಬುಧವರನೆಂದು
ಸಾಮೋದದಿಂ ಭಕ್ತತತಿ ಕೀರ್ತಿಸುತ್ತಿರಲೊಪ್ಪಿದಂ ಗುರುರಾಯನು ೨—೭೦

ಹೀಗೆ ಸ್ವಮತಾಧಿಕ್ಯವನ್ನು ಸ್ಥಾಪಿಸಿ ಗುರುರಾಯನು ಮುಂದಿನ ಸೋಮವಾರ ತಾನು ಮಲ್ಲಿಕಾರ್ಜುನಲಿಂಗದಲ್ಲಿ ಐಕ್ಯವಾಗುವುದಾಗಿ ಭವಿಷ್ಯವನ್ನು ಹೇಳಿ ಅದೃಶ್ಯನಾದನು. ಬಳಿಕ ಆ ಸೋಮವಾರ ಭೋಗ ಮಲ್ಲಿಕಾರ್ಜುನಾಲಯಕ್ಕೆ ಒಂದು ಶಿವನನ್ನು ಕೀರ್ತಿಸಿ "ತಲ್ಲಿಂಗ ಗರ್ಭವನಾನಂದದಿಂ ಪೊಕ್ಕನಾಚಿಜ್ಯೋತಿ ಜ್ಯೋತಿ ಬೆಳಗೊಂದಾದಮಾಳ್ಕೆ''

ನ್ಯಾಯವಾಗಿ ಇಲ್ಲಿಗೆ ಚತುರಾಚಾರ್ಯರ ಜೀವನ ಚರಿತ್ರೆ ಮುಗಿಯಿತು. ಮುಂದೆ ನಾವು ಕಳಶದಾಚಾರ್ಯನಾದ ವಿಶ್ವೇಶ್ವರಾಚಾರ್ಯನ ಕಥೆಯನ್ನು ನಿರೀಕ್ಷಿಸುವುದು ಸಹಜವಾಗಿದೆ. ಆದರೆ ಕವಿಯು

ತರಳಾಕ್ಷಿ ಕೇಳು ಸದ್ಭಕ್ತಿಯಿಂ ಪರಶಿವಂ
ಹರುಷದಿಂ ವಿಶ್ವೇಶ್ವನೆಂಬ ಗುರುವರನಾಗಿ
ಧರೆಯ ಪಾಲಿಸಿಯನುಗ್ರಹಂಗೆಯ್ದ ರಂತವರ ಕರಕಮಲಸಂಜಾತನು
ವರ ಸದಾಶಿವನೆನಿಪವಾಚಾರ್ಯಶೇಖರಂ
ಕರುಣದಿಂ ಬೋಧಿಸುವ ವೀರಶೈವೋದ್ಧಾರ
ಪರನೆನಿಸಿ ಜಂಗಮವೆ ಸಾಕ್ಷಾತ್ ಸದಾಶಿವಂ ಎಂದು ಪ್ರತಿಷ್ಠಿಸಲೊಡಂ ೩—೩

ಎಂದು ವಿಶ್ವೇಶನ ಶಿಷ್ಯನಾದ ಸದಾಶಿವನ ಪ್ರಸ್ತಾಪಮಾಡಿದ್ದಾನೆ ; ಮತ್ತು ಇವನು ವೀರಶೈವ ಶಾಸ್ತ್ರಪ್ರಸಂಗವನ್ನು ಮಾಡುತ್ತಿರಲು ಭವಿಗಳೆಲ್ಲರೂ ಸೇರಿ ಈ ಪ್ರಸಂಗ ಗಳಿಂದ ಏನು ಪ್ರಯೋಜನ? ಬರಿಯ ವಾಗ್ಜಾಲ, ದೃಷ್ಟವನ್ನು ತೋರಿಸಿದರೆ ವೀರಶೈವಮತವಧಿಕವೆಂದು ಒಪ್ಪುತ್ತೇವೆ ಎಂದು ಹೇಳಲು ಅವರ ಅಜ್ಞಾನವನ್ನು ಬಿಡಿಸಬೇಕೆಂದು ಹತ್ತು ಭುಜಗಳಿಂದಲೂ ಪಂಚವದನಗಳಿಂದಲೂ ತ್ರಿನೇತ್ರ ಗಳಿಂದಲೂ ''ತೋರಿ ಪ್ರಸ್ಫುರಿಸುತ್ತಲಿರ್ದನ್ನೈಯಂ'' ಇವನ ಶಿಷ್ಯ ಬಯಲ ಪಂಚವಣ್ಣಿಗೆಯಾಚಾರ್ಯ. ಇವನನ್ನು ಹಿಡಿದು ಕೊಠಡಿಯಲ್ಲಿ ಕೂಡಿ ಬೀಗಹಾಕಿದರೂ ಕೂಡ ಯಾವ ನಿರ್ಬಂಧವೂ ಇಲ್ಲದವನಂತೆ ಬೀದಿಯಲ್ಲಿ ಕಾಣಿಸಿಕೊಂಡು ಓಡಾಡು ತ್ತಿದ್ದನಂತೆ. ಕೊಠಡಿಯಲ್ಲಿ ಶೂನ್ಯವಾಗಿರುತ್ತಿತ್ತಂತೆ. ಇವನ ಶಿಷ್ಯ ಸತ್ಯಶಿವಯೋಗಿ ಇವನ ಶಿಷ್ಯ ಸಿದ್ಧಮಲ್ಲೇಶನೆಂದು ಹೇಳಿ ಆ ಸಿದ್ಧಮಲ್ಲೇಶನ ಚರಿತ್ರೆಯನ್ನು ಕವಿ ವಿಸ್ತಾರವಾಗಿ ತಿಳಿಸಿದ್ದಾನೆ. ಹೀಗೆ ಐದನೆಯ ಆಚಾರ್ಯನ ಜೀವನ ಚರಿತ್ರೆಗೆ ಬದಲು ಅವನ ವಂಶದವರ ಕೆಲವರ ಕಥೆಗಳು ಬರುತ್ತವೆ. ಪ್ರಾಯಶಃ ಚತುರಾಚಾರ್ಯರು

ಮಾತ್ರ ಪ್ರಸಿದ್ಧರಾದವರಾಗಿದ್ದು ಈ ಐದನೆಯ ಆಚಾರ್ಯನನ್ನು ಪರಮೇಶ್ವರನ ಪಂಚಮುಖಗಳೆಂಬುದಕ್ಕೆ ಹೊಂದಿಕೆಯಾಗಿರುವಂತೆ ಈಚೆಗೆ ಸೃಷ್ಟಿಸಿ ಅವನ ಜೀವನ ಚರಿತ್ರೆಯನ್ನು ಕೈಬಿಟ್ಟಿರುವರೆಂದು ಹೇಳಬೇಕಾಗಿದೆ. ಚತುರಾಚಾರ್ಯ ಪುರಾಣದಲ್ಲಿ ಕೂಡ ನಾಲ್ವರ ಚರಿತ್ರೆ ಸ್ಪಷ್ಟವಾಗಿ ವಿಸ್ತಾರವಾಗಿದೆ. ವಿಶ್ವೇಶ್ವರಾಚಾರ್ಯರ ಜೀವನ ಚರಿತ್ರೆಗೆ ಬದಲು ಶಿವಲೆಂಕಮಾದಣ್ಣನ ಕಥೆ ಇದೆ.

ಸಿದ್ಧನಂಜೇಶನು ಹೇಳಿರುವ ಗುರುರಾಜ ಚಾರಿತ್ರ ಮುಗಿಸಿದಂತೆಯೇ. ಮುಂದೆ ಬರುವುದೆಲ್ಲ ಷಟ್ಸ್ಥಲ ಪಂಚವಿಂಶತಿ ಲೀಲೆಗಳು. ಶಿವಪೂಜಾಕ್ರಮ, ಶರಣರ ಕಥೆಗಳು, ಬಸವಪುರಾಣದೊಳು ಗೋಪ್ಯವಾಗಿ ರಾಜಿಸುವ ಬಸವೇಶ್ವರನ ಕಥೆಗಳು, ಶಿವಗಣ ಸಹಸ್ರನಾಮ, ನೂತನ ಪುರಾತನರು, ಶಿವತತ್ವಚಿಂತಾಮಣಿ ಹೇಳಿರುವ ನೂತನ ಪುರಾತನರು, ವೀರಶೈವಾಮೃತ ಮಹಾಪುರಾಣದಲ್ಲಿ ಹೇಳಿರುವ ನೂತನ ಪುರಾತನರು ಮತ್ತು ಕವಿಯ ಕುಲದವರಾದ ಶರಣರು ಇವರ ಕಥೆಗಳೆಲ್ಲ ಬರುತ್ತವೆ. ಒಟ್ಟಿನಲ್ಲಿ ಹೀಗೆ ಹಲವರು ಗುರುಗಳು ಅವರ ಶಿಷ್ಯರುಗಳು, ಶರಣರು—ಇವರುಗಳ ವಿಚಾರವನ್ನೇ ಪ್ರಧಾನವಾಗಿ ತಿಳಿಸುವ ಕಾರಣದಿಂದ ಹಲವರ ಕಾಲವನ್ನು ಗೊತ್ತುಮಾಡುವುದಕ್ಕೆ ಈ ಕೃತಿ ಸಹಾಯಕವಾಗಿದೆ

ಲತಾ

ಅರಿವಿನಾಚೆ

ಬಿರಿದು ಬಿಕ್ಕುವ
ಪ್ರೇಮದ ಹೊನಲ
ಹೊತ್ತು ಸಂವಹನಕ್ಕಾಗಿ
ಬರುವ ನಿನ್ನ ಸ್ವಾಗತಕ್ಕೆ
ಧೂಳ ಹೊಡೆದು
ಮಲಿನ ಕಳೆದು
ರಂಗವಲ್ಲಿ ಹಾಕಿ
ಬಣ್ಣಗಳ ತುಂಬಿ
ಕದಗಳಿಗೆ ಮಲ್ಲಿಗೆ ಇಟ್ಟು
ತೋರಣ ಕಟ್ಟಿ
ಕೆನ್ನೀರ ಸಿದ್ಧಮಾಡಿ
ಆರತಿಯ ಹಿಡಿದು
ಒಳಗೆ ನಿಲ್ಲುತ್ತೇನೆ
ಹೊಸಿಲಾಚೆ ನೆಲವಿದೆಯೊ
ಇಲ್ಲವೊ ತಿಳಿಯದೆ

ವೈ. ಸಿ. ಭಾನುಮತಿ

ಹಾಸನ ಜಿಲ್ಲೆಯ ಮಲೆನಾಡು ಗೌಡರ ಮದುವೆ ಸಂಪ್ರದಾಯಗಳು

ಲೈಂಗಿಕತೆ ಪಶು ಪಕ್ಷಿ ಪ್ರಾಣಿ ಮತ್ತು ಮಾನವನಿಗೆ ಸ್ವಭಾವಜನ್ಯವಾದುದು. ಆರಂಭಿಕ ದಿನಗಳಲ್ಲಿ ಆದಿಮಾನವ ಲೈಂಗಿಕ ವಿಚಾರದಲ್ಲಿ ಸ್ವಚ್ಛಂದನಾಗಿದ್ದ. ಆದಿಮಾನವ ತನ್ನ ಅಲೆಮಾರಿತನವನ್ನು ಕಳೆದುಕೊಂಡು ಬುಡಕಟ್ಟು ಪದ್ಧತಿಗೆ ಒಳಗಾದಾಗ ಅನೇಕ ಕಟ್ಟುಪಾಡುಗಳಿಗೆ ಬದ್ಧನಾಗಬೇಕಾಯಿತು. ಹೀಗೆ ಪರಿವರ್ತನೆಗೊಂಡ ಸಂದರ್ಭದಲ್ಲಿ ಮದುವೆ ಸರಳ ಮೂಲಾವಸ್ಥೆಯಲ್ಲಿ ಕಾಣಿಸಿಕೊಂಡಿರಬೇಕು. ಮಾನವನ ಇಂದ್ರಿಯ ಸಹಜ ಬಯಕೆಗಳನ್ನು ಸಕ್ರಮಗೊಳಿಸಿ ಅದಕ್ಕೆ ನೈತಿಕ ಚೌಕಟ್ಟು ಒದಗಿಸುವಲ್ಲಿ ಮದುವೆಯ ಪಾತ್ರ ದೊಡ್ಡದು. ತರುವಾಯದಲ್ಲಿ ಲೈಂಗಿಕತೆ ಗೌಣವಾಗಿ ಪುತ್ರಸಂತಾನ ಪಡೆಯುವುದೇ ಮದುವೆಯ ಮುಖ್ಯ ಉದ್ದೇಶವಾಯಿತು.

ಸಮಾಜದ ಮುಂದುವರಿಕೆಗೆ ವಿವಾಹ ಅನಿವಾರ್ಯ. ಪ್ರತಿಯೊಂದು ಜನಾಂಗದಲ್ಲೂ ಅದಕ್ಕೆ ಮಹತ್ವವಿದೆ. ಅವು ಮದುವೆಯನ್ನು ತಮ್ಮದೇ ಆದ ವಿಶಿಷ್ಟ ಸಂಪ್ರದಾಯದಲ್ಲಿ ಆಚರಿಸುತ್ತವೆ. ಇದಕ್ಕೆ ಹಾಸನ ಜಿಲ್ಲೆಯ ಮಲೆನಾಡಗೌಡರೂ ಹೊರತಲ್ಲ. ದಕ್ಷಿಣ ಕನ್ನಡ ಮತ್ತು ಕೊಡಗುಜಿಲ್ಲೆಯ ತುಳುಗೌಡರು, ಹಾಸನ ಜಿಲ್ಲೆಯ ಬಯಲುಸೀಮೆಯ ಒಕ್ಕಲಿಗರು, ತೀರ್ಥಹಳ್ಳಿ ಕೊಪ್ಪ ಶೃಂಗೇರಿ ನರಸಿಂಹ ರಾಜಪುರ ತಾಲ್ಲೂಕುಗಳ ಮಲೆನಾಡ ಗೌಡರಿಗಿಂತ ಹಾಸನ ಜಿಲ್ಲೆಯ ಮಲೆನಾಡಗೌಡರ ಸಂಪ್ರದಾಯಗಳು ಭಿನ್ನವಾಗಿವೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಒಕ್ಕಲಿಗರು, ಹಾಸನ ಜಿಲ್ಲೆಯ ಬೇಲೂರು ಸಕಲೇಶಪುರ ತಾಲ್ಲೂಕುಗಳಲ್ಲಿ ನೆಲಸಿರುವ ಮಲೆನಾಡಗೌಡರು ಮತ್ತು ಚಿಕ್ಕಮಗಳೂರು ಮೂಡಿಗೆರೆ ತಾಲ್ಲೂಕುಗಳ ಗೌಡರು ಶೈವಾರಾಧಕರಾಗಿದ್ದು ಇವರ ಮದುವೆ ಸಂಪ್ರದಾಯಗಳಲ್ಲಿ ಬಹಳಷ್ಟು ಸಾಮ್ಯಗಳಿವೆ. ಪ್ರಸ್ತುತ ಹಾಸನ ಜಿಲ್ಲೆಯ ಮಲೆನಾಡಗೌಡರ ಮದುವೆ ಸಂಪ್ರದಾಯಗಳನ್ನು ದಾಖಲಿಸಲು ಯತ್ನಿಸಿದೆ.

* ಈ ಲೇಖನವನ್ನು ಸಿದ್ಧಪಡಿಸಲು ಸಕಲೇಶಪುರ ತಾಲ್ಲೂಕಿನ ಹೆತ್ತೂರನ್ನು ಕೇಂದ್ರವಾಗಿಟ್ಟು ಕೊಂಡಿದ್ದೇನೆ.

ಹಿಂದೆ ಈ ಜನಾಂಗದಲ್ಲಿ ಕೂಡ ಬಾಲ್ಯವಿವಾಹ ಪ್ರಚಲಿತವಾಗಿತ್ತು. ಬಹಳಷ್ಟು ಮದುವೆಗಳು ಹೆಣ್ಣು ಋತುಮತಿಯಾಗುವ ಮುನ್ನವೇ ಜರುಗುತ್ತಿದ್ದವು. ಗಂಡು ಹದಿನೈದು–ಹದಿನಾರು ವರ್ಷಗಳಿಗೆಲ್ಲ ಗೃಹಸ್ಥನಾಗುತ್ತಿದ್ದ. ಕಾಲ ಬದಲಾದಂತೆ ಈ ಜನಾಂಗದ ಹೆಣ್ಣುಗಂಡುಗಳ ವಿವಾಹ ವಯೋಮಿತಿಯಲ್ಲಿ ಏರಿಕೆಯಾಗಿದೆ. ಹಾಸನ ಜಿಲ್ಲೆಯ ಮಲೆನಾಡು ಗೌಡರಿಗೆ ಗೋತ್ರ, ಕುಲ, ಬಳಿ ಇವುಗಳ ಸಂಕೋಲೆಯಿಲ್ಲ. ದಾಯಾದ್ಯ ವರ್ಗದವರನ್ನು ಹೊರತಾಗಿ ಸ್ವಜಾತಿಯಲ್ಲಿ ಯಾರನ್ನಾದರೂ ವಿವಾಹವಾಗಬಹುದು. ಆದರೂ ಹೊರಸಂಬಂಧದ ವಿವಾಹಗಳೆ ಹೆಚ್ಚಾಗಿ ನಡೆಯುತ್ತವೆ. ಬಹುಪತ್ನಿತ್ವ ಕೂಡ ರೂಢಿಯಲ್ಲಿದೆ. ಮೊದಲ ಹೆಂಡತಿ ಜೀವಂತವಿಲ್ಲದಿದ್ದರೆ, ಬದುಕಿದ್ದೂ ಸಂತಾನವಿಲ್ಲದಿದ್ದರೆ, ಗಂಡುಸಂತಾನವಿಲ್ಲದಿದ್ದರೆ ಗಂಡು ಮರು ಮದುವೆಯಾಗಬಹುದು. ವಿಧವಾ ವಿವಾಹ ಕೂಡ ಜಾರಿಯಲ್ಲಿದೆ. ಇಂಥ ವಿವಾಹ ದೇವಾಲಯದಲ್ಲಿ ಬೆರಳೆಣಿಕೆಯಷ್ಟು ಜನರ ಸಮ್ಮುಖದಲ್ಲಿ ನಡೆಯುವುದು. ವಿಧವಾ ವಿವಾಹವನ್ನು 'ತಾಳಿಕಟ್ಟಿಕೊಡುವುದು' ಎನ್ನುತ್ತಾರೆ. ವಿಧವಾ ವಿವಾಹವಾದ ಕುಟುಂಬದೊಂದಿಗೆ ಸಂಪ್ರದಾಯವಾದಿಗಳು ವೈವಾಹಿಕ ಸಂಬಂಧ ಬೆಳೆಸುವುದಿಲ್ಲ. ಇದರಿಂದ ಈ ಬಗೆಯ ವಿವಾಹಕ್ಕೆ ಈ ಜನಾಂಗದಲ್ಲಿ ಪುರಸ್ಕಾರವಿರಲಿಲ್ಲವೆಂಬುದು ವ್ಯಕ್ತಪಡುತ್ತದೆ.

ಹೆಣ್ಣು ಗಂಡುಗಳು ಪ್ರಾಪ್ತವಯಸ್ಕರಾದ ಕೂಡಲೆ ಗಂಡಿನ ಮನೆಯವರು ಕನ್ಯಾನ್ವೇಷಣೆಯಲ್ಲಿ ತೊಡಗುವರು. ಹುಡುಗನ ಅಥವಾ ಹುಡುಗಿಯ ಕಡೆಯ ಬಂಧುಗಳು ಹೆಣ್ಣು ಗಂಡುಗಳ ವಿವರವನ್ನು ಪರಸ್ಪರರ ಮನೆಗೆ ತಿಳಿಸಲು ಅನುವಾಗುವರು. ಹಿಂದೆ ಹತ್ತಿರದ ಊರುಗಳಲ್ಲಿಯೆ ವೈವಾಹಿಕ ಸಂಬಂಧವೇರ್ಪಡುತ್ತಿದ್ದುದರಿಂದ ವಿವಾಹಕ್ಕೆ ಸಿದ್ಧವಿರುವ ಗಂಡು ಹೆಣ್ಣುಗಳ ಮಾಹಿತಿ ಪಡೆಯುವುದು ಕಠಿಣವಾಗುತ್ತಿರಲಿಲ್ಲ. ಹೆಣ್ಣಿನವರು ಗಂಡಿನ ವಿವರಗಳನ್ನು ಪಡೆದರೂ ಗಂಡಿನ ಮನೆಯ ಬಾಗಿಲಿಗೆ ಹೆಣ್ಣು ಕೊಡುತ್ತೇವೆಂದು ಹೋಗುವುದು ಗೌರವಕ್ಕೆ ಕುಂದೆಂದು ಭಾವಿಸಲಾಗುವುದು. ಆದ್ದರಿಂದ ಗಂಡಿನ ಮನೆಯ ವತಿಯಿಂದ ವರನ ಅಣ್ಣ, ತಂದೆ, ಭಾವ ಅಥವಾ ಹತ್ತಿರದ ಬಂಧುಗಳು 'ಹೆಣ್ಣು ಕೇಳಲು' ಬರುವುದು ವಾಡಿಕೆ. ಕನ್ಯಾರ್ಥಿಗಳಾಗಿ ಬಂದವರಿಗೆ ಹುಡುಗಿಯನ್ನು ನೇರವಾಗಿ ತೋರಿಸುವಂತಿಲ್ಲ. ಹುಡುಗಿಯು ನೀರು ತರುವಾಗಲೊ, ಭತ್ತ ಕುಟ್ಟುವಾಗಲೊ ಅಥವಾ ನೆಂಟರಿಷ್ಟರ ಮನೆಯ ಮದುವೆಗಳಲ್ಲಿ ಭಾಗವಹಿಸಿದಾಗಲೊ ಆಕಸ್ಮಿಕವಾಗಿ ಹೆಣ್ಣನ್ನು ನೋಡಬಹುದಾಗಿತ್ತು.

ಗಂಡಿನವರು ಹೆಣ್ಣಿನ ಮನೆಗೆ ಪ್ರಥಮ ಬಾರಿ ಹೋಗುವಾಗ 'ದಾರಿಶಕುನ' ನೋಡುವರು. ಖಾಲಿಕೊಡ, ಗುದ್ದಲಿ, ಖಾಲಿಹೆಡಿಗೆ, ಸೌದೆಹೊರೆ, ಕ್ಷೌರಿಕ, ವಿಧವೆ, ಬೆಕ್ಕು, ಕಾಗೆ ಮೊದಲಾದುವು ಎದುರಾದರೆ ಅಪಶಕುನವೆಂದು ಭಾವಿಸಿ ಆ ಹೆಣ್ಣಿನೊಡನೆ ಮದುವೆಯ ಮಾತುಕತೆಗಳನ್ನು ರದ್ದುಪಡಿಸುವರು. ಹೆಣ್ಣು ಕೇಳಲು

ಹೋದ ವರನ ಕಡೆಯ ಹಿರಿಯರು 'ನಿಮ್ಮ ಮನೆಯಲ್ಲಿ ಸಂಬಂಧ ಮಾಡೋಣಾಂತ ಬಂದಿದ್ದೇವೆ' ಎಂದು ಹೆಣ್ಣಿನ ಮನೆಯ ಯಜಮಾನನಿಗೆ ಪೀಠಿಕೆ ಹಾಡುವರು. ಹೆಣ್ಣಿನವರು ತಮ್ಮ ಖಚಿತವಾದ ಅಭಿಪ್ರಾಯವನ್ನು ಅರುಹದೆ 'ಋಣಾನುಬಂಧ ಎಲ್ಲಿದೆಯೊ ನೋಡೋಣ' ಎಂದು ತೋರಿಕೆಯ ಮಾತುಗಳನ್ನಾಡಿ ಆ ಹೊತ್ತಿಗೆ ಅನುಗುಣವಾಗಿ ಊಟ, ತಿಂಡಿ ಏನಾದರೂ ನೀಡಿ ಸತ್ಕರಿಸುವರು. ಒಂದು ಹೆಣ್ಣನ್ನು ಪಡೆಯಬೇಕಾದರೆ ಗಂಡಿನವರು ಹಲವು ಬಾರಿ ಹೆಣ್ಣಿನ ಮನೆಯ ಹೊಸ್ತಿಲನ್ನು ತುಳಿಯಬೇಕಾಗಿತ್ತು. 'ಒಂದು ಹೆಣ್ಣು ತರುವುದಕ್ಕೆ ಹನ್ನೆರಡು ಜೊತೆ ಮೆಟ್ಟು ಸವೆಯುತ್ತವೆ' ಎಂಬುದು ಅನುಭವದ ಮಾತು

ಹುಡುಗಿ ಒಪ್ಪಿತವಾದಲ್ಲಿ ಮತ್ತೊಂದು ದಿನ ವರನ ಮನೆಯಿಂದ ಇಬ್ಬರು ಅಥವಾ ಮೂವರು ಗಂಡಸರು ಹೆಣ್ಣಿನ ಮನೆಗೆ ಪಯಣ ಬೆಳೆಸುವರು. ಅಂದು 'ಈ ಸಂಬಂಧ ಬೆಳೆಸುವುದು ನಿಮಗೆ ಇಷ್ಟವೆ' ಎಂದು ನೇರವಾಗಿ ಕೇಳುವರು. ಹೆಣ್ಣಿನವರಿಗೂ ಸಮ್ಮತಿ ಇದ್ದಲ್ಲಿ ಆಗಲಿ ಎಂದು ತಮ್ಮ ಅಭಿಪ್ರಾಯ ತಿಳಿಸುವರು ಇಷ್ಟಾದರೂ ಅಂದು ಮದುವೆ ಖಚಿತವಾಗುವುದಿಲ್ಲ. ಇಂಥ ದಿನ 'ಮಾತಿಗೆ ಬನ್ನಿ' ಎಂದು ಗಂಡಿನವರಿಗೆ ನಿರ್ದಿಷ್ಟ ದಿನವೊಂದನ್ನು ತಿಳಿಸುವರು. ಆಷಾಢಮಾಸ, ಶೂನ್ಯಮಾಸ ಹಾಗೂ ಮಂಗಳವಾರಗಳಲ್ಲಿ ಮದುವೆಯ ಪ್ರಸ್ತಾಪ ಮಾಡುವುದಿಲ್ಲ.

ಮಾತಿಗೆ ತೆರಳುವ ಮುನ್ನ ಹೆಣ್ಣು ಗಂಡುಗಳ ಜಾತಕಗಳನ್ನು ನೋಡಿಸುವರು 'ಗಣಕೂಟ' ಸರಿ ಹೊಂದಿದಲ್ಲಿ ಮಾತ್ರ ಮುಂದಿನ ಮಾತಿಗೆ ಚಾಲನೆ ದೊರೆಯುವುದು. ಜಾತಕ ಇಲ್ಲದವರು ಹೆಸರುಬಲದ ಮೇಲೆ ತಾಳೆ ನೋಡಿಸುವರು. 'ಮಾತಿಗೆ ಹೋದಾಗ' 'ತೆರ'ದ ಬಗ್ಗೆಯೇ ಪ್ರಮುಖ ಚರ್ಚೆ[1] ಅದು ೫೦ ರಿಂದ ೫೦೦ ರ ವರೆಗೆ ಅವರವರ ಆರ್ಥಿಕ ಸ್ಥಿತಿಯನ್ನವಲಂಬಿಸಿ ವ್ಯತ್ಯಯಗೊಳ್ಳುತ್ತದೆ. ಆ ಬಳಿಕ ಹೆಣ್ಣಿನ ತಂದೆ ಹೆಣ್ಣಿಗೆ ತರಬೇಕಾದ ವಸ್ತ್ರಾಭರಣಗಳ ಪಟ್ಟಿಯನ್ನು ವರನ ಕಡೆಯವರಿಗೆ ತಿಳಿಸುವರು. ಹೆಣ್ಣಿನವರ ಬೇಡಿಕೆಗಳನ್ನು ಪೂರೈಸಲು ಗಂಡಿನವರು ಅಸಮರ್ಥರಾಗಿದ್ದರೆ ಮದುವೆ ಈ ಹಂತದಲ್ಲಿ ಕೂಡ ಮುರಿದು ಬೀಳುವುದುಂಟು. ಮಾತುಕತೆ ಯಶಸ್ವಿಯಾದರೆ 'ಲಗ್ನ ಕಟ್ಟಿಸುವ' ದಿನವನ್ನು ನಿಗದಿಗೊಳಿಸುವರು[2]. ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ ಎಂಬಂತೆ ಈ ಜನಾಂಗದಲ್ಲಿ ಅವರವರ ಮನೆಯ ಯಜಮಾನನ ತೀರ್ಮಾನವೆ ಅಂತಿಮ. ಮದುವೆ ನಿಶ್ಚಯಿಸುವವರು ಹಿರಿಯರಾದುದರಿಂದ ಗಂಡು ಹೆಣ್ಣುಗಳ ಅಭಿಪ್ರಾಯಕ್ಕೆ ಮಾನ್ಯತೆ ಇಲ್ಲ. ಬಹು ಬೇಡಿಕೆಯುಳ್ಳ ಹೆಣ್ಣಾದರೆ ಕನ್ಯೆ ಕೈತಪ್ಪಿ ಹೋಗುವುದೆಂಬ ಭಯದಿಂದ ಗಂಡಿನವರು ಮಾತಿಗೆ ಹೋದ ಮರುದಿನವೆ ಲಗ್ನ ಕಟ್ಟಿಸಿಕೊಂಡು ಬರುವುದುಂಟು.

1 ಈಗ ತೆರ ಅಥವಾ ಕನ್ಯಾಶುಲ್ಕ ಇಲ್ಲವೆನಿಸುವಷ್ಟು ವಿರಳವಾಗಿದೆ,

2 ಲಗ್ನಪತ್ರಿಕೆಯ ದಿನವನ್ನು ಲಗ್ನ ಕಟ್ಟಿಸುವುದು ಎಂದು ಹೇಳುತ್ತಾರೆ.

ಲಗ್ನಪತ್ರಿಕೆ ಸಮಾರಂಭ ವಧುವಿನ ಮನೆಯಲ್ಲಿಯೆ ಸರಳವಾಗಿ ನಡೆಯುವುದು. ಗಂಡಿನವರು ತಮ್ಮ ಕೇರಿಯ ಕುಳವಾಡಿ, ಅಗಸ ಮತ್ತು ಬಂಧುಗಳೊಡಗೂಡಿ ಒಟ್ಟು ಒಂಬತ್ತು ಮಂದಿ ವಧುವಿನ ಮನೆಗೆ ಲಗ್ನ ಕಟ್ಟಿಸಲು ಹೋಗುವರು. ಲಗ್ನ ಕಟ್ಟಿಸು ವಂದು ವಧುವರರಿಗೆ ಯಾವ ಶಾಸ್ತ್ರವನ್ನೂ ಮಾಡುವುದಿಲ್ಲ. ಆದ್ದರಿಂದ ವರ ಲಗ್ನ ಪತ್ರಿಕೆಯಂದು ವಧುಗೃಹಕ್ಕೆ ಹೋಗುವುದಿಲ್ಲ. ಪುರೋಹಿತರು ನಿಗದಿತ ವೇಳೆಗೆ ಹುಡುಗಿಯ ಮನೆಗೆ ಬರುತ್ತಾರೆ. ಊರಿನಲ್ಲಿ ಬ್ರಾಹ್ಮಣ ಪುರೋಹಿತರಿಲ್ಲದಿದ್ದಲ್ಲಿ ಪರಸ್ಥಳದಲ್ಲಿರುವ ಪುರೋಹಿತರಿಂದ ಲಗ್ನಪತ್ರಿಕೆಯನ್ನು ಗಂಡಿನವರು ಬರೆಸಿಕೊಂಡು ಬಂದಿರುತ್ತಾರೆ. ಅಂದು ಹುಡುಗಿಯ ಮನೆಯನ್ನು ಗುಡಿಸಿ ಸಾರಿಸಿ ಓರಣಗೊಳಿಸು ವರು. ಪುರೋಹಿತರು ಗೋಮಯದಿಂದ ಬೆನಕನನ್ನು ರಚಿಸಿ, ಪೂಜೆ ಸಲ್ಲಿಸಿ ಮುಂದಿನ ಕಾರ್ಯಗಳು ನಿರ್ವಿಘ್ನವಾಗಿ ನಡೆಯಲೆಂದು ಪ್ರಾರ್ಥಿಸುವರು. ಬೆನಕನ ಮುಂದೆ ವರನ ಮನೆಯಿಂದ ತಂದ ಹನ್ನೆರಡು ಹಣ್ಣು ಇರುವಂಥ ಒಂದು ಚಿಪ್ಪು ಬಾಳೆಹಣ್ಣು, ಒಂದು ತೆಂಗಿನಕಾಯಿ, ವೀಳೆಯದೆಲೆ, ಅಡಿಕೆ, ಅರಿಶಿನ, ಕುಂಕುಮ, ಹೂವುಗಳನ್ನಿಟ್ಟು ಅರ್ಪಿಸುವರು. ಪುರೋಹಿತರು ಗಂಡು ಹೆಣ್ಣುಗಳ ಹೆಸರುಬಲಕ್ಕೆ ಪ್ರಶಸ್ತವಾದ ಮುಹೂರ್ತವನ್ನು ನಿಷ್ಕರ್ಷಿಸಿ ಲಗ್ನಪತ್ರಿಕೆ ಬರೆದು, ಓದಿ ಹೇಳಿ, ಒಂದನ್ನು ಹೆಣ್ಣಿನವರಿಗೂ ಮತ್ತೊಂದನ್ನು ಗಂಡಿನವರಿಗೂ ಕೊಡುವರು. ಪುರೋಹಿ ತರು ತೆರಳಿದ ಬಳಿಕ ವರನ ಕಡೆಯವರಿಗೆ ಮಾಂಸದೂಟದ ಆತಿಥ್ಯವಾಗುತ್ತದೆ. ಕೆಲವರಲ್ಲಿ ಮಾಂಸದಡಿಗೆಯ ಬದಲು ಸಿಹಿ ಅಡಿಗೆ ಮಾಡುವುದೂ ರೂಢಿಯಲ್ಲಿದೆ. ವಧುವಿನ ಮನೆಯವರು ಆರ್ಥಿಕವಾಗಿ ದುರ್ಬಲರಾಗಿದ್ದರೆ ಲಗ್ನಪತ್ರಿಕೆಯ ದಿನದ ವೆಚ್ಚವನ್ನು ಗಂಡಿನವರೆ ಭರಿಸುತ್ತಾರೆ.

ಲಗ್ನಪತ್ರಿಕೆ ಆದ ಬಳಿಕ ವಧು ಪರಸ್ಥಳಗಳಿಗೆ ಹೋಗುವಂತಿಲ್ಲ. ವರನಿಗೆ ಈ ನಿರ್ಬಂಧವಿಲ್ಲ. ನೆರೆಹೊರೆಯವರು ವಿವಾಹ ನಿಶ್ಚಯವಾದ ವಧುವಿಗೆ ವಿಶೇಷ ಅಡಿಗೆ ಮಾಡಿ 'ಕೋರೂಟಕ್ಕೆ' ಕರೆದು ಸತ್ಕರಿಸುವರು.[1] ಮದುವೆ ಸಮೀಪಿಸುತ್ತಿ ದ್ದಂತೆ ಎರಡು ಮನೆಗಳಲ್ಲೂ ಭರದಿಂದ ಸಿದ್ಧತೆಗಳಾಗುತ್ತವೆ. ಅಕ್ಕಿ ಕುಟ್ಟುವುದು, ಅಕ್ಕಿ ಸೋಸುವುದು, ಉಪ್ಪಿನಕಾಯಿ ಹಾಕುವುದು, ಹಪ್ಪಳ ಮಾಡುವುದು, ಮೆಣಸಿನ ಕಾಯಿ ಕುಟ್ಟುವುದು ಮೊದಲ್ಗೊಂಡು ಮನೆಗೆ ಸುಣ್ಣ ಬಣ್ಣ ಹಚ್ಚುವವರೆಗೆ ಅಣ್ಣ ತಮ್ಮಂದಿರ ಮನೆಯ ಹಾಗೂ ನೆರೆಹೊರೆಯ ಹೆಂಗಳೆಯರು ಸಹಕರಿಸುವರು. ಈ ಕುರಿತು ಒಂದು ಜನಪದಗೀತೆ ಹೀಗೆ ವರ್ಣಿಸುತ್ತದೆ.

ಏನವ್ವಾ ಮನಿಯಾಗೆ ಎಂತವ್ವಾ ಮನಿಯಾಗೆ
ಬಾಗಲಿಗೆ ಬಣ್ಣ ಬಳಿದೀರಿ

---

[1] ಕುವರಿ ಊಟ ಕೋರೂಟ ಆಗಿರಬಹುದು.

ಬಾಗಲಿಗೆ ಬಣ್ಣ ಬಳಿದೀರಿ ಈ ಮನೆಯ
ಬಾಲನ ಲಗ್ನ ಒದಿಗ್ಯಾವೆ[1]

ಗಂಡಸರು ಸೌದೆ ಒಡೆಯುವಲ್ಲಿ ನೆರವಾಗುವರು.

ಮದುವೆಯ ಶಾಸ್ತ್ರಗಳು ಐದುದಿನಗಳ ಕಾಲ ನಡೆಯುತ್ತವೆ. ಈಗ ನಾಗರಿಕತೆ ದಟ್ಟವಾಗಿರುವ ಎಡೆಗಳಲ್ಲಿ ಶಾಸ್ತ್ರಗಳು ಎರಡು ದಿನಗಳಿಗೆ ಸೀಮಿತವಾಗಿವೆ. ಮುಹೂರ್ತಕ್ಕೆ ನಾಲ್ಕುದಿನ ಮುಂಚಿತವಾಗಿ ಶಾಸ್ತ್ರಗಳು ಆರಂಭ. ಮೊಟ್ಟಮೊದಲ ಶಾಸ್ತ್ರ 'ಧೂಳು ನೀರು ತೆಗೆಯುವುದು'. ಮಲೆನಾಡ ಗೌಡರಲ್ಲಿ ಬಹಳಷ್ಟು ಶಾಸ್ತ್ರಗಳು ರಾತ್ರಿ ಕಾಲದಲ್ಲಿ ಜರುಗುತ್ತವೆ. ಕೃಷಿಯನ್ನು ಮುಖ್ಯ ವೃತ್ತಿಯಾಗುಳ್ಳ ಈ ಜನಾಂಗದ ಶಾಸ್ತ್ರಗಳಲ್ಲಿ ಬದುಕಿನ ಜೀವನಾಡಿಗಳಾದ ಅಕ್ಕಿ ಮತ್ತು ನೀರು ಪ್ರಧಾನಪಾತ್ರ ವಹಿಸುತ್ತವೆ. ಗಂಡುಹೆಣ್ಣುಗಳ ಮನೆಗಳಲ್ಲಿ ಏಕಕಾಲಕ್ಕೆ ಶಾಸ್ತ್ರಗಳು ಶುರುವಾಗುತ್ತವೆ. ಹೆಣ್ಣಿಗೆ ಮಾಡುವ ಪ್ರತಿಯೊಂದು ಶಾಸ್ತ್ರವೂ ಗಂಡಿಗೂ ಅನ್ವಯವಾಗುತ್ತದೆ ಮತ್ತು ಅದೇ ರೀತಿಯಲ್ಲಿ ನಡೆಯುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಶಾಸ್ತ್ರಗಳಲ್ಲಿ ಮಹಿಳೆಯರದೇ ಮೇಲುಗೈ.

ಧೂಳುನೀರು ತೆಗೆಯುವ ದಿನ ಸಂಜೆ ಮೂರರಿಂದ ಒಂಬತ್ತು ಮಂದಿ ಮುತ್ತೈದೆಯರು ವಧುವನ್ನು ಬಚ್ಚಲುಮನೆಗೆ ಕರೆದೊಯ್ದು ಒಂದು ಮಣೆಯ ಮೇಲೆ ಕುಳ್ಳಿರಿಸಿ ಹಣೆಗೆ ಕುಂಕುಮವಿಟ್ಟು ಆರತಿ ಎತ್ತಿ ಒಬ್ಬೊಬ್ಬರೂ ಮೂರು ಮೂರು ಚೊಂಬು ನೀರು ಹಾಕುವರು. ಮುಂದಿನ ನಾಲ್ಕು ದಿನಗಳೂ ವಧುವರರಿಗೆ ಅರಿಶಿನ ಎಣ್ಣೆ ಹಚ್ಚಿ ಅಭ್ಯಂಜನ ಮಾಡಿಸುವುದರಿಂದ ಪೂರ್ವಭಾವಿಯಾಗಿ ನಡೆಯುವ ಈ ಶಾಸ್ತ್ರ 'ಧೂಳು ನೀರು ತೆಗೆಯುವುದು' ಎಂದು ಹೆಸರು ಪಡೆದಿದೆ. ಅಂದು ಮದುವೆಯ ಮನೆಯಲ್ಲಿ ಪಾಯಸದ ಅಡುಗೆ ಇರುತ್ತದೆ. ನಿಸರ್ಗದ ಮಕ್ಕಳಾದ ಈ ಜನಾಂಗಕ್ಕೆ ಶಿಷ್ಟದೈವಗಳಿಗಿಂತ ಗತಿಸಿಹೋದ ಹಿರಿಯರೆ ಪರಮದೈವಗಳು. ಮನೆಯಲ್ಲಿ ಯಾವುದೇ ವಿಶೇಷ ಅಡಿಗೆ ಮಾಡಿದರೂ ಅದು ಹಿರಿಯರಿಗೆ ಎಡೆಯಾಗಬೇಕು.

ಮರುದಿನ ಬೆಳಿಗ್ಗೆ ಊರಿನವರನ್ನೆಲ್ಲ ಮದುವೆಗೆ ಆಹ್ವಾನಿಸುವ ಕಾರ್ಯಕ್ರಮ. ಪರಸ್ಥಳದಲ್ಲಿರುವ ಬಂಧುಗಳನ್ನು ಒಂದು ವಾರ ಮುಂಚಿತವಾಗಿಯೇ ಕರೆಯಲಾಗುವುದು. ಊರಿನವರನ್ನು ಆಮಂತ್ರಿಸುವಾಗ ಅಕ್ಷತೆ ಕೊಟ್ಟು ಕರೆಯುವುದನ್ನು ಅಕ್ಷರಶಃ ಪಾಲಿಸುವರು. ಇಬ್ಬರು ಹುಡುಗರು ಎಲೆಅಡಿಕೆ ಮತ್ತು ಅಕ್ಷತೆ ಕಾಳನ್ನು ಜೋಳಿಗೆಯಲ್ಲಿ ತುಂಬಿ ಮನೆಮನೆಗೂ ಹೋಗಿ ಹೊಸ್ತಿಲು ಬಳಿ ಎರಡು ಎಲೆ ಎರಡು ಅಡಿಕೆ ಇಟ್ಟು 'ಸಾಯಂಕಾಲ ಶಾಸ್ತ್ರಕ್ಕೆ ಬನ್ನಿ, ಬುಧವಾರ ಚಪ್ಪರಕ್ಕೆ ಬನ್ನಿ, ಗುರುವಾರ ಧಾರೆಗೆ ಬನ್ನಿ' ಎಂದು ಯಾವ ಯಾವ ವಾರ ನಡೆಯುತ್ತದೆಯೊ ಆ ವಾರಗಳನ್ನು ಹೇಳಿ ಕರೆಯುವರು. ಈಗ ಅಚ್ಚಾದ ಲಗ್ನಪತ್ರಿಕೆಯನ್ನು ಹಂಚುವುದು

---

1 ಕನ್ನಡ ಸಾಹಿತ್ಯ ಭಂಡಾರ: ಸಂ. ಮತಿಘಟ್ಟ ಕೃಷ್ಣಮೂರ್ತಿ. ಪು. ೩೮೭

ರೂಢಿ. ಅಂದೇ ಸಂಜೆ ‘ ಮೊದಲ ಹಸೆ ’ಗೆ ಕೂರಿಸುವ ಶಾಸ್ತ್ರ. ಕತ್ತಲೆ ಆವರಿಸುವುದರೊಳಗೆ ಊರಿನ ಸ್ತ್ರೀ ಪುರುಷರೆಲ್ಲ ಮದುವೆ ಮನೆಯಲ್ಲಿ ನೆರೆಯುವರು. ಓಲಗದವರು ಒಂದು ಮಂಗಳವಾದ್ಯ ನುಡಿಸುವರು. ಹೆಂಗಸರು ತಮ್ಮ ತಮ್ಮ ಮನೆಗಳಿಂದ ’ ಹಸೆಅಕ್ಕಿ ’ ಎಂದು ಒಂದು ತಟ್ಟೆಯಲ್ಲಿ ಅಕ್ಕಿತುಂಬಿ, ಅದರ ಮೇಲೆ ಹರಳೆಣ್ಣೆ ದೀಪ ಇಟ್ಟುಕೊಂಡು ಬರುವರು. ಈ ದೀವಿಗೆಗಳು ಬೆಟ್ಟ ಗುಡ್ಡಗಳಿಂದ ಆವರಿಸಿದ ಕತ್ತಲದಾರಿಯಲ್ಲಿ ಬೆಳಕು ಚೆಲ್ಲುವುದಲ್ಲದೆ ಸುಂದರ ನೋಟವಾಗಿ ಕಣ್ಸೆಳೆಯುತ್ತವೆ. ಮನೆಯಲ್ಲಿ ಕರಾವು ಇರುವವರು ಹಸೆಅಕ್ಕಿಯ ಜೊತೆಗೆ ಹೆಣ್ಣಿನ ನೆತ್ತಿಗೆ ಹಚ್ಚಲು ಬೆಣ್ಣೆಯನ್ನೂ ತರುತ್ತಾರೆ. ಮದುವೆ ಮನೆಯವರು ವಿವಿಧ ಮನೆಗಳಿಂದ ತಂದ ಹಸೆಅಕ್ಕಿಯನ್ನು ಒಂದು ಹೊಸಕುಕ್ಕೆಗೆ ಅಡಿಗೆ ಬಾಳೆಎಲೆ ಹಾಕಿ ಅದರ ಮೇಲೆ ಸುರಿದಿಡುವರು. ದೀಪಗಳನ್ನು ಆರಿಸಿ ಅವರವರ ತಟ್ಟೆಗೆ ಎರಡು ಎಲೆ, ಎರಡು ಅಡಿಕೆ, ಬಾಳೆಹಣ್ಣು ಇಟ್ಟು ಕೊಡುವರು.

ಈ ಜನಾಂಗದವರಿಗೆ ‘ ತಾಯಿಮನೆ ’ ಎಂದು ಕರೆಯುವ ಪಡಸಾಲೆಯೆ ಶುಭ ಕಾರ್ಯಗಳಿಗೆ ಶ್ರೇಷ್ಠವಾದ ಸ್ಥಳವಾದುದರಿಂದ ಹಸೆಯನ್ನು ಇಲ್ಲಿಯೇ ಬರೆಯುವರು. ತಾಯಿಮನೆಯನ್ನು ಗುಡಿಸಿ, ಒರೆಸಿ, ಆಯಕಟ್ಟಾದ ಸ್ಥಳದಲ್ಲಿ ವಿಭೂತಿಯಿಂದ ಚೌಕಾಕಾರವಾಗಿ ಮೂರುಗೆರೆಗಳನ್ನು ಬರೆಯುವರು. ಈ ಸಮಯದಲ್ಲಿ

ಹಸೆಯ ಇಕ್ಕೋರ ಮನೆಲಿ ಕಸನಿಲ್ಲ ಮುಸುರಿಲ್ಲ
ಹಸಿಯಡಿಕೆ ಸಿಪ್ಪೆ ಮೊದಲಿಲ್ಲ ಈ ಮನೆ
ಸೊಸೆಯರಿನ್ನೆಷ್ಟು ಚೆಲುವೇರು

ಎಂದು ಹಸೆಬರೆಯುವ ಹಾಡನ್ನು ಹೇಳುವರು. ಅನಂತರ ಮುತ್ತೈದೆಯರು ‘ ಹಸೆಹಾಕಕ್ಕೆ ಅಪ್ಪಣೇನ ’ ಎಂದು ಮೂರುಬಾರಿ ಕೇಳಿ ಉಪಸ್ಥಿತರಿದ್ದವರ ಅಪ್ಪಣೆ ಪಡೆಯುವರು. ಹಸೆ ಅಕ್ಕಿಗೆ ಮದುವೆ ಮನೆಯ ಅಕ್ಕಿಯನ್ನು ಬೆರಸಿ ವಿಭೂತಿಗೆರೆಗಳ ಮೇಲೆ ಚೌಕಾಕಾರದ ಸೊಗಸಾದ ಹಸೆ ಬರೆಯುವರು. ಮಧ್ಯದಲ್ಲಿ ಗಂಡು ಹೆಣ್ಣುಗಳನ್ನು ಸಂಕೇತಿಸುವ ಬಾಸಿಂಗದ ಚಿತ್ರವನ್ನು ಬಿಡಿಸುವರು. ಅಕ್ಕಿ ಹಸೆಯ ಮೇಲೆ ಚಿತ್ತಾರವಿರುವ ಎರಡು ಹಸೆಮಣೆಗಳನ್ನಿಟ್ಟು ನಡುವೆ ರುಬ್ಬುವ ಕಲ್ಲುಗುಂಡನ್ನು ಇಡುವರು. ಗುಂಡಿಗೆ ಒಂದು ದಾರವನ್ನು ಕಟ್ಟುವರು. ಹಸೆಯ ನಾಲ್ಕು ಮೂಲೆಗಳಿಗೂ ಎರಡೆರಡು ಎಲೆ, ಎರಡೆರಡು ಅಡಿಕೆ, ಒಂದು ಬಾಳೆಹಣ್ಣಿನಂತೆ ಇಡಲಾಗುವುದು. ಅನಂತರ ತೆಂಗಿನಕಾಯಿ ಅರ್ಪಿಸಿ ಹಸೆಯನ್ನು ಪೂಜಿಸುವರು. ಹಸೆ ಬರೆದ ಕೂಡಲೆ ಕಳಸದ ತಟ್ಟೆಯನ್ನು ಸಿದ್ಧಪಡಿಸುವರು.[1] ಕಳಸ ಇಷ್ಟದೇವತಾ ಸ್ವರೂಪ

1 ಕಳಸದ ತಟ್ಟೆ ಎಂದರೆ ಒಂದು ತಟ್ಟೆಗೆ ಅಕ್ಕಿ ಇಟ್ಟು ಅದರ ಮೇಲೆ ನೀರು ತುಂಬಿದ ಕಳಶವನ್ನು ಇರಿಸಿ ಅಡಕೆ ಹೊಂಬಾಳೆ ಸೆಕ್ಕಿಸುವರು. ಗೌರಿಬಳೆ, ಓಲೆತೋಡು, ಕನ್ನಡಿಯನ್ನು ಹೊಂಬಾಳೆಗೆ ಇಟ್ಟು, ಬಾಡದ ಹೂವುಗಳನ್ನು ಹೊಂಬಾಳೆಗೆ ಮುಡಿಸುವರು. ಕಳಸದ ತಟ್ಟೆಯ ಒಳಕ್ಕೆ ಒಂದು ಅಂಚಿನಲ್ಲಿ ಎರಡು ಎಲೆ ಎರಡು ಅಡಿಕೆ ಒಂದು ಬಾಳೆಹಣ್ಣು, ಬಾಳೆಎಲೆಯಲ್ಲಿ ಅರಿಸಿನ ಕುಂಕುಮ ಅಕ್ಷತೆಕಾಳು ಹರಳೆಣ್ಣೆ ದೀಪವನ್ನು ಜೋಡಿಸುವರು.

ಆದ್ದರಿಂದ ಅದನ್ನು ಹಸೆಮಣೆಯ ಮೇಲೆ ಸೂಕ್ತಸ್ಥಾನದಲ್ಲಿ ಇರಿಸಲಾಗುವುದು. ಮದುವೆ ಮುಗಿಯುವವರೆಗೂ ಕಳಸದ ತಟ್ಟೆ ವಧೂವರರ ಸಮೀಪದಲ್ಲಿ ಶ್ರೀರಕ್ಷೆಯಾಗಿ ಇರುತ್ತದೆ. ವರನ ಹಾಗೂ ವಧುವಿನ ಸಹೋದರಿಯರು ಕಳಸದ ತಟ್ಟೆಗಳನ್ನು ಹಿಡಿಯುವರು. ಅಂಥವರನ್ನು 'ಕಳಸಗಿತ್ತಿ' ಎಂದು ಕರೆಯಲಾಗುವುದು.

ಮುತ್ತೈದೆಯರು ಹಸೆ ಬರೆಯುವಾಗ ಉಳಿದ ಹೆಂಗಳೆಯರು ಹೆಣ್ಣಿಗೆ ಆ ದಿನಕ್ಕಾಗಿಯೆ ಹೊಸದಾಗಿ ತಂದ 'ಹಸೆಗೆ ಹತ್ತಿಸೊ ಸೀರೆ'ಯನ್ನು ಉಡಿಸಿ ಜಡೆಬಂಗಾರ, ಕಟ್ಟಾಣಿ, ಅಡ್ಡಿಕೆ, ಉತ್ರಾಜಿ ಓಲೆ, ಡಾಬು, ಕಾಲುಸರ, ಪಾಗಡ, ಕಾಲುಕಡಗ ಮೊದಲಾದ ಆಭರಣಗಳನ್ನು ತೊಡಿಸಿ ಅಲಂಕರಿಸುವರು. ಹಿಂದೆಲ್ಲ ಹುಡುಗಿಗೆ ಮುಂದಕ್ಕೆ ನೆರಿಗೆ ಇಟ್ಟು, ಕೊಡವರಂತೆ ಸೀರೆ ಉಡಿಸುತ್ತಿದ್ದರು. ಈ ವಿನ್ಯಾಸಕ್ಕೆ 'ಗೌಟಿಕೆ ಕಟ್ಟುವುದು' ಎಂದು ಕರೆಯುವರು. ಈಗ ವೃದ್ಧಸ್ತ್ರೀಯರು ಮಾತ್ರ ಗೌಟಿಕೆ ಕಟ್ಟುವರು.

ವರನ ಮನೆಯಲ್ಲಿ ಕೂಡ ಯುವಕರು ವರನಿಗೆ ಕಚ್ಚೆ ಪಂಚೆ ಉಡಿಸಿ ಹೊಸ ಅಂಗಿಗಳನ್ನು ತೊಡಿಸಿ, ತಲೆಗೆ ಪೇಟ ಕಟ್ಟಿ, ಕೊರಳಿಗೆ ಕಾಸಿನ ಸರ ಹಾಕುವರು. ಬಲಗಾಲಿನ ಮೂರನೇ ಬೆರಳಿಗೆ ಮಿಂಚು ತೊಡಿಸುವರು. ಹಸೆಮಣೆ ಏರುವ ಮುನ್ನ ಪ್ರತಿಬಾರಿಯೂ ಗಂಡು ಹೆಣ್ಣುಗಳು ಮನೆದೈವವನ್ನೂ ಪೂರ್ವಜರನ್ನೂ ನೆನೆದು ಹಿರಿಯರಿಗೆ ನಮಸ್ಕರಿಸಬೇಕು. ಮುತ್ತೈದೆಯೊಬ್ಬಳು ಹೆಣ್ಣನ್ನು ಹಸೆಯ ಸಮೀಪಕ್ಕೆ ಕೈಹಿಡಿದು ಕರೆತರುವಳು. ಹೆಣ್ಣು ಮೂರುಬಾರಿ ಬಲವಂದು, ನಮಸ್ಕರಿಸಿ, ಬಲಗಾಲು ಮುಂದಿಟ್ಟು ಹಸೆ ಏರುವಳು. ಅನಂತರ ಹೊಸದಾಗಿ ತಂದ ಮಿಂಚನ್ನು ಹುಡುಗಿಯ ಎರಡು ಕಾಲಿಗೂ ತೊಡಿಸುವರು. 'ಬಿದಿರಿನ ಮಾನ'[1] ದಲ್ಲಿ ಅಕ್ಕಿಯನ್ನು ತುಂಬಿ ಹುಡುಗಿಯ ಬಲ ಅಂಗೈಗೆ ನೀರು ಹಾಕಿ, ಒದ್ದೆಯಾದ ಅಂಗೈಯನ್ನು ಅಕ್ಕಿಯ ಮೇಲೆ ಇಡಿಸುವರು. ಎರಡು ಎಲೆಯಲ್ಲಿ ಎರಡು ಅಡಿಕೆ ಇಟ್ಟು ಅದನ್ನು ಮಡಿಚಿ, ಅರಿಶಿನ ದಾರದಲ್ಲಿ ಸುತ್ತಿದ ಕಂಕಣವನ್ನು ಮಾನದ ಮೇಲೆ ಕೈಯಿಟ್ಟ ಹುಡುಗಿಯ ಬಲಗೈಗೆ ಕಟ್ಟುವರು. ಇದೇ ರೀತಿ ಗಂಡೂ ಕೂಡ ಕಂಕಣಬದ್ಧನಾಗುವನು. ಕಂಕಣ ಕಟ್ಟಿದ ಬಳಿಕ ಹುಡುಗಿಯ ಅಕ್ಕಿಕಾಳು ಅಂಟಿದ ಅಂಗೈಯನ್ನು ಹಣೆಗೆ ಮುಟ್ಟಿಸುವರು. ಕಂಕಣವನ್ನು ಮುಹೂರ್ತದ ದಿನದವರೆಗೂ ಕಟ್ಟಿರಬೇಕು. ಹಸೆಗೆ ಕುಳಿತುಕೊಳ್ಳುವ ವಧುವರರು ಪದ್ಮಾಸನ ಹಾಕಿರಬೇಕು. ಒಂಬತ್ತು ಮಂದಿ ಮುತ್ತೈದೆಯರು ಒಬ್ಬರಾದ ಬಳಿಕ ಒಬ್ಬರಂತೆ ಎರಡು ಕೈಗಳಲ್ಲೂ ಹಸೆ ಅಕ್ಕಿ ಹಿಡಿದು ವಧುವಿನ ಮಂಡಿ, ಭುಜ ಹಾಗೂ ಹಣೆಗೆ ಸ್ಪರ್ಶಿಸಿ ಹಿಂದಕ್ಕೆ ಅಕ್ಕಿ ಹಾಕುವರು. ಹೀಗೆ 'ಸೇಸಕ್ಕಿ'ಯನ್ನು ಮೂರು ಬಾರಿ ಹಾಕುವರು. ಆಗ ಹೆಂಗಳೆಯರು—

---

[1] ಮಾನವೆಂದರೆ ಒಂದೂವರೆ ಪಾವು ಅಕ್ಕಿ ಹಿಡಿಯುವಂಥ ಒಂದು ಮಾಪಕ.

ತಕ್ಕಳೀರಕ್ಕಿಗೋಳ ಶಿವನಿಗೆ ಇಟ್ಟೀರೆ ಸಾಸಿಬೆಯ
ಸಾಸಿಬಿಡೀರೆ ದೇಶ ಕೊಮಾರನಿಗೆ
ದಾಸಮ್ಮನ ಹಡೆದ ಮಗಳಿಗೆ
ದಾಸಮ್ಮನ ಹಡೆದ ಮಗಳ ಮಂಡೇ ಮೇಲೆ
ಸೂಸಿ ಚೆಲ್ಲಾವೆ ಹಸೆಯಕ್ಕಿ

ಎಂದು ಹಾಡುವರು. ಅಕ್ಕಿ ಇಟ್ಟ ಬಳಿಕ ವಧುವಿನ ಹಣೆಗೆ ಕಂಕುಮ ಹಾಗೂ ದೃಷ್ಟಿ ಕಪ್ಪನ್ನು ಇಟ್ಟು, ಕಳಸದ ತಟ್ಟೆಯಲ್ಲಿದ್ದ ಎಲೆಅಡಿಕೆ ಬಾಳೆಹಣ್ಣನ್ನು ಹುಡುಗಿಯ ಕೈಗಿಟ್ಟು, ಕೈಮುಗಿಸಿ ಹಿಂದಕ್ಕೆ ಪಡೆಯುವರು. ಅನಂತರ ಕಳಸದಾರತಿ ಎತ್ತುವರು. ಹುಡುಗಿಯ ನೆತ್ತಿ ತಂಪಾಗಿರಲೆಂದು ಬೆಣ್ಣೆ ಹಚ್ಚುವರು. ಬಳಿಕ ಒಂದು ಹೊಸಬಟ್ಟೆಗೆ ಒಂದು ಚಿಪ್ಪು ಬಾಳೆಹಣ್ಣು, ಒಂದು ಪಾವಿನಷ್ಟು ಅಕ್ಕಿ, ಒಂದು ತೆಂಗಿನಕಾಯಿ, ವೀಳೆದೆಲೆ ಇಟ್ಟು ಗಂಟು ಕಟ್ಟುವರು. ಮೂವರು ಮುತ್ತೈದೆಯರು ಹುಡುಗಿಯ ಮಡಿಲಿಗೆ ಅಕ್ಕಿ ಹಾಕಿ ಈ ಗಂಟನ್ನು ಮೂರು ಬಾರಿ ಇಟ್ಟು ತೆಗೆಯುವರು. ಇದಕ್ಕೆ 'ಮಡಿಲುದುಂಬೊ ಶಾಸ್ತ್ರ' ಎಂದು ಕರೆಯುವರು. ವಧು ವಿವಾಹದ ನಂತರ ಪುತ್ರವತಿಯಾಗಿ ವಂಶವನ್ನು ಬೆಳಗಿಸಲೆಂಬುದೆ ಇದರ ಹಿಂದಿನ ಆಶಯ. ಅನಿಷ್ಟಗಳು ಕಾಡದಿರಲೆಂದು ವಧುವಿಗೆ ಧೂಪದ ಆರತಿ ಎತ್ತುವರು.

ಮುಂದೆ ಎಣ್ಣೆ ಅರಿಶಿನ ಶಾಸ್ತ್ರಕ್ಕೆ ಸಜ್ಜುಗೊಳಿಸುವರು. ಹೆಣ್ಣನ್ನು ಹಸೆಯಿಂದ ಏಳಿಸಿ ಅವಳ ಆಭರಣಗಳನ್ನು ತೆಗೆದಿಟ್ಟು, ಬಿಳಿಯಸೀರೆ ಉಡಿಸಿ, ತಲೆಗೆ ಬಟ್ಟೆಕಟ್ಟಿ ಮತ್ತೊಮ್ಮೆ ಹಸೆಗೆ ಹತ್ತಿಸುವರು. ಮುತ್ತೈದೆಯರು ಕಳಸಕ್ಕೆ ವಂದಿಸಿ ಮೊದಲು ವಧುವಿನ ಬಲಅಂಗೈ, ಬಲಅಂಗಾಲು, ಬಲಕೆನ್ನೆಗೆ ಅರಿಶಿನ ಎಣ್ಣೆ ಹಚ್ಚುವರು. ಅನಂತರ ಎರಡೂ ಕೈ, ಕಾಲು, ಮುಖ, ಬೆನ್ನುಗಳಿಗೆ ಲೇಪಿಸುವರು. ಆಗ

ಹಿತ್ತಲಲೊಂದು ಅರಿಶಿನದ ಗಿಡಹುಟ್ಟಿ
ನಡುಮನಿಗೆ ಬೇರು ಹರಿದಾವೆ
ನಡುಮನಿಗೆ ಬೇರು ಹರಿದಂಥ ಅರಿಶಿನವ
ಮುತ್ತಿನ ಗುದಿಲಿಲೆ ಅಗೆಸ್ಯಾರೆ
ಮುತ್ತಿನ ಗುದಿಲಿಲಿ ಅಗೆದಂಥ ಅರಿಶಿನವ
ಬೆಳ್ಳಿ ಹೆಡಿಗೆಗೆ ತುಂಬಿಸ್ಯಾರೆ

ಎಂಬ ದೀರ್ಘವಾದ ಹಾಡು ಹೇಳುವರು. 'ಮದಲಗಿತ್ತಿಗೆ'[1] ಚೆನ್ನಾಗಿ ಎಣ್ಣೆ ತಿಕ್ಕುವಂತೆ ವೃದ್ಧಸ್ತ್ರೀಯರು ಕಿರಿಯರಿಗೆ ತಾಕೀತು ಮಾಡುವರು—

ಎಣ್ಣೆಯ ತಿಕ್ಕೋರು ಚೆನ್ನಾಗಿ ತಿಕ್ಕೀರೆ
ಚಿನ್ನದ ಕಡಗ ನಿಮ ಕೈಲಿ
ಚಿನ್ನದ ಕಡಗ ನಿಮ ಕೈಲ್ಹತ್ತು ಬೆರಳು
ಚೆನ್ನಾಗಿ ಬರಲಿ ಸಭೆ ಮುಂದೆ

---

[1] ಮದುವಣಗಿತ್ತಿ > ಮದಲಗಿತ್ತಿ ಆಗಿದೆ. ಅಂತೆಯೆ ಮದುವಣಿಗ > ಮದಲಿಂಗ ಆಗಿದೆ.

ಎಂದು ಈ ಶಾಸ್ತ್ರದುದ್ದಕ್ಕೂ ಹಾಡುಗಳನ್ನು ಹೇಳಿ ಸನ್ನಿವೇಶವನ್ನು ಮುದಗೊಳಿಸು ವರು.

ಇತ್ತ ಐವರು ಮುತ್ತೈದೆಯರು ಗಂಗೆತರಲು ಸಮೀಪದ ಭಾವಿ ಅಥವಾ ಕೆರೆಗೆ ಓಲಗದಲ್ಲಿ ತೆರಳುವರು ಅವರೊಡನೆ ಪಂಜುಹಿಡಿದ ಅಗಸ, ಛತ್ರಿಹೊತ್ತ ಬೆಸ್ತ ಸಾಗುವರು. ಮುತ್ತೈದೆಯರು ಕಳಸಗಳಿಗೆ ನೀರುತುಂಬಿ ಒಂದೆಡೆ ಇಟ್ಟು ಕಳಸಕ್ಕೆ ವಿಭೂತಿ ಹೂವು ಅರಿಶಿನ ಕುಂಕುಮಗಳನ್ನು ಸಮರ್ಪಿಸುವರು. ಐದು ಕಳಸದ ಮುಂದೆಯೂ ಒಂದೊಂದು ಮಣ್ಣಿನ ಉಂಡೆ ಇಟ್ಟು ಮನೆಯಿಂದ ತಂದಿದ್ದ ನೆನೆಅಕ್ಕಿ, ನೆನೆಗಡಲೆ, ಬೆಲ್ಲ ಇವುಗಳ ಮಿಶ್ರಣವನ್ನು ನೈವೇದ್ಯ ಮಾಡುವರು—

ನೆನೆಅಕ್ಕಿ ನೆನೆಗಡಲೆ ಗೊನೆಮುರಿದ ಬಾಳೆಹಣ್ಣು
ಗಂಗೆ ದಿಡಕೋಗಿ ನೆಲೆನಿಂತು ಮುತ್ತೈದೇರು
ಗಂಗೆಪೂಜೆ ಮಾಡಿ ಬರುತಾರೆ

ಹೀಗೆ ಬಾಳೆಹಣ್ಣು ಸುಲಿದು, ತೆಂಗಿನಕಾಯಿ ಒಡೆದು ಕಾಯಿ ಹೋಳುಗಳನ್ನು ಮಡಿವಾಳ ಮತ್ತು ಬೆಸ್ತನಿಗೆ ಹಂಚುವರು. ಅನಂತರ ಆ ಕಳಸಗಳ ನೀರನ್ನು ತೆಗೆದುಕೊಂಡು ಹೋಗಿ ಹುಡುಗಿ ಸ್ನಾನಮಾಡುವ ನೀರಿಗೆ ಬೆರೆಸುವರು. ಪಂಚಕಲಶ ನೀರು ಪಂಚ ಮಹಾನದಿಗಳ ನೀರನ್ನು ಪ್ರತಿನಿಧಿಸುವಂತೆ ತೋರುತ್ತದೆ.

ಎಣ್ಣೆ ಅರಿಶಿನ ಹಚ್ಚಿದಮೇಲೆ ಹುಡುಗಿಯನ್ನು ಏಳಿಸಿ ಪ್ರತಿ ಹೆಜ್ಜೆಗೂ ಹಸೆಮಣೆ ಯಿಟ್ಟು ಬಚ್ಚಲುಮನೆಗೆ ಕರೆದೊಯ್ಯಲಾಗುವುದು. ಅಲ್ಲಿ ಆಕೆಯನ್ನು ಹಸೆಮಣೆಯ ಮೇಲೆ ಕುಳ್ಳಿರಿಸಿ ಹನ್ನೆರಡು ಮಂದಿ ಮುತ್ತೈದೆಯರು ಮೂರು ಮೂರು ಚೊಂಬು ನೀರುಹಾಕಿ ವಧುವಿನ ಶರೀರವನ್ನು ಬಾಳೆಹಣ್ಣಿನಲ್ಲಿ ಉಜ್ಜುವರು. ಅನ್ಯಸ್ತ್ರೀಯರ ಎದುರಿನಲ್ಲಿ ಮೀಯಲು ನಾಚುವ ಹೆಣ್ಣು ಅವರು ಹೊರಹೋಗುವುದನ್ನು ಕಾದಿರು ತ್ತಾಳೆ. ಅನಂತರ ವಧುವಿನ ಆತ್ಮೀಯಗೆಳತಿ ಸೀಗೆಪುಡಿಯಿಂದ ಅವಳ ಮೈ ತಿಕ್ಕಿ ಸ್ನಾನ ಮಾಡಿಸುವಳು. ಅಭ್ಯಂಜನ ಮಾಡಿದ ಹೆಣ್ಣು ನವಕಾಂತಿಯಿಂದ ಶೋಭಿಸು ವಳು. ದೃಷ್ಟಿಯಾಗದಿರಲೆಂದು ಕೆಂಪುನೀರು ಕಪ್ಪುನೀರಿನ ಆರತಿಗಳನ್ನು ಮಾಡುವರು—

ಚೆಂಪು ಚೋರಿ ಚೆನ್ನ ಚೆಂಪೆಲ್ಲ ಜಲುತಾರ
ಚೆಂಪುರಾಯರ ಮಗಳು ಮಣೆ ಮೇಲೆ
ಚೆಂಪುರಾಯರ ಮಗಳು ಮಣೆಮೇಲೆ ನಿಂತಿರುವಾಗ
ಚೆಂಪಿನದಾರತಿ ಬೆಳಗ್ಯಾರೆ
ಜಯಮಂಗಳ ನಿತ್ಯ ಶುಭಮಂಗಳ

ಎಂದು ಹೆಣ್ಣಿನ ಮನೆಯಲ್ಲಿ ಹಾಡಿದರೆ, ವರನ ಮನೆಯಲ್ಲಿ ಆರತಿ ಎತ್ತುವಾಗ—

ಕರಿಯಚೋರಿ ಚೆನ್ನ ಕರಿದೆಲ್ಲ ಜಲುತಾರ
ಕರಿಯರಾಯರ ಮಗ ಮಣೆ ಮೇಲೆ
ಕರಿಯರಾಯರ ಮಗ ಮಣೆ ಮೇಲೆ ನಿಂತಿರುವಾಗ
ಕರಿದೊಂದು ಆರತಿ ಬೆಳಗ್ಯಾರೆ

ಎಂದು ದನಿಗೂಡಿಸುವರು. ಹಾಸನ ಜಿಲ್ಲೆಯ ಮಲೆನಾಡುಗೌಡರು ಶೈವಾರಾಧಕರಾದುದ ರಿಂದ ಬಚ್ಚಲುಮನೆಯಲ್ಲಿಯೇ ವಧುವಿಗೆ ವಿಭೂತಿ ಇಟ್ಟು ಮೊದಲಿನಂತೆ ವಸ್ತ್ರಾಭರಣ ಗಳಿಂದ ಅಲಂಕರಿಸುವರು. ಹಿಂದೆ ಈ ಜನಾಂಗದಲ್ಲಿ ಬಾಲ್ಯವಿವಾಹ ನಡೆಯುತ್ತಿದ್ದುದರ ಸಂಕೇತವೆಂಬಂತೆ ವಧುವನ್ನು ಬಚ್ಚಲು ಮನೆಯಿಂದ ಎತ್ತಿಕೊಂಡು ಬಂದು 'ತಾಯಿಮನೆ' ಬಾಗಿಲಲ್ಲಿ ನಿಲ್ಲಿಸಿ ಮತ್ತೊಮ್ಮೆ ಆರತಿ ಎತ್ತಿ ನಡುಮನೆಗೆ ಕರೆದೊಯ್ಯುವರು. ಅಲ್ಲಿ ಹೊಸದಾಗಿ ಹೆಣೆಸಿದ ಓಲೆಗರಿಯ ಚಾಪೆಯ ಮೇಲೆ ಕುಳ್ಳಿರಿಸಿ ಎದುರಿನಲ್ಲೊಂದು, ಪಕ್ಕದಲ್ಲೊಂದು ಹಸೆಮಣೆಯನ್ನು ಇಡಲಾಗುವುದು. ಎದುರಿನ ಹಸೆಮಣೆಯಮೇಲೆ ಕಳಸದ ತಟ್ಟೆಯನ್ನಿಟ್ಟು 'ಕಂಚಿಕ್ಕುವ ಶಾಸ್ತ್ರ'ವನ್ನು ಆರಂಭಿಸುವರು. ಈ ಶಾಸ್ತ್ರವು ವಿಶಿಷ್ಟವಾಗಿದ್ದು ಬಯಲುಸೀಮೆಯ ಗೌಡರಲ್ಲಾಗಲಿ, ತೀರ್ಥಹಳ್ಳಿ ಸುತ್ತಿನ ಮಲೆನಾಡು ನಾಮಧಾರಿಗಳಲ್ಲಾಗಲಿ ಕಂಡುಬರುವುದಿಲ್ಲ. ಕಂಚಿಕ್ಕುವಾಗ ಹೆಂಗಳೆಯರು—

ಒಂದು ಗಂಗಳಕೆ ಒಂದು ಬೂವೇನಿಕ್ಕಿ ಒಂದಚ್ಚು ಬೆಲ್ಲ ಒಡೆದಿಕ್ಕಿ
ಎರಡು ಗಂಗಳಕೆ ಎರಡು ಬೂವೇನಿಕ್ಕಿ ಎರಡಚ್ಚು ಬೆಲ್ಲ ಒಡೆದಿಕ್ಕಿ
ಮೂರು ಗಂಗಳಕೆ ಮೂರು ಬೂವೇನಿಕ್ಕಿ ಮೂರಚ್ಚು ಬೆಲ್ಲ ಒಡೆದಿಕ್ಕಿ
ನಾಕು ಗಂಗಳಕೆ ನಾಕು ಬೂವೇನಿಕ್ಕಿ ನಾಕಚ್ಚು ಬೆಲ್ಲ ಒಡೆದಿಕ್ಕಿ
ಹಲಸಿಯ ಬಾಳೆಹಣ್ಣೆ ನಮ್ಮನರಸಿತಂದು ಪುರುಷಗೆಡೆಯ ಮಾಡಿದಾಳೆ

ಎಂದು ಹಾಡುವರು. ಎರಡು ಲಕಲಕ ಹೊಳೆಯುವ ಕಂಚಿನ ಗಂಗಳದಲ್ಲಿ ಒಂದರಲ್ಲಿ ಮೂರು ಸುಲಿದ ಬಾಳೆಹಣ್ಣು ತುಪ್ಪ, ಇನ್ನೊಂದರಲ್ಲಿ ಎರಡು ಸುಲಿದ ಬಾಳೆಹಣ್ಣು ತುಪ್ಪವನ್ನಿಟ್ಟು ಮೇಲೊಂದು ಬಾಳೆಎಲೆಯನ್ನು ಮುಚ್ಚಿ ಮುತ್ತೈದೆಯೊಬ್ಬಳು ಎರಡು ಕೈಗಳಲ್ಲೂ ಎರಡು ತಟ್ಟೆಯನ್ನು ಹಿಡಿದು, ಎಡಗೈ ಗಂಗಳವನ್ನು ಬಲಗಡೆಗೂ ಬಲಗೈ ಗಂಗಳವನ್ನು ಎಡಗಡೆಗೂ ಬರುವಂತೆ ಹೆಣ್ಣಿನ ಮುಂದೆ ಅದಲು ಬದಲುಮಾಡಿ ನೆಲಕ್ಕೆ ಮುಟ್ಟಿಸುವಳು. ಶಿಷ್ಟ ಜನಾಂಗದಲ್ಲಿ ಈ ಶಾಸ್ತ್ರಕ್ಕೆ ಬದಲಾಗಿ 'ಮಧುಪರ್ಕ' ಶಾಸ್ತ್ರವಿದೆ. ಹೀಗೆಯೇ ಎರಡು ಕೈಯಲ್ಲೂ ವೀಳೆದಲೆ–ಅಡಿಕೆ ಹಿಡಿದು ಅದಲುಬದಲು ಮಾಡಿ ಹೆಣ್ಣಿಗೆ ಅರ್ಪಿಸುವರು. ಅನಂತರ ಗಂಗಳವನ್ನು ಹೆಣ್ಣಿನಿಂದ ಮುಟ್ಟಿಸಿ ಅದರಲ್ಲಿದ್ದ ತುಪ್ಪ ಬಾಳೆಹಣ್ಣನ್ನು ಸನಿಹದಲ್ಲಿದ್ದವರಿಗೆ ತಿನ್ನಲು ಕೊಟ್ಟು ಹುಡುಗಿಯ ಕೈ ತೊಳೆಸುವರು. ಹೀಗೆ ಮೂರರಿಂದ ಐದು ಮಂದಿ ಮುತ್ತೈದೆಯರು 'ಕಂಚಿಕ್ಕಿ' ಮತ್ತೊಮ್ಮೆ ಸೇಸಕ್ಕಿ ಹಾಕಿ, ಕಳಸ ಬೆಳಗಿ ಮದಲಗಿತ್ತಿಯನ್ನು ಏಳಿಸುವರು. ಅಷ್ಟರಲ್ಲಿ ಪಾಯಸದ ಅಡಿಗೆ ಸಿದ್ಧವಾಗಿರುತ್ತದೆ. ಶಾಸ್ತ್ರಕ್ಕೆ ಬಂದವರಿಗೆಲ್ಲ ಊಟೋಪಚಾರವಾಗುವುದರೊಂದಿಗೆ ಅಂದಿನ ಶಾಸ್ತ್ರಗಳು ಮುಗಿಯುತ್ತವೆ.

ಮೂರನೇ ದಿನ ಸಾಯಂಕಾಲ 'ನಡುಕಲು ಶಾಸ್ತ್ರ'. ಹಿಂದಿನ ದಿನದ ಶಾಸ್ತ್ರಗಳೆಲ್ಲವೂ ಯಥಾವತ್ತಾಗಿ ಇಂದೂ ಮರುಕೊಳಿಸುತ್ತವೆ. ಒಂದೇ ವ್ಯತ್ಯಾಸವೆಂದರೆ ನಡಕಲು ಶಾಸ್ತ್ರದ ದಿನ ಊರಿನವರು ಪಾಲ್ಗೊಂಡರೂ ಹಸೆ ಅಕ್ಕಿ ತರುವುದಿಲ್ಲ.

ನಾಲ್ಕನೆಯ ದಿನ ' ಚಪ್ಪರ '. ಚಪ್ಪರಶಾಸ್ತ್ರ ಈ ಜನಾಂಗದವರಿಗೆ ಅತಿ ಮುಖ್ಯ ನೆರೆಹೊರೆಯ ಗಂಡಸರು ಅಂದು ಬೆಳಗಿನಿಂದಲೇ ಚಪ್ಪರ ನಿರ್ಮಾಣದಲ್ಲಿ ತೊಡಗುವರು. ಎರಡು ಬಗೆಯ ಚಪ್ಪರವನ್ನು ಹಾಕಲಾಗುವುದು. ಒಂದು ಧಾರೆಚಪ್ಪರ ಮತ್ತೊಂದು ಮದುವೆಗೆ ಬಂದವರು ಉಪಸ್ಥಿತರಿರುವ ಚಪ್ಪರ. ಕುಳವಾಡಿಯ ನೇತೃತ್ವದಲ್ಲಿ ಹರಿಜನ ಮಹಿಳೆಯರು ಚಪ್ಪರ ನಿರ್ಮಿಸುವ ಸ್ಥಳವನ್ನು ಸಗಣಿಯಿಂದ ಸಾರಿಸುವರು. ಜನರು ಕುಳಿತುಕೊಳ್ಳುವ ಚಪ್ಪರ ವಿಶಾಲವಾಗಿದ್ದು ಅಡಕೆಯ ಮರದ ಕಂಬಗಳ ಆಧಾರದಿಂದ ರಚಿಸಲಾಗುವುದು. ಇದರ ಮೇಲ್ಭಾಗಕ್ಕೆ ಬಗಿನೆಮರದ ಗರಿಗಳನ್ನು ಹೊದಿಸುವರು. ಅಡಿಕೆ ಮರಗಳಿಲ್ಲದವರು ಬೇರೆ ಜಾತಿಯ ಮರಗಳನ್ನೂ ಬಳಸುವುದುಂಟು. ಧಾರೆಯ ಚಪ್ಪರಕ್ಕೆ ಅನೇಕ ನಿಯಮಗಳಿವೆ ಇದನ್ನು ಸ್ವಜಾತಿಯವರೆ ನಿರ್ಮಿಸಬೇಕು. ಧಾರೆಯ ಚಪ್ಪರವನ್ನು ಹನ್ನೆರಡು ಹಾಲು ಕಂಬಗಳಿಂದ ರಚಿಸಲಾಗುವುದು. ಇದರ ಮಧ್ಯದ ಕಂಬ ಮದ್ದರ್ಸೆ ಮರವಾಗಿರಬೇಕು. ಈ ಕಂಬವು ಬಹಳ ಶ್ರೇಷ್ಠವೆಂಬ ಭಾವನೆಯಿದೆ. ಆದ್ದರಿಂದ ಈ ಕಂಬವನ್ನು ನೆಡುವಾಗ ತಳಕ್ಕೆ ಗೊಬ್ಬರ ತುಂಬಿ ಸುತ್ತಲೂ ಪಟ್ಟೆಕಟ್ಟುವರು. ಧಾರೆಯ ಚಪ್ಪರಕ್ಕೆ ಊರಿನ ಅಗಸ ಬಿಳಿಯ ಬಟ್ಟೆಯ ' ಮೇಲುಕಟ್ಟು ' ಕಟ್ಟಿ ಅಲ್ಲಲ್ಲಿ ಲಕ್ಕಿಸೊಪ್ಪನ್ನು ಹೊದಿಸುವನು. ಲಕ್ಕಿ ಸೊಪ್ಪಿಗೆ ಕ್ರಿಮಿನಾಶಕ ಗುಣವಿರುವುದರಿಂದ ಧಾರೆ ಚಪ್ಪರಕ್ಕೆ ಬಳಸುತ್ತಿದ್ದಿರಬಹುದು. ಅನಂತರ ಮಾವಿನ ಎಲೆಗಳಿಂದ ತಳಿರುತೋರಣ ಕಟ್ಟಿ, ಚಪ್ಪರ ಪೂಜೆಮಾಡಿ, ತೆಂಗಿನ ಕಾಯಿ ಒಡೆಯುವರು. ಒಂದು ಕಾಲದಲ್ಲಿ ಪ್ರಕೃತಿಯನ್ನೆ ದೈವವೆಂದು ಆರಾಧಿಸಿದ ಈ ಜನಾಂಗ ಧಾರೆ ಚಪ್ಪರದ ಹನ್ನೆರಡು ಹಾಲು ಕಂಬಗಳನ್ನು ದಶದಿಕ್ಕುಗಳು ಹಾಗೂ ಸೂರ್ಯಚಂದ್ರರೆಂದು ಭಾವಿಸಿ ಪೂಜಿಸುವರೆಂದು ತೋರುತ್ತದೆ.

ವರನಗೃಹದಲ್ಲಿ ಚಪ್ಪರದದಿನ ಮುಂಜಾನೆ ಊರಿನ ಹಜಾಮ ವರನ ತಲೆಕ್ಷೌರ, ಮುಖ ಕ್ಷೌರಗಳನ್ನುಮಾಡಿ ಉಗುರು ಕತ್ತರಿಸುವನು. ವಧುಗೃಹದಲ್ಲಿ ಅಂದು ಬಳೆಗಾರಶೆಟ್ಟಿ ಬಳೆಮಲಾರವನ್ನು ಹೊತ್ತು ತರುವನು. ಮದುವೆ ಮನೆಯ ಮುತ್ತೈದೆ ಮಲಾರವನ್ನು ಪೂಜಿಸಿದ ಬಳಿಕ ಬಳೆಗಾರಶೆಟ್ಟಿ ಶುಭಸೂಚಕವಾದ ಕಪ್ಪು ಬಳೆಗಳನ್ನು ಹುಡುಗಿಯ ಬಲಗೈಗೆ ಒಂಬತ್ತು ಎಡಗೈಗೆ ಹನ್ನೆರಡರಂತೆ ತೊಡಿಸುವನು. ಅನಂತರ ಎಲ್ಲ ಹೆಂಗಸರಿಗೂ ಎರಡೆರಡು ಬಳೆಯಂತೆ ' ಬಳಗಬಳೆ ' ತೊಡಿಸುವನು. ಬಳೆಗಾರನಿಗೆ ನಿಗದಿತ ಹಣವನ್ನು ವೀಳೆಯದೆಲೆ ಸಹಿತ ನೀಡುವರು.

' ಚಪ್ಪರದ ಊಟ 'ವೆಂದರೆ ಸಾಯಂಕಾಲದ ಊಟ. ಮದುವೆ ಮನೆಯ ಅಡಿಗೆ ಮಾಡಲು ಉದ್ದನಾದ ಹೊಸ ಒಲೆಯನ್ನು ಹಾಕಿ ಪೂಜಿಸಿ ಒಲೆ ಹೊತ್ತಿಸುವರು. ಗಂಡಸರು ಹಂದಿ ಮತ್ತು ಕುರಿಗಳನ್ನು ಹಸಮಾಡುವರು. ಪಾಕದಲ್ಲಿ ನಿಪುಣರಾದ ಸ್ತ್ರೀ ಪುರುಷರು ಅಡಿಗೆ ಮಾಡುವರು. ಮಾಂಸದೂಟಕ್ಕಾಗಿ ಎಲ್ಲರೂ ಕಾತರರಾಗಿರುವರು.

ಹತ್ತಿರದ ಬಂಧುಗಳೆಲ್ಲ ಚಪ್ಪರದ ದಿನದಂದೆ ಓಲಗದಲ್ಲಿ ಬರುತ್ತಾರೆ. ಹಾಗೆ

ಓಲಗದಲ್ಲಿ ಬಂದವರನ್ನು ಆರತಿ ಎತ್ತಿ ಸ್ವಾಗತಿಸುವರು. ಚಪ್ಪರದದಿನ ಮಧ್ಯಾಹ್ನದ ಹೊತ್ತಿಗಾಗಲಿ ಕುಂಬಾರನು ಹನ್ನೆರಡು ಮಣ್ಣಿನ 'ಗುಂಬ'ಗಳನ್ನು, ವಧುವರರಿಗೆ ಕಟ್ಟುವ ಬಾಸಿಂಗವನ್ನು ತಂದುಕೊಡುವನು. ಹನ್ನೆರಡು ಗುಂಬಗಳಲ್ಲಿ ಮೂರು ದೊಡ್ಡದಾಗಿದ್ದು ಉಳಿದವು ಚಿಕ್ಕದಾಗಿರುತ್ತವೆ. ಈ ಜನಾಂಗದವರು ಗುಂಬ ಪೂಜೆಯನ್ನು ನಿಷ್ಠೆಯಿಂದ ಮಾಡುವರು. ಹನ್ನೆರಡು ಮಂದಿ ಮುತ್ತೈದೆಯರು ಹನ್ನೆರಡು ಕಲಶಗಳಲ್ಲಿ ಗಂಗೆ ತಂದು ಗುಂಬಗಳಿಗೆ ತುಂಬಿಸುವರು. ಹಿಂದಿನ ರಾತ್ರಿ ಕಂಚಿಕ್ಕಿದ್ದ ಸ್ಥಳದಲ್ಲಿ ಗೊಬ್ಬರವನ್ನು ಹರಡಿ ಅದರ ಮೇಲೆ ಹೊಸ ಗುಂಬಗಳನ್ನು ಇಡುವರು. ಗುಂಬಗಳಿಗೆ ಕೆಲವು ಭಾಗದಲ್ಲಿ 'ಐರಣಿ' ಎಂದು ಕರೆಯುವುದುಂಟು. ಗುಂಬದ ಹಿಂಬದಿಯ ಗೋಡೆಯ ಮೇಲೆ ಮುತ್ತೈದೆಯರು ಕಪ್ಪು ಮಸಿಹಚ್ಚಿ ಸುಣ್ಣದಲ್ಲಿ ಚೌಕಾಕಾರವಾಗಿ ಗೆರೆಗಳನ್ನು ಎಳೆದು ಗಂಡುಹೆಣ್ಣಿನ ಬಾಸಿಂಗ ಹಾಗೂ ಕೊಂಬುಕಹಳೆಗಳ ಚಿತ್ರವನ್ನು ಬಿಡಿಸುವರು. ಗುಂಬಗಳಿಗೆ ವಿಭೂತಿ ಹಚ್ಚಿ ಮೂರು ಚಿಪ್ಪು ಬಾಳೆಹಣ್ಣು ಮೂರು ತೆಂಗಿನಕಾಯನ್ನು ಗುಂಬದ ಮುಂದಿಡುವರು. ಅನಂತರ ದೀಪ ಹಚ್ಚಿಸಿ ಗುಂಬ ಪೂಜುವರು—

ಸೂಡೆಕಾಯಿನಂಗೆ ಉಂಡಗಡುಕು ಇಕ್ಕೊಂಡು
ಗುಂಡೀಲಿ ಮಣ್ಣ ತುಣಿಯೋರೆ ಗುಂಡಯ್ಯ
ಚಂದವೇನಿ ನಿಮ್ಮ ಐರಾಣಿ

ನಮ್ಮ ಐರಾಣಿ ನೀವೇನು ಜರೆದೀರಿ
ಪನ್ನಂಗ ನೂರು ಗಿಳಿನೂರು

ಧಾರಹೀರೇಕಾಯಂಗೆ ದಾರಗಡಗು ಇಕ್ಕೊಂಡು
ದಾರೀಲಿ ಮಣ್ಣ ತುಣಿಯೋರೆ ಗುಂಡಯ್ಯ
ಚಂದವೇನಿ ನಿಮ್ಮ ಐರಾಣಿ

ನಮ್ಮ ಐರಾಣಿ ನೀವೇನು ಜರೆದೀರಿ
ಪನ್ನಂಗ ನೂರು ಹುಲಿನೂರು .

ಎಂದು ಗುಂಬಪೂಜೆಯ ವೇಳೆಯಲ್ಲಿ ವಚನಕಾರ ಕುಂಬಾರ ಗುಂಡಯ್ಯನನ್ನು ಉಲ್ಲೇಖಿಸುವ ಹಾಡು ಹಾಡುವರು. ಗುಂಬ ಪೂಜುವಾಗ ಪಕ್ಕದಲ್ಲಿ 'ಹೇಣಿಗೆ'ಯನ್ನು ಇಡಲಾಗುವುದು.[1] ಮುತ್ತೈದೆಯೊಬ್ಬಳು ಉಪವಾಸವಿದ್ದು ಸಿಹಿಅಡಿಗೆ ಮಾಡಿ ಗುಂಬಕ್ಕೆ ಎಡೆ ಮಾಡುವಳು.

ಸಂಜೆಯವೇಳೆಗೆ 'ಮದಲಗಿತ್ತಿ'ಯನ್ನು ಹಸೆಗೆ ಕೂರಿಸಿ ಎಣ್ಣೆ ಅರಿಶಿನ ಹಚ್ಚಿ ಸ್ನಾನ ಮಾಡಿಸುವರು. ಹಿಂದಿನ ದಿನಗಳ ಎಲ್ಲ ಶಾಸ್ತ್ರಗಳು ಇಂದು ಪುನರಾವರ್ತನೆ

---

1 ಪೇಠಿಕೆ > ಪೇಳಿಗೆ > ಹೇಳಿಗೆ > ಹೇಣಿಗೆಯಾಗಿರಬಹುದು. ಹೇಣಿಗೆ ಪೆಟ್ಟಿಗೆಯಾಕಾರದ ಬೆತ್ತದ ಬುಟ್ಟಿ. ಇದರೊಳಗೆ ಅಕ್ಕಿ, ಒಂದು ಕುಡಿಕೆ ತುಪ್ಪ, ಒಂದು ತೆಂಗಿನಕಾಯಿ, ಒಂದು ಬಾಳೆಹಣ್ಣಿನ ಚಿಪ್ಪು, ಓಲೆತೋಡು, ಹಸಿನೂಲಿನ ಉಂಡೆ, ಅರಿಶಿನ ಕುಂಕುಮ, ಎಲೆ ಅಡಿಕೆ, ಕಾಚಿನ ಉಂಡೆ, ಅಕ್ಕಿಬೀಜ ತುಂಬಿರುತ್ತಾರೆ.

ಗೊಳ್ಳುತ್ತವೆ. ವಧುವಿನ ಸ್ನಾನವಾದ ಕೂಡಲೆ ಧಾರೆಯ ಚಪ್ಪರಕ್ಕೆ ಕರೆದೊಯ್ದು ಮದ್ದರ್ಸೆಕಂಬದ ಪಕ್ಕದಲ್ಲಿ ಕುಳ್ಳಿರಿಸುವರು. ಮುತ್ತೈದೆಯೊಬ್ಬಳು ಹೆಣ್ಣಿಗೆ ಬಾಸಿಂಗವನ್ನೂ ದೇವರ ಪಟ್ಟವನ್ನೂ ಕಟ್ಟುವಳು. ಹೀಗೆಯೇ ವರನ ಗೃಹದಲ್ಲಿ ವರನಿಗೆ ಬಾಸಿಂಗ, ಪಟ್ಟಗಳನ್ನು ಕಟ್ಟುವ ಶಾಸ್ತ್ರ ಜರುಗುತ್ತದೆ.

ಒಂದು ವರಹ ಕೊಟ್ಟು ಬಾಸಿಂಗ ಕಟ್ಟಿಸ್ಯಾರೆ
ಬಾಸಿಂಗ ಕಟ್ಟಿ ಮೊಕ ನೋಡಿ ಅವರವ್ವ
ಮಗನಿಗೆ ರಾಜ್ಯವು ಸಲುವುದು

ಆರು ವರಹಕೊಟ್ಟು ಪಟ್ಟವ ಕಟ್ಟಿಸ್ಯಾರೆ
ಪಟ್ಟವ ಕಟ್ಟಿ ಮೊಕ ನೋಡಿ ಅವರವ್ವ
ಮಗನಿಗೆ ರಾಜ್ಯವು ಸಲುವುದು

ಎಂದು ಹಾಡುವರು. ಬಾಸಿಂಗ ಪಟ್ಟಗಳನ್ನು ಕಟ್ಟಿದ ಬಳಿಕ ಚಪ್ಪರದಲ್ಲಿಯೆ ಹುಡುಗಿಯ ಮೇಲೆ ಕರಿಯ ಕಂಬಳಿ ಮುಚ್ಚಿ ತಲೆ ಮೇಲೆ ಅಕ್ಕಿ ತುಂಬಿಸಿದ ಕಂಚಿನ ಗಂಗಳವನ್ನು ಇಟ್ಟು ನೀರು ಸುರಿಯುವರು. ಇದನ್ನು 'ಮಳೆನೀರು ವಿಾಸುವ' ಶಾಸ್ತ್ರ ಎಂದು ಕರೆಯುವರು.

ಸುಮಾರು ಸಂಜೆಯ ಐದು ಗಂಟೆಯಿಂದಲೇ ಚಪ್ಪರದೂಟ ಆರಂಭವಾಗುತ್ತದೆ. ಮಾಂಸದಡಿಗೆಯನ್ನು ಮೊದಲು ಸತ್ತ ಹಿರಿಯರಿಗೆ ಮೂರು ಎಡೆಮಾಡಿ ಅರ್ಪಿಸುವರು. ಎಡೆಮಾಡುವಾಗ ಮದುವೆಯ ಜವಳಿ ಮತ್ತು ಆಭರಣಗಳನ್ನು ಇಡುವರು. ಬಾಸಿಂಗ ಹಾಗೂ ದೇವರ ಪಟ್ಟ ಕಟ್ಟಿರುವಾಗ ವಧೂವರರು ಮಾಂಸಾಹಾರವನ್ನು ಸೇವಿಸು ವಂತಿಲ್ಲ.

ಚಪ್ಪರದ ದಿನ ರಾತ್ರಿ ವಧುವರರಿಗೆ ಶಾಸ್ತ್ರ ನಡೆಯುವಾಗ ಊಟಮಾಡಿ ಬಂದ ಗಂಡಸರು ಚಪ್ಪರದಲ್ಲಿ ಸುಗ್ಗಿ ಕುಣಿಯುವರು. ಕುಣಿತ ತೀವ್ರವಾದಂತೆ ವಾದ್ಯದ ಮೊರೆತವೂ ಜೋರಾಗುತ್ತದೆ. ಎಲ್ಲವೂ ಮುಗಿಯುವಲ್ಲಿ ಅರ್ಧರಾತ್ರಿ ಕಳೆಯುತ್ತ ಬರುವುದು.

ಇತ್ತ ಗಂಡಿನ ಮನೆಯಲ್ಲಿ ಚಪ್ಪರದ ದಿನದ ಶಾಸ್ತ್ರಗಳು ಮುಗಿಯುತ್ತಿದ್ದಂತೆಯೆ 'ದಿಬ್ಬಣ' ಹೊರಡುವ ಸಿದ್ಧತೆಗಳಾಗುತ್ತವೆ. ವಧುವಿನ ಊರು ದೂರವಿದ್ದಲ್ಲಿ ಬೆಳಗಿನ ಮೂರು ಗಂಟೆಗೆಲ್ಲ ದಿಬ್ಬಣ ಹೊರಡುವುದು. ಮದುವಣ್ಣ ಕಚ್ಚೆ ಪಂಚೆ ಉಟ್ಟು, ಬಿಳಿಯಕೋಟು ಧರಿಸಿ, ತಲೆಗೆ ಪೇಟ ಕಟ್ಟಿ, ಅಡ್ಡಶಲ್ಯ ಹಾಕಿ, ಕೊರಳಿಗೆ ಕಾಸಿನಸರ, ಬೆರಳುಗಳಿಗೆ ಉಂಗುರಗಳನ್ನು ಹಾಕುವನು. ಹಣೆಗೆ ಬಾಸಿಂಗ ಹಾಗೂ ದೇವರ ಪಟ್ಟಗಳನ್ನು ಧರಿಸುವನು. ಕೊರಳಿಗೆ ಹೂಮಾಲೆ ಹಾಕಿ ಸರ್ವಾಲಂಕೃತ ನಾದ ವರನು ತಂದೆ, ತಾಯಿ ಹಾಗೂ ಗುರುಹಿರಿಯರಿಗೆ ನಮಸ್ಕರಿಸಿ ಹೊಸ್ತಿಲು ದಾಟುವನು. ಮದುವಣ್ಣನ ಜೊತೆ 'ಅಡ್ಡುಳಿ'ಯಾಗಿ ಒಬ್ಬ ಯುವಕನು ಆತನನ್ನು ಹಿಂಬಾಲಿಸುವನು. ಗಂಡಿನ ಸೋದರಿ ಕಳಸವನ್ನು ಹಿಡಿಯುವಳು. ವಾದ್ಯದ ರವದೊಂದಿಗೆ ದಿಬ್ಬಣ ಹೊರಡುವುದು. ವರನು ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವನು

ಉಳಿದವರು ಕಾಲ್ನಡಿಗೆಯಲ್ಲಿ ಸಾಗುವರು. ಕಿರಿದಾದ ರಸ್ತೆಯಲ್ಲಿ ಚಿಟ್ಟುತೆವರುಗಳನ್ನೆಲ್ಲ ದಾಟಿ ದಿಬ್ಬಣ ಬರುವುದು—

ಒಂದುಬೋರೆ ಹತ್ತಾರೆ ಒಂದುಬೋರೆ ಇಳಿದಾರೆ
ಒಂದುಬೋರೆ ನಡುವೆ ಬರುವ್ಹೋರೆ ಮದುವಣ್ಣ
ಅವರವ್ವ ಬಂದು ಅಂದಲ ತಡದಾರೆ

ಅವರವ್ವ ಬಂದು ಅಂದಲ ಏನಂದು ತಡೆದಾರೆ
ಹಸಿವಾದ ನನ್‌ಮಗನೆ ಹಾಲುಕುಡಿ'

ನಾನು ಹಾಲು ಕುಡಿಯೋದು ನಾಳೆ ಹನ್ನೆರಡುಗಂಟೆ
ಬಾಲೆಯು ಗೆದ್ದು ಬರಬೇಕು ನವಂ ತಾಯೆ
ಗೆದ್ದು ಬಂದು ಹಾಲ ಕುಡಿದೇನು

ಎಂದು ಮಾರ್ಗಶ್ರಮವನ್ನು ಕಳೆಯಲು ಹಾಡುವರು. ದಿಬ್ಬಣ ವಧುವಿನ ಊರನ್ನು ತಲಪುವ ವೇಳೆಗೆ ಸೂರ್ಯೋದಯವಾಗಿ ಬೆಳ್ಳನೆ ಬೆಳಕಾಗುವುದು. ವರನನ್ನು ತಾತ್ಕಾಲಿಕವಾಗಿ ಊರಿನ ದೇವಾಲಯದಲ್ಲಿ ಇಳಿಸುವರು. ಕಹಳೆಯಶಬ್ದ ಕೇಳಿದ ಕೂಡಲೆ ದಿಬ್ಬಣ ಬಂದ ಸೂಚನೆಯನ್ನರಿತು ಹುಡುಗಿಯ ಕಡೆಯವರು ಎದುರುಗೊಳ್ಳಲು ತೆರಳುವರು. ಹೊಸಚಾಪೆ ಹೊಸ ಜಮಖಾನಗಳನ್ನು ಹಾಸಿ ಬೀಗರನ್ನು ಕುಳ್ಳಿರಿಸಿ ಹೋಗುವರು.

ಸ್ವಲ್ಪಹೊತ್ತು ಕಳೆದ ಬಳಿಕ ಮತ್ತೊಮ್ಮೆ ವಧುವಿನ ಕಡೆಯವರು 'ನೆಂಟ್ರನ್ನ ಮಾತಾಡಿಸಲು' ಓಲಗದಲ್ಲಿ ಬರುವರು. ಅಷ್ಟರಲ್ಲಿ ಗಂಡಿನವರು ವರನನ್ನು ಕರಿಕಂಬಳಿ ಗದ್ದುಗೆಯಲ್ಲಿ ಕುಳ್ಳಿರಿಸಿ ಕೈಗೆ ಹೂವಿನ ಕೋಲು ಕೊಟ್ಟಿರುತ್ತಾರೆ. 'ಈಗ ಬಂದ್ರಾ ಈಗ ಬಂದ್ರಾ' ಎಂದು ಹೆಣ್ಣಿನವರು ಎಲ್ಲರನ್ನೂ ಮಾತನಾಡಿಸಿ ಗಂಡಿನ ಕಡೆಯವರನ್ನು ಕಾಫಿಗೆ ಕರೆದುಕೊಂಡು ಬರುವರು.

ಇನ್ನೊಮ್ಮೆ ಹೆಣ್ಣಿನವರು ಓಲಗದಲ್ಲಿ ಬಂದು ಗಂಡಿಗೆ ಮುಖ ತೊಳೆಯಲು ಬಿಸಿನೀರು, ಕುಡಿಯಲು ಕಾಫಿ, ತಿನ್ನಲು ಬಾಳೆಹಣ್ಣು ತುಪ್ಪವನ್ನು ಕೊಡುವರು. ಹುಡುಗ ಒಂದುಲೋಟ ಕಾಫಿ ಒಂದು ಬಾಳೆಹಣ್ಣನ್ನು ಸೇವಿಸುವನು. ಧಾರೆ ಮುಗಿಯುವವರೆಗೆ ವಧುವರರು ಲಘು ಆಹಾರವನ್ನು ಮಾತ್ರ ಸ್ವೀಕರಿಸಬೇಕು.

ಕಾಫಿಯ ಉಪಚಾರವಾದ ಬಳಿಕ ವರನ ಕಡೆಯ ಮುತ್ತೈದೆಯರು ಹೇಣಿಗೆ, ಕಳಸ, ಕುಕ್ಕೆಯನ್ನು ಹಿಡಿದು 'ಉಂಡಲುಡಿಕೆ'ಗೆಂದು ವಧುವಿನ ಮನೆಗೆ ಬರುವರು. ವರನ ಮನೆಯ ಹೇಣಿಗೆಯಲ್ಲಿ ಹುಡುಗಿಯ ವಸ್ತ್ರಾಭರಣಗಳು, ಹುಡುಗಿಯ ತಾಯಿಗೆಂದು ತಂದ ತಾಯುಡಿಕೆ ಸೀರೆಯನ್ನು ಇಟ್ಟಿರುತ್ತಾರೆ. ಈಗ ವರನ ಕಡೆಯವರೆ ಹಸೆ ಬರೆದು ಹಸೆಮಣೆ ಹಾಸುವರು. ವಧುವಿಗೆ ತಾವು ತಂದ ವಸ್ತ್ರಾಭರಣಗಳನ್ನಿಟ್ಟು ಹಸೆಗೆ ಕೂರಿಸುವರು. ಸೇಸಕ್ಕಿ ಹಾಕಿ, ಮಡಿಲುತುಂಬಿ, ಆರತಿ ಎತ್ತುವರು. ಹೆಣ್ಣಿನ ಸೋದರಿಯರಿದ್ದರೆ ಅವರಿಗೂ ಮಡಿಲು ತುಂಬುವರು. ಅದೇ ಸಮಯದಲ್ಲಿ ವಧುವಿನ

ಮನೆಯಿಂದ ಮುತ್ತೈದೆಯರು ಗಂಡಿರುವ ತಾಣಕ್ಕೆ ತೆರಳಿ ಮೂರುಗಂಗಳದಲ್ಲಿ[1] ಕಂಚಿಕ್ಕುವ ಶಾಸ್ತ್ರಮಾಡುವರು. ಕಂಚಿಕ್ಕಿದ ಬಾಳೆಯ ಹಣ್ಣುಗಳನ್ನು ಪಂಜುಹಿಡಿದ ಮಡಿವಾಳ, ಛತ್ರಿ ಹಿಡಿದ ಬೋವಿ ಹಾಗೂ ಓಲಗದವರಿಗೆ ಹಂಚಿ ಬರುವರು.

ಹೆಣ್ಣಿನವರು ಕಂಚಿಕ್ಕಿದ ಬಳಿಕ ಮದುವಣಿಗನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ವಧುಗೃಹದತ್ತ ಕರೆದೊಯ್ಯಲಾಗುವುದು. ಅಡ್ಡುಳಿ 'ಕೆಂಚಿಚೀಲ'ದಲ್ಲಿ ವೀಳೆಯ ದೆಲೆಯನ್ನು ಇಟ್ಟುಕೊಂಡು ತೆರಳುವನು. ಹೆಣ್ಣಿಗೆ ಶಾಸ್ತ್ರಮಾಡಲು ಹೋಗಿದ್ದ ಗಂಡಿನಕಡೆಯ ಮುತ್ತೈದೆಯರೂ ಈ ಗುಂಪನ್ನು ಸೇರಿಕೊಳ್ಳುವರು. ಹೀಗೆ ಸಕಲ ಸಂಭ್ರಮಗಳಿಂದ ದಿಬ್ಬಣ ವಧುಗೃಹದ ಅಂಗಳವನ್ನು ಪ್ರವೇಶಿಸುವುದು. ಚಪ್ಪರದ ಬಳಿ ಗಂಡು ಬಂದಕೂಡಲೆ ಒಬ್ಬರಿಗೊಬ್ಬರು ಮತ್ತೊಮ್ಮೆ ಎದುರುಗೊಳ್ಳುವರು. ವಧುವಿನ ಕಡೆಯ ಹೆಂಗಸರು ವರನಿಗೆ ಹನ್ನೆರಡು ಆರತಿ ಬೆಳಗುವರು. ಒಂದೊಂದು ಆರತಿ ಮಾಡಿದಾಗಲೂ ಗಂಡಿನ ಗೆಳೆಯ ಕೆಂಚಿಚೀಲದಿಂದ ಎಲೆಯನ್ನು ತೆಗೆದು ನಿವಾಳಿಸಿ ಹಾಕುವನು. ಹೆಣ್ಣಿನವರೂ ದೃಷ್ಟಿ ಎಲೆಯನ್ನು ನಿವಾಳಿಸುವರು. ಹುಡುಗ ಆರತಿ ತಟ್ಟೆಗೆ ಹಣ ಹಾಕಬೇಕು. ಈ ಸಂದರ್ಭದಲ್ಲಿ ವಿನೋದಕರ ಪ್ರಸಂಗಗಳು ನಡೆಯುವುದುಂಟು.

ಕಾಸುಗಳ್ಳೀರು ಕಾಣೆ ಈ ಊರ ಹೆಣ್ಮಕ್ಳು
ಕಾಸಿಗೆ ನಮ್ಮ ತಡದಾರೆ ಮದುವಣ್ಣ
ಕಾಸುಳ್ಳೋರ್ ಮಗನೆ ನಡೆ ಮುಂದೆ

ದುಡ್ಡುಗಳ್ಳೋರು ಕಾಣೆ ಈ ಊರ ಹೆಣ್ಮಕ್ಳು
ದುಡ್ಡಿಗೆ ನಮ್ಮ ತಡದಾರೆ ಮದುವಣ್ಣ
ದುಡ್ಡುಳ್ಳೋರ್ ಮಗನೆ ನಡೆ ಮುಂದೆ

ಎಂದು ಗಂಡಿನವರು ಹಾಡುವರು. ಅನಂತರ ಬಿಳಿಯ ವಸ್ತ್ರವನ್ನು ನಡೆಮುಡಿಯಾಗಿ ಹಾಸಿ ವರನನ್ನು ಧಾರೆಯ ಚಪ್ಪರಕ್ಕೆ ಕರೆದೊಯ್ಯುವರು. ಅಡ್ಡುಳಿಯು ವರನನ್ನು ಮೆಟ್ಟಕ್ಕಿ ಕುಕ್ಕೆಯ ಮೇಲೆ ನಿಲ್ಲಿಸುವನು. ಅಷ್ಟರಲ್ಲಿ ಹೆಣ್ಣನ್ನು ಆಕೆಯ ಸೋದರ ಮಾವ ಕೈಹಿಡಿದು ತಂದು ವರನ ಎದುರಿನ ಮೆಟ್ಟಕ್ಕಿ ಕುಕ್ಕೆಯ ಮೇಲೆ ನಿಲ್ಲಿಸುವನು. ವಧುವರರು ಪರಸ್ಪರ ನೋಡಬಾರದೆಂದು ಕೆಲಕಾಲ ಅವರ ನಡುವೆ ಅಂತರಪಟವನ್ನು ಹಿಡಿಯಲಾಗುವುದು. ಏಕೆಂದರೆ ಪರಸ್ಪರರ ನೋಟ ಶುಭಘಳಿಗೆಯಲ್ಲಿ ಆಗಬೇಕು. ವಧುವಿಗೆ ದೇಷ್ಮೆಯ ಮುಸುಕನ್ನು ಹಾಕಿರುತ್ತಾರೆ. ಪುರೋಹಿತರು ಧಾರೆಯ ನೇತೃತ್ವ ವಹಿಸುವರು. ಅವರ ಸೂಚನೆಯಂತೆ ಹಣ್ಣು, ಕಾಯಿ, ಹಾಲುತುಪ್ಪದ ಚೊಂಬು, ಕಳಸ ಎಲ್ಲವನ್ನೂ ಚಪ್ಪರದಲ್ಲಿ ಇಡಲಾಗುವುದು. ಪುರೋಹಿತರು ಪೂಜೆ ಮಾಡಿ ಧಾರೆಯ ಚಪ್ಪರದಲ್ಲಿ ದೀಪಗಳನ್ನು ಬೆಳಗಿಸುವರು. ಹೆಣ್ಣಿನ ತಂದೆ ಮಾಂಗಲ್ಯ

1 ಒಂದರಲ್ಲಿ ಒಂಬತ್ತು ಬಾಳೆಹಣ್ಣು ಮತ್ತೊಂದರಲ್ಲಿ ಐದು. ಇನ್ನೊಂದರಲ್ಲಿ ಮೂರು ಬಾಳೆಹಣ್ಣು ಇಟ್ಟಿರುತ್ತಾರೆ.

ವಿರುವ ಹಾಲುತುಪ್ಪದ ಚೊಂಬನ್ನು ಹಿರಿಯರಿಂದ ಮುಟ್ಟಿಸಿ ಆಶೀರ್ವಾದ ಪಡೆಯುವರು. ಮುಹೂರ್ತದ ವೇಳೆ ಸಮೀಪಿಸುತ್ತಿದ್ದಂತೆಯೆ ವಾದ್ಯದ ಧ್ವನಿಗಳು ತೀವ್ರವಾಗುವವು. ಪುರೋಹಿತರ ಸೂಚನೆಯಂತೆ ಹೆಣ್ಣುಗಂಡುಗಳು ಪರಸ್ಪರ ಜೀರಿಗೆಯನ್ನೂ ಅಕ್ಷತೆ ಕಾಳುಗಳನ್ನೂ ಎರಚುವರು. ಇಬ್ಬರಿಂದಲೂ ಹಾರ ವಿನಿಮಯ ಮಾಡಿಸಿ ಕೈಗೆ ವೀಳೆಯದೆಲೆ ಅಡಕೆ ತೆಂಗಿನಕಾಯನ್ನು ಕೊಡುವರು. ಇಬ್ಬರೂ ಒಂದರ ಮೇಲೊಂದು ಬರುವಂತೆ ತೆಂಗಿನಕಾಯಿ ಹಿಡಿದುಕೊಳ್ಳುವರು. ಮೊದಲು ಹೆಣ್ಣಿನ ತಾಯಿತಂದೆಯರು ತೆಂಗಿನಕಾಯಿಯ ಮೇಲೆ ಮೂರುಬಾರಿ ಹಾಲುತುಪ್ಪ ಬಿಟ್ಟು ಧಾರೆ ಎರೆಯುವರು.

ಒಂದುಚಿಪ್ಪು ಬಾಳೆಹಣ್ಣು ಒಂದು ತೆಂಗಿನಕಾಯಿ
ಒಂದು ಹಸೀನ ಹಾಲು ಕರೆದು ನಮ್ಮ ಬೀಗತಿ
ಒಂದಾಳು ಸೇರಿ ಬಿಡುತಾರೆ

ಹೀಗೆಯೆ ಗಂಡಿನ ತಾಯಿತಂದೆ, ಅನಂತರ ಬಂಧುಬಳಗವೆಲ್ಲ ದಂಪತಿ ಸಮೇತರಾಗಿ ಬಂದು ಹಾಲುತುಪ್ಪ ಬಿಡುವರು. ಧಾರೆ ಎರೆಯುವಾಗ ಗಂಡಸರು ತಲೆಗೆ ಪೇಟ ಅಥವಾ ಯಾವುದಾದರೂ ವಸ್ತ್ರವನ್ನು ಪೇಟದಂತೆ ಸುತ್ತಿರಬೇಕು. ಆ ಬಳಿಕ ಪುರೋಹಿತರು ಅಕ್ಕಿಯ ಒಳಗೆ ತೆಳುವಾದ ಉಂಗುರ ಹಾಕಿ ವಧುವರರಿಗೆ ಹುಡುಕಲು ಹೇಳುವರು.

ಜೂಜನಾಡಿದರೆ ದೊರೆಮಕ್ಕಳಿಬ್ಬರು
ದಯದಯದನಾಡಿ ದಾಯದ ಚೆಟ್ಟಿ ತಂದಿಡಿ
ಮಾವಯ್ಯ ನಿಮ್ಮಮಗಳ ಗೆಲಬೇಕು
ಮಾವಯ್ಯ ನಿಮ್ಮಮಗಳ ಗೆಲಬೇಕಂತ್ಹೇಳಿ
ಚಿಂತೆ ಆದಾವೆ ಮದುವಣ್ಗೆ

ಎಂದು ಹೆಂಗಸರು ಹಾಡು ಹೇಳಿ ಇಬ್ಬರ ಮನದಲ್ಲೂ ಉತ್ಸಾಹ ತುಂಬುವರು. ಜೂಜಿನುಂಗುರವನ್ನು ಯಾರೇ ಗೆಲ್ಲಲಿ ಅದು ಕಡೆಯಲ್ಲಿ ಹೆಣ್ಣಿಗೆ ಸಲ್ಲುತ್ತದೆ. ಅನಂತರ ನಾಲ್ಕು ಮೂಲೆಗೂ ನಾಲ್ಕು ಮಂದಿ ನಿಂತು ವಧುವರರನ್ನು ಬಳಸಿದಂತೆ ಐದುಸುತ್ತು ಹಸಿನೂಲು ಸುತ್ತುವರು. ಎರಡು ಎಲೆ, ಎರಡು ಅಡಿಕೆ, ಒಂದು ಅರಿಶಿನ ಕೊನೆ ಸುತ್ತಿದ ಕಂಕಣವನ್ನು ಗಂಡು ಹೆಣ್ಣುಗಳಿಗೆ ಪರಸ್ಪರ ಕಟ್ಟಲು ಸೂಚಿಸುವರು. ಅನಂತರ ಪುರೋಹಿತರು ವರನಿಂದ "ಹನ್ನೆರಡು ಕಂಬ ಸಾಕ್ಷಿಯಾಗಿ ಹನ್ನೆರಡು ಗುಂಬ ಸಾಕ್ಷಿಯಾಗಿ ಕುಳಿತಿರುವ ಸಭೆ ಸಾಕ್ಷಿಯಾಗಿ ಮಾಂಗಲ್ಯ ಕಟ್ತೇನಿ" ಎಂದು ಹೇಳಿಸಿ ವಧುವಿಗೆ ಮಾಂಗಲ್ಯಧಾರಣೆ ಮಾಡಿಸುವರು. ಮಂತ್ರ ಘೋಷದ ನಡುವೆ ಮಾಂಗಲ್ಯ ಕಟ್ಟಿದಾಗ ವಾದ್ಯದ ಧ್ವನಿಗಳು ಮುಗಿಲು ಮುಟ್ಟುತ್ತವೆ. ನೆರೆದ ಜನರು ವಧುವರರಿಗೆ ಅಕ್ಷತೆಗಳನ್ನು ಎರಚುವರು. ಪುರೋಹಿತರು ವರನಿಗೆ ವಧುವಿನ ಬಲಗೈ ಹಿಡಿಯುವಂತೆ ಹೇಳಿ ಪಾಣಿಗ್ರಹಣ ಮಾಡಿಸುವರು. ಬಾಳಿನ ಉದ್ದಕ್ಕೂ ಗಂಡು

ಹೆಣ್ಣುಗಳ ಬಂಧ ಬಿಗಿದಂತಿರಲಿ ಎಂದು ಹೆಣ್ಣಿನ ಮುಸುಕಿಗೂ ಗಂಡಿನ ಮುಸುಕಿಗೂ ಗಂಟುಹಾಕುವರು. ಆಗ ಹೆಣ್ಣಿನ ಕಡೆಯವರು—

ಹಟ್ಟೀಲಿ ಒಂದು ಹತ್ತಾಳುದ್ದ ಬಾವಿ
ಬೆಚ್ಚಾಳು ರಾಯ ಬೆದರಾಳು ಎಲೆರಾಯ
ಕೈಯ ಬಿಡಬೇಡ ಹಿಡಿದೀರು
ಈ ಕೈಯ ಬಿಡುವಾಕೆ ಹಾಗೆ ಬಂದಿದ್ದಾಳೆ
ಹೋರಿ ಮಾರಿದ್ದ ಹೊಸಹೊನ್ನು ತಕ್ಕಂದು
ಗಟ್ಟಿ ಹರಿವಾಣ ಘಳಿರೆಂದೊ

ಎಂದು ಹಾಡುವರು. ವಧುವರರು ಹಾಲಗಂಬವನ್ನು ಮೂರುಸುತ್ತು ಬರುವರು. ಅನಂತರ ವರನು ಹುಡುಗಿಯ ಕೈಹಿಡಿದು ಬಲಗಾಲು ಮುಂದಿಟ್ಟು ವಧುಗೃಹವನ್ನು ಪ್ರವೇಶಿಸುವನು. ಬಾಗಿಲಲ್ಲಿ ವಧುವರರಿಬ್ಬರಿಗೂ ಆರತಿ ಮಾಡುವರು. ವಧುಗೃಹದ ಒಳಗೆ ಹಿರಿಯರ ಪೂಜಿದ್ದೆಡೆ ಹಾಗೂ ಗುಂಬದ ಮುಂದಿದ್ದ ದೀಪಗಳಿಗೆ ವಧುವರರಿಂದ ಎಣ್ಣೆ ಬಿಡಿಸಿ ಧೂಪ ಹಾಕಿಸುವರು. ಎರಡು ಗುಂಬಗಳಿಗೆ ನಾಲ್ಕು ಆಣೆ ಹಣ ಇಡುವರು. ಆ ಬಳಿಕ ಹೆಣ್ಣುಗಂಡುಗಳನ್ನು ಶಾಸ್ತ್ರಕ್ಕೆ ಕುಳ್ಳಿರಿಸಿ ಅವರಿಗೆ ಕಟ್ಟಿದ್ದ ಬಾಸಿಂಗ ಪಟ್ಟಗಳನ್ನು ಬಿಚ್ಚಿ ಗಂಡಿಗೆ ಮೂರು ಬಾಳೆಹಣ್ಣು ಹೆಣ್ಣಿಗೆ ಎರಡು ಬಾಳೆಹಣ್ಣು ಇಟ್ಟು ಕಂಚಿಕ್ಕುವ ಶಾಸ್ತ್ರ ನಡೆಸುವರು. ಈ ಶಾಸ್ತ್ರಗಳು ಜರುಗುವಾಗ ಚಪ್ಪರದಲ್ಲಿ ಗಂಡು ಹೆಣ್ಣಿನ ಕಡೆಯ ಪ್ರತಿನಿಧಿಗಳು ಮುಯ್ಯಿಪಟ್ಟಿ ಬರೆಯಲು ಕುಳಿತು ಕೊಳ್ಳುವರು. ಎರಡು, ಐದು, ಹತ್ತು, ಇಪ್ಪತ್ತೈದು ಹೀಗೆ ಹಣದ ರೂಪದಲ್ಲಿ ಅವರವರ ಬಂಧುಗಳು ತಟ್ಟೆಗೆ ಉಡುಗೊರೆ ಹಾಕಿ ಮುಯ್ಯಿಪಟ್ಟಿಯಲ್ಲಿ ತಂತಮ್ಮ ಹೆಸರು ಬರೆಸುವರು. ಇತ್ತೀಚೆಗೆ ವಸ್ತುಗಳ ರೂಪದಲ್ಲಿಯೂ ಉಡುಗೊರೆ ನೀಡುವ ಪದ್ಧತಿ ರೂಢಿಯಲ್ಲಿದೆ. ಅನಂತರ ವಿಶೇಷವಾಗಿ ಹಂದಿ ಮತ್ತು ಕುರಿಯ ಮಾಂಸ ಗಳಿಂದ ತಯಾರಿಸಿದ ಧಾರೆಯ ಊಟವಾಗುತ್ತದೆ. ಊಟವಾದ ಬಳಿಕ ಗಂಡಸರು ವಾದ್ಯದ ಲಯಕ್ಕೆ ಅನುಗುಣವಾಗಿ ಸುಗ್ಗಿ ಕುಣಿಯುವರು.

ಮಧ್ಯಾಹ್ನ ನವದಂಪತಿಗಳನ್ನು ದೇವಸ್ಥಾನಕ್ಕೆ ಪಲ್ಲಕ್ಕಿಯಲ್ಲಿ ಕರೆದೊಯ್ಯುವರು ದೇವರಿಗೆ ಹಣ್ಣುಕಾಯಿ ಮಾಡಿಸಿ ಹೆಣ್ಣುಗಂಡುಗಳನ್ನು ಒಂದು ಚಾಪೆಯ ಮೇಲೆ ಕುಳ್ಳಿರಿಸಿ ದೈವಸಮ್ಮುಖದಲ್ಲಿ ಸೇಸಕ್ಕಿ ಹಾಕುವರು. ಗಂಡು ಎಡಗೈಯಲ್ಲಿ ಹೆಣ್ಣಿಗೆ ಸೇಸಕ್ಕಿ ಇಡುವನು. ಇಬ್ಬರಿಂದಲೂ ದೇವರಿಗೆ ಇಡಿಗಾಯಿ ಹಾಕಿಸಿ ಅಲ್ಲಿಂದ 'ಹೊಳೆ ಶಾಸ್ತ್ರ'ಕ್ಕೆ ಕರೆದೊಯ್ಯುವರು. ಅಲ್ಲಿ ನವದಂಪತಿಗಳಿಗೆ ಸೇಸಕ್ಕಿ ಇಟ್ಟು ಕಳಸ ಬೆಳಗು ವರು. ಗಂಡುಹೆಣ್ಣುಗಳು ಒಟ್ಟಾಗಿ ಗಂಗೆಪೂಜೆ ಮಾಡುವರು. ಹುಡುಗ ಬಾವಿಗೆ ಕಾಯಿ ಒಡೆದು ಹೆಣ್ಣಿನ ಕೈಯಲ್ಲಿಡುವನು. ಹುಡುಗಿ ಬಾಳೆಹಣ್ಣಿನ ಚಿಪ್ಪು ಹಿಡಿಯು ವಳು. ಹುಡುಗ ಅವುಗಳ ತೊಟ್ಟು ಮುರಿಯುವನು. ಅನಂತರ ಹುಡುಗಿ ಬಾವಿಯ ಕಟ್ಟೆಮೇಲೆ ಮೂರು ಕಳಸ ಸ್ಥಾಪಿಸಿ ಅವುಗಳಿಗೆ ವೀಳೆದೆಲೆ ಅಡಿಕೆ, ಬಳೆ ಇತ್ಯಾದಿ ಇಟ್ಟು, ನೆನೆಅಕ್ಕಿ ನೆನೆಗಡಲೆ ಅರ್ಪಿಸಿ ಸಾಂಪ್ರದಾಯಿಕ ರೀತಿಯಲ್ಲಿ ಕಳಸಪೂಜೆ

ಮಾಡುವಳು. ಒಂದು ಕಳಸದ ನೀರಿನಿಂದ ಗಂಡನ ಪಾದ ತೊಳೆದು, ವಿಭೂತಿ ಇಟ್ಟು, ಬಾಳೆಹಣ್ಣು ಸಮರ್ಪಿಸಿ ನಮಸ್ಕರಿಸುವಳು. ಇವೆಲ್ಲ ಪುರುಷ ಪ್ರಧಾನ ಸಮಾಜದ ಸಂಕೇತ. ಗಂಡನ ಪಾದಪೂಜೆಯಾದ ಮೇಲೆ ನೆರೆದಿದ್ದ ಹೆಂಗಸರು ಹುಡುಗಿಯಿಂದ ಗಂಡನ ಹೆಸರು ಹೇಳಿಸುವರು. ಅನಂತರ ವಧೂವರರನ್ನು ಕುಳ್ಳಿರಿಸಿ ಕಂಚಿಕಟ್ಟುವ ಶಾಸ್ತ್ರ ಮಾಡಿ ಎಲ್ಲರೂ ಹಿಂತಿರುಗುವರು. ಮಾರ್ಗಮಧ್ಯದಲ್ಲಿ ವಧುವಿನ ತಾಯಿ ವರನಿಗೆ ಶಾಲು ಅಥವಾ ಉಂಗುರವನ್ನು ಉಡುಗೊರೆಯಾಗಿ ನೀಡಿ ಗೌರವಿಸಿ ಕರೆದೊಯ್ಯುವಳು.

ಹೊಳೆಶಾಸ್ತ್ರದಲ್ಲಿ ವಧು ಪೂಜಿಸಿದ ಕಳಸದ ನೀರಿನಿಂದ ಧಾರೆ ಚಪ್ಪರದ ಹನ್ನೆರಡು ಕಂಬಗಳನ್ನೂ ದಂಪತಿಗಳಿಂದ ತೊಳೆಸುವರು. ಒಂದು ತಟ್ಟೆಯಲ್ಲಿ ಅರಿಶಿನ ನೀರನ್ನು ಮತ್ತೊಂದು ತಟ್ಟೆಯಲ್ಲಿ ಅಕ್ಕಿಹಿಟ್ಟು ನೀರನ್ನು ಕಲಸಿ ಇಟ್ಟಿರುತ್ತಾರೆ. ವಧು ತನ್ನ ಮೂರುಬೆರಳನ್ನು ಈ ತಟ್ಟೆಗಳಿಗೆ ಅದ್ದಿ ಧಾರೆಕಂಬಗಳಿಗೆ ಅರಿಶಿನ ಹಾಗೂ ಅಕ್ಕಿಹಿಟ್ಟಿನ ಪಟ್ಟೆ ಬರೆಯುವಳು. ಅನಂತರ ದಂಪತಿಗಳಿಬ್ಬರೂ ಕಂಬಗಳಿಗೆ ಕಣ್ಣು ಕಪ್ಪು ಇಟ್ಟು ವೀಳೆಯದೆಲೆ ಅಡಕೆ ಬಾಳೆಹಣ್ಣು ಅರ್ಪಿಸುವರು. ಹುಡುಗ ಒಂದೊಂದು ಹಸಿನೂಲು ಓಲೆಗರಿ ತೆಗೆದುಕೊಟ್ಟಂತೆ ಹುಡುಗಿ ಅವುಗಳನ್ನು ಕಂಬಗಳಿಗೆ ಕಟ್ಟುವಳು. ಆಗ ಹೆಂಗಳೆಯರು ಹೆಣ್ಣು ಗಂಡುಗಳ ಭಾವನೆಗಳನ್ನು ಪ್ರತಿಬಿಂಬಿಸುವ ಹಾಡು ಹೇಳುವರು—

ಅತ್ತೆಮಗಳೆ ಬಾರೆ ಮುತ್ತಿನ ಚೆಂಡೆ ಬಾರೆ
ಕಂಬಕೆ ಎಲೆಯ ಇಡುಬಾರೆ

ಅತ್ತೆಮಗಳೆ ಬಾರೆ ಮುತ್ತಿನ ಚೆಂಡೆಬಾರೆ
ಕಂಬಕೆ ಹಣ್ಣು ಇಡುಬಾರೆ

ಕಂಬಕೆ ಹಣ್ಣಿಟ್ರೆ ನಕ್ಕಾರೆ ಜನರೆಲ್ಲ
ನಾನೊಲ್ಲೆ ಜನರು ನಗುತಾರೆ

ನಕ್ಕರೆ ನಗಲೇಳೆ ಬಾಯ್ಮೇಲೆ ಹೊಡೆದೇನು
ನಿನಗೊಂದು ಚಾಜ ತೆಗೆಸೇನು

ಚಪ್ಪರ ಕಂಬಗಳ ಪೂಜೆಯಾದ ಬಳಿಕ ಗಂಡು ಹನ್ನೆರಡು ಮಣ್ಣಿನ ಚೆಂಡನ್ನು ಕಾಲಿನಿಂದ ಹಾರಿಸುವನು. ಹೆಣ್ಣು ಆ ಚೆಂಡುಗಳನ್ನು ಹಿಡಿಯುವಳು. ವಧೂವರರಲ್ಲಿ ಸಲಿಗೆ ಅನ್ಯೋನ್ಯತೆಗಳು ಉಂಟಾಗಲೆಂದು ಇಂಥ ಶಾಸ್ತ್ರಗಳನ್ನು ಮಾಡಿಸುತ್ತಿದ್ದರೆಂದು ತೋರುತ್ತದೆ.

ಕೃಷಿ ಪ್ರಧಾನವಾದ ಈ ಜನಾಂಗದಲ್ಲಿ ವ್ಯವಸಾಯದ ವಿವಿಧ ಘಟ್ಟಗಳಿಗೆ ಸಂಬಂಧಿಸಿದ ಹಲವಾರು ಶಾಸ್ತ್ರಗಳು ವಿವಾಹದೊಡನೆ ಸಂಬಂಧ ಪಡೆದಿವೆ. ಮಣ್ಣಿನ ಚೆಂಡನ್ನು ಹಾರಿಸಿದ ಬಳಿಕ ಹುಡುಗಿ ಚಪ್ಪರದಲ್ಲಿ ಪಂಧ್ರ್ಸೆ ಮಡದ ಸುತ್ತಲೂ ಅಕ್ಕಿ ಬೀಜವನ್ನು ಬಿತ್ತಬೇಕು. ಶಾಸ್ತ್ರಕ್ಕಾಗಿ ಆಟಿಕೆಗಳ ಮಾದರಿಯಲ್ಲಿ ಮಾಡಿದ್ದ ಪುಟ್ಟ ಕೂರಿಗೆ, ನೇಗಿಲು, ನೊಗಗಳನ್ನು ಹಿಡಿದು ಹುಡುಗ ಚಪ್ಪರದಿಂದ ವಧುಗೃಹದ

ನಡುಮನೆಯಲ್ಲಿ ಗುಂಬಗಳನ್ನು ಪೂಜಿಸಿದ ಸ್ಥಳದ ವರೆಗೂ ಹೋಗುವನು. ಹುಡುಗಿ ಅವನನ್ನು ಹಿಂಬಾಲಿಸಿ ಅಕ್ಕಿ ಬೀಜ ಬಿತ್ತುತ್ತ ಸಾಗುವಳು. ಉಳಿದ ಅಕ್ಕಿಬೀಜವನ್ನು ಗುಂಬದ ಸುತ್ತಲೂ ಹಾಕುವಳು. ಅನಂತರ ದಂಪತಿಗಳನ್ನು ಕೂರಿಸಿ ಕಂಚಿಕ್ಕಿ ಬಾಸಿಂಗ ಮತ್ತು ಪಟ್ಟಿಗಳನ್ನು ಬಿಚ್ಚುವರು. ಹುಡುಗನಿಗೆ ಕಾಫಿ ತಿಂಡಿ ನೀಡುವರು. ವರನ ಗೃಹಕ್ಕೆ ತೆರಳುವ ಹುಡುಗಿ ಹೊಸ ವಾತಾವರಣದಲ್ಲಿ ಹೊಟ್ಟೆತುಂಬ ಊಟ ಮಾಡಲಾರಳೆಂದು ವಧುವಿಗೆ ಈಗಲೆ ಊಟ ಬಡಿಸುವರು. ಹುಡುಗಿ ತೌರಿನಿಂದ ಹೋದ ದಿವಸ ಗಂಡನ ಮನೆಯಲ್ಲಿ ಊಟ ಮಾಡಬಾರದೆಂಬ ನಿಷೇಧವೂ ಇದೆ. ಅನಂತರ ವಧು ಬಾಳೆಹಣ್ಣಿನ ರಸಾಯನ ತಯಾರಿಸಿ ತನ್ನ ಬಂಧುಬಳಗಕ್ಕೆಲ್ಲ ಹಂಚುವಳು. ಇದನ್ನು ' ಬಳಗೂಟ ' ಎನ್ನುವರು. ಆಗ ಹುಡುಗಿ ಭಾವಪರವಶಳಾಗಿ ಕಂಬನಿ ಮಿಡಿಯುವಳು. ಬಳಗೂಟ ಆದ ಬಳಿಕ ವಧುವರರನ್ನು ಮತ್ತೊಮ್ಮೆ ಅಲಂಕರಿಸಿ ಹೊಸ ಹಾರಗಳನ್ನು ಹಾಕಿ ಬಾಸಿಂಗ ಪಟ್ಟಿಗಳನ್ನು ಕಟ್ಟಿ ಆರತಿ ಎತ್ತುವರು. ಅನಂತರ ಹುಡುಗಿಯ ತಾಯಿ ವಧುವರರಿಬ್ಬರಿಗೂ ಕುಡಿಯಲು ಹಾಲು ನೀಡುವಳು. ಬಂಧುಗಳಿಗೆ ತಾಂಬೂಲ ವಿತರಣೆಯಾಗುವುದು. ಅಷ್ಟರಲ್ಲಿ ಸಂಜೆ ಸಮಾಪಿಸುವುದು. ಮದುವೆ ಹೊರಡಿಸಲು ' ಕಂಚಿನ ಹೆಡಿಗೆ '[1] ತುಂಬಿಸುವರು. ವಧುವಿಗೆ ತವರಿನಿಂದ ಕೊಟ್ಟ ಹಾಸಿಗೆ, ಪೆಟ್ಟಿಗೆ, ಚಟ್ಟಿ, ಲೋಟ, ಚೊಂಬು, ಸಟ್ಟುಗ, ಗುಂಬಕ್ಕೆ ಇಟ್ಟಿದ್ದ ಮಣ್ಣಿನ ಕುಡಿಕೆ ಮತ್ತು ಅಕ್ಕಿಬೀಜವನ್ನು ಕಂಚಿನ ಹೆಡಿಗೆಯಲ್ಲಿ ಇಡುವರು. ಹೆಣ್ಣು ಹೊಸ್ತಿಲು ದಾಟುವ ಮುನ್ನ ತಂದೆ, ತಾಯಿ ಹಾಗೂ ಹಿರಿಯರಿಗೆ ನಮಸ್ಕರಿಸುವಳು. ಗಂಡೂ ಕೂಡ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವನು. ಹುಡುಗಿಯ ತಾಯಿ ಮಗಳಿಗೆ ಸೋಗಲಕ್ಕಿ ಹುಯ್ಯುವಳು. ಮುಂದೆ ಹೆಣ್ಣು, ಹಿಂದೆ ಗಂಡು ಹೀಗೆ ಕೈಹಿಡಿದು ದಂಪತಿಗಳು ವಧುಗೃಹವನ್ನು ಬೀಳ್ಕೊಂಡು ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವರು.

ದಾರಿ ಉದ್ದಕ್ಕೂ ಅಕ್ಕಪಕ್ಕದ ಮನೆಯವರು ಪಲ್ಲಕ್ಕಿಯನ್ನು ನಿಲ್ಲಿಸಿ ವಧುವರರಿಗೆ ತುಪ್ಪ ಹಾಕಿದ ಹಾಲನ್ನು ಕುಡಿಯಲು ನೀಡುವರು. ಊರಬಾಗಿಲ ಬಳಿ ಪಲ್ಲಕ್ಕಿ ಇಳಿಸಿ ವಧುವರರನ್ನು ಒಂದು ಚಾಪೆಯ ಮೇಲೆ ಕುಳ್ಳಿರಿಸಲಾಗುವುದು. ತಮ್ಮ ಊರಿನ ಮಗಳು ಗಂಡನ ಮನೆಗೆ ತೆರಳುವ ಈ ಸಂದರ್ಭದಲ್ಲಿ ಊರಿನ ಪ್ರತಿಯೊಂದು ಮನೆಯಿಂದಲೂ ಮುತ್ತೈದೆಯರು ಸೋಗಲಕ್ಕಿ ತಂದು ಊರಬಾಗಿಲ ಬಳಿ ವಧುವಿಗೆ ನೀಡುವರು. ಸೋಗಲಕ್ಕಿ ತಂದವರಿಗೆ ವಧುವಿನ ಮನೆಯಿಂದ ವೀಳೆದೆಲೆ ಬಾಳೆಹಣ್ಣು ಕೊಡುವರು. ವಧುವರರ ಕೈಗೂ ಬಾಳೆಹಣ್ಣಿಟ್ಟು ಸುತ್ತ ಪ್ರದಕ್ಷಿಣೆ ಬರಲು ಸೂಚಿಸಲಾಗುವುದು. ಇದು ಸಮಸ್ತರಿಗೂ ಕೈಮುಗಿದು ಅಪ್ಪಣೆ ಪಡೆದು ವಿದಾಯ ಹೇಳು

---

[1] ವಧುವಿಗೆ ನೀಡುವ ಉಡುಗೊರೆಗಳನ್ನು ಇಡುವ ಬೆತ್ತದ ಕುಕ್ಕೆಗೆ ಕಂಚಿನ ಹೆಡಿಗೆ ಎನ್ನುತ್ತಾರೆ.

ವುದರ ಸಂಕೇತ. ಅನಂತರ ವಧುವಿನ ಮನೆಯ ಪಟ್ಟಬಾಸಿಂಗಗಳನ್ನು ಬಿಚ್ಚಿ ವಧುವಿನ ಕೈಯನ್ನು ವರನ ಕಡೆಯ ಹಿರಿಯರಿಗೆ ಕೊಡುತ್ತ—“ನಮ್ಮ ಹುಡುಗಿ ಕಳ್ಳಿಯಲ್ಲ ಸುಳ್ಳಿಯಲ್ಲ. ಅಕ್ಕಿ ಮಾರಿದ್ದಲ್ಲ, ಬತ್ತ ಮಾರಿದ್ದಲ್ಲ. ಉಪ್ಪು ಮೆಣಸಿನ ಕಾಯಿ ಮಾರಿದ್ದಲ್ಲ. ಈ ಹಣ ನಾವೇ ಕೊಟ್ಟಿದ್ದು. ಹುಡುಗೀನ ಚೆನ್ನಾಗಿ ಸಾಕಿ ಕೊಂಡು ಹೋಗಿ” ಎಂದು ‘ ಹೆಣ್ಣು ಒಪ್ಪಿಸಿ ’ ಅರಿಶಿನದ ಬಟ್ಟೆಯಲ್ಲಿ ಕಟ್ಟಿದ್ದ ತೆರದ ಹಣದ ಗಂಟನ್ನು ಹುಡುಗಿಯ ಸೆರಗಿಗೆ ಕಟ್ಟುವರು. ಹೀಗೆ ಈ ಜನಾಂಗದಲ್ಲಿ ತೆರಸ್ವೀಕರಣೆ ವಧುದಕ್ಷಿಣೆಯಾದರೂ ಅದನ್ನು ಹುಡುಗಿಯ ಅಪಧ್ದನವಾಗಿ ಪರಿಗಣಿಸು ತ್ತಿದ್ದರು. ಹುಡುಗಿಯನ್ನು ಒಪ್ಪಿಸುವಾಗ ತಂದೆತಾಯಿ ಮೊದಲ್ಗೊಂಡು ಎಲ್ಲರೂ ದುಃಖಿಸುವರು. ಗಂಡಿನವರೂ ಕೂಡ ಹೆಣ್ಣಿನ ಕಡೆಯವರಿಗೆ ಗಂಡನ್ನು ಒಪ್ಪಿಸುತ್ತ “ನಮ್ಮ ಹುಡುಗ ಅರಿಯದವನು, ತಿಳಿಯದವನು. ನಿಮ್ಮ ಮನೆ ಹಿತ್ತಿಲಬಾಗಿಲಲ್ಲಿ ಬರಬಹುದು. ಮುಂದಲಬಾಗಿಲಲ್ಲಿ ಬರಬಹುದು. ಯಾವ ಬಾಗಿಲಲ್ಲಿ ಬಂದರೂ ತಪ್ಪು ಅಂತ ತಿಳೀದಲೆ ಸಂರಕ್ಷಣೆ ಮಾಡಬೇಕು” ಎಂದು ಹೇಳುವರು. ಅನಂತರ ಪಲ್ಲಕ್ಕಿಯಲ್ಲಿ ಗಂಡು ಹೆಣ್ಣುಗಳನ್ನು ಕೂರಿಸುವರು. ಹುಡುಗಿಯ ಜೊತೆ ‘ ಅಡ್ಡಾಳಿ ’ ಎಂದು ಇಬ್ಬರು ಹೆಣ್ಣುಮಕ್ಕಳನ್ನೂ ಒಬ್ಬ ಹುಡುಗನನ್ನೂ ವಧುವಿನ ಮನೆಯಿಂದ ಕಳಿಸುವರು. ಕತ್ತಲಾಗುವ ವೇಳೆಗೆ ಮದುವೆ ವರನ ಊರನ್ನು ಪ್ರವೇಶಿಸುವುದು.

ವರನ ಗೃಹದಲ್ಲಿ ಬಾಗಿಲಲ್ಲಿ ಹಸೆಮಣೆ ಇಟ್ಟು ವಧುವರರನ್ನು ನಿಲ್ಲಿಸಿ ಕೆಂಪು ನೀರು ಮತ್ತು ಕಪ್ಪುನೀರಿನ ಆರತಿಗಳನ್ನೆತ್ತಿ ಬರಮಾಡಿಕೊಳ್ಳುವರು. ಹೆಣ್ಣು ಬಾಗಿಲಲ್ಲಿ ಇಟ್ಟಿದ್ದ ಅಕ್ಕಿ ತುಂಬಿದ ಮಾನವನ್ನು ಮೆಲ್ಲನೆ ಒದ್ದು ಬಲಗಾಲು ಮುಂದಿಟ್ಟು ಪತಿಯ ಗೃಹವನ್ನು ಪ್ರವೇಶಿಸುವಳು. ಆಗ ವರನ ಅಕ್ಕ ಬಾಗಿಲಲ್ಲಿ ವಧುವರರನ್ನು ತಡೆದು ಮೊದಲ ಮಗಳನ್ನು ಆಕೆಯ ಮಗನಿಗೆ ಕೊಡುವುದೆಂದು ಆಶ್ವಾಸನೆ ಪಡೆದ ಬಳಿಕ ದಾರಿ ಬಿಡುವಳು. ದಂಪತಿಗಳು ದೇವರದೀಪ, ಗುಂಬದದೀಪಗಳಿಗೆ ಎಣ್ಣೆಬಿಟ್ಟು ನಮಸ್ಕರಿಸಿ ಹಿರಿಯರಿಗೆ ವಂದಿಸುವರು. ಅನಂತರ ಗುಂಬದ ಬಳಿ ವಧುವರರಿಗೆ ಕಂಚಿಕ್ಕಿ ಬಾಸಿಂಗ ಪಟ್ಟಗಳನ್ನು ಬಿಚ್ಚುವರು. ಹುಡುಗಿಯ ವಸ್ತ್ರಾಭರಣಗಳನ್ನು ತೆಗೆದು ಸರಳವಾದ ಸೀರೆಯನ್ನು ಉಡಿಸುವರು. ದಂಪತಿಗಳನ್ನು ಚಪ್ಪರದಲ್ಲಿ ಹಸೆಮಣೆ ಹಾಕಿ ಕೂರಿಸಿ ಎಣ್ಣೆ ಅರಿಶಿನ ತಿಕ್ಕುವರು ಅನಂತರ ವಧುವರರು ಅಚ್ಚಂಗಿ ಹೂವಿನ ದಂಡೆಯಿಂದ ಪರಸ್ಪರ ಓಕುಳಿ ನೀರು ಎರಚುತ್ತ ಓಕುಳಿಯಾಡುವರು. ಬಳಿಕ ವಧು ವರರಿಗೆ ಸ್ನಾನಮಾಡಿಸುವರು. ಹುಡುಗ ಸ್ನಾನಮಾಡಿ ಬರುವಾಗ ಹುಡುಗಿ ಆತನಿಗೆ ಆರತಿ ಎತ್ತಿ ಹಣ ಗಿಟ್ಟಿಸುವಳು. ಮತ್ತೊಮ್ಮೆ ದಂಪತಿಗಳಿಗೆ ಕಂಚಿಕ್ಕಿದ ಬಳಿಕ ಅಂದಿನ ಕಾರ್ಯಕ್ರಮಗಳಿಗೆ ವಿರಾಮ. ವಧುವನ್ನು ಹೊರತುಪಡಿಸಿ ಎಲ್ಲರೂ ಊಟ ಮಾಡುವರು.

ಮರುದಿನ ಬೆಳಿಗ್ಗೆ ಹುಡುಗಿಯಿಂದ ಹಾಲುಕರೆಸುವ, ಹಿಟ್ಟು ಕುಟ್ಟಿಸುವ, ಮೊಸರು ಕಡೆಸುವ ಶಾಸ್ತ್ರಗಳನ್ನು ಮಾಡಿಸುವ ಮೂಲಕ ವರನ ಮನೆಯ ಬದುಕನ್ನು

ಪರಿಚಯಿಸುವರು. ಅನಂತರ ದಂಪತಿಗಳನ್ನು ದೇವಾಲಯಕ್ಕೆ ಕರೆದುಕೊಂಡುಹೋಗಿ ಹಣ್ಣುಕಾಯಿ ಒಡೆಸಿ ಬಾವಿಯ ಹತ್ತಿರ ಹೊಳೆಶಾಸ್ತ್ರ ಮಾಡಿಸುವರು. ಅಂದು ಹೆಚ್ಚಿನ ಶಾಸ್ತ್ರಗಳು ಇರುವುದಿಲ್ಲ.

ಮಾರನೆಯ ದಿನ 'ಹೆಣ್ಣು ಕರೆಯಲೆಂದು' ವಧುವಿನ ಕಡೆಯ ಬಂಧುಗಳು ವರನ ಮನೆಗೆ ಬರುವರು. ಅಂದು ವರನ ಮನೆಯಲ್ಲಿ 'ಬೀಗರೂಟ'ವಿರುತ್ತದೆ. ಹಂದಿ, ಕುರಿಮಾಂಸವೆ ಅಂದಿನ ಊಟದ ಪ್ರಧಾನ ಆಕರ್ಷಣೆ ಜೊತೆಗೆ ಬಗಿನೆ ಮರದಿಂದ ತೆಗೆದ ಸೇಂದಿಯನ್ನು ಕುಡಿಯಲು ನೀಡುವರು. ಊಟವಾದ ಬಳಿಕ ವಧೂವರರನ್ನು ಹುಡುಗಿಯ ಮನೆಗೆ ಕರೆದುಕೊಂಡುಹೋಗುವರು. ಒಂದು ದಿನ ಬಿಟ್ಟು ಪುನಃ ಗಂಡಿನವರು ದಂಪತಿಗಳನ್ನು ಕರೆಯಲು ಬರುವರು. ಗಂಡಿನ ಕಡೆಯ ಅತಿಥಿಗಳಿಗೆ ಮಾಂಸ, ಮದ್ಯಗಳ ಸತ್ಕಾರವಾಗುವುದು. ಅವರೊಡನೆ ವಧುವರರು ಗಂಡಿನ ಮನೆಗೆ ತೆರಳುವರು. ಮರುದಿನ ವರನ ಮನೆಯಲ್ಲಿ ಕೆಲವು ಶಾಸ್ತ್ರಗಳಿರುತ್ತವೆ. ಅದಕ್ಕಾಗಿ ಅಂದು ಪಾಯಸದ ಅಡಿಗೆ ಮಾಡುವರು. ಡೋಲು ಮತ್ತು ಕಹಳೆಯವರು ಬಂದು ವಾದ್ಯ ನುಡಿಸುವರು. ವರನು ಚಪ್ಪರದ ಒಂದು ಕಂಬವನ್ನು ತುಸುವೇ ಅಲುಗಾಡಿಸಿ ಚಪ್ಪರ ತೆಗೆಯಲು ಅನುಮತಿ ನೀಡುವನು ಚಪ್ಪರದ ಹಾಲುಕಂಬಕ್ಕೆ ಮತ್ತು ಗುಂಬಕ್ಕೆ ಹಾಕಿದ್ದ ಗೊಬ್ಬರವನ್ನು ಒಂದು ಕುಕ್ಕೆಗೆ ತುಂಬಿ ವಧುವಿನ ತಲೆಯ ಮೇಲೆ ಹೊರಿಸಿಕೊಂಡು ಹೋಗಿ ಹತ್ತಿರವಿದ್ದ ಗದ್ದೆಗೆ ಹಾಕಿಸುವರು. ಹುಡುಗಿ ಗೊಬ್ಬರ ಚೆಲ್ಲಿ ಭೂಮಿತಾಯಿಗೆ ನಮಿಸುವಳು. ಅಲ್ಲಿಂದ ಬಾವಿಯಲ್ಲಿ ಗಂಗೆಪೂಜೆ ಮಾಡಿಕೊಂಡು ಮನೆವರೆಗೂ ಅಕ್ಕಿಬೀಜ ಬಿತ್ತಿಕೊಂಡು ಬರುವಳು. ಈ ಶಾಸ್ತ್ರದೊಂದಿಗೆ ಮದುವೆಗೆ ಸಂಬಂಧಿಸಿದ ಶಾಸ್ತ್ರಗಳಿಗೆಲ್ಲ ತೆರೆಬೀಳುವುದು. ಒಂದೆರಡು ದಿನ ಕಳೆದು ಜೋಯಿಸರಿಂದ ಪ್ರಶಸ್ತವಾದ ದಿನ ತಿಳಿದು ನಿಷೇಕವಿಟ್ಟುಕೊಳ್ಳುವರು. ಇದಕ್ಕೆ ಸಂಬಂಧಿಸಿದಂತೆ ಈ ಜನಾಂಗದಲ್ಲಿ ವಿಶೇಷವಾದ ಶಾಸ್ತ್ರಗಳೇನೂ ಆಚರಣೆಯಲ್ಲಿಲ್ಲ.

ಆರಂಭದಲ್ಲಿ ಮೂರು ದಿನಕ್ಕೊಮ್ಮೆ ಅನಂತರ ಐದು ದಿನಕ್ಕೊಮ್ಮೆ ವಧುವನ್ನು ತವರಿಗೆ ಕರೆದೊಯ್ಯಲಾಗುವುದು. ಹೆಣ್ಣು ಗಂಡನ ಮನೆಯಲ್ಲಿ ಹೊಂದಿಕೊಂಡಂತೆಲ್ಲ ಓಡಾಟಗಳು ಮಿತಗೊಳ್ಳುತ್ತವೆ. ಹೀಗೆ ಹಾಸನಜಿಲ್ಲೆಯ ಮಲೆನಾಡಗೌಡರ ಮದುವೆ ಸಂಪ್ರದಾಯ ವೈವಿಧ್ಯಮಯವಾಗಿದ್ದು ಈ ಜನರ ಸಂಸ್ಕೃತಿಯ ಪ್ರತೀಕವಾಗಿದೆ. ಬಹಳಷ್ಟು ಮೂಲಸಂಪ್ರದಾಯಗಳು ಇಂದಿಗೂ ಮುಕ್ಕಾಗದೆ ಉಳಿದಿದ್ದು ಜಾತಿ ಕಸುಬಾದ ವ್ಯವಸಾಯದೊಂದಿಗೆ ತಳುಕು ಹಾಕಿಕೊಂಡಿವೆ.

ಕೆ. ಎಚ್. ಶ್ರೀನಿವಾಸ

ಮಾಂತ್ರಿಕರು

ಹೇಗಾದರೂ ಭಾರತ ಭಾರತ ಅಲ್ಲ
ಎಂದು ಸಾಧಿಸುವುದೇ ಈ ಇತಿಹಾಸಕಾರರ ಪಂಥ
ಹೇಗಾದೀತು ಭಾರತ ಭಾರತಕ್ಕೆ ಸ್ವಂತ?
ಆರ್ಯರು ಬಂದರು ದಾಳಿಕಾರರಾಗಿ
ಲೆನಿನ್ ಮಾರ್ಕ್ಸ್‌ರ ಅನುಮೋದನೆ ಪಡೆದು ರಷ್ಯಾದಿಂದ
ಹಿಟ್ಲರನ ಸ್ವಸ್ತಿಕದ ಕೃತಜ್ಞತೆಯಿಂದ
ಇರಾಣದ ಎಡೆಯಿಂದ ಐರೋಪ್ಯರ ಕಾರುಣ್ಯದ
ಘಟಸರ್ಪದ ಹೆಡತಲೆಯ ಅಡಿಯಿಂದ !
'ಸಿಂಧೂ' ಎಂದಾಗ ಅಪರಿಮಿತ, ರಾಶಿ, ಸಮುದ್ರ
ಎಂಬರ್ಥ ಹೊಳೆಯಲಿಲ್ಲ ಇತಿಹಾಸಕಾರರಿಗೆ
ಏಕೆಂದರೆ ಅವರಿಗೆ ಅದು ಬೇಕಿರಲಿಲ್ಲ
ಆರ್ಯರು ದಾಳಿಕಾರರಾಗಿ ಬಂದರಂತೆ !
ವೈದಿಕ ವಾಙ್ಮಯವೇ ಪುರಾವೆಯಂತೆ !
ಬೋಘಜ್‌ಕಾಯಿ ಶಾಸನದಲ್ಲಿದೆಯಂತೆ ಉಲ್ಲೇಖ
ಜಂಡಾವೆಸ್ತ ಕೂಡ ಒಡನುಡಿಯುತ್ತದಂತೆ
ಮಗನ ಹೋಲಿಕೆ ನೋಡಿ ಅಪ್ಪನಿಗೆ ಅಂದರಂತೆ
ಇವನೇ ನಿಮ್ಮಪ್ಪ ಇರಬೇಕೆಂದು
ಮುಂದೆಂದೋ ಅವಶೇಷದಲಿ ಪುರಾವೆ ಸಿಕ್ಕರೆ ಹೇಳುವರಂತೆ
ಭಾರತದಿಂದ ಇಂಗ್ಲೆಂಡಿಗೆ ಬ್ರಿಟಿಷರು
ವಲಸೆ ಹೋದರೆಂದು !
ವಿಚಿತ್ರ ನೋಡಿ : ಸಿಕ್ಕ ಪುರಾವೆಗಳು
ವೈದಿಕ ಅಲ್ಲವಂತೆ, ವೈದಿಕ ಅವಶೇಷ ಇಲ್ಲವಂತೆ
ಸಿಕ್ಕಿರುವವು ಅದರ ಹಿಂದಿನವಂತೆ
ಅಥವ ಮುಂದಿನವಂತೆ. ದಂಡ ಹಿಡಿದು
ಸಂಮೋಹಿತಗೊಳಿಸಲು ತೊಡಗಿದ್ದಾರೆ ಮಾಂತ್ರಿಕರು !

ಎಚ್. ಎಂ. ಶಂಕರನಾರಾಯಣರಾವ್

ನಿತ್ಯಾತ್ಮ ಶುಕಯೋಗಿ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ವಸ್ತು ವಿಮರ್ಶೆ

ಒಂದು ಕೃತಿಯನ್ನು ವಸ್ತು, ಪಾತ್ರ ಮತ್ತು ರಸದ ದೃಷ್ಟಿಗಳಿಂದ ನಮ್ಮವರು ವಿಮರ್ಶೆಮಾಡುತ್ತಾರಷ್ಟೆ. ಸಂಸ್ಕೃತ ಭಾಗವತ ಒಂದು ಮಹಾಪುರಾಣ ; ಕನ್ನಡ ಭಾಗವತ ಒಂದು ಮಹಾಕಾವ್ಯ. ಈ ಕಾವ್ಯದ ವಸ್ತುವನ್ನು ಕುರಿತು ಈಗಾಗಲೇ ತಕ್ಕಮಟ್ಟಿಗೆ ಕೆಲವು ಮಾತುಗಳನ್ನು ಹೇಳಲಾಗಿದೆ. ಈಗ ಈ ಕಾವ್ಯದಲ್ಲಿ ಬರುವ ಕೆಲವು ಪಾತ್ರಗಳ ಸ್ವರೂಪ, ಕಾವ್ಯದ ಗುಣ, ರಸ ಈ ವಿಷಯಗಳನ್ನು ಕುರಿತು ಕೆಲವು ಮಾತುಗಳನ್ನು ಇಲ್ಲಿ ಹೇಳಲಾಗುವುದು.

ಭಾಗವತದಲ್ಲಿ ಬರುವ ವೃತ್ತಾಂತಗಳೂ, ಕಥೆಗಳೂ ನಾಲ್ಕು ಯುಗಗಳಲ್ಲಿ, ಅನೇಕ ಮನ್ವಂತರಗಳಲ್ಲಿ, ನಡೆಯುವುದಾಗಿರುವುದರಿಂದ, ಈ ಕೃತಿಗಳಲ್ಲಿ ರೂಪಿತ ವಾಗಿರುವ ವ್ಯಕ್ತಿಗಳು ವರ್ಣರಂಜಿತರೂ, ವೈವಿಧ್ಯಪೂರ್ಣರಾದವರೂ ಆಗಿದ್ದಾರೆ. ನಿಜವಾಗಿ ಹೇಳುವುದಾದರೆ, ಪಾತ್ರಗಳ ಮೆರವಣಿಗೆಯೇ ಇಲ್ಲಿ ಸಾಗಿದೆ. ಭಕ್ತರಿಂದ ಹಿಡಿದು ದುಷ್ಟರವರೆಗೆ, ದೇವತೆಗಳಿಂದ ಹಿಡಿದು ದೈತ್ಯರವರೆಗೆ, ಮಾನವರವರೆಗೆ ನಾನಾರೀತಿಯ ನೀತಿಯ ಜನ ಇಲ್ಲಿ ಮೂಡಿಬಂದಿದ್ದಾರೆ. ದುಷ್ಟರಾದವರು ದ್ವೇಷ ದಿಂದಲೇ ಆಗಲಿ ಹರಿನಾಮಸ್ಮರಣೆ ಮಾಡಿದರೆ ಸಾಕು, ವಿಷ್ಣುಸಾನ್ನಿಧ್ಯವನ್ನು ಪಡೆಯುತ್ತಾರೆ. ಜಯ ವಿಜಯರೇ ಇದಕ್ಕೆ ಅತ್ಯುತ್ತಮವಾದ ಉದಾಹರಣೆ. ಯಮದೂತರ ಭಯದಿಂದ ತನ್ನ ಮಗನಾದ ನಾರಾಯಣನನ್ನು ಕರೆದ ಅನಾಚಾರಿ ಅಜಾಮಿಳನಿಗೆ ವಿಷ್ಣುಸಾನ್ನಿಧ್ಯ ದೊರಕಿತು. ಈ ಪುರಾಣದ ಫಲಶ್ರುತಿಯೇ ಇದು. ಅದಿರಲಿ, ಈ ಕೃತಿಯಲ್ಲಿ ಬರುವ ಪಾತ್ರಗಳ ವಿಮರ್ಶೆಯನ್ನು ಕೈಗೆತ್ತಿಕೊಂಡಾಗ ಎಲ್ಲ ಪಾತ್ರಗಳ ಗುಣದೋಷಗಳನ್ನೂ ತೂಗಿನೋಡುವುದು ಕಷ್ಟಸಾಧ್ಯವಾದ ಕೆಲಸ. ಆದ್ದರಿಂದ ಮುಖ್ಯವಾಗಿ ಶ್ರೀಕೃಷ್ಣನ ಪಾತ್ರವನ್ನು ಸ್ವಲ್ಪಮಟ್ಟಿಗೆ ವಿವೇಚಿಸಿ ಮಿಕ್ಕ ಕೆಲವು ಪಾತ್ರಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಯತ್ನಿಸಿದೆ.

ಪಾತ್ರಪರಿಶೀಲನೆಗೆ ಮುಂಚೆ ಇಲ್ಲಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸಬೇಕು. ಒಂದು ದೃಷ್ಟಿಯಿಂದ ಭಾಗವತ ದೇವಾಸುರ ಯುದ್ಧದ (ಇದು ನಮ್ಮ ಬದುಕಿನ ನಿತ್ಯದ ವಿಷಯ) ವಿಷಯವನ್ನು ಪ್ರತಿಬಿಂಬಿಸುತ್ತದೆ. ಈ ಯುದ್ಧದಲ್ಲಿ ಕೊನೆಯಲ್ಲಿ ದೈವೀಗುಣಗಳಿಗೆ, ಶಕ್ತಿಗೆ, ದೇವತೆಗಳಿಗೇ ಗೆಲುವು; ಧರ್ಮಕ್ಕೇ ಜಯ. ದೇವತೆಗಳು, ದೈತ್ಯರು ಮತ್ತು ಮಾನವರು ಈ ಪುರಾಣದಲ್ಲಿ ಭಾಗವಹಿಸುತ್ತಾರೆ. ಆದರೆ ಇವರ ವರ್ತನೆಯೆಲ್ಲ ಮಾನವರ ವರ್ತನೆಯಂತೆ. ರಾಕ್ಷಸರೆಂದರೆ ಎಲ್ಲರೂ ದೈವದ್ವೇಷಿಗಳಲ್ಲ; ವಿಷ್ಣುದ್ವೇಷಿಗಳಲ್ಲ. ದೈತ್ಯರಲ್ಲಿಯೂ ಬಲಿ, ಪ್ರಹ್ಲಾದರಂತಹ ಸಾತ್ವಿಕ ಶಿರೋಮಣಿಗಳಿದ್ದಾರೆ. ವಿಷ್ಣುದ್ವೇಷಿಯಾದ ತಂದೆಯ ಕೋಪಕ್ಕೆ ತುತ್ತಾಗಿ, ಅವನು ಕೊಟ್ಟ ನಾನಾ ತೊಂದರೆಗಳಿಗೆ ಗುರಿಯಾದರೂ, ವಿಷ್ಣುಭಕ್ತಿಯನ್ನು ಬಿಡದೆ, ಬಂದ ಕುತ್ತಗಳಿಂದ ಪಾರಾಗಿ, ನರಸಿಂಹನ ಅನುಗ್ರಹಕ್ಕೆ ಪಾತ್ರನಾದವನು ಪ್ರಹ್ಲಾದ. ದೇವತೆಗಳ ಕಾರ್ಯಕ್ಕೆ ಹಾಗೂ ಅವರ ಅನುಗ್ರಹಕ್ಕಾಗಿ ಬಂದಿರುವ ವಾಮನನ ಮೋಸಕ್ಕೆ ಬಲಿಯಾಗಬೇಡವೆಂದು ಶುಕ್ರಾಚಾರ್ಯನು ಎಚ್ಚರಿಸಿದರೂ ಕೊಟ್ಟ ಮಾತನ್ನು ಮೀರದೆ, ಮೂರನೆಯ ಅಡಿಗೆ ಸ್ಥಳ ಸಾಲದಾಗ ತನ್ನ ತಲೆಯನ್ನೇ ಒಡ್ಡಿ, ಸುತಲವನ್ನು ಪ್ರವೇಶಿಸಿ ದೈವಾನುಗ್ರಹವನ್ನು ಸಂಪಾದಿಸಿದವನು ಬಲಿ. ಅಜಾಮಿಳ, ವೇದಶಾಸ್ತ್ರಪಾರಂಗತನಾದ ಬ್ರಾಹ್ಮಣ. ಕಾಮವಾಸನೆಯಿಂದ ಸಲ್ಲದ ಸ್ತ್ರೀಯೊಂದಿಗೆ ಸಂಪರ್ಕಮಾಡಿ ಮಕ್ಕಳನ್ನು ಪಡೆದು, ಸಾಯುವ ಸಮಯ ಬಂದಾಗ ಯಮದೂತರ ಭಯಂಕರ ರೂಪವನ್ನು ಕಂಡು ಹೆದರಿದನಾದರೂ ತನ್ನ ಕೊನೆಯ ಮಗನಾದ ನಾರಾಯಣನ ಹೆಸರನ್ನು ಕೂಗಿದ ಮಾತ್ರದಿಂದಲೇ ವೈಕುಂಠವನ್ನು ಸೇರಿದನು. ಹರಿನಾಮ ಸ್ಮರಣೆಯೇ ಅಂಥದು! ಪರೀಕ್ಷಿತ ಮಹಾರಾಜನು ಧರ್ಮಾತ್ಮನಾದ ದೊರೆ. ಗೋರೂಪಿಯಾದ ಭೂಮಿಯನ್ನು ಹಿಂಸಿಸುತ್ತಿದ್ದ ಕಲಿಯನ್ನು ನಿಗ್ರಹಿಸಿದವನು ಅವನು. ಇಂಥ ಮಹಾತ್ಮ ಕೋಪಕ್ಕೆ ತುತ್ತಾಗಿ, ಶಮೀಕಋಷಿಯ ಶಾಪಕ್ಕೆ ಗುರಿಯಾದನೆಂದ ಮೇಲೆ ಹೇಳತಕ್ಕದ್ದೇನಿದೆ? ಕೋಪ ಮಾನವದೇಹದ ದೌರ್ಬಲ್ಯ ಸೂಚಕ ಕುರುಹು. ಆದರೆ ತಕ್ಷಣವೇ ತನ್ನ ತಪ್ಪನ್ನು ಕಂಡುಕೊಂಡು ಎಚ್ಚೆತ್ತ ರಾಜನು, ತಾನು ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಶುಕಮುನಿಯಿಂದ ಭಾಗವತವನ್ನು ಶ್ರದ್ಧೆಯಿಂದ ಕೇಳಿ, ದೇಹನೀಗಿ, ವಿಷ್ಣುಸಾನ್ನಿಧ್ಯವನ್ನು ಪಡೆದನು. ಈ ನವಮ ಸ್ಕಂಧದಲ್ಲಿ ಗಂಗಾವತರಣದ ಕಥೆ ಬರುತ್ತದೆ. ಭೂಮಿಗೆ ಬರಲಿರುವ ಗಂಗೆಯ ರಭಸವನ್ನು ತಡೆಯಲು ಶಿವನನ್ನು ಕುರಿತು ತಪಸ್ಸುಮಾಡಿ, ಅವನನ್ನು ಒಲಿಸಿಕೊಂಡನು. ಗಂಗೆ 'ವಿಷ್ಣುಪಾದಾಬ್ಜ ಸಂಭೂತೆ'. ಅವಳನ್ನು ರುದ್ರನು ತಲೆಯಲ್ಲಿ ಧರಿಸುವುದೆಂದರೆ ಕೆಲಸರಿಗೆ ಹೀನಾಯವಾಗಿ ತೋರಬಹುದು. ಆದರೆ ಈ ಸಂದರ್ಭದಲ್ಲಿ ಶಿವನು ಕೊಡುವ ಉತ್ತರ ಮನನಯೋಗ್ಯವಾಗಿದೆ. ಆ ಉತ್ತರ ಇದು :

ಲೇಸನಾಡಿದೆ ಮಗನೆ ಘನ ಪರಿ
ತೋಷವಾಯ್ತಿದು ತನಗೆ ಹಿತವಾ

ವಾಸುದೇವಪದಾಬ್ಜವಲ್ಲಾ ತವರುಮನೆ ದಿಟಕೆ
ಆ ಸುರಾಪಗೆಗೆಲೆ ಮಹಾತ್ಮ ಮ
ಹಾ ಸುಭಾಗ್ಯನು ತಾನಲಾ ಲ
ಕ್ಷ್ಮೀಶನಂಘ್ರಿಜಲಾದ್ರ್ರಮಸ್ತಕನಾದಡಾನೆಂದ ೯, ೮—೨೯

ಇಲ್ಲಿ ಮುಖ್ಯವಾಗಿರುವುದು ಪಾತ್ರಪ್ರಶ್ನೆಯಲ್ಲ. ಬ್ರಹ್ಮಾಂಡ ಸೃಷ್ಟಿಯ ಒಂದೇ ಶಕ್ತಿಯ ಮೂರು ರೂಪಗಳಾಗಿ ಗುಣರಹಿತರಾದವರ ವಿಷಯದಲ್ಲಿ ಪಾತ್ರಪರಿಶೀಲನೆ ಎಲ್ಲಿ ಬಂತು? ಆದರೆ ರುದ್ರನು ಆಡುವ ಮಾತು ಅವನ ಯೋಗ್ಯತೆಗೆ ತಕ್ಕದಾಗಿದ್ದು ಹರಿಹರಬ್ರಹ್ಮಾದಿಗಳಲ್ಲಿ ಅಭೇದವನ್ನು ತೊಡೆದುಹಾಕಿ, ಈ ಪಂಥಗಳಲ್ಲಿ ಸಮನ್ವಯವನ್ನುಂಟುಮಾಡಲು ಸಹಕಾರಿಯಾಗಿದೆ. ಆದರೂ ರುದ್ರನಲ್ಲಿ ಮಾನವ ದೌರ್ಬಲ್ಯಗಳಿಲ್ಲವೆಂದಲ್ಲ. ಮೋಹಿನಿಯ ರೂಪವನ್ನು ಕಂಡು ಅವಳನ್ನು ಮೋಹಿಸಿದ ರುದ್ರನ ಹುಚ್ಚಿಗೆ ಏನೆಂದು ಹೇಳೋಣ? ಯಾರಿಗೇ ಆಗಲಿ ಕಾಮ ಅನಿವಾರ್ಯವಾದುದೆಂದು ಇದು ಸೂಚಿಸುತ್ತದೆಯಲ್ಲವೆ? ರುದ್ರನ ಅವತಾರವಾದ ದುರ್ವಾಸ ಮುಂಗೋಪದ ಮುದ್ದೆ. ತನ್ನ ವಿಷಯದಲ್ಲಿ ವಿನಯವನ್ನು ತೋರಿದ ಸಾತ್ವಿಕನೂ ವಿಷ್ಣುಭಕ್ತನೂ ಆದ ಅಂಬರೀಷನನ್ನು ಕೆಣಕಿ ಪಡಬಾರದ ಕಷ್ಟಪಟ್ಟು ಕೊನೆಗೆ ಅವನಿಗೆ ಶರಣಾಗಬೇಕಾಯಿತು. ಈ ಕೃತಿಯಲ್ಲಿ ಬರುವ ಧ್ರುವ, ಉತ್ತಾನಪಾದ, ಸುರುಚಿ, ಪೃಥು ಇವೇ ಮೊದಲಾದ ಪಾತ್ರಗಳು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಲು ಶಕ್ತವಾಗಿವೆ.

ಭಾಗವತದಲ್ಲಿ ಬರುವ ಪಾತ್ರಗಳಲ್ಲಿ ಶ್ರೀಕೃಷ್ಣನ ಪಾತ್ರವೇ ಬಹುಮುಖ್ಯವಾದುದು. ಈ ಪಾತ್ರದ ಸ್ವರೂಪವನ್ನು ಪ್ರಸ್ಫುಟಗೊಳಿಸಲು ಕವಿ ದಶಮ ಏಕಾದಶ ಸ್ಕಂಧಗಳನ್ನು ಸಂಪೂರ್ಣವಾಗಿ ವಿನಿಯೋಗಿಸಿದ್ದಾನೆ. ಭರತಖಂಡದ ಸಂಸ್ಕೃತ ಸಾಹಿತ್ಯದಲ್ಲಿ ಕೃಷ್ಣನ ಪಾತ್ರ ಹೇಗೆ ಮೂಡಿಬಂದಿದೆಯೆಂಬುದು ಇಲ್ಲಿ ಮುಖ್ಯ ವಿಷಯವಲ್ಲ. ಭಾಗವತದ ಕವಿ ಆ ಪಾತ್ರವನ್ನು ಹೇಗೆ ನೋಡಿದ್ದಾನೆಂಬುದನ್ನು ನಾವು ಮರೆಯಬಾರದು. ಶ್ರೀಕೃಷ್ಣನು ಭೂಭಾರವನ್ನು ಇಳಿಸಲು ಬಂದ ಮಹಾವಿಷ್ಣುವಿನ ಅವತಾರ; ಪೂರ್ಣಾವತಾರ. ಇಲ್ಲಿ ಚಿತ್ರಿಸಿರುವ ಅವನ ಜೀವನ ಅನೇಕ ಘಟನೆಗಳಿಂದ ಕೂಡಿದ್ದು ವರ್ಣರಂಜಿತವಾಗಿದೆ. ಶ್ರೀಕೃಷ್ಣನ ಪಾತ್ರಕ್ಕೆ ಎರಡು ಮುಖಗಳಿವೆ. ಒಂದು ಅವನು ನಡೆಸಿದ ಪವಾಡಗಳಿಗೆ ಸಂಬಂಧಿಸಿದ್ದು. ಮತ್ತೊಂದು ಅವನ ಲೌಕಿಕ ವ್ಯವಹಾರಕ್ಕೆ ಸಂಬಂಧಿಸಿದ್ದು. ಅವನು ನಡೆಸಿದ ಪವಾಡಗಳ ವರ್ಣನೆ ಅಮುಖ್ಯವೆಂದಾಗಲಿ, ತಪ್ಪೆಂದಾಗಲಿ, ಇಲ್ಲಿ ವಾದಿಸುತ್ತಿಲ್ಲ. ಶ್ರೀಕೃಷ್ಣನ ವಿಷಯದಲ್ಲಿ ಜನರು ಸಾವಿರಾರು ವರ್ಷಗಳಿಂದ ಇಟ್ಟುಕೊಂಡಿರುವ ಈ ಭಾವನೆಗಳನ್ನು ಅಲ್ಲಗಳೆಯುವುದಾದರೂ ಹೇಗೆ? ಆದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ಪವಾಡಗಳೇ ಸರ್ವಸ್ವವಲ್ಲ. ಪವಾಡಗಳು ಶ್ರೀಕೃಷ್ಣನ ಪಾತ್ರದ ಒಂದು ಮುಖವಾದರೆ ಅವನ ಧರ್ಮಪ್ರಜ್ಞೆ, ಮಾನವೀಯತೆ, ರಾಜನೀತಿಚಾತುರ್ಯ, ಎಂಥ ವಿಷಮ ಸನ್ನಿವೇಶಗಳಲ್ಲಿಯೂ ಉಳಿಸಿಕೊಂಡ ಸ್ಥಿರತೆ ಇವು ಅವನ ಜೀವನದ ಇನ್ನೊಂದು ಮುಖ. ಶ್ರೀಕೃಷ್ಣನು

ದೇವರಾಗಿ ಅವತರಿಸಿ ಯಾವ ಯಾವ ಕಾರ್ಯಗಳನ್ನು ಮಾಡಿದನೆನ್ನುವುದಕ್ಕಿಂತ, ಮನುಷ್ಯನಾಗಿ ಏನು ಕಾರ್ಯಸಾಧಿಸಿ, ದೇವತ್ವಕ್ಕೆ ಏರಿದನೆನ್ನುವುದು ಇಲ್ಲಿ ಮುಖ್ಯವಾದ ವಿಷಯ.

ಶ್ರೀಕೃಷ್ಣನು ದೇವತೆಗಳ ಪ್ರಾರ್ಥನೆಯಂತೆ ಭೂಭಾರಹರಣಾರ್ಥವಾಗಿ ಮಹಾ ವಿಷ್ಣುವಿನ ಪೂರ್ಣಾಂಶದಿಂದ ಭೂಲೋಕದಲ್ಲಿ ಅವತಾರಮಾಡಿದವನು. ಕೃಷ್ಣನ ವಿಷಯ ಬರುವ ಮಿಕ್ಕ ಪುರಾಣಗಳ ಮಾತು ಹಾಗಿರಲಿ. ಕೃಷ್ಣನ ಭೂಭಾರಹರಣದ ಕಾರ್ಯ ಭಾಗವತ ಮತ್ತು ಮಹಾಭಾರತಗಳಲ್ಲಿ ಅಂತರ್ಗತವಾಗಿದೆ. ಭಾಗವತದಲ್ಲಿ ಅವನು ಸ್ವಹಸ್ತದಿಂದ ದುಷ್ಟದಾನವ ಮಾನವರನ್ನು ದಮನಮಾಡಿದರೆ, ಮಹಾಭಾರತದಲ್ಲಿ ತಾನು ಹಿಂದೆ ನಿಂತು, ಅದೇ ಕಾರ್ಯವನ್ನು, ಪಾಂಡವರು ನಿಮಿತ್ತವಾಗಿ ನಿರ್ವಹಿಸಿದ್ದಾನೆ.

ಶ್ರೀಕೃಷ್ಣನ ಬದುಕನ್ನು ನಾವು ಮೂರು ನಾಲ್ಕು ಘಟ್ಟಗಳಲ್ಲಿ ಪರಿಶೀಲಿಸಬಹುದು. ಶ್ರೀಕೃಷ್ಣನು ಹುಟ್ಟಿದ್ದು ಮಧುರೆಯಲ್ಲಿ ಆದರೆ ಅವನ ಬಾಲ್ಯವೆಲ್ಲ ನಂದಗೋಕುಲದಲ್ಲಿ ಕಳೆಯಿತು. ಕವಿ ಇಲ್ಲಿ ಅವನ ಬಾಲಲೀಲೆಗಳನ್ನು ಮನಮೋಹಕವಾಗಿ ವಿವರ ವಿವರವಾಗಿ ಬಣ್ಣಿಸಿದ್ದಾನೆ. ಮಹಿಮೆಗಳನ್ನು ಹೊಗಳಿದ್ದಾನೆ. ಕಂಸನ ದೆಸೆಯಿಂದಾಗಿ ಕೃಷ್ಣನು ಬಾಲ್ಯದಲ್ಲಿ ಅದೆಷ್ಟು ಕಂಟಕಗಳನ್ನು ಎದುರಿಸಬೇಕಾಯಿತು! ತನ್ನ ಪ್ರಾಣವನ್ನು ತೆಗೆಯಲು ಬಂದ ಪೂತನಿ, ಶಕಟಾಸುರ, ಧೇನುಕ, ತೃಣಾವರ್ತ ಮೊದಲಾದ ರಾಕ್ಷಸರನ್ನು ಕೊಂದನು. ದೇವೇಂದ್ರನ ಮತ್ತು ಕಾಳಿಂಗ ಸರ್ಪನ ಬಾಧೆಗಳನ್ನು ತಪ್ಪಿಸಿ, ನಂದಗೋಕುಲವನ್ನು ರಕ್ಷಿಸಿದನು. ರಾಕ್ಷಸರ ಸಂಹಾರ, ಗೋವರ್ಧನೋದ್ಧರಣ ಇವೇ ಮೊದಲಾದ ಶ್ರೀಕೃಷ್ಣನ ಕಾರ್ಯಗಳನ್ನು ಪವಾಡಗಳೆಂದೂ, ಪರಮಾತ್ಮನಿಗೆ ಯಾವುದು ತಾನೆ ಅಸಾಧ್ಯವೆಂದೂ ಉದ್ಗರಿಸಬಹುದು. ಆದರೆ ಇವಾವುಗಳನ್ನೂ ನಾವು ಅಲ್ಲಗಳೆಯುವಂತಿಲ್ಲ. ಏಕೆಂದರೆ ಕವಿಗೆ ಇದರಲ್ಲಿ ಪೂರ್ಣನಂಬಿಕೆ ಇದೆ. ಜನರೂ ಇವುಗಳನ್ನು ಅಕ್ಷರಶಃ ನಂಬಿದ್ದಾರೆ. ಈಗಿನ ಸ್ಥಿತಿಯಲ್ಲಿ ಇವು ಶ್ರೀಕೃಷ್ಣನ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿಹೋಗಿವೆ. ಶ್ರೀಕೃಷ್ಣಗೋಪಿಯರ ಸಂಬಂಧ ಒಂದು ತೊಡಕಾದ ಆಧ್ಯಾತ್ಮಿಕವಾದ ಪ್ರಶ್ನೆಯಾಗಿ ಪರಿಣಮಿಸಿರುವುದರಿಂದ, ಇಲ್ಲಿ ನಾವು ಅದನ್ನು ಗಮನಿಸಬೇಕಾಗಿಲ್ಲ. ಆದರೆ ಅವನು ನಂದಗೋಕುಲದಲ್ಲಿದ್ದಾಗ ತೋರಿಸಿದ ಬಾಲಲೀಲೆ, ಮಾತೃಪ್ರೇಮ, ಒಡನಾಡಿಗಳ ಹಿತಚಿಂತನೆ ಇವು ನಮಗೆ ಇಂದಿಗೂ ಆದರ್ಶಪ್ರಾಯವಾಗಿವೆ.

ನಂದಗೋಕುಲದಿಂದ ಶ್ರೀಕೃಷ್ಣನು ಬಲರಾಮನೊಡನೆ ಮಧುರೆಗೆ ಬಂದಮೇಲೆ ಅವನ ಕಾರ್ಯರಂಗ ವಿಸ್ತಾರವಾಯಿತು; ಹಾಗೆಯೇ ಅವನಿಗೆ ಹಗೆಗಳೂ ಹೆಚ್ಚಾದರು. ಇಲ್ಲಿಂದ ಮುಂದೆ ಹಿಂದೆ ಅವನು ನಡೆಸಿದ ಪವಾಡಗಳನ್ನು ಬದಿಗಿಟ್ಟು ಅವನ ಕಾರ್ಯಗಳಷ್ಟನ್ನೇ ಪರಿಶೀಲಿಸಿದರೆ, ಅವನ ಮಾನವೀಯ ಗುಣಗಳು, ಅವನು ಧರ್ಮೋದ್ಧಾರಕ್ಕಾಗಿ ನಡೆಸಿದ ಹೋರಾಟ, ಎಂಥ ವಿಷಮ ಪ್ರಸಂಗಗಳಲ್ಲಿಯೂ ತಪ್ಪಿ

ಹೋಗದ ಅವನ ಸಮಚಿತ್ತತೆ ವ್ಯಕ್ತವಾಗುತ್ತವೆ, ಸ್ಥಿತಪ್ರಜ್ಞೆ ಇವೇ ಮೊದಲಾದ ಗುಣಗಳು ಸುವ್ಯಕ್ತವಾಗುತ್ತವೆ. ದುಷ್ಟನಾದ ಕಂಸನನ್ನು ಸಂಹರಿಸಿದ ಮೇಲೆ ಅವನೇ ರಾಜನಾಗಬಹುದಾಗಿತ್ತು. ಆದರೆ ಅವನು ಹಾಗೆ ಮಾಡದೆ ' ಆ ಯಯಾತಿಯ ಶಾಪ ಕುಳ್ಳಿರಲೀಯದಿನ್ನೆಗ ನಮ್ಮ ಯಾದವರಾಯನನು ರಾಜಾಸನದಲ್ಲಿ ' ಎಂದು ಸ್ಪಷ್ಟವಾಗಿ ನುಡಿದು ಕಂಸನ ತಂದೆಯಾದ ಉಗ್ರಸೇನನಿಗೇ ಪಟ್ಟಕಟ್ಟಿದನು. ಇದು ಶ್ರೀಕೃಷ್ಣನ ಧರ್ಮಗೌರವ ಹಾಗೂ ನಿಸ್ವಾರ್ಥಬುದ್ಧಿಗೆ ಸಾಕ್ಷಿಯಾಗಿದೆ. ಕಂಸಸಂಹಾರದಿಂದ ಶ್ರೀಕೃಷ್ಣನಿಗೆ ಆದ ಲಾಭ ಅವನ ಸುತ್ತಮುತ್ತಲೂ ಶತ್ರುಗಳ ಪಡೆಯೊಂದು ನಿರ್ಮಾಣವಾದದ್ದು. ಅಳಿಯನಾದ ಕಂಸನ ವಧೆಯಿಂದ ಕುಪಿತನಾದ ಮಗಧದ ದೊರೆ ಜರಾಸಂಧನು ಹದಿನೇಳು ಬಾರಿ ಮಧುರೆಯನ್ನು ಮುತ್ತಿ "ಕೃಷ್ಣಪರಾಕ್ರಮಾಗ್ನಿಯಲಿ ಬೇಳಿದನು ತಳ ತಂತ್ರವನ್ನು". ಹದಿನೆಂಟನೆಯ ಬಾರಿಯ ಜರಾಸಂಧನ ಮುತ್ತಿಗೆಯ ಸಮಾಚಾರವನ್ನು ಕೇಳಿ, ಕಂಸನ ಭಯದಿಂದ ಓಡಿಹೋಗಿದ್ದ ಯಾದವರನ್ನು ಕರೆಸಿಕೊಂಡು, ಅವರನ್ನೆಲ್ಲ ತಮ್ಮ ತಮ್ಮ ಸ್ಥಾನಗಳಲ್ಲಿ ಕೃಷ್ಣನು ಮತ್ತೆ ಸ್ಥಾಪಿಸಿದನು. ಮತ್ತೆ ಮತ್ತೆ ಜರಾಸಂಧನಿಂದ ತೊಂದರೆಯಾಗದಂತೆ ನೋಡಿಕೊಳ್ಳಲು ಮಧುರೆಯಿಂದ ಬಲುದೂರದಲ್ಲಿ ದ್ವಾರಕೆಯೆಂಬ ಜಲದುರ್ಗವನ್ನು ಸ್ಥಾಪಿಸಿದನು. ಆ ಬಳಿಕ ಮುಂದೆ ಉಪಾಯವಾಗಿ ಭೀಮನಿಂದ ಜರಾಸಂಧನನ್ನು, ಹಾಗೆಯೇ ಮುಚುಕುಂದನಿಂದ ಕಾಲಯವನನನ್ನು ಕೊಲ್ಲಿಸಿದನು. ಇದಲ್ಲದೆ ಹಂಸ, ಡಿಬಿಕ, ಪೌಂಡ್ರಕ, ಶಿಶುಪಾಲ, ದಂತವಕ್ರ ಮುಂತಾದ ರಾಕ್ಷಸರೊಡನೆ ಕೃಷ್ಣನೇ ಯುದ್ಧಮಾಡಿ ಅವರನ್ನು ಸಂಹರಿಸಬೇಕಾಯಿತು. ಇದರಿಂದ ಕೃಷ್ಣನಿಗಿದ್ದ ಶತ್ರುಗಳ ಸಮೂಹ, ಅವನ ಕಾರ್ಯವ್ಯಾಪ್ತಿ ಎಷ್ಟೆಂಬುದು ಇವು ನಮಗೆ ಸ್ಪಷ್ಟವಾಗುತ್ತವೆ.

ಶ್ರೀಕೃಷ್ಣನು ನಡೆಸಿದ ಯುದ್ಧ ಪ್ರಸಂಗಗಳನ್ನು ಬದಿಗಿಟ್ಟು, ಈಗ ಅವನಲ್ಲಿ ಕಂಡುಬರುವ ಮಾನವೀಯ ಗುಣಗಳನ್ನು ನಾವು ಪರಿಶೀಲಿಸಬಹುದು. ಮಧುರೆಗೆ ಅವನ ಬರುವಿಕೆ, ತಂದೆ ತಾಯಿಗಳಾದ ವಸುದೇವದೇವಕಿಯರಿಗೆ ಬೆಂದ ನೆಲಕ್ಕೆ ಮಳೆ ಬಂದಂತಾಯಿತು. ರಾಮಕೃಷ್ಣರು ಅವರಿಗೆ ಅಂಥ ಹರುಷವನ್ನು ತಂದುಕೊಟ್ಟರು. ಇದರಿಂದ ಅವರಿಗೆ ಬಾಲ್ಯದಲ್ಲಿ ಸಾಕುತಾಯಿ ತಂದೆಯರಾದ ನಂದಗೋಪ ಯಶೋದೆಯರಲ್ಲಿ ಪ್ರೀತಿ ವಿಶ್ವಾಸಗಳು ಏನೂ ಕಡಮೆಯಾಗಲಿಲ್ಲ. ಅವನು ಸಾಕ್ಷಾತ್ ವಿಷ್ಣುವಿನ ಅವತಾರ; ನಿಜ. ಆದರೆ ಮನುಷ್ಯನಾಗಿ ಹುಟ್ಟಿದಮೇಲೆ, ಇಲ್ಲಿಯವರಂತೆ ಆಚರಿಸಿ, ಅವರಿಗೆ ಮೇಲ್ಪಂಕ್ತಿಯಾಗಬೇಡವೇ? ಕಂಸವಧೆ, ರಾಜ್ಯದಲ್ಲಿ ಉಗ್ರಸೇನನ ಪ್ರತಿಷ್ಠೆ ಇವೆಲ್ಲ ನಡೆದಮೇಲೆ, ಕೃಷ್ಣನು ಅಣ್ಣನೊಡನೆ ಸಾಂದೀಪಿನಿ ಗುರುವಿನ ಬಳಿ ಎಲ್ಲರಂತೆ ಶುಶ್ರೂಷೆಮಾಡಿ, ಸಮಸ್ತ ವಿದ್ಯೆಗಳನ್ನೂ ಕಲಿತನು ಬಲಭದ್ರನಿಗೂ ಕೃಷ್ಣನಿಗೂ ಮದುವೆಯಾಯಿತು. ಶ್ರೀಕೃಷ್ಣನು ರುಕ್ಮಿಣಿಯನ್ನು ಮದುವೆಯಾದದ್ದು ಅವನ ಸಾಹಸ ಪ್ರೇಮಗಳ ದ್ಯೋತಕ ಪ್ರಸಂಗವೇ ಆಗಿದೆ. ರುಕ್ಮಿಣಿಯ ಅಣ್ಣ ರುಕ್ಮಿ ಕೃಷ್ಣದ್ವೇಷಿ. ತಂಗಿಯನ್ನು ಶಿಶುಪಾಲನಿಗೆ ಕೊಡಬೇಕೆಂದು ಅವನು ಎಲ್ಲ ಸಿದ್ಧತೆ

ಗಳನ್ನು ಮಾಡಿಕೊಂಡಿದ್ದನು. ಆದರೆ ಬ್ರಾಹ್ಮಣರ ಮೂಲಕ ಅವಳು ಸಲ್ಲಿಸಿದ ಪ್ರಾರ್ಥನೆಯಿಂದ ಮನಕರಗಿದ ಶ್ರೀಕೃಷ್ಣನು, ಶತ್ರುಗಳನ್ನು ಎದುರಿಸಿದನು; ಅವಳನ್ನು ಎತ್ತಿಕೊಂಡು ಬಂದು ದ್ವಾರಕಿಯಲ್ಲಿ ಮದುವೆಯಾದನು. ಶ್ರೀಕೃಷ್ಣನ ಅಂತಃಪುರ ಬೆಳೆಯಲು ಇದು ನಾಂದಿಯಾಯಿತು.

ಕಂಸನ ಭಯದಿಂದ ಬೇರೆಬೇರೆ ದೇಶಗಳಲ್ಲಿ ನೆಲೆಸಿದ್ದ ಯಾದವರನ್ನು ಕರೆಸಿಕೊಂಡು ಶ್ರೀಕೃಷ್ಣನು ಅವರನ್ನು ಮಥುರೆಯಲ್ಲಿ, ಆ ಬಳಿಕ ದ್ವಾರಕೆಯಲ್ಲಿ ನೆಲಸುವಂತೆ ಮಾಡಿದನಷ್ಟೆ. ಈ ಕಾರ್ಯದಿಂದ, ಯಾದವರ ಶತ್ರುಗಳ ನಿಗ್ರಹವಾಗಿ ಅವನು ಸಮಸ್ತ ಯಾದವರ ಗೌರವಕ್ಕೆ ಪಾತ್ರನಾಗಿದ್ದನು. ಬಲರಾಮನು ಶ್ರೀಕೃಷ್ಣನಿಗಿಂತ ಹಿರಿಯನಾಗಿದ್ದರೂ, ಇವನ ಮಾತನ್ನು ಮೀರುತ್ತಿರಲಿಲ್ಲ. ತಮ್ಮನ ನೀತಿವಿಚಕ್ಷಣೆಯಲ್ಲಿ ಅವನಿಗೆ ಅಂಥ ಗಾಢವಾದ ನಂಬಿಕೆ. ಮೇಲಾಗಿ ಶ್ರೀಕೃಷ್ಣನ ಆಕರ್ಷಣಶಕ್ತಿಯೇ ಆ ರೀತಿಯದು. ಆದರೇನು, ಕೃಷ್ಣನಿಗೆ ಯಾದವರಲ್ಲಿಯೇ ದ್ವೇಷಿಗಳಾಗಲಿ, ಅಪವಾದ ಹೊರಿಸುವವರಾಗಲಿ ಇರದೆ ಇರಲಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಮಾತ್ರ ಇಲ್ಲಿ ಕೊಡಬಹುದು. ಸೂರ್ಯಾರಾಧನೆಯಿಂದ ಪ್ರತಿ ದಿನವೂ ಎಂಟು ಭಾರದ ಚಿನ್ನವನ್ನು ಕೊಡುವ ಸ್ಯಮಂತಕ ಮಣಿಯನ್ನು ಪಡೆದ ಸತ್ರಾಜಿತನಿಗೆ ಕೃಷ್ಣನು ಆ ಮಣಿಯನ್ನು ಯಾದವರಾಜನಿಗೆ ಕೊಡುವಂತೆ ಹೇಳಿದನು. ಆದರೆ ಆ ಮಾತನ್ನು ಸತ್ರಾಜಿತನು ನಡೆಸಿಕೊಡಲಿಲ್ಲ. ಒಮ್ಮೆ ಅದನ್ನು ಧರಿಸಿಕೊಂಡು ಹೋದ ಸತ್ರಾಜಿತನ ತಮ್ಮನು ಸಿಂಹದಿಂದ ಹತನಾದನು. ಸಿಂಹ ಕರಡಿಯಿಂದ ಹತವಾಯಿತು. ಆ ಕರಡಿ ಸ್ಯಮಂತಕಮಣಿಯನ್ನು ತನ್ನ ಗುಹೆಗೆ ಕೊಂಡೊಯ್ದಿತು. ಆದರೆ ಅಪವಾದ ತಲೆಗೆ ಕಟ್ಟಿತು. ಇದನ್ನು ಸಹಿಸದೆ ಕೃಷ್ಣನು ಕರಡಿಯನ್ನು ಹುಡುಕಿಕೊಂಡು ಹೋಗಿ, ಜಾಂಬವಂತನಾದ ಅವನೊಡನೆ ಯುದ್ಧಮಾಡಿ ಮಣಿಯನ್ನು ತಂದುಕೊಟ್ಟನು. ಶ್ರೀಕೃಷ್ಣನ ನೀತಿ ಯಾವಾಗಲೂ ಒಂದು ಕಲ್ಲುಹೊಡೆದು ಎರಡು ಹಣ್ಣು ಕೆಡಹುವ ರೀತಿ. ಇತ್ತ ಅವನಿಗೆ ಅಪವಾದ ತಪ್ಪಿತು; ಅತ್ತ ಸತ್ರಾಜಿತನಿಗೆ ಮಣಿದಕ್ಕಿತು. ತನಗೆ ಸತ್ರಾಜಿತನು ಕೊಡಬಂದ ರತ್ನವನ್ನು ಕೃಷ್ಣನು ಸ್ವೀಕರಿಸಲಿಲ್ಲ; ಅದಕ್ಕೆ ಪ್ರತಿಯಾಗಿ ಸತ್ಯಭಾಮೆಯೆಂಬ ಕನ್ಯಾರತ್ನವನ್ನು ಸ್ವೀಕರಿಸಿದನು. ಈ ಮೊದಲೇ ಕರಡಿಯೊಡನೆ ನಡೆಸಿದ ಯುದ್ಧದಲ್ಲಿ ಜಾಂಬವತಿಯನ್ನು ಪಡೆದಿದ್ದನು.

ತನ್ನನ್ನು ನಂಬಿದವರನ್ನು ಎಂದಿಗೂ ಕೈಬಿಡದೆ, ಅವರನ್ನು ಉದ್ಧರಿಸಿದುದು ಶ್ರೀಕೃಷ್ಣನ ವ್ಯಕ್ತಿತ್ವದ ಇನ್ನೊಂದು ವೈಶಿಷ್ಟ್ಯ. ಯಾದವರಲ್ಲಿ ಅಕ್ರೂರ, ಉದ್ಧವ, ಸಾತ್ಯಕಿ ಇವರು ಇವನಿಗೆ ಅತ್ಯಂತ ಪ್ರಿಯರಾಗಿದ್ದರು. ಶ್ರೀಕೃಷ್ಣನು ಇವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ರೀತಿಯ ಅನುಗ್ರಹವನ್ನು ತೋರಿದನು. ಮಥುರೆಗೆ ಇವರನ್ನು ಕರೆತರಲು ಬಂದ ಅಕ್ರೂರನಿಗೆ ಯಮುನಾನದಿಯಲ್ಲಿ ಸ್ನಾನಮಾಡುವಾಗ ವಿಶ್ವರೂಪವನ್ನು ತೋರಿಸಿದನು. ಉದ್ಧವನಿಗೆ ತಾನೇ ಸಾಕ್ಷಾತ್ ಧರ್ಮೋಪದೇಶ ಮಾಡಿದನು. ಪಾಂಡವರನ್ನು ಸಂರಕ್ಷಿಸಿದಂತೆಯೇ ಅಶ್ವತ್ಥಾಮನಿಂದ ಆದ ರಾತ್ರಿಯ

ಕಗ್ಗೊಲೆಯಿಂದ ಸಾತ್ಯಕಿಯನ್ನು ಸಂರಕ್ಷಿಸಿದನು. ಇದು ಶ್ರೀ ಕೃಷ್ಣನ ಸ್ವಜನಪಕ್ಷಪಾತದ ಮಾತಾದರೆ, ಅವನು ತನ್ನ ಬಾಲ್ಯಸ್ನೇಹಿತನಾದ ಕುಚೇಲನಲ್ಲಿ ತೋರಿದ ಪ್ರೀತಿ ವಿಶ್ವಾಸಗಳು ಅಮೋಘವಾದುವು; ಮಾನವರಿಗೆ ಆದರ್ಶಪ್ರಾಯವಾದುವು. ತಾನು ಲಕ್ಷ್ಮೀಪತಿ, ಸ್ನೇಹಿತನಾದರೋ ಬಡವ ಎಂದು ತಾರತಮ್ಯವನ್ನೇನೂ ತೋರದೆ, ಅವನನ್ನು ಆದರದಿಂದ ಉಪಚರಿಸಿದನು. ತಮ್ಮ ವಿದ್ಯಾಭ್ಯಾಸದ ಸುಖದ ದಿನಗಳ ನೆನಪುಗಳನ್ನು ಮನಸ್ಸಿಗೆ ತಂದುಕೊಂಡು ಅವನೊಡನೆ ಕಾಲ ಕಳೆದನು. ಅವನ ಹೆಂಡತಿ ತಿರಿದುತಂದುಕೊಟ್ಟಿದ್ದ 'ನಾಲ್ಕು ಮುಷ್ಟಿಯ ಪೃಥಕ ತಂಡುಲವ'ನ್ನು ನಿಸ್ಸಂಕೋಚವಾಗಿ ಕೃಷ್ಣನು ರುಕ್ಮಿಣಿಯೊಡನೆ ತಿಂದನು. ಭಕ್ತರ ವಿಷಯದಲ್ಲಿ ಶ್ರೀಕೃಷ್ಣನ ಘೋಷಣೆ ಇದು:

ಒಂದು ಫಲವೊಕ್ಕುಡಿತೆ ಜಲ ಮೇ
ಣೊಂದು ಹೂ ಒಂದೆಲೆಗಳೆಂಬಿವ
ನೊಂದು ಮನದೊಳಗೆನ್ನನೇ ಭಾವಿಸುತ ಭಕುತಿಯಲಿ
ತಂದುಕೊಟ್ಟರೆ ಕೊಂಬೆನುಂಬೆನು
ತಂದೆ ಕೇಳೆನ್ನವರ ಪೂಜೆಯು
ಕುಂದು ಹೆಚ್ಚಿನ ದೈವವಾನಲ್ಲೆಂದನಸುರಾರಿ

ಕುಚೇಲನು ಶ್ರೀಕೃಷ್ಣನಿಗೆ ಕೊಟ್ಟಿದ್ದು ಒಂದು ಹಿಡಿ ಅವಲಕ್ಕಿ; ಇದಕ್ಕೆ ಪ್ರತಿಯಾಗಿ ಇವನು ಸ್ನೇಹಿತನಿಗೆ ಅನುಗ್ರಹಿಸಿದ್ದು ಮಹದೈಶ್ವರ್ಯ. (ಈ ಪ್ರಸಂಗಕ್ಕೆ ಸಂವಾದಿಯಾಗಿ ಮಹಾಭಾರತದಲ್ಲಿ ಬರುವ ದ್ರೋಣದ್ರುಪದರ ಪ್ರಸಂಗವನ್ನು ಹೋಲಿಸಿ, ಅಲ್ಲಿ ಕರ್ಮ ಹೇಗೆ ಮಂಗೆ ಮರಿಯಿಡುತ್ತ ಹೋಯಿತೆಂಬುದನ್ನು ನೆನೆಯಬಹುದು.) ಶ್ರೀಕೃಷ್ಣನು ಭಕ್ತಬಂಧುವೆನ್ನುವುದಕ್ಕೆ ಕುಚೇಲೋಪಾಖ್ಯಾನಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ.

ಇದೆಲ್ಲಕ್ಕಿಂತಲೂ ಹೆಚ್ಚಾಗಿ ಗಮನಿಸಬೇಕಾದ್ದು ಶ್ರೀಕೃಷ್ಣನು ಪಾಂಡವರಲ್ಲಿ ತೋರಿದ ಅವ್ಯಾಜ ಪ್ರೇಮವನ್ನು. ಪಾಂಡವರ ಮೇಲಣ ಅಭಿಮಾನಕ್ಕೆ ಕೃಷ್ಣನಿಗೆ ನಾನಾ ಕಾರಣಗಳಿದ್ದವು. ಇವುಗಳಲ್ಲಿ ಮೊದಲನೆಯದಾಗಿ ಪಾಂಡವರು ಶ್ರೀಕೃಷ್ಣನಿಗೆ ಸೋದರತ್ತೆಯಾದ ಕುಂತಿಯ ಮಕ್ಕಳು. ದ್ರೌಪದಿಯ ಸ್ವಯಂವರ ಕಾಲದಲ್ಲಿ ಕುಂಬಾರನ ಮನೆಯಲ್ಲಿ ಕೃಷ್ಣನನ್ನು ಕಂಡಾಗ ಕುಂತಿ ಎಂದು ತನ್ನ ಮಕ್ಕಳನ್ನು ಅವನಿಗೆ ಒಪ್ಪಿಸಿದಳೋ, ಅಂದಿನಿಂದಲೇ ಪಾಂಡವರ ರಕ್ಷಣೆಯ ಭಾರ ಅವನದಾಯಿತು. ಎರಡನೆಯದಾಗಿ ಪಾಂಡವರು ಧರ್ಮಾತ್ಮರು. 'ಯತೋ ಧರ್ಮಃ ತತೋ ಜಯಃ' ಎಂದಲ್ಲವೆ ಕೃಷ್ಣಪ್ರತಿಜ್ಞೆ? ಮೂರನೆಯದಾಗಿ ಶ್ರೀಕೃಷ್ಣನಿಗೆ ಭೂಭಾರ ಹರಣಕ್ಕೆ ಒಂದು ಮಾಧ್ಯಮ ಅವಶ್ಯವೆನಿಸಿತ್ತು. ಧರ್ಮಾತ್ಮರಾದ ಪಾಂಡವರನ್ನು ಅವನು ಆ ಮಾಧ್ಯಮವನ್ನಾಗಿ ಬಳಸಿಕೊಂಡನು. ಪಾಂಡವರಲ್ಲಿ ಅರ್ಜುನನ ಮೇಲೆ ಹಾಗೂ ದ್ರೌಪದಿಯ ಮೇಲೆ ಅವನಿಗೆ ಅಗಾಧವಾದ ಪ್ರೇಮ ಮತ್ತು ಕನಿಕರ! ಮಹಾಭಾರತದ ಯುದ್ಧಕ್ಕೆ ಮುಂಚೆ, ಯುದ್ಧದಲ್ಲಿ ಪಾಂಡವರಿಗೆ ವಜ್ರಪಂಜರವಾಗಿ

ನಿಂತು, ಬಹುವಿಧವಾದ ಕುತ್ತುಗಳಿಂದ ಅವರನ್ನು ಪಾರುಮಾಡಿದನು. ಅಶ್ವತ್ಥಾಮನು ಪ್ರಯೋಗಿಸಿದ ಐಷಿಕಾಸ್ತ್ರದಿಂದ ಪಾಂಡವರ ವಂಶವನ್ನು ಉಳಿಸಲು ತನ್ನ ಶಕ್ತಿಯೆಲ್ಲವನ್ನೂ ಪ್ರಯೋಗಿಸಿದನು. ಅಣ್ಣನ ವಿರುದ್ಧ ಆಟಹೂಡಿ, ಸುಭದ್ರೆಯನ್ನು ಅರ್ಜುನನು ವರಿಸುವಂತೆ ಮಾಡಿದನು. ತಾನು ಹೆಚ್ಚು, ಅರ್ಜುನ ಕಡಮೆ ಎಂಬ ಭೇದಭಾವವಿಲ್ಲದೆ ಮಹಾಭಾರತ ಯುದ್ಧದಲ್ಲಿ ಅರ್ಜುನನ ಸಾರಥಿಯಾಗಿ, ಸಂದಿಗ್ಧ ಸಮಯಗಳಲ್ಲಿ ಅವನಿಗೆ ವಿವೇಕ ಹೇಳಿ, ಮಾರ್ಗದರ್ಶನ ಮಾಡಿದನು; ಕಷ್ಟಗಳಿಂದ ಅವನನ್ನು ಪಾರುಮಾಡಿದನು. ದ್ರೌಪದಿಯ ವಿಷಯದಲ್ಲಿ ಕೃಷ್ಣನಿಗೆ ತುಂಬ ಕನಿಕರ. ತುಂಬು ಸಭೆಯಲ್ಲಿ ದುಷ್ಟರಾದ ಕೌರವರು ಸೀರೆ ಸೆಳೆದಾಗ ದ್ರೌಪದಿಯ ಮಾನರಕ್ಷಣೆಯಾದದ್ದು ಶ್ರೀಕೃಷ್ಣನ ದಯೆಯಿಂದ ತಾನೇ! ಆಪತ್ತಿನ ರಕ್ಷಣೆಗಾಗಿ ದ್ರೌಪದಿಗೆ ಇದ್ದದ್ದು ಎರಡೇ ಸ್ಥಳ—ಒಂದು, ಭೀಮನ ವಕ್ಷಸ್ಥಳ; ಇನ್ನೊಂದು, ಕೃಷ್ಣನ ಪಾದಾರವಿಂದ. ಒಟ್ಟಿನಲ್ಲಿ ಶ್ರೀಕೃಷ್ಣನು ಪಾಂಡವರ ಮೂಲಕ ತನ್ನ ಜೀವಿತೋದ್ದೇಶದ ಒಂದು ಭಾಗವನ್ನು, ಹಾಗೆಯೇ ಲೋಕಕಲ್ಯಾಣವನ್ನು ಸಾಧಿಸಿದನು.

ಇದರಂತೆಯೇ ತನ್ನವರೇ ಆದ ಯಾದವರು ತಮ್ಮೊಳಗೆ ಹೊಡೆದಾಡಿ ನಾಶವಾದುದನ್ನು ತನ್ನ ಕಣ್ಣುಗಳಿಂದಲೇ ಕಂಡರೂ, ನಿರ್ಲಿಪ್ತನಾಗಿದ್ದು ತಾನೇ ಒಬ್ಬ ಅನಾಮಧೇಯ ಬೇಡನ ಬಾಣದಿಂದ ಏಟುತಿಂದು ನಿರ್ಯಾಣ ಹೊಂದಿದನು. ಕೊನೆಯ ಕಾಲದಲ್ಲಿ ತಾನು ಮಾಡಿದ ಅವತಾರದ ಉದ್ದೇಶ ಸಂಪೂರ್ಣವಾಯಿತೆಂಬ ತೃಪ್ತಿ ಶ್ರೀಕೃಷ್ಣನಿಗಿದ್ದಿರಬೇಕು.

ಭಗವದ್ಗೀತೆಯ ಉಪದೇಶ ಬೇರೆಯಲ್ಲ, ತನ್ನ ಬದುಕಿನ ರೀತಿ ಬೇರೆಯಲ್ಲ ಎಂಬಂತೆ ಶ್ರೀಕೃಷ್ಣನು ಬಾಳಿದನು. ಅವನ ಬದುಕು ವೈವಿಧ್ಯಪೂರ್ಣವೂ ವರ್ಣರಂಜಿತವೂ ಆಗಿದೆ. ಕಷ್ಟಗಳೂ, ಶತ್ರುಗಳೂ ಅವನನ್ನು ಸುತ್ತುವರಿದಿದ್ದರೂ, ಅವನು ಎಂದೂ ನಿರ್ವಿಣ್ಣನಾಗದೆ, ತಲೆಯ ಮೇಲೆ ಕೈಹೊತ್ತುಕೊಂಡು ಕುಳಿತುಕೊಳ್ಳದೆ, ಸ್ವಬಲದಿಂದಲೋ ಇತರರನ್ನು ಪ್ರೇರಿಸಿಯೋ, ಒಟ್ಟಿನಲ್ಲಿ ಅವುಗಳನ್ನು ನಿವಾರಿಸಿದನು. ವಸುದೇವ ದೇವಕಿಯರ ಹಾಗೂ ಬಲರಾಮನ, ಅಷ್ಟೇಕೆ, ಎಲ್ಲ ಹಿರಿಯರ, ಯಾಜಮಾನ್ಯವನ್ನು ಒಪ್ಪಿಕೊಂಡಿದ್ದರೂ, ಎಲ್ಲರೂ ತನ್ನ ಮಾತಿಗೆ, ಸಲಹೆಗಳಿಗೆ, ಮನ್ನಣೆ ಕೊಡುವಂತೆ ಮಾಡಿಕೊಂಡದ್ದು ಅವನ ವ್ಯಕ್ತಿತ್ವದ ಹಿರಿಮೆಗೆ, ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ಶ್ರೀಕೃಷ್ಣನ ಬಿಡುವಿಲ್ಲದ ಬದುಕು ಹೂವಿನ ಹಾಸಿಗೆಯೇನಾಗಿರಲಿಲ್ಲ. ಹೊರಗಡೆ ಶತ್ರುಗಳ ಕಾಟ, ಒಳಗೆ ಯಾದವೀಕಲಹ, ದೊಡ್ಡದಾದ ಅಂತಃಪುರದ ಸುಧಾರಣೆ. ತನ್ನನ್ನೇ ನಂಬಿದ್ದವರಿಗೆ ಸಲಹೆ ಸಹಕಾರಗಳು—ಇವುಗಳನ್ನು ಪರಿಪಾಲಿಸುವುದರಲ್ಲಿ ಅವನ ಶ್ರದ್ಧೆ ನಿಷ್ಠೆಗಳು ಸುವ್ಯಕ್ತವಾಗುತ್ತವೆ. ಶ್ರೀಕೃಷ್ಣನು ಮಾಡಿದ ಕಾರ್ಯಗಳನ್ನು, ಅನುಸರಿಸಿದ ರೀತಿ ನೀತಿಗಳನ್ನು, ಅನೇಕವೇಳೆ ಒಪ್ಪುವುದಕ್ಕಾಗದಿದ್ದರೂ ಕಾರ್ಯಸಿದ್ಧಿಯ ಒಟ್ಟಾಗಿ ಗುರಿಯ ಸಾಧನೆಯ ದೃಷ್ಟಿಯಿಂದ ಅವುಗಳನ್ನು ನೋಡಿದರೆ ಇವುಗಳ ಮರ್ಮ ಅರ್ಥವಾಗುತ್ತದೆ. ಶ್ರೀಕೃಷ್ಣನು

ಮಹಾವಿಷ್ಣುವಿನ ಪೂರ್ಣಾವತಾರ; ಆದ್ದರಿಂದ ಇಷ್ಟೆಲ್ಲ ಕಾರ್ಯಗಳನ್ನೂ ಪವಾಡಗಳನ್ನೂ ಸಾಧಿಸಲು ಸಾಧ್ಯವಾಯಿತು ಎನ್ನುವುದು ಕವಿಯ ದೃಷ್ಟಿಯೆಂದು ಈ ಮೊದಲೇ ಹೇಳಿದೆ. ಈ ಅಂಶವನ್ನು ಸ್ವಲ್ಪ ಬದಿಗಿಟ್ಟು, ಮಾನವನಾಗಿ ದೇವತ್ವಕ್ಕೆ ಏರಿದವನು ಶ್ರೀಕೃಷ್ಣ ಎಂದುಕೊಂಡರೆ ಮಾನವಕೋಟಿಗೇ ಧೈರ್ಯ.

ಅಸುರನ ಅಂಶವಾಗಿದ್ದ ಕಂಸನು ತಂಗಿಯಾದ ದೇವಕಿಯಲ್ಲಿ ವಿಶ್ವಾಸ, ವಸುದೇವನಲ್ಲಿ ಪ್ರೀತಿ ಇದ್ದರೂ ನಾರದನ ಮಾತಿನಂತೆ ಅವರಲ್ಲಿ ದ್ವೇಷವನ್ನು ಕಟ್ಟಿಕೊಂಡನು; ಅವರನ್ನು ಸೆರೆಮನೆಗೆ ನೂಕಿಸಿ, ಹಿಂಸೆಗೆ ಗುರಿಮಾಡಿದನು. ಯೋಗಮಾಯೆಯ ಮಾತಿನಿಂದ ಎಚ್ಚೆತ್ತು ಅವರನ್ನು ಸೆರೆಯಿಂದ ಬಿಡಿಸಿ, ತನ್ನ ಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟು, ಅವರ ಕ್ಷಮೆ ಬೇಡಿದನು. ಇದು ಕಂಸನ ಮಾನವೀಯ ಗುಣಕ್ಕೆ ದ್ಯೋತಕವಾಗಿದೆ. ತಂಗಿಯ ಮದುವೆಯಲ್ಲಿ ಅವಳ ಮೇಲೆ ಅಮೋಘವಾದ ಬಳುವಳಿಗಳನ್ನೇ ವರ್ಷಿಸಿದನು. ತಾನೇ ರಥವನ್ನು ನಡೆಸಿ ಅವರನ್ನು ಮೆರವಣಿಗೆಯಲ್ಲಿ ಕರೆತಂದನು. ಆದರೆ ತಾನು ಉಳಿಯಬೇಕೆಂಬ ಪ್ರಸಂಗ ಬಂದಾಗ, ದುಷ್ಟಮಂತ್ರಿಗಳೊಡನೆ ಆಲೋಚಿಸಿ, ಮಾವ ಜರಾಸಂಧನ ಬಲವನ್ನು ನಂಬಿ, ವಿಷ್ಣುದ್ವೇಷಿಯಾಗಿ ತನ್ನ ಸಾವನ್ನು ತಾನೇ ತಂದುಕೊಂಡನು.

ಬಲರಾಮನು ಶ್ರೀಕೃಷ್ಣನಿಗಿಂತ ಹಿರಿಯ; ಬಲಶಾಲಿ. ಆದರೆ ತುಂಬ ಮುಂಗೋಪಿ. ಎಷ್ಟೋ ವೇಳೆ ತಮ್ಮನ ಉಪಾಯವಾದ ವರ್ತನೆಯಿಂದ ಬೇಸ್ತು ಬೀಳುತ್ತಾನೆ. ಸುಭದ್ರಾಪಹರಣ ಪ್ರಸಂಗ ಈ ಹೇಳಿಕೆಯನ್ನು ಸಮರ್ಥಿಸುವುದಕ್ಕೆ ಉತ್ತಮ ನಿದರ್ಶನ. ಆದರೂ ಎಂದೂ ಅವನು ಶ್ರೀಕೃಷ್ಣನ ಮಾತನ್ನು ಮೀರದಿರುವುದು ಅವನ ಭ್ರಾತೃವಾತ್ಸಲ್ಯಕ್ಕೂ ಶ್ರೀಕೃಷ್ಣನ ವ್ಯಕ್ತಿತ್ವದ ಆಕರ್ಷಣೆಗೂ ಸಾಕ್ಷಿಯಾಗಿ ನಿಲ್ಲುತ್ತದೆ. ಹೀಗೆಯೇ ಇಲ್ಲಿ ಬರುವ ಇತರ ಪಾತ್ರಗಳ ವಿಚಾರವಾಗಿಯೂ ಹೇಳಬಹುದು. ಭಾಗವತದಲ್ಲಿ, ಅದರಲ್ಲೂ ಅದರ ದಶಮಸ್ಕಂಧದಲ್ಲಿ, ಪಾತ್ರಗಳ ಪ್ರದರ್ಶನವೇ ನಡೆದಿದೆಯೆಂದು ಹೇಳಬಹುದು.

ಭಕ್ತಿಯನ್ನು ಒಂದು ರಸವನ್ನಾಗಿ ಪರಿಗಣಿಸುವುದಾದರೆ ಭಾಗವತದಲ್ಲಿ ಪ್ರಧಾನವಾದ ರಸ ಭಕ್ತಿ. ಅಲ್ಲದೆ ಮಿಕ್ಕ ರಸಗಳು ಅದರಲ್ಲಿ ಸನ್ನಿವೇಶಗಳಿಗೆ ತಕ್ಕಂತೆ ಸಮಾವೇಶಗೊಂಡಿವೆ.

'ಕನ್ನಡ ಭಾಗವತ' ಕನ್ನಡ ಸಾಹಿತ್ಯದಲ್ಲಿ, ಕನ್ನಡ ನಾಡಿನಲ್ಲಿ ಜನರ ಮೆಚ್ಚಿಗೆಗೆ ಇಂದಿಗೂ ಬಹುಮಟ್ಟಿಗೆ ಪಾತ್ರವಾಗಿರುವ ಜನಪ್ರಿಯ ಷಟ್ಪದೀಕಾವ್ಯ. ಇಂಥ ಕಾವ್ಯವನ್ನು ಮುಂದಿನ ಕವಿಪೀಳಿಗೆಯಲ್ಲಿ ಒಬ್ಬ ಕವಿಯೂ ಸ್ಮರಿಸದಿರುವುದು ಆಶ್ಚರ್ಯಕರವಾದ ಸಂಗತಿ. ಹಾಗೆಯೇ ಈ ಭಾಗವತದ ಕವಿಗಳು ಪಂಪಕುಮಾರವ್ಯಾಸರಂತೆ ವ್ಯಾಸಶುಕರನ್ನು ಮಾತ್ರ ನೆನೆದು, ಹಿಂದಿನ ಯಾವ ಕನ್ನಡ ಕವಿಯನ್ನೂ ಸ್ಮರಿಸಿಲ್ಲವೆಂಬುದೂ ಒಂದು ಸೋಜಿಗವೇ. ಆದರೆ ಈ ಕೃತಿಯ ಮೇಲೆ ಹಿಂದಿನ ಯಾವ ಯಾವ ಕನ್ನಡ ಕವಿಗಳ ಪ್ರಭಾವ ವಿಶೇಷವಾಗಿ ಬಿದ್ದಿದೆಯೆಂದು ಹೇಳುವುದು ಕಷ್ಟ

ವಾದರೂ, ಭಾಗವತದ ರಚನೆಗಿಂತ ಕೆಲವು ದಶಕಗಳ ಹಿಂದೆ ಹುಟ್ಟಿ, ಕನ್ನಡನಾಡು ಗುಡಿಗಟ್ಟುವಂತೆಮಾಡಿದ ಕುಮಾರವ್ಯಾಸನ ಭಾರತದ ಪ್ರಭಾವದಿಂದ ಈ ಕೃತಿ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಎರಡು ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ದಾಸಪಂಥದ ವೈಷ್ಣವ ಭಕ್ತಿ ತಾನೇ ತಾನಾಗಿ ವಿಜೃಂಭಿಸುತ್ತಿದ್ದ ಕಾಲ ಇದು. ಎರಡನೆಯದಾಗಿ ಕುಮಾರವ್ಯಾಸನಂಥ ಮಹಾಕವಿಯ ಪ್ರಭಾವದಿಂದ ತಪ್ಪಿಸಿಕೊಳ್ಳಲು ಯಾವ ಕವಿಗೆ ತಾನೆ ಸಾಧ್ಯವಾದೀತು ? 'ಕನ್ನಡ ಭಾಗವತ'ವೂ ಈ ಸೂತ್ರಕ್ಕೆ ಹೊರತಾಗಿಲ್ಲ.

ಕನ್ನಡ ಭಾಗವತ ಕುಮಾರವ್ಯಾಸ ಭಾರತದಿಂದ ಪ್ರಭಾವಿತವಾಗಿದೆಯೆನ್ನುವುದಕ್ಕೆ ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬಹುದು :

' ವೀರನಾರಾಯಣನೆ ಕವಿ ಲಿಪಿಕಾರ ಕುವರವ್ಯಾಸ ' ಎಂಬ ಕುಮಾರವ್ಯಾಸನ ಭಾವ ಕನ್ನಡ ಭಾಗವತದಲ್ಲಿ ಈ ರೀತಿ ರೂಪುಗೊಂಡಿದೆ.

ಕರ್ತೃವಿದಕೆ ಹರೀತಕೀ ಪುರ
ಭರ್ತೃಗೋಪೀನಾಥನಾಜ್ಞಾ
ಕರ್ತೃ ಲೇಖಕ ನಾನು ಕೃತಿಗೆ .... (೧೦, ೧೦೩–೩೫)

' ಕನ್ನಡ ಭಾಗವತ 'ದಲ್ಲಿ ಕುಮಾರವ್ಯಾಸನ ಪದ್ಯಗಳು ಅಚ್ಚೊತ್ತಿದು ಬಂದಿರುವ ಮಾತು ಹಾಗಿರಲಿ, ಅವನು ಪ್ರಯೋಗಿಸಿರುವ ಶಬ್ದಗಳೂ ಹಾಗೆಯೇ ಮೂಡಿ ಬಂದಿರುವುದನ್ನು ಇಲ್ಲಿ ಗಮನಿಸಬಹುದು. ಈ ಅಂಶವನ್ನು ದೃಢೀಕರಿಸುವುದಕ್ಕೆ ಕೆಲವು ಉದಾಹರಣೆಗಳು. ' ಮಂಗಳದವ ಬೆಳೆಗೈಯಲಕಟಕಟಂಗಳಿನ ಮಳೆಗಱೆದ ತೆಱನಾಯ್ತು ' (೧೦, ೨–೯) ಎಂಬ ವಾಕ್ಯ ' ಮಂಗಳದ ಬೆಳೆಗಿಂಗಳಿನ ಮಳೆ ಸುರಿದುದೆ ' ಎಂಬ ಕುಮಾರವ್ಯಾಸನ ಉಕ್ತಿಯನ್ನು ನೆನಪಿಗೆ ತರುತ್ತದೆ. ' ನಾರೀ ಚೋರ ', ' ಹೆಂಗಳ್ಳ ', ' ಹೊಂದಿದಸುಬಂದಂತೆ ' (೧೦, ೫–೧೮) ತೊಲಗಿದಸು ಬಂದಂತೆ (ಉ.ಪ.) ; ' ಬಾಂಧವವೃಂದ ದರುಶನವಧಿಕಾನಂದವಲ್ಲೈ ' (೧೦, ೫–೨) " ಬಂಧುಗಳ ದರುಶನ ಫಲವಲಾ ಸಂಸಾರ ತರುವಿಂಗೆ " (ಉ.ಪ.) ; " ಮಾಗಧನಿಟ್ಟ ಕಿಚ್ಚಿದು " (೧೦, ೪೨–೬೫) " ಧೃತರಾಷ್ಟ್ರ ನೃಪ ನೀನಿಟ್ಟ ಕಿಚ್ಚಿದು " (ಉ.ಪ.) ; " ಬಾಣಾವಳಿಯ ಮೊನೆಯಲಿ ಮಾತನಾಡು " (೧೦, ೬೦–೧೮), " ಮಾನ ನಿನ್ನದು ನಿನ್ನ ಭಕ್ತರ ಹಾನಿ ನಿನ್ನದು " (೧೦, ೬೯–೪೭) ; " ಮಾನ ನಿನ್ನದು ಭಕುತ ಜನದಪಮಾನ ನಿನ್ನದು " (ಉ.ಪ.) ; " ಮೇರು ಶಿಖರವ ಮುಗಿಲು ಮಿಂಚು ಗಳೋರಣದಿನಿಳಿವಂತೆ " (೧೦, ೭೦–೩)— ಈ ಎಡೆಗಳಲ್ಲಿ, ಅಲ್ಲದೆ ಇನ್ನೂ ಕೆಲವು ಎಡೆಗಳಲ್ಲಿ ಕುಮಾರವ್ಯಾಸನ ಮಾತುಗಳು ತೂರಿಬಂದಿವೆ.

ಇವೆಲ್ಲ ನಿಸ್ಸಂದೇಹವಾಗಿ ಕುಮಾರವ್ಯಾಸನ ವಾಗ್ಗುಂಫನ. ' ಕನ್ನಡ ಭಾಗವತ 'ದಲ್ಲಿ ತ್ರಿವಿಕ್ರಮಾವತಾರದ ವಿಶ್ವರೂಪದ ವರ್ಣನೆ (ಸ್ಕಂಧ ೮), ಬ್ರಹ್ಮನು ಮಾಡುವ ವಿಶ್ವರೂಪದ ವರ್ಣನೆ (ಸ್ಕಂಧ ೧೦) ಇವು ' ಕುಮಾರವ್ಯಾಸಭಾರತ 'ದ

ಉದ್ಯೋಗಪರ್ವದಲ್ಲಿ ಬರುವ ವಿಶ್ವರೂಪವರ್ಣನೆಯ ತದ್ವತ್ ಪ್ರತಿಕೃತಿ. ಬೃಂದಾವನದಲ್ಲಿ ಒಮ್ಮೆ ಬಂದ ವಸಂತಕಾಲದ ವರ್ಣನೆ, ಕನ್ನಡ ಭಾರತದಲ್ಲಿ ಪಾಂಡುವಿನ ಮರಣಕ್ಕೆ ಮುನ್ನ ಬರುವ ವಸಂತದ ವರ್ಣನೆಗೆ ಸಾಟಿಯಾಗಿದೆ. ಕೃಷ್ಣನು ಹುಟ್ಟಿದಾಗ ವಸುದೇವನು ಆಡುವ ಮಾತು ಇದು :

ಖಳನಿಕರ ಹೆಚ್ಚಿದರೆ ಭಾರವ
ಕಳೆಯಲೆಂದೇ ಧರೆಗೆ ತನ್ನಯ
ನಿಳಯದಲಿ ಮೈದೋರಿದ್ದೈ ತನಗಿಂದು ಶಿಶುವಾಗಿ (೧೦, ೩–೪೭)

ಇದಕ್ಕೆ ಸಂವಾದಿಯಾಗಿ ಧೃತರಾಷ್ಟ್ರನಿಗೆ ದುರ್ಯೋಧನನು ಕುಮಾರವ್ಯಾಸ ಭಾರತದ ಉದ್ಯೋಗಪರ್ವದಲ್ಲಿ ಈ ಮಾತನ್ನು ಹೇಳುತ್ತಾನೆ :

ಭಾರ ಹೆಚ್ಚಿದೊಡೊಡಲಿ ಭೂಮೀ
ನಾರಿ ಬಿನ್ನಹ ಮಾಡಿದಡೆ
ದೈತ್ಯಾರಿ ಬಿಜಯಂಗೈದನವನಿಗೆ ಮನುಜವೇಷದಲಿ (೫, ೫–೨೧)

ಇಂಥ ಪ್ರಸಂಗಗಳೂ ಅನುಕರಣಗಳೂ 'ಕನ್ನಡ ಭಾಗವತ'ದಲ್ಲಿ ವಿಪುಲವಾಗಿವೆ. ಒಂದೆರಡು ಕಡೆ–ಹೆಚ್ಚಿಲ್ಲ–ರಾಘವಾಂಕನ ಅನುಕರಣವನ್ನೂ ಗುರುತಿಸಬಹುದು. ಇದನ್ನು ಈ ಕವಿಗಳಲ್ಲಿ ಒಂದು ಕುಂದೆಂದು ಗಣಿಸಲಾಗದು. ಪ್ರಸಿದ್ಧ ಕವಿಕೃತಿಗಳ ಪಠನ, ಅಭ್ಯಾಸ ಹಾಗೂ ಮನನಗಳಿಂದ ಕೃತಿಕಾರನು ಸಹಜವಾಗಿಯೇ ಅವುಗಳ ಪ್ರಭಾವಕ್ಕೆ ಒಳಗಾಗುತ್ತಾನೆ. ಕುಮಾರವ್ಯಾಸನಂತಹ ಕವಿಗೇ ಪಂಪನ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿರುವಾಗ ಮಿಕ್ಕವರ ಮಾತೇನು ?

'ಕನ್ನಡ ಭಾಗವತ' ಕುಮಾರವ್ಯಾಸ ಭಾರತದಿಂದ ಪ್ರಭಾವಿತವಾಗಿದ್ದರೂ ಇದರ ರೀತಿ, ಶೈಲಿ ಅಕ್ಲಿಷ್ಟ ಹಾಗೂ ಪ್ರಸನ್ನ. ಕುಮಾರವ್ಯಾಸನು ತನ್ನ ಭಾವಾಭಿವ್ಯಕ್ತಿಗೆ ಎಂಥ ಪದವನ್ನೇ ಆಗಲಿ, ಬಳಸಲು ಹಿಂಜರಿಯುವುದಿಲ್ಲ. ಮಹಾಕವಿಯಾದ ಅವನನ್ನು ಭಾಷೆ ಅನುಸರಿಸಬೇಕಲ್ಲದೆ, ಅವನು ಭಾಷೆಯನ್ನಲ್ಲ ; ಭಾಷೆಯ ಪ್ರಯೋಗದಲ್ಲಂತೂ ಅವನು ಸ್ವಯಂ ಆಚಾರ್ಯಪುರುಷ. ಈ ವಿಷಯದಲ್ಲಿ ಅವನ ಸಮೀಪಕ್ಕೆ ಬರತಕ್ಕ ಕವಿ ಕನ್ನಡದಲ್ಲಿ ಮತ್ತೊಬ್ಬನಿಲ್ಲ. ಹೀಗಿರುವಲ್ಲಿ ಈ ವಿಷಯದಲ್ಲಿ ಭಾಗವತದ ಕರ್ತೃಗಳ ಮಾತು ದೂರವೇ ಉಳಿಯಿತು. ಆದರೆ ಒಂದು ಸಮಾಧಾನ. ಹನ್ನೊಂದನೆಯ ಸ್ಕಂಧದಲ್ಲಿ ಬರುವ 'ಮಾಡೂದು', 'ನೋಡೂದು' ಎಂಬಂತಹ ಕೆಲವು ಅಪಪ್ರಯೋಗಗಳನ್ನು ಬಿಟ್ಟರೆ, ಉಳಿದ ಸ್ಕಂಧಗಳ ಭಾಷೆ, ಸಂಸ್ಕೃತವೊಂದನ್ನು ಬಿಟ್ಟರೆ, ಅನ್ಯಭಾಷೆಯ ಪದಗಳಿಂದ ಆಕ್ರಾಂತವಾಗದೆ ಸಹಜವಾಗಿದೆ, ತಿಳಿಯಾಗಿದೆ ; ನಡುಗನ್ನಡದ ಭಾಷಾಸ್ವರೂಪಕ್ಕೆ ಅನುಗುಣವಾಗಿದೆ.

'ಕನ್ನಡ ಭಾಗವತ' ಸಂಸ್ಕೃತಭಾಗವತದ ಸಂಗ್ರಹ ಪದ್ಯಾನುವಾದ. ಸಂಸ್ಕೃತದ ಕವಿ ತನ್ನ ಕೃತಿಗೆ ಗದ್ಯ, ವಿವಿಧವೃತ್ತಗಳನ್ನು ಬಳಸಿಕೊಂಡಿದ್ದರೆ, ಕನ್ನಡ ಭಾಗವತದ ಕವಿಗಳು ಈ ತಮ್ಮ ಕೃತಿಯನ್ನು ಸಂಪೂರ್ಣವಾಗಿ ಭಾಮಿನೀಷಟ್ಪದಿಯಲ್ಲಿ ರಚಿಸಿ,

ತವ್ಕು ಸಾಹಸವನ್ನು ಮೆರೆದಿದ್ದಾರೆ. ಅಲ್ಲದೆ ಅವರು ಸಂಸ್ಕೃತ ಭಾಗವತವೊಂದಕ್ಕೇ ಕೃತಿರಚನೆಗೆ ಋಣಿಯಾಗಿರುವಂತೆ ತೋರುವುದಿಲ್ಲ. ಮಹಾಭಾರತ (ಅದರಲ್ಲೂ ಭಗವದ್ಗೀತೆ), ಕಾಳಿದಾಸ ಕವಿಯ ಕೃತಿಗಳು ಮೊದಲಾದ ಕೃತಿಗಳನ್ನು ಲಕ್ಷಿಸಿರುವಂತೆ ತೋರುವುದು. ಹಾಲ್ಕನೆಯ ಸ್ಕಂಧದ ಐದನೆಯ ಸಂಧಿಯಲ್ಲಿ ಬರುವ ಗಿರಿಜಾ ಕಲ್ಯಾಣದ ಪ್ರಸಂಗದಲ್ಲಿ ಕಾಳಿದಾಸನ 'ಕುಮಾರ ಸಂಭವ'ದ ಮೊದಲ ಐದು ಸರ್ಗಗಳ ಪ್ರಭಾವವನ್ನು ನಿಸ್ಸಂದೇಹವಾಗಿ ಕಾಣಬಹುದು. ಅದರಲ್ಲಿಯೂ ಪಾರ್ವತೀಪರಮೇಶ್ವರರ ಸಂಭಾಷಣೆಯಲ್ಲಂತೂ ಕುಮಾರಸಂಭವದ ಐದನೆಯ ಸರ್ಗದ ಪದ್ಯಗಳ ಅನುವಾದವನ್ನು ಕಾಣಬಹುದಾಗಿದೆ. ಮಹಾಭಾರತದ, ಅದರಲ್ಲೂ ಭಗವದ್ಗೀತೆಯ, ಪ್ರಭಾವಕ್ಕೆ ಒಂದೆರಡು ನಿದರ್ಶನಗಳನ್ನು ಮುಂದೆ ಕೊಡಬಹುದು :

ಕೃಷ್ಣನು ಸುದಾಮನಿಗೆ ಹೇಳುವ ಮಾತು

ಒಂದು ಫಲ ಒಕ್ಕುಡಿತೆ ಜಲ ಮೇ
ಣೊಂದು ಹೂ ಒಂದೆಲೆಗಳೆಂಬಿವ
ನೊಂದು ಮನದೊಳಗೆನ್ನನೇ ಭಾವಿಸುತ ಭಕುತಿಯಲಿ
ತಂದುಕೊಟ್ಟರೆ ಕೊಂಬೆನುಂಬೆನು (೧೦, ೯೬–೩೦)

ಈ ಪದ್ಯದ ಭಾವ ಕೆಳಗಿನ ಭಗವದ್ಗೀತೆಯ ಶ್ಲೋಕವನ್ನು ನೆನಪಿಗೆ ತರುತ್ತದೆಯಲ್ಲವೇ ?

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೯–೨೬ ॥

ನೃಗನೆಂಬ ಇಕ್ಷ್ವಾಕುವಂಶದ ದೊರೆ ಶಾಪವಿಮುಕ್ತನಾಗಿ ಬ್ರಹ್ಮಸ್ವಾಪಹಾರ ಸಲ್ಲದೆಂದು ಶ್ರೀ ಕೃಷ್ಣನಿಗೆ ಈ ರೀತಿ ಹೇಳುತ್ತಾನೆ.

ದತ್ತವಾಗಲಿ ಮೇಣು ತನ್ನೀ
ದತ್ತವಾಗಲಿ ಮೇಣು ಪರರಿಂ
ದುತ್ತಮದ್ವಿಜವೃತ್ತಿಯನು ಸಾಹಸದಲಪಹರಿಸಿ
ಮತ್ತೆ ವಿಷ್ಟೆಯ ಹುಳುಗಳಾಗಲು
ಪತ್ತು ಸಾವಿರವರುಷ ಹುಟ್ಟುವ
ರು (೧೦, ೮೩–೪೮)

ಈ ಪದ್ಯ ಅನೇಕ ಶಾಸನಗಳ ಕೊನೆಯಲ್ಲಿ ಬರುವ, ವೇದವ್ಯಾಸನದೆಂದು ಉಕ್ತವಾಗಿರುವ, ಕೆಳಗಿನ ಶ್ಲೋಕದ ಅನುವಾಗಿದೆ :

ಸ್ವದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾಂ ।
ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥

ಹೀಗೆಯೇ ಈ ಭಾಗವತದ ಕವಿಗಳು ಇತರ ಸಂಸ್ಕೃತ ಕವಿಗಳಿಂದಲೂ ಉಪಕೃತರಾಗಿರಬಹುದು. ಇದು ಸ್ವಾಭಾವಿಕವಾದದ್ದೇ. ಏಕೆಂದರೆ ಈ ಕವಿಗಳೆಲ್ಲ ಜ್ಞಾನಾರ್ಜನೆ ಹಾಗೂ ಜ್ಞಾನವಿತರಣೆಯ ಕಾರ್ಯದಲ್ಲಿ ನಿರತರಾಗಿದ್ದವರು.

ಒಂದು ಭಾಷೆಯಿಂದ ಬೇರೊಂದು ಭಾಷೆಗೆ ಒಂದು ಕೃತಿಯನ್ನು ಅನುವಾದ ಮಾಡುವಾಗ, ಅಕ್ಷರಕ್ಕೆ ಅಕ್ಷರವಿಟ್ಟು, ಪದಕ್ಕೆ ಪದವಿಟ್ಟು, ಅನುವಾದ ಮಾಡ ಬಹುದು. ಆದರೆ ಇದು ಸ್ವಲ್ಪ ದೂರ ನಿರ್ವಹಿಸಬಹುದಾದ ಶ್ರಮಸಾಧ್ಯವಾದ ಕೆಲಸ. ಏಕೆಂದರೆ ಎರಡು ಭಾಷೆಗಳ ಸ್ವರೂಪ ಭಿನ್ನವಾಗಿದ್ದು, ಅವುಗಳ ವಾಗ್ರೂಢಿ ಹಾಗೂ ಶೈಲಿಗುಣಗಳು ಭಿನ್ನ ಭಿನ್ನವಾಗಿರುತ್ತವೆ. ಅಲ್ಲದೆ ಒಂದು ಕಾವ್ಯವನ್ನು ಅನುವಾದ ಮಾಡುವಾಗ ಅದರ ಛಂದಸ್ಸನ್ನೂ ನಾವು ಪರಿಗಣಿಸಬೇಕು. ಹೀಗಾಗಿ ಭಾಷಾಂತರಕಾರ ಅನುವಾದ ಕಾರ್ಯದಲ್ಲಿ ಸ್ವಲ್ಪದೂರ ನೇರವಾಗಿ ನಡೆದು, ಬಳಿಕ ಮೂಲಕೃತಿಯ ಭಾವಗಳನ್ನು ಮಾತ್ರವೇ ಅನುವಾದ ಮಾಡಬಹುದು. ಅಲ್ಲದೆ ತನ್ನ ಸ್ವಂತ ಅಭಿಪ್ರಾಯಗಳನ್ನು ಅಲ್ಲಲ್ಲೇ ಸ್ವಲ್ಪ ಸೇರಿಸಬಹುದು. ಈ ಮಾತುಗಳು ಸಂಸ್ಕೃತದಿಂದ ಕನ್ನಡಕ್ಕೆ ಇಳಿದು ಬಂದಿರುವ ಈ ಭಾಗವತಕ್ಕೂ ಅನ್ವಯಿಸುತ್ತವೆ.

ಸಂಸ್ಕೃತ 'ಭಾಗವತ' ಪ್ರೌಢವಾದ ಭಾಷೆಯಲ್ಲಿ ವಿವಿಧ ವೃತ್ತಗಳಿಂದ ಕೂಡಿದ್ದರೆ, ಕನ್ನಡ ಭಾಗವತ ಆದಷ್ಟು ಮಟ್ಟಿಗೆ ತಿಳಿಯಾದ ಭಾಷೆಯಲ್ಲಿ ಭಾಮಿನೀ ಷಟ್ಪದಿಯಲ್ಲಿ ಮಾತ್ರ ರಚಿತವಾಗಿದೆಯೆಂದಮೇಲೆ, ಅನುವಾದಕರು ಎಂಥ ಕಷ್ಟವಾದ ಕೆಲಸವನ್ನು ಸಾಧಿಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. 'ಕನ್ನಡ ಭಾಗವತ' ಸಂಸ್ಕೃತ ಕೃತಿಯ ನೇರವಾದ ಸಂಗ್ರಹಾನುವಾದ. ಮೇಲೆ ಹೇಳಿದ ಅಂಶಗಳನ್ನು ಸಮರ್ಥಿಸಲು, ದಶಮಸ್ಕಂಧದಲ್ಲಿ ಬರುವ 'ಸ್ಯಮಂತಕೋಪಾಖ್ಯಾನ'ದ ಭಾಗ ವನ್ನು ಮಾದರಿಗಾಗಿ ಇಲ್ಲಿ ತೆಗೆದುಕೊಳ್ಳಬಹುದು.

ಮೂಲಭಾಗವತದ ಕಥೆಯನ್ನು ಈ ರೀತಿಯಾಗಿ ಸಂಗ್ರಹಿಸಬಹುದು:

ದ್ವಾರಕಾನಿವಾಸಿಯೂ ಸೂರ್ಯಭಕ್ತನೂ ಆದ ಸತ್ರಾಜಿತನು ಸೂರ್ಯನನ್ನು ಆರಾಧಿಸಿ ಸ್ಯಮಂತಕಮಣಿಯನ್ನು ಪಡೆದನು. ಮಣಿಯನ್ನು ಧರಿಸಿ ಬಂದ ಅವನ ತೇಜಸ್ಸನ್ನು ಕಂಡ ಜನರು ಅವನನ್ನು ಸೂರ್ಯನೆಂದೇ ಶಂಕಿಸಿದರು. ಈ ವಿಷಯ ವನ್ನು ಪಗಡೆಯಾಡುತ್ತಿದ್ದ ಕೃಷ್ಣನಿಗೆ ತಿಳಿಸಲು, ಅವನಾದರೋ ಮಣಿಯನ್ನು ಧರಿಸಿ ದವನು ಸತ್ರಾಜಿತ, ಅವನು ಸೂರ್ಯನಲ್ಲ ಎಂದು ಅವರ ಶಂಕೆಯನ್ನು ನಿವಾರಿಸಿದನು. ಸತ್ರಾಜಿತನು ಆ ಮಣಿಯನ್ನು ದೇವಮಂದಿರದಲ್ಲಿಟ್ಟು ಪೂಜಿಸುತ್ತಿರಲು, ಅದು ಪ್ರತಿ ದಿನವೂ ಎಂಟು ಭಾರದ ಚಿನ್ನವನ್ನು ಕೊಡುತ್ತಿತ್ತು. ಹೀಗಿರಲು ಒಂದು ದಿನ ಶ್ರೀಕೃಷ್ಣನು ಸತ್ರಾಜಿತನನ್ನು ಯಾದವ ರಾಜನಿಗಾಗಿ ಆ ಮಣಿಯನ್ನು ಕೊಡುವಂತೆ ಬೇಡಿದನು. ಸತ್ರಾಜಿತನು ಮಣಿಯ ಲೋಭದಿಂದ ಕೃಷ್ಣನ ಬೇಡಿಕೆಗೆ ಒಪ್ಪಲಿಲ್ಲ. ಒಮ್ಮೆ ಅವನ ತಮ್ಮನಾದ ಪ್ರಸೇನನು ಆ ಮಣಿಯನ್ನು ಧರಿಸಿ ಕುದುರೆಯನ್ನೇರಿ ಬೇಟೆಗೆ ಹೊರಟನು. ಕಾಡಿನಲ್ಲಿ ಸಿಂಹವೊಂದು ಪ್ರಸೇನನನ್ನೂ ಕುದುರೆಯನ್ನೂ ಕೊಂದು ರತ್ನವನ್ನು ತೆಗೆದುಕೊಂಡು ಹೋಯಿತು. ಆಗ ಜಾಂಬವಂತನು ಸಿಂಹವನ್ನು ಕೊಂದು, ಮಣಿಯನ್ನು ತಂದು ಮನೆಯಲ್ಲಿ ಮಗುವಿಗೆ ಆಟಕ್ಕೆಂದು ಕೊಟ್ಟನು. ಬೇಟೆಗೆ ಹೋದ ತಮ್ಮನು ಮನೆಗೆ ಬಾರದಿರಲು, ರತ್ನದ ಆಸೆಗೆ

ಕೃಷ್ಣನೇ ಅವನನ್ನು ಕೊಂದನೆಂಬ ಒಂದು ಅಪವಾದ ಹಬ್ಬಿತು. ತನ್ನ ಮೇಲೆ ಬಂದ ದೋಷಾರೋಪಣೆಯನ್ನು ಪರಿಹರಿಸಿಕೊಳ್ಳಲು, ಕೃಷ್ಣನು ನಗರವಾಸಿಗಳೊಡನೆ ಪ್ರಸೇನನು ಹೋಗಿದ್ದ ದಾರಿಯನ್ನು ಹಿಡಿದು ಹೊರಟು, ಜಾಂಬವಂತನ ಗುಹೆಯ ಬಳಿಗೆ ಬಂದನು. ತನ್ನ ಪರಿವಾರದವರನ್ನು ಹೊರಗೆ ನಿಲ್ಲಿಸಿ, ಗುಹೆಯ ಒಳಗೆ ಹೋಗಿ ನೋಡಿದರೆ, ಮಣಿ ಮಗುವಿನ ಆಟದ ವಸ್ತುವಾಗಿದೆ! ಶ್ರೀಕೃಷ್ಣನು ಅದನ್ನು ಕೊಂಡೊಯ್ಯಬೇಕೆಂದು ಉದ್ದೇಶಿಸಿದಾಗ, ಅವನನ್ನು ಕಂಡ ದಾದಿ ಕೂಗಿಕೊಂಡಳು. ಶ್ರೀಕೃಷ್ಣನು ಪ್ರಾಕೃತ ಮನುಷ್ಯನೆಂದು ತಿಳಿದು ಜಾಂಬವಂತನು ಅವನೊಡನೆ ಇಪ್ಪತ್ತೆಂಟು ದಿನಗಳ ಕಾಲ ಯುದ್ಧಮಾಡಿದನು. ಆದರೆ ಕೊನೆಗೆ ಶಕ್ತಿಗುಂದಿ, ಅವನನ್ನು ರಾಮನೆಂದು ಸ್ತುತಿಸಿದನು. ಜಾಂಬವನ ಸ್ತುತಿಗೆ ಮೆಚ್ಚಿದ ಕೃಷ್ಣನು ಅವನ ಮೈದಡವಿ, ಅವನಿಗೆ ತಾನು ಬಂದ ಕಾರ್ಯವನ್ನು ತಿಳಿಸಿದನು. ಜಾಂಬವಂತನು ಶ್ರೀಕೃಷ್ಣನನ್ನು ಸತ್ಕರಿಸಿ, ಅವನಿಗೆ ಸ್ಯಮಂತಕಮಣಿಯನ್ನು ಕೊಟ್ಟು, ತನ್ನ ಮಗಳಾದ ಜಾಂಬವತಿಯನ್ನು ಮದುವೆಮಾಡಿಕೊಟ್ಟನು. ಈ ಸತ್ಕಾರ್ಯಕ್ಕಾಗಿ ಕೃಷ್ಣನು ಜಾಂಬವನಿಗೆ ಮೋಕ್ಷವನ್ನು ಅನುಗ್ರಹಿಸಿದನು.

ಇತ್ತ ಬಿಲದ ಹೊರಗಿದ್ದ ಜನರು ಹನ್ನೆರಡು ದಿನಗಳಕಾಲ ಕಾದು ನೋಡಿ ದುಃಖದಿಂದ ದ್ವಾರಕೆಗೆ ಹಿಂದಿರುಗಿದರು. ಈ ವಾರ್ತೆಯನ್ನು ಕೇಳಿ ಸಂಕಟಗೊಂಡ ವಸುದೇವ ದೇವಕಿಯರು ಕೃಷ್ಣನ ಬರವಿಕೆಗಾಗಿ ಚಂದ್ರಭಾಗಾ ಎಂಬ ಹೆಸರಿನ ದುರ್ಗೆಯನ್ನು ಪೂಜಿಸಿದರು. ದೇವಿಯ ಅನುಗ್ರಹ, ದೇವತೆಗಳ ಆಶೀರ್ವಾದದಿಂದ ಶ್ರೀಕೃಷ್ಣನು ಕನ್ಯಾರತ್ನ ಮತ್ತು ಮಣಿಗಳೊಡನೆ ಹಿಂದಿರುಗಿದನು. ಅನಂತರ ತುಂಬಿದ ಸಭೆಯಲ್ಲಿ, ಉಗ್ರಸೇನನ ಸನ್ನಿಧಿಯಲ್ಲಿ, ಮಣಿಯನ್ನು ಸತ್ರಾಜಿತನಿಗೆ ಒಪ್ಪಿಸಿದನು. ಇದರಿಂದ ಸತ್ರಾಜಿತನಿಗೆ ತುಂಬ ನಾಚಿಕೆಯಾಯಿತು. ಬಲವದ್ವಿರೋಧವಾಯಿತೆಂದು ಸಂತಾಪಪಟ್ಟು, ಮಗಳಾದ ಸತ್ಯಭಾಮೆಯನ್ನೂ ಮಣಿಯನ್ನೂ ಕೃಷ್ಣನಿಗೆ ಕೊಟ್ಟನು. ಶ್ರೀಕೃಷ್ಣನು ಸತ್ಯಭಾಮೆಯನ್ನು ಯಥಾವಿಧಿಯಾಗಿ ಮದುವೆಯಾಗಿ, ಮಣಿಯನ್ನು ಸತ್ರಾಜಿತನಿಗೇ ಹಿಂದಕ್ಕೆ ಕೊಟ್ಟುಬಿಟ್ಟನು.

ಇದು ಮೂಲದಲ್ಲಿ ನಲವತ್ತೇಳು ಅನುಷ್ಟುಭ್‌ವೃತ್ತ, ಒಂದು ವೃತ್ತದಲ್ಲಿ ಮೂಡಿಬಂದಿದ್ದು, ಕನ್ನಡದಲ್ಲಿ 30 ಭಾಮಿನೀಷಟ್ಪದಿಗಳಲ್ಲಿ ರೂಪುಗೊಂಡಿದೆ. ಎಂದರೆ ಎರಡು ಉಪಾಖ್ಯಾನಗಳೂ ಸಮಪ್ರಮಾಣದಲ್ಲಿ ಇವೆ ಎಂದಂತಾಯಿತು. ಏಕೆಂದರೆ ಒಂದು ಅಕ್ಷರ ಛಂದಸ್ಸು; ಮತ್ತೊಂದು ಮಾತ್ರಾ ಛಂದಸ್ಸು. ಆದ್ದರಿಂದ ಈ ಪ್ರಮಾಣ ದೊರಕಿದೆಯೆನ್ನಬಹುದು. ಅಲ್ಲದೆ ಈ ಮೊದಲು ಹೇಳಿದಂತೆ, ಈ ಕವಿ ಕುಮಾರವ್ಯಾಸನು ತನ್ನ ಭಾರತದಲ್ಲಿ ಸ್ವೇಚ್ಛೆಯಾಗಿ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ, ಮಾಡಿಕೊಳ್ಳುವುದಿಲ್ಲ. ಬದಲಾವಣೆಗಳಿದ್ದರೂ ಅತ್ಯಲ್ಪ. ದಿಕ್ಪ್ರದರ್ಶನಾರ್ಥವಾಗಿ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

ಸಾಮಾನ್ಯವಾಗಿ ಒಂದು ಉಪಾಖ್ಯಾನ ಪ್ರಾರಂಭವಾಗುವಾಗ, ಅದರ

ತಾತ್ಪರ್ಯವನ್ನು ಶುಕಮುಹರ್ಷಿಗಳು ಮೊದಲು ಸಂಗ್ರಹವಾಗಿ ನಿರೂಪಿಸುತ್ತಾರೆ. ಇದನ್ನೇ ವಿಸ್ತರಿಸಬೇಕೆಂದು ರಾಜನು ಕೇಳಿಕೊಳ್ಳುತ್ತಾನೆ. ಇದು ಪುರಾಣದ ಪದ್ಧತಿ ಇದನ್ನು ಬಿಟ್ಟು ಕವಿ ಕುಮಾರವ್ಯಾಸನಂತೆ ನೇರವಾಗಿ 'ಅರಸ ಕೇಳಾ ದ್ವಾರಕಾಪುರ ವರದಲಿ' ಎಂದು ಪ್ರಾರಂಭಿಸುತ್ತಾನೆ ಉಪಾಖ್ಯಾನವನ್ನು. ಇದು ಕವಿಯ ಔಚಿತ್ಯ ಹಾಗೂ ಸಂಗ್ರಹದೃಷ್ಟಿಗೆ ದ್ಯೋತಕವಾಗಿದೆ. ಬಲಗುಂದಿದ ಜಾಂಬವಂತನು ಶ್ರೀಕೃಷ್ಣನನ್ನು ಕುರಿತು ಮಾಡುವ ಸ್ತೋತ್ರ ಮೂಲದಲ್ಲಿ ಸುದೀರ್ಘವಾಗಿದ್ದರೆ, ಇಲ್ಲಿ ಅದು ಹ್ರಸ್ವವಾಗಿ, ಆದರೆ ಸಾರವತ್ತಾಗಿ ಈ ರೀತಿ ಮೂಡಿದೆ :

ಆರು ನೀನೆಲೆ ವೀರ ಜೀವರ
ಭೂರಿ ಸತ್ವಾತ್ಮಕನೊ ಕೌಸ್ತುಭ
ಧಾರಿಯೋ ಶಂಕರನೊ ಮೇಣ್ ಸರಸೀರುಹೋದ್ಭವನೊ
ಆರು ತನ್ನೊಡನಕಟ ಕಾದುವ
ವೀರರೀಯುಗದೊಳಗೆ ವಿಸ್ಮಯ
ಕಾರಿಯಾದೆಯಲಾ ಎನುತ ನೋಡಿದನು ಮನದೊಳಗೆ

ಮೂಲದಲ್ಲಿ ಜಾಂಬವಂತ ಶ್ರೀಕೃಷ್ಣನನ್ನು ರಾಮನಿರಬೇಕೆಂದು ಗುರುತಿಸುತ್ತಾನೆ. ಅನುವಾದದಲ್ಲಿ 'ಮತ್ತೆ ಹರಿಕರುಣಿಸಲು ಕಂಡನು ಚಿತ್ತದಲಿ ರಘುನಾಥನೆಂಬುದನು' ಎಂಬುದಾಗಿ ಕವಿ ಮಾರ್ಪಡಿಸಿಕೊಂಡಿದ್ದಾನೆ. ಕೃಷ್ಣ ಬಾರದಿದ್ದಾಗ ವಸುದೇವ ದೇವಕಿಯರು 'ಚಂದ್ರಭಾಗಾ' ಎಂಬ ಹೆಸರಿನ ದುರ್ಗೆಯನ್ನು ಪೂಜಿಸಿದರೆಂದು ಮೂಲದಲ್ಲಿ ಹೇಳಿದ್ದರೆ ಇಲ್ಲಿ ಶೈಲನಂದನೆಯನ್ನು ಸ್ತೋತ್ರಮಾಡಿದರೆಂದು ಮಾತ್ರ ಹೇಳಿದೆ ಕೃಷ್ಣನು ಸಭೆಯಲ್ಲಿ ಮಣಿಯನ್ನು ಕೊಟ್ಟ ಮೇಲೆ ಸತ್ರಾಜಿತನು ಪರಿಪರಿಯಾಗಿ ಪರಿತಪಿಸಿದರೆ, ಇಲ್ಲಿ 'ಬಱಿದೆ ಹೇಳಿದೆನಕಟ ಲೋಕಕ್ಕುಱುವ ದೈವದ ಮೇಲೆ ದೋಷವನಱಿಯದಜ್ಞಾನಿಗಳದಾರೆನ್ನಂತೆ ಭುವನದಲಿ' ಎಂದು ಮಾತ್ರ ಹೇಳಿದೆ. ಈ ಬದಲಾವಣೆಗಳಿಂದ ಮೂಲಕ್ಕೆ ಯಾವ ಕುಂದೂ ಆಗಿಲ್ಲವೆಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು.

ಮೂಲದಲ್ಲಿಲ್ಲದ ಹಲವು ಸಣ್ಣ ಅಂಶಗಳನ್ನು ಸೇರಿಸಿ ಕಥೆಗೆ ಮೆರುಗನ್ನು ತಂದಿರುವ ಒಂದೆರಡು ಸಂದರ್ಭಗಳನ್ನೂ ಇಲ್ಲಿ ನೆನೆಯಬಹುದು.

ಸ್ಯಮಂತಕ ಮಣಿಯನ್ನು ಧರಿಸಿ ಬಂದ ಸತ್ರಾಜಿತನನ್ನು ಸೂರ್ಯನೆಂದೇ ಭಾವಿಸಿದ ಜನರಿಗೆ ಶ್ರೀಕೃಷ್ಣನು ದ್ವಾರಕೆಗೆ ಬಂದಿರುವವನು ಸೂರ್ಯನಲ್ಲ ಸತ್ರಾಜಿತನೆಂದು ಹೇಳಿ, "ಬಱಿದೇ ಗುಂಜಿ ಮಾಣಿಕನೆಂಬ ಮರುಳುಗಳಂತೆ ಮತಿಗೆಟ್ಟು ಅಂಜದಿರಿ, ಸತ್ರಾಜಿತನು ವರಕಂಜಸಖನಿತ್ತ ಮಳ ರತ್ನ ಸುರಂಜಿತನು ಬರುತೈತಂದನು" ಎಂದು ಭಯಪಟ್ಟ ಅವರಿಗೆ ಧೈರ್ಯ ಹೇಳುತ್ತಾನೆ ಹೋಲಿಕೆ ಚೆನ್ನಾಗಿದೆಯಲ್ಲವೇ? ಕರಡಿಯೊಂದು ಸಿಂಹವನ್ನು ಕೊಂದುದನ್ನು ಕಂಡು ಕೃಷ್ಣನಿಗೆ ಆಶ್ಚರ್ಯವೆನಿಸಿತು. ಕವಿ ಕೃಷ್ಣನಿಗುಂಟಾದ ಸೋಜಿಗವನ್ನು ಹೀಗೆ ವರ್ಣಿಸಿದ್ದಾನೆ :

ಸಿಂಹವನು ಕೊಲುವಂಥ ಕರಡಿಯು
ಸಿಂಹವಿಕ್ರಮವೆಂತೆನುತ ನರ
ಸಿಂಹನೈದಿದನದಱ ಹೆಜ್ಜೆಗೆ ಹೆಜ್ಜೆಯನು ಸಲಿಸಿ

ಕವಿ ಇಲ್ಲಿ ಪ್ರಾಸ ಅಲಂಕಾರಗಳನ್ನು ತಂದಿದ್ದರೂ ಅವು ಸೊಗಸಾಗಿವೆ. ಕೃಷ್ಣನು ಸರ್ವಜ್ಞನಾದರೂ ಜನರ ತೋರಿಕೆಗೆ ಅವರಂತೆ ನಡೆದು ಕರಡಿ ಸಿಂಹವನ್ನು ಕೊಂದ ವಿಷಯದಲ್ಲಿ ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾನೆ. ಶ್ರೀಕೃಷ್ಣನು ಬಾರ ದಿದ್ದಾಗ ವಸುದೇವ ದೇವಕಿಯರ ಶೋಕದ ತೀವ್ರತೆ "ಜ್ವಾಲೆಯೊಳು ನಿಂದಂತೆ ಶೋಕವ್ಯಾಳವಿಷವಮೂರ್ಛಿತರು" ಎನ್ನುವ ಮಾತುಗಳಲ್ಲಿ ಸುವ್ಯಕ್ತವಾಗಿದೆ. ತಾನು ಜಾಂಬವನಿಂದ ತಂದ ರತ್ನವನ್ನು ಶ್ರೀಕೃಷ್ಣನು ಸಭಾಮಧ್ಯದಲ್ಲಿ ಸತ್ರಾಜಿತನಿಗೆ "ಪರಮ ಧಾರ್ಮಿಕನೆನುತ ಕೈಮುಗಿದು" ಕೊಟ್ಟನಂತೆ! ಇಲ್ಲಿನ ಪ್ರತಿಯೊಂದು ಮಾತುಗಳಲ್ಲಿಯೂ ಕ್ರೂರವಾದ ವ್ಯಂಗ್ಯ ಅಡಗಿದೆ. ಈ ಮಾತುಗಳನ್ನು ಕೃಷ್ಣನ ಬಾಯಿಂದ ಕೇಳಿದ ಸತ್ರಾಜಿತನು ಧರೆಗಿಳಿದು ಹೋಗಿರಬೇಕು! ಹೀಗೆ ಕವಿ ಮೂಲ ವನ್ನು ಮಾರ್ಪಡಿಸುವ ಹೆಚ್ಚು ಸ್ವಾತಂತ್ರ್ಯವನ್ನು ವಹಿಸದೆ ಸಣ್ಣಪುಟ್ಟ ವ್ಯತ್ಯಾಸ ಗಳಿಂದ ಕೃತಿಯನ್ನು ಸುಂದರಗೊಳಿಸಲು ಯತ್ನಿಸಿದ್ದಾನೆ.

ಮೂಲವನ್ನು ಕವಿ ಹೇಗೆ ಅನುವಾದಿಸುತ್ತಾನೆಂಬುದಕ್ಕೆ ಈಗ ಎರಡು ಉದಾ ಹರಣೆ. ಈ ಸಂದರ್ಭದಲ್ಲಿ ಎರಡು ಕೃತಿಗಳ ಛಂದಸ್ಸೂ ಬೇರೆ ಬೇರೆಯೆಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು:

ದಿನೇ ದಿನೇ ಸ್ವರ್ಣಭಾರಾನಷ್ಟೌ ಸ ಸೃಜತಿ ಪ್ರಭೋ।
ದುರ್ಭಿಕ್ಷಮಾರ್ಯನಿಷ್ಟಾನಿ ಸರ್ವಾಧಿವ್ಯಾಧಯೋಽಶುಭಾಃ॥
ನ ಸಂತಿ ಮಾಯಿನಸ್ತತ್ರ ಯತ್ರಾಸ್ತೇಽಭ್ಯರ್ಚಿತೋ ಮಣಿಃ॥ ೧೦. ೫೬–೧೨

ಇದರ ಅನುವಾದ ಹೀಗಿದೆ:

ದಿನದಿನದಲೆಂಟೆಂಟು ಭಾರದ
ಕನಕವನು ಮಣಿ ಕೊಡುವುದದಱಿಂ ಕೊಳು
ಜನಿಸದಾಧಿವ್ಯಾಧಿ ದುರ್ಭಿಕ್ಷಾದಿ ಭಯವೆಂದ॥ ೧೦, ೬೭–೬

ಸತ್ರಾಜಿತನು ಕೃಷ್ಣನಿಗೆ ಮಣಿಯನ್ನು ಕೊಟ್ಟಾಗ, ಕೃಷ್ಣನು ಅವನಿಗೆ ಹೇಳಿದ ಮಾತು:

ಭಗವಾನಾಹ ನ ಮಣಿಂ ಪ್ರತೀಚ್ಛಾಮೋ ವಯಂ ನೃಪ।
ತವಾ ಸ್ತಾಂ ದೇವಭಕ್ತಸ್ಯ ವಯಂಚ ಫಲಭಾಗಿನಃ॥ ೧೦, ೫೬–೪೭

ಈ ಪದ್ಯದ ಅನುವಾದ:

ಇರಲಿ ಮಣಿ ನಿನ್ನಲ್ಲಿ ದಿವಸೇ
ಶ್ವರನ ಭಕ್ತನಲೆನುತ ಕೊಟ್ಟನು
ವರ ಮಣಿಯನಾತಂಗೆ ಫಲಭೋಗಿಗಳು ನಾವೆನುತ॥ ೧೦, ೬೭–೩೦

ಭಾಷೆ, ಶೈಲಿ

ಕನ್ನಡ ಭಾಗವತದ ಶೈಲಿಯ ವಿಷಯವಾಗಿ ಇಲ್ಲಿಯೇ ನಾಲ್ಕು ಮಾತುಗಳನ್ನು ಹೇಳಬಹುದು. ಮೂಲ ಭಾಗವತದ ಶೈಲಿ ತುಂಬ ಕಡೆಗಳಲ್ಲಿ ಪ್ರೌಢವಾಗಿದ್ದು ಕಾವ್ಯಮಯವಾಗಿದೆ. ಆದರೆ ಈ ಮಾತನ್ನು ಕನ್ನಡ ಕೃತಿಗೆ ಅನ್ವಯಿಸುವಂತಿಲ್ಲ. ಕನ್ನಡ ಭಾಗವತದ ರಚನೆಯಲ್ಲಿ ಅನೇಕ ಕವಿಗಳ ಕೈವಾಡ ಕಂಡುಬರುವುದರಿಂದ ಕಾವ್ಯದ ಶೈಲಿಯಲ್ಲಿ ಭಿನ್ನತೆ ಕಂಡುಬಂದರೆ, ಅದು ಸಹಜವಾದದ್ದೇ. ಆದರೂ ಹನ್ನೊಂದನೆಯ ಸ್ಕಂಧವನ್ನು ಬಿಟ್ಟರೆ ಭಾಗವತದ ಶೈಲಿ ಸಮತಳ ಪ್ರದೇಶದಲ್ಲಿ ಹರಿಯುವ ನದಿಯಂತೆ ಹದವಾದ ಕನ್ನಡ ಸಂಸ್ಕೃತವನ್ನು ಬೆರಸಿ ರಚಿತವಾಗಿದೆ. "ಭವಾಬ್ಧಿನಿಮಗ್ನ ನಿಸ್ತಾರಕ", "ಸಂಸಾರ ಘೋರವ್ಯಾಧಿ ವಿದ್ರಾವಿತರು" "ಇಂದಿರಾಪತಿ ಪಾದಪದುಮದ್ವಂದ್ವರತಿ ಸಾಮ್ರಾಜ್ಯ ಸಹಜಾನಂದರಸ ಮೂರ್ಧಾಭಿಷಿಕ್ತನು" "ಕೃಷ್ಣಾಂಘ್ರಿಚಿಂತಾನಂದಬಾಷ್ಪ ವಿಲೋಕ್ಷಣ" ಎಂಬಂಥ ಸಂಸ್ಕೃತ ಸಮಾಸಗಳು ಬಂದರೆ ಅವು ಕ್ವಚಿತ್ತಾಗಿ ಮಾತ್ರ. ಪೀಠಿಕಾ ಸಂಧಿಯಲ್ಲಿ ಬರುವ "ಕನ್ನಡದ ನುಡಿಯಿಂದವಜ್ಞಾಪನ್ನರಾಗದೆ" ಎಂಬ ಮಾತಿನಿಂದ ಅಚ್ಯುತಾನಂದ ಯತಿಗಳ ಆದೇಶವೇ ಈ ಕವಿಗಳಿಗೆ ಮಾರ್ಗದರ್ಶಕವಾಗಿತ್ತೆಂದು ತೋರುತ್ತದೆ. 'ಕುಮಾರವ್ಯಾಸ ಭಾರತ'ದಲ್ಲಿರುವಂತೆ ಇಲ್ಲಿ ಅನ್ಯಭಾಷಾ ಶಬ್ದಗಳ ಬಳಕೆ ಸ್ವೇಚ್ಛೆಯಾಗಿಲ್ಲ. ಬರುವ ವರ್ಣನೆಗಳು ಹಿತಮಿತವಾಗಿವೆ. ಕವಿಗಳ ಉದ್ದೇಶ ಘನವಾದುದಾದ ಕಾರಣ, ಅವರು ಅಪ್ರಚುರವಾದ ಅನವಶ್ಯವಾದ ಅಲಂಕಾರಗಳನ್ನು ಉಪಯೋಗಿಸದೆ, ಉಪಮೆ, ರೂಪಕ, ದೃಷ್ಟಾಂತ, ಉಲ್ಲೇಖ ಇವೇ ಮೊದಲಾದ ಪ್ರಚುರವಾದ ಅಲಂಕಾರಗಳನ್ನು ಉಪಯೋಗಿಸಿದ್ದಾರೆ. ಗಾದೆಯಂತಹ ನುಡಿಗಟ್ಟುಗಳಿಗೂ ಇಲ್ಲಿ ಬರವಿಲ್ಲ. ಕಾವ್ಯ ಸುದೀರ್ಘವಾಗಿರುವುದರಿಂದ ಇದು ನವರಸಾಲಂಕಾರ ಭರಿತವಾಗಿದೆಯೆಂದು ಮತ್ತೆ ಹೇಳಬೇಕಾಗಿಲ್ಲ. ಶೃಂಗಾರರಸ ಬಂದರೆ ಅದು ಹಿಡಿತವಾಗಿ, ಹಾಳತವಾಗಿದೆ. ತಕ್ಕ ಉದಾಹರಣೆಗಳಿಂದ ಮೇಲಿನ ಅಂಶಗಳನ್ನು ಸಮರ್ಥಿಸಬಹುದು.

ಬಾಲರಾದ ರಾಮಕೃಷ್ಣರ ತುಂಟಾಟವನ್ನು ಯಶೋದೆಗೆ ಗೋಪಿಯರು ದೂರುವ ಚಿತ್ರ ರಮ್ಯವಾಗಿದೆ :

ಹೊಕ್ಕು ಕಱೆಯದ ಮುನ್ನ ಕಱುಗಳ
ಮಿಕ್ಕು ಬಿಡುವರು ಜಱೆದಡಳುಕದೆ
ನಕ್ಕು ಮಱಸುವರದನು ಚತುರೋಪಾಯ ವಿಧಗಳಲಿ
ಒಕ್ಕಲಿಕ್ಕುವರೆಮ್ಮ ಮನೆಗಳ
ನೆಕ್ಕತುಳದಲಿ ತಾಯೆ ಪಡೆದಾ
ಮಕ್ಕಳನು ಭವಗೆಡಿಸಲೆಂದೇ ಸಕಲಗೋಕುಲವ

ಭಾಷೆ, ಶೈಲಿ

ಕನ್ನಡ ಭಾಗವತದ ಶೈಲಿಯ ವಿಷಯವಾಗಿ ಇಲ್ಲಿಯೇ ನಾಲ್ಕು ಮಾತುಗಳನ್ನು ಹೇಳಬಹುದು. ಮೂಲ ಭಾಗವತದ ಶೈಲಿ ತುಂಬ ಕಡೆಗಳಲ್ಲಿ ಪ್ರೌಢವಾಗಿದ್ದು ಕಾವ್ಯಮಯವಾಗಿದೆ. ಆದರೆ ಈ ಮಾತನ್ನು ಕನ್ನಡ ಕೃತಿಗೆ ಅನ್ವಯಿಸುವಂತಿಲ್ಲ. ಕನ್ನಡ ಭಾಗವತದ ರಚನೆಯಲ್ಲಿ ಅನೇಕ ಕವಿಗಳ ಕೈವಾಡ ಕಂಡುಬರುವುದರಿಂದ ಕಾವ್ಯದ ಶೈಲಿಯಲ್ಲಿ ಭಿನ್ನತೆ ಕಂಡುಬಂದರೆ, ಅದು ಸಹಜವಾದದ್ದೇ. ಆದರೂ ಹನ್ನೊಂದನೆಯ ಸ್ಕಂಧವನ್ನು ಬಿಟ್ಟರೆ ಭಾಗವತದ ಶೈಲಿ ಸಮತಳ ಪ್ರದೇಶದಲ್ಲಿ ಹರಿಯುವ ನದಿಯಂತೆ ಹದವಾದ ಕನ್ನಡ ಸಂಸ್ಕೃತವನ್ನು ಬೆರಸಿ ರಚಿತವಾಗಿದೆ. "ಭವಾಬ್ಧಿನಿಮಗ್ನ ನಿಸ್ತಾರಕ", "ಸಂಸಾರ ಘೋರವ್ಯಾಧಿ ವಿದ್ರಾವಿತರು" "ಇಂದಿರಾಪತಿ ಪಾದಪದುಮದ್ವಂದ್ವರತಿ ಸಾಮ್ರಾಜ್ಯ ಸಹಜಾನಂದರಸ ಮೂರ್ಧಾಭಿಷಿಕ್ತನು" "ಕೃಷ್ಣಾಂಘ್ರಿಚಿಂತಾನಂದಬಾಷ್ಪ ವಿಲೀಕ್ಷಣ" ಎಂಬಂಥ ಸಂಸ್ಕೃತ ಸಮಾಸಗಳು ಬಂದರೆ ಅವು ಕ್ವಚಿತ್ತಾಗಿ ಮಾತ್ರ. ಪೀಠಿಕಾ ಸಂಧಿಯಲ್ಲಿ ಬರುವ "ಕನ್ನಡದ ನುಡಿಯಿಂದವಜ್ಞಾಪನ್ನರಾಗದೆ" ಎಂಬ ಮಾತಿನಿಂದ ಅಚ್ಯುತಾನಂದ ಯತಿಗಳ ಆದೇಶವೇ ಈ ಕವಿಗಳಿಗೆ ಮಾರ್ಗದರ್ಶಕವಾಗಿತ್ತೆಂದು ತೋರುತ್ತದೆ. 'ಕುಮಾರವ್ಯಾಸ ಭಾರತ'ದಲ್ಲಿರುವಂತೆ ಇಲ್ಲಿ ಅನ್ಯಭಾಷಾ ಶಬ್ದಗಳ ಬಳಕೆ ಸ್ವೇಚ್ಛೆಯಾಗಿಲ್ಲ. ಬರುವ ವರ್ಣನೆಗಳು ಹಿತಮಿತವಾಗಿವೆ. ಕವಿಗಳ ಉದ್ದೇಶ ಘನವಾದುದಾದ ಕಾರಣ, ಅವರು ಅಪ್ರಚುರವಾದ ಅನವಶ್ಯವಾದ ಅಲಂಕಾರಗಳನ್ನು ಉಪಯೋಗಿಸದೆ, ಉಪಮೆ, ರೂಪಕ, ದೃಷ್ಟಾಂತ, ಉಲ್ಲೇಖ ಇವೇ ಮೊದಲಾದ ಪ್ರಚುರವಾದ ಅಲಂಕಾರಗಳನ್ನು ಉಪಯೋಗಿಸಿದ್ದಾರೆ. ಗಾದೆಯಂತಹ ನುಡಿಗಟ್ಟುಗಳಿಗೂ ಇಲ್ಲಿ ಬರವಿಲ್ಲ. ಕಾವ್ಯ ಸುದೀರ್ಘವಾಗಿರುವುದರಿಂದ ಇದು ನವರಸಾಲಂಕಾರ ಭರಿತವಾಗಿದೆಯೆಂದು ಮತ್ತೆ ಹೇಳಬೇಕಾಗಿಲ್ಲ. ಶೃಂಗಾರರಸ ಬಂದರೆ ಅದು ಹಿಡಿತವಾಗಿ, ಹಾಳತವಾಗಿದೆ. ತಕ್ಕ ಉದಾಹರಣೆಗಳಿಂದ ಮೇಲಿನ ಅಂಶಗಳನ್ನು ಸಮರ್ಥಿಸಬಹುದು.

ಬಾಲರಾದ ರಾಮಕೃಷ್ಣರ ತುಂಟಾಟವನ್ನು ಯಶೋದೆಗೆ ಗೋಪಿಯರು ದೂರುವ ಚಿತ್ರ ರಮ್ಯವಾಗಿದೆ :

> ಹೊಕ್ಕು ಕಟಿಯದ ಮುನ್ನ ಕರುಗಳ
> ಮಿಕ್ಕು ಬಿಡುವರು ಜರಿದಡಳುಕದೆ
> ನಕ್ಕು ಮುಳಿಸುವರದನು ಚತುರೋಪಾಯ ವಿಧಗಳಲಿ
> ಒಕ್ಕಲಿಕ್ಕುವರೆಮ್ಮ ಮನೆಗಳ
> ನೆಕ್ಕತುಳದಲಿ ತಾಯೆ ಪಡೆದಾ
> ಮಕ್ಕಳನು ಭವಗೆಡಿಸಲೆಂದೇ ಸಕಲಗೋಕುಲವ

ತಾಯೆ ನಿನ್ನಾಣೆಂದು ಮೊಸರನು
ಬಾಯಿಗೆತ್ತಿದರಮ್ಮ ಮಕ್ಕಳ
ಕಾಯಲರಿದಂಜುವೆವು ಬಿನ್ನಹ ಮಾಡುವಡೆ ನಿಮಗೆ
ಶ್ರೇಯಯೋಗಾಚಾರ್ಯರಿವದಿರು
ಪಾಯ ಕೋವಿದರಕಟಕಟ ನಿ
ರ್ದಾಯದಲಿ ನೆಱೆ ಕೆಡಿಸಿದರು ಗೋಕುಲದ ವೈಭವವ

ಉಂಡರದಕಾರಳಲುವರು ನೆಲ
ನುಂಡುಕೆಟ್ಟುದು ಹಾಲು ಮೊಸರನು
ಕಂಡದೆಸೆಗೀಡಾಡುವರು ನೀಡುವರು ಕಪಿಗಳಿಗೆ
ಕಂಡಿದೇನನಲೊಡೆವರಿವರಾ
ಭಾಂಡವನು ಧರಣಿಯಲಿ ನೆಱೆ ಗೋ
ಳುಂಡೆಗೊಳಿಸಿದರಾರು ನಿನ್ನವರಂತೆ ಗೋಕುಲವ

ನೆಲಹುಗಳಲಿರಿಸಿದರೆ ಕೈಗಳು
ಸಿಲುಕದಿದ್ದರೆ ಮನೆಯೊರಳ್ಗಳ
ಸಿಲುಹಿ ಕೆಳೆಯರ ಹೆಗಲನೇಱೆ ದುರಂತವಿಕ್ರಮರು
ಕಳೆದುಕೊಂಬರು ಹಾಲುಬೆಣ್ಣೆಗ
ಳುಳಿವುಪಾಯವ ಕಾಣೆವೆಮ್ಮಲಿ
ಫಲವದುಳ್ಳಡೆ ಕರಸಿಕೊಂಬುದು ತಮ್ಮ ಗೋಧನವ ೧೦, ೮–೨೩–೨೬

ಮೇಲಿನ ಪದ್ಯಗಳಲ್ಲಿ ರಾಮಕೃಷ್ಣರ ಬಾಲಲೀಲೆ, ತುಂಟಾಟ, ಗೋಪಿಕಾಸ್ತ್ರೀಯರ ನಸುಮುನಿಸು ಇವುಗಳನ್ನು ಕವಿ ಹೃದಯಂಗಮವಾಗಿ ವರ್ಣಿಸಿರುವನಲ್ಲವೇ ?

ಇನ್ನು ಸೂರ್ಯೋದಯದ ಒಂದು ಸೊಗಸಾದ ವರ್ಣನೆ :

ನಳಿನ ಸಖನಿರದೂದಿ ಕಗ್ಗ
ತ್ತಲೆಯ ಕೊಂದನು ಪೂರ್ವಸಂಧ್ಯಾ
ಲಲನೆಗೊಪ್ಪಿರೆ ತೊಡಿಸಿದನು ದಿಗ್ವಳಯ ಭೂಷಣವ
ಹೊಳೆವ ಹೊಸ ಹೊಂಬಿಸಿಲ ತೇಜವ
ತಳೆದುದಂಬರವಂಬರವನಾ
ನಳಿನಸಖನುಡಲಿತ್ತು ಕಳುಹಿದವೊಲು ಕೃಷ್ಣಂಗೆ ೧೦, ೧೯–೧

ಧರೆಯಲಡ್ಡೈಸುವರದಾರೆಂ
ದಿರದೆ ಸಾಱುವವೋಲು ಮೂಡಲು
ತರಣಿ ನೂಕಿದನುದಯಶೈಲಾಗ್ರದಲಿ ನಿಜರಥವ ೧೦, ೩೩–೪

ಸೂರ್ಯಾಸ್ತಮಯಕ್ಕೆ ಎರಡು ಚಿಕ್ಕ ಉದಾಹರಣೆಗಳು :

ಮುನಿಯ ಕೋಪವ ಬಳಿದು ಮುರರಿಪು
ವನಧಿಗಿಡುಕಿದನೆನಲು ರವಿರಥ
ವನುಕರಿಸಿ ರೌದ್ರವನು ಹಾಯ್ದುದು ಪಶ್ಚಿಮಾಂಬುಧಿಗೆ ೧೦, ೫೪–೩೦

ತಾವರೆ
ನಿದ್ರೆಗಭಿಮುಖವಾಯ್ತು ನಿರ್ದೆಸೆಯಾಯ್ತು ರವಿದೀಪ ೧೦, ೧೫–೩೬

ಹೊಂಬಿಸಿಲಿನ ಈ ವರ್ಣನೆಯೂ ಮನೋಹರವಾಗಿದೆ :

ಅಂಬರಕೆ ನೆಗಹಿದನೊ ತದ್ರುಧಿ
ರಾಂಬು ಸಂಸ್ಪೃಷ್ಟವನು ಹೇಳೆನೆ
ಹೊಂಬಿಸಿಲು ರಂಜಿಸಿತು ಗಗನಾಂಗಣವನಾವರಿಸಿ ೧೦, ೧೫–೩೭

ಕೆಳಗಿನ ಪದ್ಯದ ಚಂದ್ರೋದಯದ ವರ್ಣನೆ ರಮ್ಯವಾಗಿದೆ–

ಮೂಡಿದನು ಶಶಿ ಮೂಡದೆಸೆಯಲಿ
ಕೂಡೆ ಕಿರಣವ ಕೆದಱಿ ತಮವನು
ತೋಡಿ ತೆಗೆದನು ಸಕಲ ಸಚರಾಚರ ಜಗದ್ಧಿತವ
ಮಾಡಿದನು ಮೇದಿನಿಯ ತಾಪವ
ರ್ಘಾಡಿಸುವ ಸತ್ಪುರುಷರಂದದ
ಲೀಡಿಱಿವ ಘನ ಕೃತ್ಯದಲಿ ಜನಮನವ ರಂಜಿಸಿದ ೧೦, ೨೫–೧

ಈ ವರ್ಣನೆಗಳು ಪಂಪ, ಕುಮಾರವ್ಯಾಸನ ಸೂರ್ಯೋದಯ ಸೂರ್ಯಾಸ್ತ ಗಳನ್ನು ಕೆಲಮಟ್ಟಿಗಾದರೂ ನೆನಪಿಗೆ ತರುತ್ತವೆಯಲ್ಲವೆ ?

ಮುಖ್ಯವಾದ ಅಲಂಕಾರಗಳಿಗೆ ಇಲ್ಲಿ ಕೆಲವು ಉದಾಹರಣೆಗಳನ್ನು ನೋಡ ಬಹುದು. ಮೊದಲು ಈ ಉಪಮಾನಗಳ ಸೊಗಸನ್ನು ಪರಿಭಾವಿಸಬಹುದು. ಪೂತನಿ ಕೃಷ್ಣನನ್ನು ಎತ್ತಿಕೊಂಡದ್ದು 'ಹಾವನೇಣೆಂದೆತ್ತಿ ಕೊಂಬದಲಿ' ಆಯಿತು. ಮೃತ್ಯು ಆಕೆಗೆ ಸನ್ನಿಹಿತವಾಯಿತೆಂದು ಇದರಿಂದ ಧ್ವನಿತವಾಗುವುದಿಲ್ಲವೇ ? 'ಹೊಳೆದು ಹೋದವು ಮಿಂಚುಗಳು ಪುಂಶ್ಚಲಿಯರಂತಿರೆ' ಎಂಬಲ್ಲಿ ಅವುಗಳಲ್ಲಿನ ಬೆಡಗು, ವಿಭ್ರಮ, ಕ್ಷಣಿಕತೆ ಇವು ಸ್ಪಷ್ಟವಾಗುವುದಿಲ್ಲವೇ ? ಕಂಸನ ಆಜ್ಞೆಯಿಂದ ಕೇಶಿಯೆಂಬ ದಾನವನು ಗೋಕುಲಕ್ಕೆ ಬಂದುದು 'ಬಲು ಮೃತ್ಯು ಬಾಯ್ದೆಱೆದಂತೆ' ಆಯಿತೆ ! ಯಾವ ದೈವಕ್ಕೇ ಆಗಲಿ ನಾವು ಸಲ್ಲಿಸುವ ಪೂಜೆ "ಹಲವು ನದಿಗಳ ತರ್ಪಣದ ಜಲ ಜಲನಿಧಿಗೈದುವವೋಲು" ಶ್ರೀಕೃಷ್ಣನಿಗೇ ಸಲ್ಲುತ್ತದೆ. ಕೃಷ್ಣ ದರ್ಶನ "ಕಾಳುಗಿಚ್ಚಿನಲುರಿವವನವದು ಮಳೆಗಾಲವನು ಕಾಂಬಂತೆ" ಆಗುತ್ತದೆ. "ಮುಳ್ಳು ಕಾಲಲಿ ಮುಱಿದಡಕಟಾಹುಲ್ಲಸುಡುವರೆ" "ಕಾಳುರಿಗೆ ಘನವೇ ಜಲಾಸಾರ"; "ಹಸು ಸೊಕ್ಕಿಸಿಂಹವ ಹಿಡಿಯಬಂದುದೆ ?" ಈ ದೃಷ್ಟಾಂತಗಳು ಎಷ್ಟು ಸೊಗಸಾಗಿವೆ ! ಪೂತನಿ "ಗರುಡದೇವನನೆಬ್ಬಿಸಲು ಬಂದುರಗವಧುವೋ ಹುತ್ತಿನೊಳಗಿರ್ದುರಗನನು ಹೊಕ್ಕವುಕಿ ಕೊಲಬಂದಾಯು ನೆಱಿದಿಲಿಯೊ" ಎಂಬಂತೆ ದುರುಳೆ ಬಂದಳು ಎಂದಿರುವ ಉತ್ಪ್ರೇಕ್ಷೆ ಸಂದರ್ಭೋಚಿತ ವಾಗಿದೆ. ಕಂಸನ ಸಭೆಗೆ ಶ್ರೀಕೃಷ್ಣನು ಬಂದಾಗ, ಅಲ್ಲಿದ್ದ ಸಭಾಸದರಿಗೆ ಹೇಗೆ ಕಂಡನೆಂಬುದನ್ನು ಈ ಪ್ರಸಂಗವನ್ನು ನಿರೂಪಿಸುವ ಎಲ್ಲ ಕವಿಗಳೂ ಹೇಳುವುದು ಪದ್ಧತಿ. ನಮ್ಮ ಕವಿ ಅದನ್ನು ಹೀಗೆ ಹೇಳಿದ್ದಾನೆ. ಉಲ್ಲೇಖಾಲಂಕಾರಕ್ಕೆ ಇವು ನಿದರ್ಶನಗಳು :

ಮಲ್ಲರಿಗೆ ತಲೆಗೊಂಬ ವಜ್ರವೊ
ಫುಲ್ಲಲೋಚನೆಯರಿಗೆ ತನುಗೊಂ
ಡೆಲ್ಲರನು ಮೋಹಿಸಲು ಬಂದಭಿನವ ಮನೋಭವನೊ
ಖುಲ್ಲಜನರಿಗೆ ಶಾಸಕನೊ ಮೇ
ಚೆಲ್ಲರಿಗೆ ಬಾಂಧವನೊ ಎನೆ ಸಿರಿ
ವಲ್ಲಭನು ತೋಱಿದನು ನೋಳ್ಪರ ಕಣ್ಗಳಿಗೆ ನಿಜವ

ಮತ್ತೆ ಶಿಶುವಿನವೋಲು ತನ್ನಯ
ಹೆತ್ತ ತಾಯ್ತಂದೆಯರನೀಕ್ಷಿಪ
ಮರ್ತ್ಯರಿಗೆ ನರವರನ ಹೋಲುವ ಕಂಸಭೂಪತಿಗೆ
ಮೃತ್ಯು ತಾನೆಂಬಂತೆ ಯೋಗ ವಿ
ದುತ್ತಮರಿಗೀಕ್ಷಿಸಲು ಪರತರ
ತತ್ವವೇ ತಾನಾಗಿ ಮೆಱೆದನು ರಂಗಮಧ್ಯದಲಿ ೧೦, ೩೭–೩೮

ಪ್ರಸಿದ್ಧವಾದ ಈ ಅಲಂಕಾರಗಳಲ್ಲದೆ ಅನುಭವಪೂರ್ಣವಾದ ಗಾದೆಗಳ ಸುರಿಮಳೆಯೇ ಇಲ್ಲಿ ಉಂಟು ಎನ್ನುವುದಕ್ಕೆ ಕೆಲವು ನಿದರ್ಶನಗಳು; ದಶಮಸ್ಕಂಧದಿಂದ; "ಹಗೆ ಹಲವು ಜನ್ಮಾಂತರಕೆ ಬಿಡದು." (೨–೧೨); "ಕಾಯುವಿದು ಕಾಲಂಗೆ ಕಟ್ಟಿದ ಬೋನ" (೪–೩೨); "ಅನ್ಯರಿಂಗೆಹಿತವನು ಬಗೆದೇ ಬನ್ನಬಡುವುದು ಲೋಕ" (೧೧–೪೫); "ನಾಡ ಮಾತಿನ ಹರದ ವಾರ್ತೆಗೆ ಹೂಡಿಕೆನಗೀ ಗರ್ವ ಪರ್ವತ ಕೇಡನೇ ನಿಶ್ಚಯಿಸಿ" (೧೪–೨೦); "ಸಾಯರೇ ಹುಟ್ಟಿದವರು" (೧೫–೨೪); "ಪತಿಗಳಿಗೆ ಶುಶ್ರೂಷೆ ಮಾಳ್ಪುದು ಸತಿಯರಿಗೆ ಸದ್ಧರ್ಮ" (೩೫–೨೯). ಹೀಗೆಯೇ ನಿದರ್ಶನಗಳನ್ನು ಲಂಬಿಸಬಹುದು. ಆದರೆ ಇದಕ್ಕೆ ಕೊನೆ ಮೊದಲೆಲ್ಲಿ? ಒಂದು ವಿಶೇಷವೇನೆಂದರೆ ಮೇಲೆ ಕೊಟ್ಟಿರುವ ಅಲಂಕಾರ, ಗಾದೆಗಳಲ್ಲಿ ಬಹುಪಾಲು ಮೂಲದಲ್ಲಿಲ್ಲ.

ಭಾಗವತ ಅನೇಕ ಆಖ್ಯಾನ ಉಪಾಖ್ಯಾನಗಳನ್ನು ಒಳಗೊಂಡ ಮಹಾಪುರಾಣವಷ್ಟೆ. ಇದರಲ್ಲಿ ಎಷ್ಟೊಂದು ಸನ್ನಿವೇಶಗಳೂ ವ್ಯಕ್ತಿಗಳೂ ಮೂಡಿ ಬರುತ್ತಾರೆ! ಆದ್ದರಿಂದ ಇಲ್ಲಿ ನವರಸಗಳ ಪ್ರವಾಹವನ್ನೇ ಕವಿ ಹರಿಯಿಸಿದ್ದಾನೆಂದರೆ ಅದೇನೂ ಅತಿಶಯೋಕ್ತಿಯಲ್ಲ. ಉದಾಹರಣೆಗೆ, ಕಲಿ ಗೋರೂಪಿಯಾದ ಭೂಮಿಯನ್ನು ಹಿಂಸಿಸಿದ ಸಂದರ್ಭವನ್ನು ಕರುಣರಸಕ್ಕೆ ನಿದರ್ಶನವಾಗಿ ಕೊಡಬಹುದು. ಯುದ್ಧ ಪ್ರಸಂಗಗಳಲ್ಲಿ ವೀರರಸವನ್ನೂ, ವಿಶ್ವರೂಪ ಪ್ರದರ್ಶನದಲ್ಲಿ ಮತ್ತು ತ್ರಿವಿಕ್ರಮಾವತಾರ ಸಂದರ್ಭದಲ್ಲಿ ಹಾಗೂ ಶ್ರೀಕೃಷ್ಣನ ಬಾಲಲೀಲಾಪ್ರಸಂಗದಲ್ಲಿ ಅದ್ಭುತ ರಸವನ್ನೂ ಕಾಣಬಹುದು. ಶೃಂಗಾರ ಇಲ್ಲಿ ಮುಖ್ಯರಸವಲ್ಲದಿದ್ದರೂ ಅದರ ತೆಳುಲೇಪವನ್ನು ಅಲ್ಲಲ್ಲಿ ಕಾಣಬಹುದು. ಮೋಹಿನಿಯ ರೂಪಕ್ಕೆ ಸಾಕ್ಷಾತ್ ರುದ್ರನೇ ಮರುಳಾದನಂತೆ! ಹಾಗೆಯೇ ಮಿಕ್ಕ ರಸಗಳನ್ನು ಸಂದರ್ಭಕ್ಕೆ ತಕ್ಕಂತೆ ಇಲ್ಲಿ ಕಾಣಬಹುದು. ಭಾಗವತದಲ್ಲಿ ನವರಸಗಳು ಪ್ರತಿಪಾದಿತವಾಗಿದ್ದರೂ ಒಟ್ಟಿನಲ್ಲಿ ಅದು ವಿಷ್ಣುಭಕ್ತಿಯನ್ನು

ನಮ್ಮ ಹೃದಯದಲ್ಲಿ ಉದ್ಬೋಧಿಸುವ ಗ್ರಂಥವಾಗಿದ್ದು, ಅದಕ್ಕೆ ತಕ್ಕಂತೆ ಕಾವ್ಯದ ಶೈಲಿ ರೂಪುಗೊಂಡಿದೆ.

ಈ ಕಾವ್ಯದ ಸಮಾರೋಪದ ರೂಪವಾಗಿ ಇಷ್ಟನ್ನು ಹೇಳಬಹುದೆಂದು ತೋರುತ್ತದೆ. ವಿಷ್ಣುಪುರಾಣಾಂತರ್ಗತವಾದ ಕೃಷ್ಣಕಥೆಯನ್ನು ಕನ್ನಡದಲ್ಲಿ ಮೊದಲು ನಿರೂಪಿಸಿದವನು ರುದ್ರಭಟ್ಟ. ಆದರೆ ಅವನು ರಚಿಸಿದ್ದು ಕೃಷ್ಣಕಥೆಯೇ ಹೊರತು ಭಾಗವತವಲ್ಲ. ಕವಿಯ ಕೃತಿಯಾದ 'ಜಗನ್ನಾಥವಿಜಯ' ಪ್ರೌಢ ಚಂಪೂ ಕಾವ್ಯವಾಗಿದ್ದು ಪಂಡಿತರಿಗೆ ಮೆಚ್ಚಾಯಿತೇ ಹೊರತು ಜನಪ್ರಿಯವಾಗಲಿಲ್ಲ. ಆದರೆ ಸಂಸ್ಕೃತ ಭಾರತ ಅಷ್ಟಾದಶಮಹಾಪುರಾಣಗಳಲ್ಲಿ ಒಂದಾಗಿದ್ದು, 'ಕನ್ನಡ ಭಾಗವತ' ಅದರ ನೇರ ಸಂಗ್ರಹಾನುವಾದವಾಗಿದೆ. ಕನ್ನಡದಲ್ಲಿ ಇದು ಪ್ರಾಚೀನ ಅಧುನಿಕಾರ್ಥಗಳೆರಡರಲ್ಲಿಯೂ ಒಂದು ಮಹಾಕಾವ್ಯ. ಕನ್ನಡ ನಾಡಿನಲ್ಲಿ ಶೈವ ವೈಷ್ಣವ ಪಂಥಗಳ ಪುನರುತ್ಥಾನಕಾಲದಲ್ಲಿ ವೈಷ್ಣವ ಧರ್ಮದ ಪ್ರಚಾರಕ್ಕಾಗಿಯೇ ತಲೆಯೆತ್ತಿದ, ಭಾಮಿನೀಷಟ್ಪದಿಯಲ್ಲಿ ರಚಿತವಾದ ಮೂರು ಮಹಾಕಾವ್ಯಗಳಲ್ಲಿ ಕನ್ನಡ ಭಾಗವತವೂ ಒಂದಾಗಿದ್ದು, ಇದು ನಮ್ಮ ನಾಡಿನಲ್ಲಿ ಸಾಕಷ್ಟು ವೈಷ್ಣವ ಧರ್ಮವನ್ನು ಪ್ರಚಾರಮಾಡಿದೆ. ಮಿಕ್ಕ ಪುರಾಣಗಳಂತೆ ಇದೂ ದೈವಪ್ರಾಬಲ್ಯ ವನ್ನು ಎತ್ತಿ ಹಿಡಿದಿದೆ. (ಉದಾ: "ದೈವವಭಿಮುಖವಾದಡೆಲ್ಲಾ ಜೀವರಿಗೆ ಸುಖ"; "ದೈವಗತಿ ಬಾಧಕವು ತನಗಾಯ್ತು" ೧೦, ೪-೧೭, ೨೯). ಇದು ವರ್ಣಾಶ್ರಮ ಧರ್ಮಗಳನ್ನು ಎತ್ತಿಹಿಡಿದಿದ್ದರೂ, ಇತರ ಧರ್ಮಗಳನ್ನು ಎಲ್ಲಿಯೂ ತೆಗಳಿಲ್ಲ. ಇಷ್ಟೇ ಅಲ್ಲದೆ ವೈದಿಕಧರ್ಮಗಳಿಂದ ಸಿಡಿದುನಿಂತ ವ್ಯಕ್ತಿಗಳನ್ನೂ ಆ ಧರ್ಮಗಳ ಸಾರವನ್ನೂ ತನ್ನಲ್ಲಿ ಅಡಗಿಸಿಕೊಳ್ಳಲು ಯತ್ನಿಸಿದೆ. ಭಾಗವತ ವೈಷ್ಣವ ಧರ್ಮವನ್ನೂ ವಿಷ್ಣುಮಹಾತ್ಮ್ಯೆಯನ್ನೂ ಎಷ್ಟೇ ವಿಧವಾಗಿ ಹಾಡಿ ಹೊಗಳಿದರೂ, ಅದರಲ್ಲಿ ಎಲ್ಲಿಯೂ ಶಿವದೂಷಣೆ ಕಂಡುಬರುವುದಿಲ್ಲ. ಸಂಸ್ಕೃತ ಭಾಗವತವನ್ನು ಕನ್ನಡಿಸಿದವರು ಯಾರೇ ಆಗಿರಲಿ, ಎಷ್ಟು ಜನರೇ ಆಗಿರಲಿ, ಅವರೆಲ್ಲರೂ ಸಂಸ್ಕೃತದಲ್ಲಿ ನಿಷ್ಣಾತರಾಗಿದ್ದರೂ ಕನ್ನಡಲೋಕದ ಉಪಕಾರಕ್ಕಾಗಿ ಈ ಮಹಾಕೃತಿಯನ್ನು ಯತಿಯೊಬ್ಬನ ನೇತೃತ್ವದಲ್ಲಿ ಕನ್ನಡಿಸಲು ಮನಸ್ಸು ಮಾಡಿದುದು, ಅವರ ಕನ್ನಡದ ಅಭಿಮಾನಕ್ಕೆ ಸಾಕ್ಷಿಯಾಗಿದೆ. ಸಂಸ್ಕೃತಾಭಿಜ್ಞರಾದ ಅವರು ಕನ್ನಡವನ್ನು ಅವಜ್ಞೆ ಗೆಯ್ಯಲಿಲ್ಲ. ಇದಕ್ಕೆ ಪ್ರತಿಯಾಗಿ ವಿಷ್ಣುಮಹಾತ್ಮ್ಯೆಯನ್ನು ಜನರಲ್ಲಿ ಹರಡಿ, ಅವರು ಬದುಕಬೇಕೆಂಬ ಘನೋದ್ದೇಶದಿಂದ ಸರಳವಾದ ಭಾಷೆಯಲ್ಲಿ, ಪರಿಚಿತವಾದ ಅಲಂಕಾರ ಗಳಿಂದ, ಲೋಕೋಕ್ತಿಗಳಿಂದ ಮೂಲವನ್ನು ಕನ್ನಡಿಸಿದರು. ಈ ಕನ್ನಡ ಕೃತಿಯಲ್ಲಿ ಎಲ್ಲಿಯೂ ಶ್ಲೇಷೆ ಇಲ್ಲವೆಂದೇ ಹೇಳಬೇಕು. ಶೃಂಗಾರ ಬಂದಿದ್ದರೂ ಅದರ ಲೇಪ ತೆಳು ಎಂದು ಈ ಮೊದಲೆ ಹೇಳಿದೆ. ಇದು ಆ ಕಾಲದ ಜನಜೀವನದ ಒಂದು ವಿಶ್ವಕೋಶ, ವೇದೋಪನಿಷತ್ತುಗಳ ಸಾರಸಂಗ್ರಹವನ್ನೇ ಇಲ್ಲಿ ಕಾಣಬಹುದು. ಈ ನಮ್ಮ ಕವಿಗಳು ಮಿಕ್ಕ ಯಾವ ಕನ್ನಡ ಕವಿಯನ್ನು—ತಾವು ಯಾವ ಪೂರ್ವಕವಿಗಳಿಂದ

ಉಪಕೃತರಾಗಿರುವರೋ ಅವರನ್ನೂ ಕೂಡ–ನೆನೆಯದಿದ್ದರೂ, ಅವರ ಕೃತಿಯ ಜನಪ್ರಿಯತೆಗೆ ಯಾವ ಕುಂದೂ ಬಂದಿಲ್ಲ. ಜನತೆಯ ಮೇಲೆ ಇಂದಿಗೂ ಮಾಸದ ಅದರ ಅವ್ಯಕ್ತ ಪ್ರಭಾವವನ್ನು ಅಳೆಯುವುದು ಹೇಗೆ? ಕೆಲವರು ಇದನ್ನು ಪಾರಾಯಣ ಗ್ರಂಥವನ್ನಾಗಿ ಉಪಯೋಗಿಸಿದರೆ, ಮತ್ತೆ ಕೆಲವರು ಪುರಾಣವನ್ನಾಗಿ ಇದನ್ನು ಓದಿಸಿಯೋ ಕೇಳಿಸಿಯೋ ತೃಪ್ತಿಪಟ್ಟು ಸುಖಪಡುತ್ತಾರೆ. ಕನ್ನಡ ಭಾಗವತದಲ್ಲಿ ಬರುವ ಸ್ಯಮಂತಕೋಪಾಖ್ಯಾನ, ಧ್ರುವಚರಿತ್ರೆ, ಗಜೇಂದ್ರಮೋಕ್ಷ, ಅಜಾಮಿಳನ ಕಥೆಗಳಂತಹವು ಈಗಲೂ ಜನರ ಮೆಚ್ಚುಗೆಯನ್ನು ಪಡೆದು ಅವರ ಹೃನ್ಮನಗಳಲ್ಲಿ ಸ್ಥಾನವನ್ನು ಪಡೆದುಕೊಂಡಿವೆ. ಹೆಚ್ಚು ಮಾತಿನಿಂದೇನು? ಕನ್ನಡ ಸಾಹಿತ್ಯದ ಒಂದು ಗಟ್ಟಿಕಾಳು 'ಕನ್ನಡ ಭಾಗವತ'.

ಪೌಲೋಮ ಆಸ್ತೀಕ ಪರ್ವಗಳು

ಪೌಲೋಮ, ಆಸ್ತೀಕಪರ್ವಗಳನ್ನು ಬರೆದ ಕವಿ ಯಾರೆಂದು ಕೃತಿಯಲ್ಲಿ ಎಲ್ಲಿಯೂ ಹೇಳಿಲ್ಲ. ಕನ್ನಡ ಭಾಗವತದ ಎಲ್ಲ ಸ್ಕಂಧಗಳ ಸಂಧಿಗಳ ಕೊನೆಯಲ್ಲಿ, ಸಾಮಾನ್ಯವಾಗಿ ದಶಮಸ್ಕಂಧದ ಪ್ರತಿಸಂಧಿಯಲ್ಲಿ 'ನಿತ್ಯಾತ್ಮ' ಎಂಬ ಅಂಕಿತ ತಪ್ಪದೆ ಬರುತ್ತದೆ. ಈ ಸಂಧಿಯ ಕೊನೆಯಲ್ಲಿ ಇದರ ರಚಕ ಸದಾನಂದಯೋಗೀಂದ್ರನೆಂದು ಉಕ್ತವಾಗಿದೆ. ಈ ಕೃತಿಯಲ್ಲಾದರೋ ಪ್ರತಿಸಂಧಿಯೂ 'ನಿತ್ಯಾತ್ಮನಾರಾಯಣ', 'ಪದುಮದೃಶ ನಿತ್ಯಾತ್ಮ', 'ನಿತ್ಯಾತ್ಮ ಮುರವೈರಿ', 'ನಿತ್ಯಾತ್ಮ' ಇವೇ ಮೊದಲಾದ ಅಂಕಿತಗಳಿಂದ ಮುಕ್ತಾಯವಾಗುತ್ತದೆ. ಈ ವಿಷಯವನ್ನು ಪರಿಶೀಲಿಸಿದ ಈ ಕಾವ್ಯದ ಸಂಪಾದಕರುಗಳು, ಈ ಕೃತಿಯ ಕರ್ತೃ ಸದಾನಂದನೆಂಬ ತೀರ್ಮಾನಕ್ಕೆ ಬಂದಿದ್ದಾರೆ.[1] 'ನಿತ್ಯಾತ್ಮ'ನೆಂಬ ಅಂಕಿತವನ್ನಿಟ್ಟುಕೊಂಡಿದ್ದ 'ಸದಾನಂದ' ಈ ಕಾವ್ಯದ ಕರ್ತೃವೆಂಬ ಸಂಪಾದಕರ ನಿಲುವನ್ನು ಒಪ್ಪಬಹುದೆಂದು ತೋರುತ್ತದೆ. ಕವಿಚರಿತೆಕಾರರದೂ ಇದೇ ಬಹುಮಟ್ಟಿಗೆ ನಿಲವು. ಇದು ಸರಿಯಾದುದಾಗಿದ್ದರೆ, ಕನ್ನಡ ಭಾರತದ ಸಹಕರ್ತೃವಾದ ಸದಾನಂದನು ಮಹಾಭಾರತದ ಆದಿಪರ್ವದ ಆದಿ ಭಾಗಗಳಾದ ಕುರುಪಾಂಡವರ ಕಥೆಗೆ ಉಪೋದ್ಘಾತಗಳಂತಿರುವ ಪೌಲೋಮ ಆಸ್ತೀಕ ಪರ್ವಗಳನ್ನು ರಚಿಸಿರುವನೆಂದು ಹೇಳಬಹುದು. ಅಲ್ಲದೆ ಈ ಕವಿ ಮಹಾಭಾರತದ ಕಥೆ ಆರಂಭವಾಗುವುದಕ್ಕಿಂತ ಮುಂಚೆ ಬರುವ ದುಷ್ಯಂತ–ಶಕುಂತಳೆ, ಯಯಾತಿ ಮುಂತಾದವರ ಉಪಾಖ್ಯಾನಗಳನ್ನು ರಚಿಸಿರಬೇಕೆಂದು ಕವಿಚರಿತೆಕಾರರು ಊಹಿಸುತ್ತಾರೆ. ಒಂದು ದೃಷ್ಟಿಯಿಂದ ಈ ಊಹೆಯನ್ನು ಸಮರ್ಥಿಸಬಹುದು. ಮಹಾಭಾರತದ ಕಥೆ ಪ್ರಾರಂಭವಾಗುವುದು ಶಂತನುವಿನ ಆಳ್ವಿಕೆಯಿಂದ. ಇದು ಸುಕ್ತಾಂಕರ್ ಅವರ ಪರಿಷ್ಕರಣದಲ್ಲಿ ೯೦ನೆಯ ಅಧ್ಯಾಯ. ಶಂತನುವಿನ ಕಥೆ ಮೊದಲಾಗುವುದಕ್ಕಿಂತ ಮುಂಚೆ ಮೇಲೆ ಹೇಳಿದ ಕಥೆಗಳನ್ನು ವಿಸ್ತಾರವಾಗಿ ಮಹಾಭಾರತ ನಿರೂಪಿಸುತ್ತದೆ. ಪಂಪನು ವಂಶಾವತಾರ ಕಥೆಯನ್ನು ಬ್ರಹ್ಮ ಅತ್ರಿಗಳಿಂದ ಮೊದಲು ಮಾಡಿ,

ಭರತನನ್ನು ಹೊಗಳಿ ಶಂತನುವಿನಿಂದ ಕಥೆಯನ್ನು ಪ್ರಾರಂಭಿಸುತ್ತಾನೆ. ಈ ವಿಷಯದಲ್ಲಿ ಪಂಪನನ್ನು ಅನುಸರಿಸಿರುವ ಕುಮಾರವ್ಯಾಸನು 'ವಿಕ್ರಮಾರ್ಜುನವಿಜಯ'ದಲ್ಲಿ ಕಾಣಬರದ ಒಂದೆರಡು ಉಪಾಖ್ಯಾನಗಳನ್ನೂ ಹೆಸರುಗಳನ್ನೂ ತಿಳಿಸುತ್ತಾನೆ. ಪಂಪನಲ್ಲಿಲ್ಲದ ಗರುಡ ಆಸ್ತೀಕರ ವಿಷಯ ಕುಮಾರವ್ಯಾಸದಲ್ಲಿ ಹೀಗೆ ನಿರೂಪಿತವಾಗಿದೆ:

ಹೇಳಿದನು ಪೌಲೋಮ ಚರಿತೋ
ದ್ದಾಲಕಾಖ್ಯರ ಚರಿತವನು ಮುನಿ
ಹೇಳಿದನು ಫಣಿನಿಕರ ಗರುಡಾಸ್ತಿಕರ ಸಂಭವವ
ಮೇಲೆ ಬಳಿಕ ಪರೀಕ್ಷಿದವನೀ
ಪಾಲ ಶಾಪದ ಮರಣವನು ನೆಱೆ
ಹೇಳಿದನು ಮುನಿಗಳಿಗೆ ಸರ್ಪಾಧ್ವರದ ಸಂಗತಿಯ (ಕು.ಭಾ. ೧, ೨–೧೩)

ಮೇಲೆ ಹೇಳಿದ ವೃತ್ತಾಂತವನ್ನಲ್ಲದೆ ಕುಮಾರವ್ಯಾಸನು ಪುರೂರವ, ನಹುಷ, ಯಯಾತಿ, ದುಷ್ಯಂತ, ಭರತ, ಕುರು, ಹಸ್ತಿ, ಪ್ರತೀಪ ಇವರ ವಿಷಯಗಳನ್ನು ಒಂದು ಮಾತಿನಲ್ಲೋ ವಾಕ್ಯದಲ್ಲೋ ನಿರೂಪಿಸಿ ಶಂತನುವಿನಿಂದ ಕಥೆಯನ್ನು ಆರಂಭಿಸಿದ್ದಾನೆ. ಕುಮಾರವ್ಯಾಸನಿಂದ ಗಾಢವಾಗಿ ಪ್ರಭಾವಿತನಾಗಿರುವ ಈ ಕವಿ ಕುಮಾರವ್ಯಾಸಭಾರತದಲ್ಲಿ ಸೂಚನೆಯ ರೂಪದಲ್ಲಿರುವ ಈ ಭಾಗಗಳನ್ನು ವಿಸ್ತಾರವಾಗಿ ರಚಿಸಿರಬೇಕು. ಹಾಗೆಯೇ ಶಂತನುವಿನ ಕಥೆ ಬರುವವರೆಗೆ ಉಳಿದ ಕಥೆಗಳನ್ನು ಕವಿ ರಚಿಸಿದ್ದರೆ ಅದು ಅಸಂಭವವೇನಲ್ಲ. ಆದರೂ ಕೃತಿ ದೊರಕುವವರೆಗೂ ಮೇಲೆ ನಿರೂಪಿಸಿರುವ ಅಂಶ ಊಹೆಯಾಗಿಯೇ ಉಳಿಯುತ್ತದೆ.

ಕನ್ನಡದ ಯಾವ ಕವಿಯನ್ನೂ ಹೆಸರಿಸದೆ, ಸದಾನಂದನು ತನ್ನ ಕಾವ್ಯದಲ್ಲಿ ವೇದವ್ಯಾಸ, ಶುಕ, ವಾಲ್ಮೀಕಿಗಳನ್ನು ಸ್ಮರಿಸಿದ್ದಾನೆ.

ಕಥಾಸಾರ

ನೈಮಿಶಾರಣ್ಯದಲ್ಲಿ ಶೌನಕನು ನಡೆಸಿದ ಯಜ್ಞಕ್ಕೆ ಬಂದಿದ್ದ ಸೂತನು ಅಲ್ಲಿ ಸೇರಿದ್ದ ಋಷಿಗಳ ಕೋರಿಕೆಯಂತೆ ಮಹಾಭಾರತಕ್ಕೆ ಮೂಲವಾದ ಪೌಲೋಮ ಪರ್ವದ ಕಥೆಯನ್ನು ಹೇಳಿದನು.

ಭೃಗುವಿನ ಪತ್ನಿ ಪುಲೋಮೆ. ಒಮ್ಮೆ ಭೃಗು ಸ್ನಾನಕ್ಕೆ ಹೋಗಿದ್ದಾಗ, ಗರ್ಭಿಣಿಯಾದ ಪುಲೋಮೆ ಒಬ್ಬಳೇ ಇದ್ದುದನ್ನು ಕಂಡು ಬ್ರಾಹ್ಮಣ ವೇಷದಲ್ಲಿ ಬಂದ ಪುಲೋಮನೆಂಬ ರಾಕ್ಷಸನು ನೋಡಿ ಅವಳಲ್ಲಿ ಮೋಹಿತನಾದನು. (ಈ ಮೊದಲು ಪುಲೋಮೆಯನ್ನು ಅವಳ ತಂದೆ ಈ ಪುಲೋಮನಿಗೆ ಕೊಡುವೆನೆಂದು ಹೇಳಿ ಮೋಸಮಾಡಿದ್ದನು) ಅಲ್ಲಿದ್ದ ಅಗ್ನಿಯನ್ನು ರಾಕ್ಷಸನು ಪುಲೋಮೆ ಯಾರ ಹೆಂಡತಿಯೆಂದು ಕೇಳಲು, ಅವನು ಭೃಗುವಿನ ಹೆಸರನ್ನು ಹೇಳಿದನು. ಆದರೂ ರಾಕ್ಷಸನು ಅವಳನ್ನು ಹೊತ್ತುಕೊಂಡು ಹೋದನು. ದಾರಿಯಲ್ಲಿ ಅವಳ ಗರ್ಭದಿಂದ

ಚ್ಯವನನು ಹುಟ್ಟಿ, ಅವನನ್ನು ಸುಟ್ಟು ಹಾಕಿದನು. ಆಶ್ರಮಕ್ಕೆ ಹಿಂದಿರುಗಿದ ಭೃಗು ನಡೆದ ಸಂಗತಿಯನ್ನು ತಿಳಿದು ಅಗ್ನಿಗೆ ಸರ್ವಭಕ್ಷಕನಾಗುವಂತೆ ಶಾಪಕೊಟ್ಟನು. ಅಗ್ನಿ ಮರೆಯಾಗಲು ಲೋಕದಲ್ಲಿ ಹವ್ಯಕವ್ಯಾದಿಗಳು ನಿಂತುಹೋದವು. ಬ್ರಹ್ಮನು ಅಗ್ನಿಯನ್ನು ಸಮಾಧಾನ ಪಡಿಸಲು, ಅವನು ಕಾಣಿಸಿಕೊಂಡನು.

ಚ್ಯವನ ಸುಕನ್ಯೆಯರ ಮಗ ಪ್ರಮತಿ. ಇವನು ಘೃತಾಚಿಯನ್ನು ಮದುವೆಯಾಗಿ ರುರುವೆಂಬ ಮಗನನ್ನು ಪಡೆದನು. ಇವನು ಮೇನಕೆಯ ಮಗಳಾದ ಪ್ರಮದ್ವರೆಯನ್ನು ಮದುವೆಯಾಗಿ ಸುಖದಿಂದಿರಲು, ಒಮ್ಮೆ ಅವಳು ಕಾಡಿನಲ್ಲಿ ಹಾವನ್ನು ತುಳಿದು ಸತ್ತಳು. ದೇವತೆಗಳ ಮಾತಿನಂತೆ ಪ್ರಿಯಪತ್ನಿಗಾಗಿ ರುರು ತನ್ನ ಆಯುಷ್ಯದಲ್ಲಿ ಅರ್ಧವನ್ನು ಕೊಟ್ಟು ಅವಳನ್ನು ಬದುಕಿಸಿದನು. ಅಂದಿನಿಂದ ರುರುವಿಗೆ ಹಾವುಗಳನ್ನು ಕಂಡರೆ ದ್ವೇಷವುಂಟಾಗಿ, ಕಂಡಲ್ಲಿ ಅವುಗಳನ್ನು ಕೊಲ್ಲುತ್ತಿದ್ದನು. ಒಮ್ಮೆ ರುರು ಡುಂಡುಭನೆಂಬ ಹಾವನ್ನು ಕೊಲ್ಲಲು ಯತ್ನಿಸಿದಾಗ ತಾನು ವಿಷಸರ್ಪವಲ್ಲವಾದುದರಿಂದ ತನ್ನನ್ನು ಕೊಲ್ಲಕೂಡದೆಂದೂ, ಮುಂದೆ ಜನಮೇಜಯನು ಸರ್ಪಯಾಗ ಮಾಡುವನೆಂದೂ ಅಲ್ಲಿ ಸರ್ಪವಧೆಯಾಗುವುದೆಂದೂ ಹೇಳಿ ತನ್ನ ಪೂರ್ವವೃತ್ತಾಂತವನ್ನು ನಿರೂಪಿಸಿ ಡುಂಡುಭನು ಅಂತರ್ಧಾನನಾದನು. ರುರು ತನ್ನ ತಂದೆಯಿಂದ ಸರ್ಪಯಾಗದ ವಿವರಗಳನ್ನು ತಿಳಿದನು. ಇದು ಪೌಲೋಮ ಪರ್ವದ ಕಥೆಯ ಸಾರ.

ಒಮ್ಮೆ ಕಶ್ಯಪನ ಪತ್ನಿಯರಾದ ಕದ್ರುವಿನತೆಯರಲ್ಲಿ, ತನಗೆ ಸಾವಿರ ಸರ್ಪಸಂತಾನವಾಗಬೇಕೆಂದು ಕದ್ರುವೂ, ವೀರ್ಯವಂತರಾದ ಇಬ್ಬರು ಮಕ್ಕಳು ಸಾಕೆಂದು ವಿನತೆಯೂ ಆತನಲ್ಲಿ ವರವನ್ನು ಬೇಡಿದರು. ಕಶ್ಯಪನು ಅದನ್ನು ಅನುಗ್ರಹಿಸಿದನು. ಕಾಲಕ್ರಮದಲ್ಲಿ ಕದ್ರುವಿಗೆ ಸಾವಿರಸರ್ಪಗಳೂ ವಿನತೆಗೆ ಎರಡು ಅಂಡಗಳೂ ಹುಟ್ಟಿದವು. ಐನೂರು ವರ್ಷಗಳಾದರೂ ಮೊಟ್ಟೆಯೊಡೆದು ಪಕ್ಷಿಗಳು ಹೊರಬರಲಿಲ್ಲ. ತನ್ನ ಸವತಿಗೆ ಮೊದಲು ಮಕ್ಕಳಾದುದರಿಂದ ಹೊಟ್ಟೆಯುರಿದ ವಿನತೆ ಒಂದು ಮೊಟ್ಟೆಯನ್ನು ಒಡೆದಳು. ಇದರಿಂದ ಹೊರಬಂದವನೇ ತೊಡೆಗಳಿಲ್ಲದ ಅರುಣ. ತಾಯಿಯಿಂದ ತನಗಾದ ಅವಸ್ಥೆಗೆ ನೊಂದ ಅರುಣನು ಆಕೆ ಐನೂರು ವರ್ಷಕಾಲ ಸವತಿಗೆ ತೊತ್ತಾಗುವಳೆಂದೂ ಇನ್ನೊಂದು ಅಂಡವನ್ನು ಎಚ್ಚರಿಕೆಯಿಂದ ಕಾಪಾಡಿದಲ್ಲಿ ಆ ಮಗನು ಅವಳ ಸೆರೆಯನ್ನು ಬಿಡಿಸುವನೆಂದೂ ಹೇಳಿ ಸೂರ್ಯನ ಸಾರಥಿಯಾಗಿ ಹೊರಟುಹೋದನು. ಹೀಗೆ ಕೆಲವು ಕಾಲ ಕಳೆಯಿತು.

ಒಮ್ಮೆ ಕದ್ರುವಿನತೆಯರು ಕಡಲತೀರದಲ್ಲಿದ್ದಾಗ ಉಚ್ಚೈಶ್ರವಸ್ಸನ್ನು ಕಂಡರು. ಅದರ ಬಾಲದ ಬಣ್ಣ ಕಪ್ಪೋ ಬಿಳುಪೋ ಎಂಬ ವಿಷಯದಲ್ಲಿ ಇಬ್ಬರಲ್ಲಿಯೂ ಸ್ಪರ್ಧೆ ಹುಟ್ಟಿತು. ಕದ್ರು ಕುದುರೆಯ ಬಾಲದ ಬಣ್ಣ ಕಪ್ಪು ಎಂದಳು; ವಿನತೆ ಬಿಳುಪು ಎಂದಳು. ಇದರ ಪರೀಕ್ಷೆ ನಡೆದು, ಸೋತವಳು ಗೆದ್ದವಳ ದಾಸಿಯಾಗಬೇಕೆಂಬ ಪಂಥವೇರ್ಪಟ್ಟಿತು. ಉಚ್ಚೈಶ್ರವಸ್ಸಿನ ಬಾಲ ಬಿಳುಪೆಂಬುದು ಕದ್ರುವಿಗೆ ಗೊತ್ತು.

ಆದರೆ ತನ್ನ ಮಾತನ್ನು ಸತ್ಯವಾಗಿಸಿಕೊಳ್ಳಲು ಕದ್ರು ಮಕ್ಕಳನ್ನು ಪ್ರಾರ್ಥಿಸಿಕೊಳ್ಳಲು, ಈ ಅನ್ಯಾಯಕ್ಕೆ ಅವರು ಒಪ್ಪಲಿಲ್ಲ. ಒಪ್ಪದವರು ಜನಮೇಜಯನ ಯಾಗದಲ್ಲಿ ನಾಶವಾಗಲಿಯೆಂದು ತಾಯಿ ಶಾಪಕೊಟ್ಟಳು. ತಾಯಿಯ ಶಾಪಕ್ಕೆ ಹೆದರಿದ ಸರ್ಪಗಳು ಉಚ್ಚೈಶ್ರವಸ್ಸಿನ ಬಾಲದಲ್ಲಿ ಸೇರಿಕೊಂಡು ಆಕೆಯ ಮಾತನ್ನು ನಿಜವಾಗಿಸಿದರು. ವಿನತೆ ಕದ್ರುವಿನ ದಾಸಿಯಾದಳು.

ಕಾಲಕ್ರಮದಲ್ಲಿ ಮೊಟ್ಟೆಯಿಂದ ಹೊರಬಂದ ಗರುಡನು ತಾಯಿ ವಿನತೆಯ ದುರ್ದೆಸೆಯನ್ನರಿತು, ಅವಳ ಸೆರೆಯನ್ನು ಬಿಡಿಸುವುದಕ್ಕಾಗಿ ಕದ್ರುವಿನ ಮಾತಿನಂತೆ ಅಮೃತವನ್ನು ತರಲು ತಾಯಿತಂದೆಗಳ ಆಶೀರ್ವಾದವನ್ನು ಪಡೆದು ಸ್ವರ್ಗಕ್ಕೆ ಹೊರಟನು. ಬಲವಾಗಿ ಕಾವಲಿದ್ದ ಸ್ವರ್ಗಕ್ಕೆ ಗರುಡನು ನುಗ್ಗಿ ದೇವತೆಗಳನ್ನು ಸದೆಬಡೆದು ಅಮೃತವನ್ನು ಅಪಹರಿಸಿಕೊಂಡು ಹೋದನು. ಅಮೃತವನ್ನು ಕೊಂಡೊಯ್ಯುತ್ತಿದ್ದ ಗರುಡನನ್ನು ಇಂದ್ರನು ಮೃದುವಾದ ಮಾತುಗಳಿಂದ ಒಲಿಸಿಕೊಂಡು, ಅದು ಸರ್ಪಗಳಿಗೆ ದಕ್ಕದಂತೆ ಮಾಡಲು ಆಲೋಚಿಸಿದನು. ಅಮೃತಕಲಶವನ್ನು ತಂದು ದರ್ಭೆಯ ಮೇಲಿಟ್ಟು, ಈ ವಿಷಯವನ್ನು ಸರ್ಪಗಳಿಗೂ ಕದ್ರುವಿಗೂ ತಿಳಿಸಿ, ಗರುಡನು ತಾಯಿಯ ಸೆರೆಯನ್ನು ಬಿಡಿಸಿದನು. ಅಮೃತವನ್ನು ಸವಿಯಲು ಮಿಂದು ಮಡಿಯುಟ್ಟು ಸರ್ಪಗಳು ಬಂದು ನೋಡುತ್ತವೆ! ಅಮೃತಕಲಶ ಅಲ್ಲಿಲ್ಲ; ಇಂದ್ರನು ಅದನ್ನು ಅಪಹರಿಸಿಬಿಟ್ಟಿದ್ದನು. ಅಮೃತದ ಅವಶೇಷವಿರಬಹುದೆಂಬ ಭ್ರಮೆಯಿಂದ ದರ್ಭೆಯನ್ನು ನೆಕ್ಕಿ ನಾಲಗೆಯನ್ನು ತುಂಡಾಗಿಸಿಕೊಂಡದ್ದೇ ಸರ್ಪಗಳಿಗೆ ಲಾಭವಾಯಿತು.

ಇತ್ತ ವಾಸುಕಿಗೆ ತಾಯಿಯ ಶಾಪದ ಚಿಂತೆ ಬಲವಾಗಿ ಮಂತ್ರಿಗಳ ಸಭೆ ಸೇರಿಸಿ ಸಭೆಯಲ್ಲಿದ್ದ ಯಾಯಾವರ ವಂಶದ ಜರತ್ಕಾರುವಿನ ಮಗನಾದ ಆಸ್ತೀಕನಿಂದ ತಮಗೆ ಕ್ಷೇಮವಾಗುವ ಅಂಶವನ್ನು ಏಲಾಪುತ್ರನಿಂದ ಅರಿತನು. ಮದುವೆಮಾಡಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆಮಾಡಿದ್ದ ತಪಸ್ವಿ ಜರತ್ಕಾರು. ಆದರೆ ನರಕದಲ್ಲಿ ಬೀಳುತ್ತಿದ್ದ ಪಿತೃಗಳಿಗೆ ಸದ್ಗತಿಯನ್ನುಂಟುಮಾಡಲು, ತನ್ನ ಹೆಸರಿನ ವಾಸುಕಿಯ ತಂಗಿಯನ್ನು ಮದುವೆಯಾಗಿ ಅವಳಲ್ಲಿ ಆಸ್ತೀಕನೆಂಬ ಮಗನನ್ನು ಪಡೆದನು.

ಕಾಲಕ್ರಮದಲ್ಲಿ ತನ್ನ ತಂದೆಯನ್ನು ಕಚ್ಚಿಕೊಂದ ತಕ್ಷಕನನ್ನು ನಾಶಮಾಡಲು ಪಾಂಡವರ ಮರಿಮಗನಾದ ಜನಮೇಜಯನು ಸರ್ಪಯಾಗವನ್ನು ಆಚರಿಸಿದನು. ತಕ್ಷಕನು ಇಂದ್ರನನ್ನು ಮರೆಹೊಕ್ಕರೂ ಉಪಯೋಗವಾಗಲಿಲ್ಲ. ಇನ್ನೇನು ತಕ್ಷಕನು ಅಗ್ನಿಗೆ ಆಹುತಿಯಾಗಬೇಕು ಆ ಸಂದರ್ಭದಲ್ಲಿ, ಯಾಗಶಾಲೆಗೆ ಬಂದ ಆಸ್ತೀಕನ ಆಕಾರ, ಮಾತು, ಸ್ತೋತ್ರಗಳಿಂದ ಸುಪ್ರೀತನಾದ ಜನಮೇಜಯನು ಸರ್ಪಯಾಗವನ್ನು ನಿಲ್ಲಿಸಿದನು. ಇದು ಆಸ್ತೀಕಪರ್ವದ ಕಥೆಯ ಸಾರ.

ಸ್ಥೂಲವಾಗಿ ಮೇಲಿನದು ಪೌಲೋಮ ಆಸ್ತೀಕಪರ್ವಗಳ ಕಥೆಯಾದರೂ, ನಡುನಡುವೆ ಶೌನಕರ ಪ್ರಶ್ನೆಯಿಂದ ಪ್ರೇರಿತರಾದ ಸೂತರು ಅನೇಕ ಉಪಕಥೆಗಳನ್ನು

ಹೇಳುತ್ತಾರೆ. ಅಂತಹವುಗಳಲ್ಲಿ ಕೆಲವು ಇಲ್ಲಿ ಉಲ್ಲೇಖನಾರ್ಹ. ಅವು ಯಾವುವೆಂದರೆ ಸತ್ಯ ನುಡಿದುದಕ್ಕಾಗಿ ಭೃಗು ಶಾಪಕೊಟ್ಟಿದ್ದು ಮತ್ತು ಅದರ ಪರಿಣಾಮ ; ಅರುಣನು ಸೂರ್ಯನಿಗೆ ಸಾರಥಿಯಾದದ್ದು ; ಗಜಕಚ್ಛಪರ ಕಥೆ ; ವಾಲಖಿಲ್ಯರ ಕಥೆ ; ಗರುಡ ಜನನ ಮತ್ತು ವಾಲಖಿಲ್ಯರಿಂದ ಇಂದ್ರನಿಗೆ ಶಾಪ, ಉದ್ದಾಲಕ ಉಪಮನ್ಯು ಉದಂಕ ಮತ್ತು ಅಗಸ್ತ್ಯರ ಕಥೆ ; ಸರ್ಪಯಾಗಕ್ಕೆ ಪೀಠಿಕೆಯಾಗಿ ಬರುವ ಪರೀಕ್ಷಿತರಾಜನ ವೃತ್ತಾಂತ ಈ ಕೆಲವು ಮತ್ತು ಇವಲ್ಲದೆ ಮುಖ್ಯ ಕಥೆಗೆ ಸಂಬಂಧಿಸಿದ ಕೊಂಡಿಕೀಲು ಗಳಂತಿರುವ ಕೆಲವು ಅಂಶಗಳೂ ಉಂಟು. ಈ ಮೇಲಿನ ಉಪಾಖ್ಯಾನಗಳು ಪ್ರಮುಖ ವಲ್ಲವೆಂದು ತೋರಿದರೂ ಮುಖ್ಯ ಕಥೆಗೆ ಒಂದು ಸಮಗ್ರತೆಯನ್ನು ಕೊಡುತ್ತವೆ.

ವಸ್ತು ವಿಮರ್ಶೆ

ಈ ಎರಡು ಪರ್ವಗಳ ಕಥಾಭೂಮಿಕೆ ಅಷ್ಟು ವಿಸ್ತಾರವಲ್ಲದಿದ್ದರೂ, ಇಲ್ಲಿ ಬರುವ ಹಲವು ಪಾತ್ರಗಳು ಮಿಂಚಿ ಮಾಯವಾಗುವ ಸ್ವಭಾವದವಾದರೂ ಕೆಲವು ಸಂದರ್ಭಗಳೂ ಪಾತ್ರಗಳೂ ವಾಚಕರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತವೆ.

ಭೃಗು ತಪಸ್ವಿ, ಶೀಘ್ರಕೋಪಿ, ಹೆಂಡತಿಯ ಬಾಯಿಂದ ಅಗ್ನಿಯ ಹೆಸರು ಕೇಳ ಬರುತ್ತಲೇ ಅವನಿಗೆ ಸರ್ವಭಕ್ಷನಾಗೆಂದು ಶಾಪಕೊಡುತ್ತಾನೆ. ಅವನಿಂದ ತಪ್ಪಿಲ್ಲ ವೆಂದು ತಿಳಿದಕೂಡಲೇ ಅಗ್ನಿಯನ್ನೂ ಹೆಂಡತಿಯನ್ನೂ ಮನ್ನಿಸಿ ಅವಳನ್ನೂ ಮಗನನ್ನೂ ಸ್ವೀಕರಿಸುತ್ತಾನೆ. ಚ್ಯವನ ಮೃಡನ ಅಪರರೂಪ. ಆದ್ದರಿಂದಲೇ ಹುಟ್ಟಿ ದೊಡನೆಯೇ ಅವನು ಪುಲೋಮನನ್ನು ದಹಿಸಿಬಿಡುತ್ತಾನೆ. ರುರುವಿಗೆ ಪತ್ನಿಯಾದ ಪ್ರಮದ್ವತಿಯಲ್ಲಿರುವ ಪ್ರೇಮ ಲೋಕೋತ್ತರವಾದದ್ದು. ಮೊದಲ ನೋಟದಲ್ಲಿಯೇ ಅವನಿಗೆ ಅವಳಲ್ಲಿ ಅನುರಾಗವುಂಟಾಗುತ್ತದೆ. ಅವಳು ಸರ್ಪದಷ್ಟಳಾಗಿ ಸತ್ತಾಗ, ಇತರರೆದುರಿಗೆ ಅಳುವುದಕ್ಕೆ ನಾಚಿ, ಅರಣ್ಯದಲ್ಲಿ ಅವನು ಹೆಂಡತಿಯನ್ನು ನೆನೆದು ದುಃಖಿಸಿದ ರೀತಿ ಕಲ್ಲನ್ನೂ ಕರಗಿಸುತ್ತದೆ. ಲೋಕದಲ್ಲಿ ಪ್ರಮದ್ವತಿಯಂತಹವರ ಸೌಂದರ್ಯವನ್ನು ಕಾಣುವುದು ಅಪೂರ್ವ.

ಏಕೆ ಕಂಡೆನು ಪೂರ್ವದಲಿ ಭುವ
ನೈಕರತ್ನವೆನಿಪ್ಪ ಸತಿಯನು
ಸೋಕಿ ಕಂಗಳು ಕೋಳುವೋಗದದೇಕೆ ಭಾಮಿನಿಗೆ
ಲೋಕದಲಿ ಹೋಲುವಳಾರೆ
ನ್ನಾಕೆಯನುಪಮರೂಪಗುಣಶೀ
ಲಾಕೃತಿಯನಾನೆಂತು ಮಱೆಯುವೆನೆಂದು ಹಳವಿಸಿದ (೩-೧೧)

ಆಕೆ ಬದುಕಲು ರುರು ದೇವತೆಗಳನ್ನು ಹೀಗೆ ಪ್ರಾರ್ಥಿಸುತ್ತಾನೆ :

ಉತ್ತಮರ ವಂಶದಲಿ ಜನಿಸಿದ
ವೃತ್ತವಂತನು ತಾನಹಡೆ ನಿಜ
ಮತ್ತಕಾಶಿನಿ ತನ್ನ ಮಱುಗಿಸದಂತೆ ಮಾಡಂವುದು

ವೃತ್ರರಿಪುಮುಖ್ಯರಿಗೆ ತಾಕೈ
ಯೆತ್ತಿದೆನು ಪೊಡವಟ್ಟು ಪಿತೃಗಳ
ವೊತ್ತವನು ಮಱೆಹೊಕ್ಕೆನೆಂದನು ವಿಪ್ರನಭಿನಮಿಸಿ (೩–೧೫)

ಗಂಡ ಸತ್ತಾಗ ಸಹಗಮನವನ್ನು ಸ್ವಸಂತೋಷದಿಂದ ಮಾಡಿದ ಮಹಾ ಸತಿಯರುಂಟು. ಆದರೆ ಸತ್ತ ಹೆಂಡತಿಯನ್ನು ಬದುಕಿಸಲು ತಮ್ಮ ಆಯುಷ್ಯದಲ್ಲಿ ಅರ್ಧವನ್ನು ಕೊಟ್ಟ ಪುರುಷರು ವಿರಳ. ನಮ್ಮ ಸಾಹಿತ್ಯದಲ್ಲಿಯಂತೂ ತೀರ ವಿರಳ. ಈ ದೃಷ್ಟಿಯಿಂದ ನೋಡಿದಾಗ ರುರು ಮಹಾಪುರುಷರ ಪಂಕ್ತಿಯಲ್ಲಿ ಸೇರಲು ಅರ್ಹನೆನಿಸುತ್ತಾನೆ.

ಆಸ್ತೀಕಪರ್ವದಲ್ಲಿ ಬರುವ ಪಾತ್ರಗಳಲ್ಲೆಲ್ಲ ಗರುಡನದು ತೇಜಶ್ಶಾಲಿಯಾದ ಪಾತ್ರವೆಂದು ಹೇಳಬೇಕು. ಅವನು 'ವಾಸುದೇವಾಂಶೋದ್ಭವ' ತೇಜಸ್ವಿ. ಅವನ ತೇಜಸ್ಸನ್ನು ಸಹಿಸಲಾರದೆ ದೇವತೆಗಳು ಅಗ್ನಿಯನ್ನು ಮರೆಹೋಗಬೇಕಾಯಿತು. ತಾಯಿಗೆ ಅಭಯಕೊಟ್ಟ ಗರುಡನಿಗೆ, ಕದ್ರುವಿನ ಮಕ್ಕಳು 'ಎಲವೊ ದಾಸಿಯ ಮಗನೆ' ಎಂದಾಗ ಅವನ ಆತ್ಮಾಭಿಮಾನ ಭುಗಿಲೆದ್ದಿತು. ಕದ್ರುವಿನಿಂದ, ಅವಳ ಮಕ್ಕಳಿಂದ ಆದ ಅನ್ಯಾಯವನ್ನು ತಿಳಿದ ಗರುಡನು ತಾಯಿಗೆ ಸಮಾಧಾನ ಹೇಳಿ ಅಭಯ ಕೊಡುತ್ತಾನೆ.

ಸಾಕು ಸಾಕಿ
ನ್ನಿಂದ ಮೇಲೆಲೆತಾಯೆ ಘಡತೊ
ತ್ತೆಂದರಾವೆಡೆ ತೊಡೆವೆನವದಿರ ಭಾಳದಕ್ಕರವ
ಕೊಂದಳನ್ಯಾಯದಲಿ ಹರಹರ
ಹಿಂದಿನಿತುದಿನ ಸಾಧ್ವಿಯನು ತಾ
ನಿಂದು ಮಱುಗಿದಡೇನು ಫಲವಿನ್ನು

ಶೋಕವನು ಬಿಡುತಾಯೆ ತಾನಿರ
ಲೇಕೆ ಭಯ ನಿನಗುರಗಗಿರಗರ
ಲೋಕವನು ನುಂಗುವೆನು ಮುನಿದರೆ ಪನ್ನಗೇಶ್ವರರ
ಸಾಕು ನಡೆಮನೆಗೆ (೭–೯–೧೦)

ಆದರೆ ತಾಯಿಕೊಟ್ಟ ಮಾತನ್ನು ನಡಸಿಯೇ ತೀರುವೆನೆಂದು ಹಟತೊಟ್ಟ ಕಾರಣ ಗರುಡನು ಅವಳ ಮಾತನ್ನು ಮನ್ನಿಸಿ ಅಮೃತ ತರಲು ಒಪ್ಪಬೇಕಾಯಿತು. ವಾಲಖಿಲ್ಯರು ಗರುಡನಿಗೆ ಪೂಜ್ಯರು. ಮರದ ಶಾಖೆಯಲ್ಲಿ ಹೊಸನೇಸಱಿನ ಮರಿ ಗಳಂತಿದ್ದ ಇವರನ್ನು ಕಂಡೊಡನೆಯೇ "ಕಿಚ್ಚಿನಲಿಬಿದ್ದಂತೆ ಖಗಪತಿ ಬೆಚ್ಚಿದನು ಬೆದಱಿದನು" "ಸಚ್ಚರಿತರಿವರಾರೊ ಮಾಡಿಯದಾಯ್ತು ಲಾತನಗೆ" ಎಂದು ಮರುಗಿದನು. ಕೆಳಗೆ ಶಾಖೆಯನ್ನು ಇಳಿಸಿದರೆ ಅವರೆಲ್ಲಿ ಕೋಪಗೊಳ್ಳುವರೋ ಎಂದು ಅಂತರಿಕ್ಷದಲ್ಲಿ ಅದನ್ನು ಹೊತ್ತು ತಿರುಗುವುದು, ದೇವತೆಗಳೊಡನೆ ಇಂದ್ರನೊಡನೆ ಅಮೃತ ಸಂಪಾದನೆಗಾಗಿ ಅವನು ಮಾಡಿದ ಯುದ್ಧ–ಇವು ಅವನ ಅದ್ಭುತ ಪರಾಕ್ರಮಕ್ಕೆ

ಸಾಕ್ಷಿ. ಮಹಾವಿಷ್ಣುವನ್ನೂ ಅಸಹಾಯ್ಯಮಾಡುವ ಧಾರ್ಷ್ಟ್ಯ ಅವನಲ್ಲುಂಟು. ಆದರೆ ಮಹರ್ಷಿ ದಧೀಚಿಯ ಬೆನ್ನುಮೂಳೆಯಿಂದುಂಟಾದ ವಜ್ರಾಯುಧಕ್ಕೆ ಬೆಲೆಕೊಡಲು ತನ್ನ ರೆಕ್ಕೆಯ ಗರಿಯೊಂದನ್ನರ್ಪಿಸುವುದು ಅವನ ಗುರುಗೌರವದ ಕುರುಹಿಗೆ ದ್ಯೋತಕ ವಾಗಿದೆ. ಇಂದ್ರನೊಡನೆ ಸ್ನೇಹ ಬೆಳಸಿ, ಅವನಿಗೆ ಅಮೃತ ನಷ್ಟವಾಗದ ಉಪಾಯ ವನ್ನು ಸೂಚಿಸಿ, ತಾಯಿಯ ಸೆರೆಯನ್ನು ಬಿಡಿಸಿದ ಸುಪುತ್ರ ಗರುಡ ; ವಿಷ್ಣುವಿನ ವಾಹನವಾಗಿರಲು ಒಪ್ಪಿಕೊಂಡು ಅವನ ರಕ್ಷಣೆಯನ್ನು ಪಡೆದ ಮಹಾತ್ಮ.

ಈ ಪಾತ್ರಗಳಲ್ಲದೆ ಗುರುಭಕ್ತರಾಗಿ ತಮ್ಮ ಸೇವೆಯಿಂದಲೇ ಗುರುವನ್ನು ಮೆಚ್ಚಿಸಿ ಸಮಸ್ತ ವಿದ್ಯೆಗಳನ್ನು ಪಡೆದ ಉದ್ದಾಲಕ, ಉಪಮನ್ಯು, ಉದಂಕರನ್ನು ಹೆಸರಿಸಬೇಕು. ಗದ್ದೆಯ ನೀರು ಹೊರಕ್ಕೆ ಹೋಗದಂತೆ ತಡೆಯೆಂದ ಗುರುವಿನಾಜ್ಞೆಗೆ ತನ್ನ ದೇಹವನ್ನು ಒಡ್ಡಿ ಅವನ ಪ್ರೀತಿಗೆ ಪಾತ್ರನಾದವನು ಉದ್ದಾಲಕ. ಧೌಮ್ಯರ ಮನೆಯ ಹಸುಗಳನ್ನು ಕಾಯ್ದು, ಎಕ್ಕದೆಲೆಗಳನ್ನು ತಿಂದು ಕಣ್ಣುಗಳನ್ನು ಕಳೆದು ಕೊಂಡರೂ ಸೂರ್ಯನನ್ನು ಪ್ರಾರ್ಥಿಸಿ ಕಣ್ಣುಗಳನ್ನು ಮರಳಿ ಪಡೆದು ಅವರ ಅನುಗ್ರಹಕ್ಕೆ ಪಾತ್ರನಾದ ಮಹಿಮಾನ್ವಿತ ಉಪಮನ್ಯು. ಪೌಷ್ಯರಾಜನ ಹೆಂಡತಿಯ ಓಲೆಗಳನ್ನು ಗುರುಪತ್ನಿಗೆ ತರುವುದಕ್ಕಾಗಿ ದುಸ್ಸಾಧ್ಯವಾದ ಕಾರ್ಯಗಳನ್ನೆಸಗಿ, ಗುರುವನ್ನು ಮೆಚ್ಚಿಸಿದವನು ಉದಂಕ. ಜರತ್ಕಾರು ಬ್ರಹ್ಮಚಾರಿ ; ತೇಜಸ್ವಿ. ಪಿತೃಗಳ ಉದ್ಧಾರಕ್ಕಾಗಿ ಗಾರ್ಹಸ್ಥ್ಯವನ್ನು ಕೈಕೊಂಡು, ಹೆಂಡತಿಯ ನಡತೆಯಿಂದ ಅಸಮಾಧಾನಗೊಂಡು, ಮತ್ತೆ ಬ್ರಹ್ಮಚರ್ಯೆಯನ್ನು ಕೈಕೊಂಡವನು ಈತ. ಇವನ ಮಗನಾದ ಆಸ್ತೀಕ ಮುಗ್ಧ ; ಸರ್ಪಕುಲವನ್ನು ಉದ್ಧರಿಸಲೆಂಬಂತಿದ್ದ ಇವನು ಜನಮೇಜಯನ ಯಾಗಶಾಲೆಗೆ ಹೋಗಿ ಒಳಗೆ ಬಿಡದಿದ್ದಾಗ ಸ್ತೋತ್ರದಿಂದ ರಾಜನನ್ನು ಮೆಚ್ಚಿಸಿ, ಯಾಗವನ್ನು ನಿಲ್ಲಿಸಿ ಸರ್ಪಲೋಕಕ್ಕೆ ಕ್ಷೇಮವನ್ನು ತಂದನು. ಇವನ ವ್ಯಕ್ತಿತ್ವದಿಂದ ರಾಜನೂ ಆಕರ್ಷಿತನಾದನೆಂದರೆ ಹೇಳತಕ್ಕದ್ದೇನಿದೆ ?

ಪುಲೋಮೆ ರಾಕ್ಷಸಬಾಧೆಗೆ ಗುರಿಯಾದರೂ ಪತಿವ್ರತೆ, ಮಹಾಸತಿಯೆಂದು ಬ್ರಹ್ಮನಿಂದ ಕೀರ್ತಿತಳಾಗಿ, ಪತಿಯ ಮನ್ನಣೆಗೆ ಪಾತ್ರಳಾದವಳು. ಪ್ರಮದ್ವರೆಯಂತೂ ತನ್ನ ರೂಪ, ಗುಣ, ಶೀಲಗಳಿಂದ ರುರುವಿನ ಮೆಚ್ಚಿನ ಮಡದಿಯಾಗಿ, ಅವನಿಂದ ಅರ್ಧ ಆಯುಷ್ಯವನ್ನು ಪಡೆದು ಸತ್ತು ಬದುಕಿದ ಸತಿಶಿರೋಮಣಿ. ಕಶ್ಯಪನ ಹೆಂಡತಿ ಯಾದ ಕದ್ರು ದುರಾಶೆಯ ಮುದ್ದೆ. ಗಂಡನಲ್ಲಿ ಸಾವಿರ ಸಂತಾನವನ್ನು ಬೇಡಿದಳು. ಅದೂ ಸರ್ಪಗಳ ಸಂತಾನವನ್ನು. ಉಚ್ಚೈಶ್ರವಸ್ಸಿನ ಬಾಲದ ಬಣ್ಣದ ವಿಷಯ ಬಂದಾಗ ಅವಳ ಸವತಿ ಮಾತ್ಸರ್ಯ ಉಲ್ಬಣವಾಗುತ್ತದೆ. ಕುದುರೆಯ ಬಾಲ ಕಪ್ಪು ಎಂಬುದನ್ನು ಸ್ಥಿರೀಕರಿಸಲು ಆಕೆ ವಿನತೆಗೆ ಮೋಸಮಾಡಲೂ ಹಿಂದೆಗೆಯಲಿಲ್ಲ. ಮಕ್ಕಳು ತನ್ನ ಮಾತನ್ನು ಕೇಳದಿದ್ದಾಗ, ಜನಮೇಜಯನ ಯಾಗಕ್ಕೆ ಆಹುತಿಯಾಗಿ ಎಂದು ಹೆತ್ತಮಕ್ಕಳಿಗೇ ಶಾಪಕೊಡಲೂ ಆಕೆ ಹಿಂದುಮುಂದು ನೋಡಲಿಲ್ಲ. ಇಂಥ ತಾಯಿಯೂ ಉಂಟೇ ? ಅಮೃತಕ್ಕೆ ಆಸೆಪಟ್ಟ ಆಕೆಗೆ ಆದ ಲಾಭವೇನು ? ಸರ್ಪಗಳಿಗೆ ನಾಲಿಗೆ

ಹೇಳಿ ಎರಡಾದದ್ದು. ಅದೇ ವಿನತೆ ಬೇಡಿದ್ದು ವೀರ್ಯವಂತರೂ ತೇಜಶ್ಶಾಲಿಗಳೂ ಆದ ಇಬ್ಬರು ಮಕ್ಕಳನ್ನು. ಅವಳಲ್ಲಿಯೂ ಸವತಿಮಾತ್ಸರ್ಯವುಂಟು. ಕದ್ರುವಿಗೆ ಬೇಗ ಮಕ್ಕಳಾದರು, ತನಗೆ ಆಗಲಿಲ್ಲವೆನ್ನುವುದೇ ಆ ಮಾತ್ಸರ್ಯ. ಆ ಮಾತ್ಸರ್ಯದ ಫಲ ಒಬ್ಬ ಮಗ ಹೆಳವನಾದದ್ದು. ಅವನಿಂದ ಶಾಪಪಡೆದು, ಸವತಿ ಕದ್ರುವಿಗೆ ಐನೂರು ವರ್ಷ ದಾಸಿಯಾದದ್ದು. ಇದರಿಂದ ಬುದ್ಧಿಗಲಿತ ಈಕೆ ಗರುಡನನ್ನು ರಕ್ಷಿಸಿ ದಾಸ್ಯದಿಂದ ಬಿಡುಗಡೆ ಹೊಂದಿ ನೆಮ್ಮದಿ ಪಡೆದಳು. ಕಷ್ಟ ಯಾರಿಗೂ ತಪ್ಪಿದ್ದಲ್ಲ. ಅದನ್ನು ಎಲ್ಲರೂ ಅನುಭವಿಸಲೇ ಬೇಕು ಎಂಬ ಅಂಶ ಇವಳ ಜೀವನಚರಿತ್ರೆಯಿಂದ ಸುಸ್ಪಷ್ಟವಾಗುತ್ತದೆ.

ಭಾಷೆ ಶೈಲಿ

ಪೌಲೋಮ ಆಸ್ತೀಕಪರ್ವಗಳ ಶೈಲಿ ಭಾಗವತದ ಶೈಲಿಗಿಂತ ಸ್ವಲ್ಪಮಟ್ಟಿಗೆ ಸಂಸ್ಕೃತ ಪದಭೂಯಿಷ್ಠವಾಗಿದೆಯೆಂದೂ ಹೇಳಬಹುದು. 'ದೃಷ್ಟಿಮೋಹನಮೂರ್ತಿ', 'ಅಭಿಜನಸಮ್ಮತಾಮಳ ಪುಣ್ಯಕೃತ್ಯ', 'ಸರ್ಪಕಾನನ ಕುಠಾರ' ಎಂಬಂಥ ಸಂಸ್ಕೃತ ಸಮಾಸಗಳೂ, ಶಂಬರ (ನೀರು) ಎಂಬಂಥ ಅಪರಿಚಿತ ಪದಗಳು ಅಲ್ಲಲ್ಲಿ ಕಂಡು ಬಂದರೂ ಒಟ್ಟಿನ ಮೇಲೆ ಕವಿ ಕನ್ನಡತನವನ್ನು ಎಲ್ಲಿಯೂ ಬಿಟ್ಟುಕೊಟ್ಟಿಲ್ಲ. ಸಂಸ್ಕೃತ ಪದಗಳ ಪ್ರಯೋಗದಿಂದ ರಸಗ್ರಹಣಕ್ಕೆ ಕುಂದುಬಂದಿಲ್ಲ; ಪ್ರತಿಯಾಗಿ ಕಾವ್ಯಕ್ಕೆ ಬಿಗಿ ಬಂದಿದೆ. ಅಲ್ಲದೆ ಕವಿ ಉಪಯೋಗಿಸಿರುವ ಉಪಮೆ, ದೃಷ್ಟಾಂತ ಮುಂತಾದ ಅಲಂಕಾರಗಳೂ, ಗಾದೆಯಂತಿರುವ ವಾಕ್ಯಗಳೂ ಹೃದ್ಯವಾಗಿದ್ದು ಕಾವ್ಯಕ್ಕೆ ಮೆರುಗನ್ನು ತಂದಿವೆ. ಈ ಹೇಳಿಕೆಯನ್ನು ಸಮರ್ಥಿಸಲು ಕೆಲವು ನಿದರ್ಶನಗಳನ್ನು ಕೊಡಬಹುದು. ಪುಲೋಮೆಯನ್ನು ರಾಕ್ಷಸನು ಹಿಡಿದದ್ದು "ದೀಪಶಿಖಿಯನು ಶಲಭನುಪಭೋಗಿಸಲು ಹಿಡಿವಂತಾಯ್ತು". ಚ್ಯವನನ ತೇಜಸ್ಸಿನಿಂದ ರಾಕ್ಷಸನು ಉರಿದುಹೋದುದನ್ನು ನೆನೆದರೆ ಈ ಹೋಲಿಕೆಯ ಸಾರ್ಥಕತೆಯನ್ನು ಮನಗಾಣ ಬಹುದು. ಗಂಡನಿಲ್ಲದ ಕಾಲದಲ್ಲಿ ಪುಲೋಮೆಯನ್ನು ರಾಕ್ಷಸನು ಕೊಂಡೊಯ್ದುದ್ದು "ಒಡೆಯರಿಲ್ಲದ ಮನೆಯೊಳಗೆ ನಾಯ್ ತುಡುಕಿ ಹವಿಯನು ತಿಂದತೆಱನಾಯ್ತು". ನಿಜ ; ಪುಲೋಮೆ ಮಹಾಸತಿ, ಹವಿಸ್ಸಿನಂತೆ ಪವಿತ್ರಳು. ಪರಸ್ತ್ರೀಗೆ ಆಸೆ ಪಡುವವನು ನಾಯಿಯಲ್ಲದೆ ಮತ್ತೇನು ? ಅರುಣನ ಶಾಪ ತಾಯಿಯ ಪಾಲಿಗೆ "ಪೊಡಮಡಲು ಹಾ ಮೇಲೆ ಬೇಗುಲ ಕೆಡೆದವೋಲಾಯ್ತು." ದೇವತೆಗಳು ಗರುಡನನ್ನು ಪರಿಭವಿ ಸುವುದು ಅಶಕ್ಯ ; ಹೇಗೆಂದರೆ "ಅರಗಿನ ಪುತ್ತಳಿಯು ಪರಿಭವಿಸಲಳವೇ ಪಾವಕನ ಹೊಳಲ?". ಗರುಡನು "ತೆಱೆಯು ಹೊಕ್ಕಿಭದಂತೆ, ಹಳುವನು ಬಱಸಿಡಿಲು ಬಗೆವಂತೆ, ಕಡುಗುವ ಕುಱಿಯ ಹಿಂಡನು ಹೊಕ್ಕ ಹೆಬ್ಬುಲಿಯಂತೆ ಸುರಬಲವ ಮುಱಿದನು". ಗಾದೆಗಳಂತಿರುವ ವಾಕ್ಯಗಳಿಗೆ ಒಂದೆರಡು ಉದಾಹರಣೆ ; "ದೈವದ ಕೂರುಮೆಗಸಾಧ್ಯ ವೆಂದೆನಿಸುವುದಾವುದುಂಟು" "ಹಿಂಸೆಯು ತಾವು ಶಾಸ್ತ್ರೋದಿತವೇ" "ಮಾಳ್ಪೊಡೆ

ಹಿಂಸೆ ಹಿತವಲ್ಲ"; "ಪಾಪಿ ಮರ್ತ್ಯರ ಬಾಳಿಕೆಗೆ ಫಲವೇನು ?" ; "ವಿಪ್ರರು ವಂದ್ಯರು"; "ಮಱುಗಿದೊಡೆ ಫಲ ಕ್ಕೆ ವೋಳವಿಸುವುದೆ ಭಾಗ್ಯಹೀನರಿಗೆ". ಉದ್ಧರಿಸಲು ಯೋಗ್ಯವಾದ ಅಲಂಕಾರಗಳು ಹಾಗೂ ವಾಕ್ಯಗಳು ಕಾವ್ಯದಲ್ಲಿ ಇಷ್ಟೇ ಎಂದಲ್ಲ. ರೇಷ್ಮೆಯ ಬಟ್ಟೆಯ ಮೇಲಿನ ಜರತಾರಿ ಹೂವಿನಂತೆ ಇವು ಕೃತಿಯ ತುಂಬ ಹರಡಿವೆ. ಕವಿ ಪ್ರಥಮದರ್ಜೆಗೆ ಸೇರಿದವನಲ್ಲದಿದ್ದರೂ, ಅವನ ಪ್ರತಿಭೆ ಅಲ್ಲಲ್ಲಿ ಮಿಂಚಿ ಸಹೃದಯರಿಗೆ ಹರ್ಷವನ್ನು ತರುತ್ತದೆ. ವರ್ಣನೆಗಳು ಮನಮುಟ್ಟುವಂತಿರುತ್ತವೆ. ಇದು ರುರು ತಂದೆಯೆದುರಿಗೆ ಮಾಡಿದ ಪ್ರಮದ್ವರೆಯ ಸೌಂದರ್ಯದ ವರ್ಣನೆ :

ಕಾನನದ ಲಕ್ಷ್ಮಿಯೋ ಧರಿತ್ರಿಗೆ
ತಾನು ಸುಳಿದಾ ಗಿರಿಜೆಯೋ ಮಿಗೆ
ಮಾನವಾಂಗನೆಯಲ್ಲ ಸೋತುದು ತನ್ನ ಮನ

ಮಱೆಯದೆನ್ನೀ ಮನವಿದಬಲೆಯು
ಸೆಱಗು ಸೋಂಕುವಡಂಜಿ ಬಂದೆನು (೨-೩೩, ೩೪)

ವಿನತೆ ಕದ್ರುವಿಗೆ ಮಾಡಿದ ಸೇವೆ ಕಣ್ಣಿಗೆ ಕಟ್ಟಿದಂತಿದ್ದು, ಮಹಾತ್ಮನ ಮಡದಿಗೂ ಇಂಥ ಗತಿಯೇ ಎಂಬ ಭಾವವನ್ನು ಮೂಡಿಸುವುದಲ್ಲದೆ ಕುಮಾರವ್ಯಾಸನ ದ್ರೌಪದಿ ಸುದೇಷ್ಣೆಗೆ ಮಾಡುತ್ತಿದ್ದ ಸೇವೆಯನ್ನು ನೆನಪಿಗೆ ತರುತ್ತದೆ.

ಅಡಿಗಳನು ತೊಳೆವುತ್ತ ಕಾಂತೆಗೆ
ಪಡಿಗವನು ನೀಡುತ್ತ ತಲೆಯನು
ಕೊಡಹಿ ನೇವರಿಸುತ್ತ ತುಱುಬನು ಕಟ್ಟಿ ಹೂಮುಡಿಸಿ
ನುಡಿಗಳನು ಸೈರಿಸುತ ಸವತಿಯು
ಬಡಿಗಳನಂ ತಾಳುತ್ತ ಸೇವೆಯ
ನಡಸುತಿದ್ದಳು ವಿನತೆ ಲಜ್ಜಾವಿನತೆ ಕದ್ರುವಿಗೆ ೬-೪೦

ಒಟ್ಟಿನಲ್ಲಿ ಇಲ್ಲಿನ ಕವಿತಾಮಾರ್ಗ ನೇರವಾಗಿದ್ದು, ಪ್ರಸನ್ನವಾಗಿದೆ.

ಈ ಎರಡು ಉಪಪರ್ವಗಳಲ್ಲಿ ಯಾವ ರಸವೂ ಪ್ರಧಾನವಾಗಿಲ್ಲ. ರುರು ಏಕಾಂತದಲ್ಲಿ ತನ್ನ ಪ್ರಿಯೆಗಾಗಿ ಪ್ರಲಾಪಿಸುವಲ್ಲಿ ಕರುಣರಸವನ್ನೂ, ಗರುಡನು ಅಮೃತವನ್ನು ತರಲು ಮಾಡುವ ಉದ್ಯಮ ಮತ್ತು ದೇವತೆಗಳೊಡನೆ ಅವನು ಮಾಡಿದ ಯುದ್ಧದ ಸಂದರ್ಭದಲ್ಲಿ ವೀರ ಮತ್ತು ಅದ್ಭುತರಸಗಳನ್ನು ಕಾಣಬಹುದು.

ಸಾಹಿತ್ಯ ತನ್ನ ಕಾಲದ ಸಮಾಜಕ್ಕೆ ಕನ್ನಡಿ ಹಿಡಿದಂತಿರುತ್ತದೆ. ಇಲ್ಲಿಯೂ ಸ್ವಲ್ಪ ಮಟ್ಟಿಗೆ ಅದನ್ನು ಗುರುತಿಸಬಹುದು. ಬ್ರಾಹ್ಮಣ್ಯಕ್ಕೆ ಅಸಾಧಾರಣವಾದ ಮರ್ಯಾದೆ ಸಂದಿರುವುದನ್ನೂ ವಿಷ್ಣುಪಾರಮ್ಯ ಪ್ರಶಂಸೆಯನ್ನೂ, ಶಕುನಾದಿಗಳಲ್ಲಿಟ್ಟಿದ್ದ ನಂಬಿಕೆಯನ್ನೂ ಕವಿ ವ್ಯಕ್ತಪಡಿಸಿದ್ದಾನೆ. ಮೂಲದಲ್ಲಿಯೇ ಇದನ್ನು ಸ್ವಲ್ಪ ಮಟ್ಟಿಗೆ ಕಾಣಬಹುದಾದರೂ ಕವಿ ಬದುಕಿದ್ದ ಆವರಣ ಇದ್ದಕ್ಕಿಂತ ಭಿನ್ನವಾಗಿರಲಿಲ್ಲ. ಇಲ್ಲಿನ ಇನ್ನೊಂದು ವಿಶೇಷವೇನೆಂದರೆ ಭಾಗವತದಂತೆ ಇಲ್ಲಿಯೂ ಒಂದೊಂದು ಉಪಾ

ಖ್ಯಾನವಾದೊಡನೆ ಸಾಮಾನ್ಯವಾಗಿ ಫಲಶ್ರುತಿ ಇರುತ್ತದೆ. ಈ ಪದ್ಧತಿ ಪುರಾಣ ಮಾರ್ಗ ; ಕಾವ್ಯ ಮಾರ್ಗವಲ್ಲ.

ರಾಘವಾಂಕನು ವಾರ್ಧಕಷಟ್ಪದಿಯನ್ನೂ ಕುಮಾರವ್ಯಾಸನು ಭಾಮಿನೀಷಟ್ಪದಿಯನ್ನೂ ಕನ್ನಡ ಸಾಹಿತ್ಯದಲ್ಲಿ ಪ್ರಚಾರಕ್ಕೆ ತಂದು ಅವುಗಳನ್ನು ಕಾವ್ಯವಾಹಿನಿಯನ್ನಾಗಿ ಮಾಡಿದ ಮೇಲೆ, ಈ ಇಬ್ಬರು ಕವಿಗಳ ಪ್ರಭಾವ ಮುಂದಿನ ಕವಿಗಳ ಮೇಲೆ ಉಂಟಾಯಿತು. ಇವರ ಕಾವ್ಯದ ಪ್ರಭಾವದಿಂದ ಈ ಕೃತಿಕಾರನೂ ತಪ್ಪಿಸಿಕೊಳ್ಳಲಾಗಿಲ್ಲ. ಪದಪುಂಜಗಳಲ್ಲಿ, ವಾಕ್ಯಗಳಲ್ಲಿ, ಈ ಕವಿ ಕುಮಾರವ್ಯಾಸನಿಂದ ಪ್ರಭಾವಿತನಾಗಿದ್ದಾನೆ. ಒಂದು ಕಡೆ ರಾಘವಾಂಕನಿಂದ ಪ್ರಭಾವಿತನಾಗಿರುವುದನ್ನು ಇಲ್ಲಿ ನೆನೆಯಬಹುದು. ಅಗ್ನಿ ಸರ್ವಭಕ್ಷಕನಾಗೆಂದು ಭೃಗು ಶಾಪಕೊಟ್ಟಾಗ, ಬ್ರಹ್ಮನು ಅವನಿಗೆ ಯಾವ ಶಾಪವೂ ತಟ್ಟದೆಂದು ಧೈರ್ಯ ಹೇಳಿ ಸಮಾಧಾನಪಡಿಸುತ್ತಾನೆ.

ಪೌಲೋಮ ಆಸ್ತೀಕಪರ್ವಗಳಿಗೆ ಸಂಸ್ಕೃತ ಮಹಾಭಾರತದಲ್ಲಿ ಬರುವ ಈ ಎರಡು ಪರ್ವಗಳೇ ಮೂಲ. ಮೂಲವನ್ನು ಕವಿ ಸ್ವಲ್ಪವೂ ತಪ್ಪದಂತೆ ಅನುಸರಿಸಿಕೊಂಡು ಹೋಗಿದ್ದಾನೆ. ಮೂಲದಲ್ಲಿ ಕಥೆ ವಿಸ್ತಾರವಾಗಿದೆ. ಅಲ್ಲದೆ ನಡುನಡುವೆ ಸಣ್ಣಪುಟ್ಟ ಕಥಾವೃತ್ತಾಂತಗಳೂ ಬರುವುದುಂಟು. ಇಂಥ ಕಥೆಗಳಲ್ಲಿ ಕೆಲವನ್ನು ಕವಿ ಕೈಬಿಟ್ಟಿದ್ದಾನೆ ; ಕೆಲವನ್ನು ಸಂಗ್ರಹಿಸಿದ್ದಾನೆ ; ಕೆಲವು ಕಡೆ ವ್ಯತ್ಯಾಸಗೊಳಿಸಿದ್ದಾನೆ. ಒಂದೆರಡು ಉದಾಹರಣೆಗಳನ್ನು ಕೊಡಬಹುದು : ಮಹಾಭಾರತದಲ್ಲಿ ಪ್ರತ್ಯೇಕ ಉಪಪರ್ವವಾಗಿರುವ ಪೌಷ್ಯಪರ್ವ ಇಲ್ಲಿ ಆಸ್ತೀಕಪರ್ವದಲ್ಲಿ ಅಡಕವಾಗಿದ್ದು ಇಲ್ಲಿ ಉದ್ದಾಲಕ, ಉಪಮನ್ಯು, ಉದಂಕರ ಗುರುಕುಲ ವಾಸದ ಕಥೆ ಬರುತ್ತದೆ (ಸಂಧಿ ೧೫, ೧೬). ಉಪಮನ್ಯು ಉದಂಕರ ವೃತ್ತಾಂತಗಳು ಮೂಲದಲ್ಲಿ ಸುದೀರ್ಘವಾಗಿವೆ. ಕವಿ ಇವನ್ನು ಹ್ರಸ್ವಗೊಳಿಸಿದ್ದಾನೆ. ಧೌಮ್ಯರಿಗೆ ಶಿಷ್ಯನಾಗಿ ಬಂದ ಆರುಣಿಯ ಹೆಸರು ಇಲ್ಲಿ ಉದ್ದಾಲಕನೆಂದು ಉಕ್ತವಾಗಿದೆ. ಉಪಮನ್ಯು ಮೂಲದಲ್ಲಿ ಹೊಟ್ಟೆಗಿಲ್ಲದೆ ಎಕ್ಕದೆಲೆಗಳನ್ನು ತಿಂದು, ಕುರುಡನಾಗಿ, ಗುರುವಿನ ಅಪ್ಪಣೆಯಂತೆ ಭಾವಿಯಲ್ಲಿ ಬಿದ್ದು ಅಶ್ವಿನೀದೇವತೆಗಳ ಅನುಗ್ರಹದಿಂದ ಕಣ್ಣುಗಳನ್ನು ಪಡೆಯುತ್ತಾನೆ. ಇಲ್ಲಿಯಾದರೋ ಹಸಿದ ಗೋವುಗಳನ್ನು ಒಮ್ಮೆ ಮಧ್ಯಾಹ್ನಕ್ಕೆ ಮನೆಗೆ ಕರೆತಂದ ಉಪಮನ್ಯುವನ್ನು ನೋಡಿ ಗುರು ಕೋಪಗೊಂಡು ಅರ್ಕಪತ್ರಗಳನ್ನು ತಿನ್ನುವಂತೆ ಅಜ್ಞಾಪಿಸುತ್ತಾನೆ. ದಾರಿಕಾಣದ ಶಿಷ್ಯ ಗುರುವಿನ ಮಾತಿನಂತೆ ನಡೆದು, ಬಳಿಕ ಸೂರ್ಯನನ್ನು ಪ್ರಾರ್ಥಿಸಿ ಕಣ್ಣುಗಳನ್ನು ಪಡೆಯುತ್ತಾನೆ. ಋತುಸ್ನಾತಳಾದ ಗುರುಪತ್ನಿಯನ್ನು ಕೂಡೆಂದುದನ್ನು ಉದಂಕನು ನಿರಾಕರಿಸುವುದು, ಶ್ರಾದ್ಧದ ಸಂದರ್ಭದಲ್ಲಿ ಪೌಷ್ಯಉದಂಕರು ಒಬ್ಬರನ್ನೊಬ್ಬರು ಶಪಿಸುವುದು. ಈ ಮೂಲದ ವೃತ್ತಾಂತಗಳನ್ನು ಕವಿ ತಾನು ನಿರೂಪಿಸಿದ ಉದಂಕನ ಉಪಾಖ್ಯಾನದಲ್ಲಿ ಕೈಬಿಟ್ಟಿರುವುದು ಉಚಿತವಾಗಿಯೇ ಇದೆ. ಹಾಗೆಯೇ ಕದ್ರುವಿನತೆಯರ ಸಂದರ್ಭದಲ್ಲಿ ಬರುವ ಅಮೃತಮಥನದ ಕಥೆಯೂ ಇಲ್ಲಿ ಲುಪ್ತವಾಗಿದೆ. ಇದಕ್ಕೆ ಪ್ರತಿಯಾಗಿ ಕವಿ ಇಲ್ಲಿ ಅಗಸ್ತ್ಯರ,

ವಾತಾಪಿ-ಇಲ್ವಲರ, ದಧೀಚಿ ಋಷಿಯ ಕಥೆಗಳನ್ನು ತಂದು ಸೇರಿಸಿದ್ದಾನೆ. ಆದರೆ ಇವುಗಳಿಗೆ ಔಚಿತ್ಯವನ್ನು ಸಮರ್ಥಿಸುವುದು ಕಷ್ಟ. ಒಟ್ಟಿನಲ್ಲಿ ಈ ಮಾರ್ಪಾಟು ಗಳಿಂದ ಕಥೆಯ ಓಟಕ್ಕೆ ಯಾವ ತೊಂದರೆಯೂ ಆಗಿಲ್ಲವೆಂದು ಧಾರಾಳವಾಗಿ ಹೇಳ ಬಹುದು.

ಅಡಿಟಿಪ್ಪಣಿ

1. ಈ ಕಾವ್ಯಕ್ಕಿರುವ ಎರಡು ಸಂಸ್ಕರಣಗಳ ಪೈಕಿ ಇದು ೧೯೧೧ರಲ್ಲಿ ಶ್ರೀ ವಿ. ಶ್ಯಾಮಾಚಾರ್ಯರಿಂದ ಸಂಪಾದಿತವಾದದ್ದು. ಇದರಲ್ಲಿ ೧೮ ಸಂಧಿಗಳೂ ೬೬೦ ಭಾಮಿನೀಷಟ್ಪದಿಯ ಪದ್ಯಗಳು. ಇವೆ. ಶಕಟರೇಫದೊಡನೆ ರಳವನ್ನೂ ಉಪಯೋಗಿಸಿರುವುದು ಈ ಸಂಸ್ಕರಣದ ಒಂದು ದೋಷ. ೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬಂದಿರುವ ಸಂಸ್ಕರಣದಲ್ಲಿ ೧೩ ಸಂಧಿಗಳು ಮಾತ್ರ ಇವೆ. ಉಳಿದ ೫ ಸಂಧಿಗಳನ್ನು ಸಂಪಾದಕರು ಪ್ರಕ್ಷಿಪ್ತವೆಂದು ಗ್ರಹಿಸಿದ್ದಾರೆ. ಶಕಟರೇಫವನ್ನು ಬಳಸದಿರುವುದು ಈ ಸಂಸ್ಕರಣದ ಒಂದು ಕೊರತೆ.

ಡಾ. ಕೆ. ಕೆಂಪೇಗೌಡ

ವ್ಯಾಕರಣಶಾಸ್ತ್ರ

ಯಾವುದಾದರೊಂದು ಭಾಷೆ ಅಥವಾ ಉಪಭಾಷೆಗೆ ಸಂಬಂಧಿಸಿದ ವಿವಿಧ ರಚನಾತ್ಮಕ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸಬಹುದಾದುದನ್ನು ಸಾಂಪ್ರದಾಯಿಕವಾಗಿ ವ್ಯಾಕರಣ (grammar) ಎನ್ನುವರು. ಇಂತಹ ವ್ಯಾಕರಣ ವಿಚಾರಗಳನ್ನು ಹೆಚ್ಚು ಶಾಸ್ತ್ರೀಯವಾಗಿ ವಿವೇಚಿಸಬಹುದಾದುದನ್ನೇ ಕೆಲವರು ವ್ಯಾಕರಣ ಶಾಸ್ತ್ರವೆಂದು ಕರೆಯುತ್ತಿದ್ದಾರೆ. ಯಾವುದಾದರೊಂದು ಉದ್ದೇಶಿತ ಭಾಷೆ ಅಥವಾ ಉಪಭಾಷೆಯ ಧ್ವನಿ, ಪದ, ಪದರಚನೆ, ವಾಕ್ಯ, ವಾಕ್ಯರಚನೆ ಮುಂತಾದುವುಗಳಿಗೆ ಸಂಬಂಧಿಸಿದ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವುದು ವ್ಯಾಕರಣದ ಬಹು ಮುಖ್ಯವಾದ ಉದ್ದೇಶ. ಈ ಉದ್ದೇಶ ಒಂದು ಬಗೆಯ ವ್ಯಾಕರಣದಿಂದ ಇನ್ನೊಂದು ಬಗೆಯ ವ್ಯಾಕರಣಕ್ಕೆ ಬೇರೆ ಬೇರೆಯಾಗಿಯೂ ಕಾಣಿಸಿಕೊಳ್ಳಬಹುದಾದ ಅವಕಾಶ ಗಳಿವೆ.

ಭಾಷಾವಿಜ್ಞಾನಕ್ಕೂ ವ್ಯಾಕರಣಕ್ಕೂ ಸಾಕಷ್ಟು ನಿಕಟವಾದ ಸಂಬಂಧವಿದೆ. ಇವು ಹೀಗಾಗಿ ಒಂದು ಇನ್ನೊಂದನ್ನು ಅವಲಂಬಿಸಿವೆ. ಭಾಷೆಗಳ ಎಲ್ಲ ಆಂತರಿಕ ಹಾಗೂ ಬಾಹ್ಯ ವಿಚಾರಗಳನ್ನು ವಿವರಣಾತ್ಮಕ, ಐತಿಹಾಸಿಕ, ತೌಲನಿಕ ಹಾಗೂ ಪ್ರಾಯೋಗಿಕವಾಗಿ ಭಾಷಾವಿಜ್ಞಾನದಲ್ಲಿ ವಿವೇಚಿಸುವಂತೆಯೇ ವ್ಯಾಕರಣದಲ್ಲಿ ಯಾವುದಾದರೊಂದು ಭಾಷೆ ಅಥವಾ ಉಪಭಾಷೆಯ ಆಂತರಿಕ ಅಂಶಗಳಾದ ಧ್ವನಿ, ಪದ ಮತ್ತು ವಾಕ್ಯಗಳನ್ನು ವಿವರಣಾತ್ಮಕ, ಐತಿಹಾಸಿಕ ಹಾಗೂ ತೌಲನಿಕವಾಗಿ ವಿವೇಚಿಸಲು ಸಾಧ್ಯವಿದೆ. ಆದರೆ ಭಾಷಾವಿಜ್ಞಾನವು ಜಗತ್ತಿನ ಎಲ್ಲ ಭಾಷೆಗಳಿಗೆ ಸಂಬಂಧಿಸಿದ ಎಲ್ಲ ಅಂಶಗಳ ಸಾಮಾನ್ಯ ತತ್ವಗಳನ್ನು ಮತ್ತು ಸಿದ್ಧಾಂತಗಳನ್ನು ರೂಪಿಸಿಕೊಳ್ಳಲು ಸಹಾಯಕವಾದರೆ ವ್ಯಾಕರಣವು ಯಾವುದಾದರೊಂದು ಭಾಷೆಯ ವಿವಿಧ ರಚನಾತ್ಮಕ ಅಂಶಗಳಿಗೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ಮತ್ತು ಸಿದ್ಧಾಂತಗಳನ್ನು ರೂಪಿಸಿಕೊಳ್ಳಲು ನೆರವಾಗುವುದು. ಈ ದೃಷ್ಟಿಯಿಂದ ಭಾಷಾ ವಿಜ್ಞಾನವು ವ್ಯಾಕರಣಕ್ಕಿಂತ ಹೆಚ್ಚು ವ್ಯಾಪಕ ಹಾಗೂ ವೈಜ್ಞಾನಿಕವಾದ ಅಧ್ಯಯನ ಕ್ಷೇತ್ರವಾಗಿ ಕಾಣಿಸಿಕೊಳ್ಳುತ್ತಿದೆ. ಈ ಕಾರಣದಿಂದಾಗಿಯೇ ವ್ಯಾಕರಣ ಭಾಷಾ

ವಿಜ್ಞಾನ ಅಧ್ಯಯನಕ್ಕಿಂತ ಹೆಚ್ಚು ಸೀಮಿತ ಹಾಗೂ ಶಾಸ್ತ್ರೀಯವಾದ ಅಧ್ಯಯನವೆಂದು ಕೆಲವರು ಭಾವಿಸುವರು.

ಪ್ರಾಚೀನ ಭಾರತೀಯ ವಿದ್ವಾಂಸರು ಆರು ವೇದಾಂಗಗಳಲ್ಲಿ ವ್ಯಾಕರಣವೂ ಒಂದೆಂದು ವಿವರಿಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ ವ್ಯಾಕರಣ ಎಂಬುದು ಸಂಸ್ಕೃತ ಶಬ್ದ. ಇದಕ್ಕೆ ಭಾಷೆಯ ವಿವಿಧ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವ ಶಾಸ್ತ್ರ ಎಂಬರ್ಥವಿದೆ. ಸಂಸ್ಕೃತದಲ್ಲಿ ಇದನ್ನೇ ಶಬ್ದಾನುಶಾಸನ ಎಂದೂ ಶಬ್ದಶಾಸ್ತ್ರ ಎಂದೂ ಭಾಷಾಭೂಷಣವೆಂದೂ ಬೇರೆ ಬೇರೆ ಹೆಸರಿನಿಂದ ಕರೆಯುವರು. ಪತಂಜಲಿ, ಹೇಮಚಂದ್ರ, ರಾಮಚಂದ್ರ ಮುಂತಾದ ವೈಯಾಕರಣರು ಈ ಬಗೆಯ ಅಧ್ಯಯನವನ್ನು ವ್ಯಾಕರಣವೆಂದೇ ಹೆಸರಿಸಿಕೊಂಡರು. ಇವರ ವ್ಯಾಕರಣದಲ್ಲಿ ವರ್ಣವಿಚಾರ, ಶಬ್ದವಿಚಾರ ಮತ್ತು ವಾಕ್ಯವಿಚಾರ ಎಂಬ ವಿಚಾರಗಳಿಗೆ ಸಂಬಂಧಿಸಿದ ವಿಭಾಗಗಳಿರುವುದು ತೋರಿಬರುತ್ತವೆ.

ವ್ಯಾಕರಣಶಾಸ್ತ್ರವು ಭಾಷಾವಿಜ್ಞಾನಕ್ಕಿಂತ ಹೆಚ್ಚು ಪ್ರಾಚೀನವಾದದ್ದು. ಇದು ಮೊದಮೊದಲು ಬರಹದ ಭಾಷೆಯ ಅಧ್ಯಯನಕ್ಕೆ ಮಾತ್ರ ಸಂಬಂಧಿಸಿದ್ದಾಗಿದ್ದಿತು. ಅನಂತರ ಇದು ಆಡುಭಾಷೆಗಳ ಅಧ್ಯಯನಕ್ಕೂ ವ್ಯಾಪಿಸಿಕೊಂಡಿತು. ಪ್ರಾಚೀನರಲ್ಲಿ ಬರಹದ ಭಾಷೆ ಮಾತ್ರ ಶ್ರೇಷ್ಠವಾದ ಭಾಷೆ, ಆಡುಭಾಷೆ ಭಾಷೆಯೇ ಅಲ್ಲ ಎಂಬ ಮನೋಭಾವ ಬೆಳೆದು ಬಂದಿದ್ದ ಕಾರಣ ಅವರಾರೂ ಆಡುಭಾಷೆಗಳ ವ್ಯಾಕರಣ ವಿಚಾರಗಳನ್ನು ವಿಶ್ಲೇಷಿಸಿ ವಿವರಿಸಿಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇಂದು ಬರಹದ ಭಾಷೆಗಿಂತ ಆಡುಭಾಷೆಯೇ ಸಹಜ ಹಾಗೂ ಶ್ರೇಷ್ಠವಾದ ಭಾಷೆಯಾಗಿದೆ. ಈ ದೃಷ್ಟಿಯಿಂದ ಕೆಲವು ವಿದ್ವಾಂಸರು ಆಡುಭಾಷೆಗಳ ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅಂದಿನಿಂದ ಆಡುಭಾಷೆಗಳ ಅಧ್ಯಯನ ವಿವಿಧ ರೀತಿಯಲ್ಲಿ ಆರಂಭಗೊಂಡು ಬಗೆಬಗೆಯ ವ್ಯಾಕರಣ ಗ್ರಂಥಗಳು ರಚನೆಗೊಂಡವು. ಬರಹದ ಮತ್ತು ಆಡುಭಾಷೆಗಳ ಆಂತರಿಕ ಅಂಶಗಳನ್ನು ಅವುಗಳ ಕಾರ್ಯಕಲಾಪಗಳನ್ನು ಸೂತ್ರದ ರೂಪದಲ್ಲಿ ವಿವರಿಸಿಕೊಳ್ಳುವ ಬೇರೆಬೇರೆ ವ್ಯಾಕರಣ ಗ್ರಂಥಗಳು ಹೊರಬಂದವು. ಆದರೆ ವ್ಯಾಕರಣವು ಒಂದು ಭಾಷೆಯ ಬಾಹ್ಯ ವಿಚಾರಗಳನ್ನು ವಿವೇಚಿಸಿ ವಿವರಿಸಿಕೊಳ್ಳಲು ನೆರವಾಗಲಾರದು. ಈ ಕಾರಣದಿಂದಲೇ ಭಾಷೆಗಳ ಆಂತರಿಕ ಹಾಗೂ ಬಾಹ್ಯವಿಚಾರಗಳನ್ನು ತಿಳಿಸಬಲ್ಲ ವ್ಯಾಪಕತೆಯನ್ನು ಹೊಂದಿಲ್ಲವೆಂದು ವ್ಯಾಕರಣವನ್ನು ಆಕ್ಷೇಪಿಸುವರು. ವ್ಯಾಕರಣ ಈ ಕಾರಣದಿಂದಾಗಿಯೇ ಭಾಷಾವಿಜ್ಞಾನದ ಒಂದು ಪ್ರಮುಖ ಅಂಗವಾಗಿ ಪರಿಗಣಿಸಲ್ಪಟ್ಟಿದೆ. ಭಾಷಾವಿಜ್ಞಾನದಲ್ಲಿ ಜಗತ್ತಿನ ಎಲ್ಲಾ ಭಾಷೆಗಳ ಎಲ್ಲ ವಿಚಾರಗಳನ್ನು ಪೂರ್ಣವಾಗಿ ವಿವರಣಾತ್ಮಕ, ಐತಿಹಾಸಿಕ, ತೌಲನಿಕ ಹಾಗೂ ಪ್ರಾಯೋಗಿಕವಾಗಿ ವಿವೇಚಿಸಲು ಬರುವಂತೆ ವ್ಯಾಕರಣದಲ್ಲಿ ಇದು ಸಾಧ್ಯವಾಗದು. ಭಾಷಾವಿಜ್ಞಾನದ ಅಧ್ಯಯನ ಹೆಚ್ಚು ಹೆಚ್ಚು ವೈಜ್ಞಾನಿಕವಾಗಿ ಬೆಳೆದುಬಂದಂತೆಲ್ಲಾ ಅದನ್ನೇ ಅನುಸರಿಸಿ

ವ್ಯಾಕರಣವೂ ಬೆಳೆದುಬಂದಿದೆ. ಇದರಿಂದಾಗಿ ವಿವರಣಾತ್ಮಕ ವ್ಯಾಕರಣ, ಐತಿಹಾಸಿಕ ವ್ಯಾಕರಣ, ತೌಲನಿಕ ವ್ಯಾಕರಣ ಎಂಬ ಬಗೆ ಬಗೆಯ ವ್ಯಾಕರಣಗಳು ಹೆಚ್ಚು ಪ್ರಚಾರಕ್ಕೆ ಬರಲು ಸಾಧ್ಯವಾಗಿದೆ. ಅರಿಸ್ಟಾಟಲ್, ಪ್ಲೇಟೊ, ಮುಂತಾದ ಗ್ರೀಕ್ ತತ್ವಶಾಸ್ತ್ರಜ್ಞರು ವ್ಯಾಕರಣವನ್ನು ದರ್ಶನಶಾಸ್ತ್ರದ ಒಂದು ಪ್ರಮುಖ ಅಂಗವನ್ನಾಗಿ ಪರಿಗಣಿಸಿಕೊಂಡು ಅದನ್ನು ಬರಹದ ಶೈಲಿಯನ್ನಾಗಿ ವಿವರಿಸಿಕೊಳ್ಳತೊಡಗಿದರು. ಮಧ್ಯಕಾಲದ ಹೊತ್ತಿಗೆ ವ್ಯಾಕರಣವನ್ನು ವ್ಯಾಪಕವಾದ ಅರ್ಥದಲ್ಲಿ ಭಾಷೆಯ ವಿವಿಧ ಅಂಶಗಳ ರೀತಿ ನೀತಿಗಳನ್ನು ಸೂತ್ರದ ರೂಪದಲ್ಲಿ ನಿರೂಪಿಸಿಕೊಳ್ಳಲು ಸಹಾಯಕವಾಗುವ ಅಂಶವನ್ನಾಗಿ ಪರಿಗಣಿಸಿಕೊಳ್ಳಲಾಯಿತು.

ಪಾಣಿನಿ ಮಹಾಶಯನು ಸಂಸ್ಕೃತವನ್ನು ಆಳವಾಗಿ ಅಧ್ಯಯನಮಾಡಿ ಅದರ ವ್ಯಾಕರಣವೊಂದನ್ನು ಕಲ್ಪಿಸಿಕೊಂಡು ಅದನ್ನು 'ಅಷ್ಟಾಧ್ಯಾಯಿ' ಎಂಬ ಹೆಸರಿನಿಂದ ಹೊರತಂದನು. ಜಗತ್ತಿನ ಯಾವ ಮೂಲೆಯಲ್ಲಿಯೂ ವ್ಯಾಕರಣ ಎಂಬುದರ ಕಲ್ಪನೆಯೇ ಇಲ್ಲದಿದ್ದ ಕಾಲದಲ್ಲಿ ವ್ಯಾಕರಣ ವಿಚಾರಗಳನ್ನು ಮೊಟ್ಟಮೊದಲಿಗೆ ಕಲ್ಪಿಸಿಕೊಟ್ಟ ಕೀರ್ತಿ ಪಾಣಿನಿ ಮಹಾಶಯನಿಗೆ ಸಲ್ಲುತ್ತದೆ. ಇವನ ವ್ಯಾಕರಣ ಗ್ರಂಥ ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾಗಿದೆ. ಈ ಕಾರಣದಿಂದ ಪಾಣಿನಿಯನ್ನು ವ್ಯಾಕರಣಶಾಸ್ತ್ರದ ಪಿತಾಮಹನೆಂದು ಕರೆಯಲಾಗುತ್ತಿದೆ. ಪಾಣಿನಿಯು ತನ್ನ ವ್ಯಾಕರಣದಲ್ಲಿ ಕಲ್ಪಿಸಿಕೊಂಡಿರುವ ವ್ಯಾಕರಣವಿಚಾರಗಳು ಸಂಸ್ಕೃತಭಾಷೆಗೆ ಮಾತ್ರ ಅನ್ವಯವಾಗುವಂತೆ ಇದ್ದರೂ ಇವು ಜಗತ್ತಿನ ವ್ಯಾಕರಣ ಶಾಸ್ತ್ರದ ಬೆಳವಣಿಗೆಗೆ ಸಹಾಯಕವಾಗಿವೆ. ಅನಂತರ ಪತಂಜಲಿಯು ಪಾಣಿನಿಯನ್ನು ಅನುಸರಿಸಿ ತನ್ನದೇ ಆದ ವ್ಯಾಕರಣ ಗ್ರಂಥವನ್ನು ರಚಿಸಿಕೊಂಡು ಅದನ್ನು ಮಹಾಭಾಷ್ಯ ಎಂಬ ಹೆಸರಿನಿಂದ ಹೊರತಂದನು. ಈ ಎರಡು ವ್ಯಾಕರಣಗಳ ರಚನೆ ಜಗತ್ತಿನ ಬೇರೆಬೇರೆ ಭಾಷೆಗಳ ವ್ಯಾಕರಣ ರಚನೆಗೆ ನಾಂದಿಯಾದವು. ಸಂಸ್ಕೃತ, ಪ್ರಾಕೃತ ಮುಂತಾದ ಬೇರೆಬೇರೆ ಪ್ರಾಚೀನ ಭಾಷೆಗಳ ವ್ಯಾಕರಣಗಳು ರಚನೆಯಾದವು. ಪಾಣಿನಿ ಮತ್ತು ಪತಂಜಲಿಯವರ ವ್ಯಾಕರಣ ಸಂಪ್ರದಾಯಗಳಿಗೆ ಬಹು ಹತ್ತಿರವಾದ ಭಾರತೀಯ ವ್ಯಾಕರಣ ಸಂಪ್ರದಾಯ ಪಾಶ್ಚಾತ್ಯರನ್ನು ಆಕರ್ಷಿಸಿದವು. ಇವರು ಪಾಣಿನಿ, ಪತಂಜಲಿ, ಹೇಮಚಂದ್ರ, ರಾಮಚಂದ್ರ, ಕಯ್ಯಟ ಮುಂತಾದವರ ವ್ಯಾಕರಣಗಳನ್ನು ಆಳವಾಗಿ ಪರಿಶೀಲಿಸಿ ಗ್ರೀಕರು, ರೋಮನರು, ಅರಬ್ಬರು, ಯೂರೋಪಿಯನರು ಮುಂತಾದವರು ತಮ್ಮ ತಮ್ಮ ಭಾಷೆಗಳ ವ್ಯಾಕರಣಗಳನ್ನು ಅದೇ ಮಾದರಿಯಲ್ಲಿ ರೂಪಿಸಿಕೊಳ್ಳತೊಡಗಿದರು. ಹೀಗೆ ವ್ಯಾಕರಣಶಾಸ್ತ್ರವು ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿತು ಈ ವ್ಯಾಕರಣಶಾಸ್ತ್ರವನ್ನು ಅನುಸರಿಸಿದ ಭಾಷಾವಿಜ್ಞಾನ ತನ್ನದೇ ಆದ ರೀತಿಯಲ್ಲಿ ಜಗತ್ತಿನಾದ್ಯಂತ ವಿಪುಲವಾಗಿ ಬೆಳೆದು ಶಾಖೋಪಶಾಖೆಗಳಲ್ಲಿ ಹರಡಿಕೊಂಡಿತು. ಇದನ್ನು ಅನುಸರಿಸಿ ವ್ಯಾಕರಣಶಾಸ್ತ್ರವು ಬಗೆಬಗೆಯಲ್ಲಿ ವ್ಯಾಪಕವಾಗಿ ಬೆಳೆದು ಇಂದು ಇದು ಶಾಖೋಪಶಾಖೆಗಳಲ್ಲಿ ಕಂಗೊಳಿಸುತ್ತಿದೆ.

ಭಾಷಾವಿಜ್ಞಾನ ಮತ್ತು ವ್ಯಾಕರಣಶಾಸ್ತ್ರಗಳು ಮೇಲುನೋಟಕ್ಕೆ ಎಷ್ಟೇ ಬೇರೆ ಬೇರೆ ಶಾಸ್ತ್ರಗಳಾಗಿ ಬೆಳೆದುಬಂದಿದ್ದರೂ ಇವು ಎರಡು ನೇರವಾಗಿ ಭಾಷೆಗೆ ಸಂಬಂಧಿಸಿದ ವಿಚಾರಗಳನ್ನು ಕುರಿತ ಅಧ್ಯಯನ ಕ್ಷೇತ್ರಗಳಾಗಿವೆ. ಒಂದು ಭಾಷೆಯ ವ್ಯಾಕರಣ ವಿಚಾರಗಳು ಇನ್ನೊಂದು ಭಾಷೆಗೆ ಪೂರ್ಣವಾಗಿ ಅನ್ವಯವಾಗುವುದಿಲ್ಲ. ಒಂದು ಭಾಷೆಯ ವ್ಯಾಕರಣ ತತ್ವಗಳು ಮತ್ತು ಸಿದ್ಧಾಂತಗಳು ಇನ್ನೊಂದು ಭಾಷೆಯ ವಿವೇಚನೆಗೆ ನಿರುಪಯೋಗವಾಗುತ್ತವೆ. ಕಾರಣವೇನೆಂದರೆ ಇವು ಭಾಷೆಯಿಂದ ಭಾಷೆಗೆ, ಉಪಭಾಷೆಯಿಂದ ಉಪಭಾಷೆಗೆ ಬೇರೆಬೇರೆಯಾಗುತ್ತವೆ. ಆದಕಾರಣ ವ್ಯಾಕರಣಶಾಸ್ತ್ರದಲ್ಲಿ ಭಾಷೆ ಮತ್ತು ಉಪಭಾಷೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವೇಚಿಸಬೇಕಾಗುತ್ತದೆ. ಎಲ್ಲ ಕಾಲಕ್ಕೂ, ಎಲ್ಲ ಸ್ಥಳಗಳಿಗೂ, ಎಲ್ಲ ವ್ಯಕ್ತಿಗಳಿಗೂ ಎಲ್ಲ ಭಾಷೆ ಮತ್ತು ಉಪಭಾಷೆಗಳಿಗೂ ಸಂಬಂಧಿಸಿದ ಭಾಷಿಕ ವಿಚಾರಗಳನ್ನು ಭಾಷಾವಿಜ್ಞಾನದಂತೆ ವ್ಯಾಪಕವಾದ ರೀತಿಯಲ್ಲಿ ವ್ಯಾಕರಣದಲ್ಲಿ ವಿವೇಚಿಸಲಾಗದು. ಆದ ಕಾರಣ ಯಾವುದಾದರೊಂದು ಕಾಲದ, ಯಾವುದಾದರೊಂದು ಸ್ಥಳದ, ಯಾವುದಾದರೊಬ್ಬ ವ್ಯಕ್ತಿಯ, ಯಾವುದಾದರೊಂದು ಗ್ರಂಥದ, ಯಾವುದಾದರೊಂದು ಭಾಷೆ ಅಥವಾ ಉಪಭಾಷೆಯ ಒಳಅಂಗಗಳನ್ನು ವಿಶ್ಲೇಷಿಸಿ ವಿವರಿಸಿಕೊಳ್ಳಲು ಮಾತ್ರ ವ್ಯಾಕರಣ ಸಹಾಯಕವಾಗಿದೆ. ಒಂದು ಭಾಷೆಯ ಆಂತರಿಕ ಅಂಶಗಳು ತಮ್ಮ ತಮ್ಮ ಕಾರ್ಯವನ್ನು ಹೇಗೆ ನಿರ್ವಹಿಸುತ್ತವೆ ಎಂಬ ವಿಚಾರಗಳ ಸ್ವರೂಪವನ್ನು ವ್ಯಾಕರಣವು ತಿಳಿಸುತ್ತದೆ.

ಪ್ರಾಚೀನ ಭಾರತದಲ್ಲಿ ಭಾಷೆಯ ಅಧ್ಯಯನವೆಂದರೆ ಅದು ವ್ಯಾಕರಣಶಾಸ್ತ್ರದ ಅಧ್ಯಯನವೇ ಆಗಿದ್ದಿತು ಎಂಬುದಕ್ಕೆ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ವ್ಯಾಕರಣಶಾಸ್ತ್ರವು ಬಹು ಹಿಂದಿನಿಂದಲೂ ತನ್ನದೇ ಆದ ರೀತಿಯಲ್ಲಿ ಸಾಂಪ್ರದಾಯಿಕವಾಗಿ ಬೆಳೆದುಬಂದಂತೆಲ್ಲಾ ಅದರ ಬೇರೆ ಬೇರೆ ಮುಖಗಳು ಬೆಳೆಯತೊಡಗಿದವು. ಹೀಗಾಗಿ ಇದು ಭಾಷಾವಿಜ್ಞಾನದ ಬೆಳವಣಿಗೆಗೆ ಪೂರಕವೂ ಪ್ರೇರಕವೂ ಆಗಿ ಮುನ್ನಡೆಯಿತು. ಹೀಗೆ ವ್ಯಾಕರಣಶಾಸ್ತ್ರದಿಂದ ಆರಂಭಗೊಂಡ ಭಾಷೆಯ ಅಧ್ಯಯನ ಭಾಷೆಯ ಎಲ್ಲ ಅಂಶಗಳ ವೈಜ್ಞಾನಿಕ ಅಧ್ಯಯನದ ಕಡೆ ಹರಿಯಿತು. ಇವು ಒಂದನ್ನೊಂದು ಅನುಸರಿಸಿ ಬೆಳೆದು ಬಂದ ವಿಧಾನವನ್ನು ಪರಿಶೀಲಿಸಿ ತಿಳಿಯಲು ಹೊರಟಾಗ ವ್ಯಾಕರಣಶಾಸ್ತ್ರವು ಭಾಷಾವಿಜ್ಞಾನವನ್ನು ಅನುಸರಿಸಿ ಹೇಗೆ ಬೆಳೆದು ಬಂದಿದೆ ಎಂಬುದರ ಇತಿಹಾಸವು ತಿಳಿದುಬರುತ್ತದೆ. ಇಂದು ವ್ಯಾಕರಣಶಾಸ್ತ್ರ ಭಾಷಾಶಾಸ್ತ್ರವನ್ನು ಅನುಸರಿಸಿ ವಿವರಣಾತ್ಮಕ, ಐತಿಹಾಸಿಕ, ತೌಲನಿಕವಾಗಿ ಬೆಳೆದು ಬಂದಿದೆ ಮಾತ್ರವಲ್ಲದೆ ಇದು ಬೇರೆ ಬೇರೆ ಬಗೆಯ ವ್ಯಾಕರಣಗಳು ಬೆಳೆದು ಬೆಳಕಿಗೆ ಬರಲು ದಾರಿಮಾಡಿಕೊಟ್ಟಿದೆ.

ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಭಾಷಾವಿಜ್ಞಾನಕ್ಷೇತ್ರದಲ್ಲಿ ಆಡುಭಾಷೆಗಳ ಅಧ್ಯಯನ ಆರಂಭಗೊಂಡಮೇಲೆ ಆಧುನಿಕ ಭಾಷಾವಿಜ್ಞಾನವು

ನಾನಾ ಮುಖಗಳಲ್ಲಿ ಸೈದ್ಧಾಂತಿಕ ಹಾಗೂ ಪ್ರಾಯೋಗಿಕವಾಗಿ ಮುಂದುವರಿಯಿತು. ಇದನ್ನೇ ಅನುಸರಿಸಿ ವ್ಯಾಕರಣಶಾಸ್ತ್ರವೂ ಮುಂದುವರಿಯಿತು. ಇದರ ಫಲವಾಗಿ ವ್ಯಾಕರಣ ಶಾಸ್ತ್ರ ವಿವಿಧ ಮುಖಗಳಲ್ಲಿ ಬೆಳೆಯಲು ಸಹಾಯಕವಾಯಿತು. ಹೀಗಾಗಿ ಭಾಷೆಯ ಒಳರಚನೆಗಳ ಅಧ್ಯಯನ ವಿಧಾನಕ್ಕೆ ಅನುಗುಣವಾದ ಬೇರೆ ಬೇರೆ ಬಗೆಯ ವ್ಯಾಕರಣಗಳು ಹೊರಬಂದವು. ಬರಹದ ಮತ್ತು ಆಡುಭಾಷೆಗಳ ಅಧ್ಯಯನ ವಿಧಾನಗಳು ಮತ್ತು ರಚನಾತ್ಮಕ ಅಂಶಗಳ ವೈವಿಧ್ಯಕ್ಕೆ ಅನುಗುಣವಾದ ಬೇರೆ ಬೇರೆ ವ್ಯಾಕರಣಗಳನ್ನು ರೂಪಿಸಿಕೊಳ್ಳುವ ವಿಧಾನವು ಹೊರಬಂದಿತು.

ವ್ಯಾಕರಣಶಾಸ್ತ್ರದಲ್ಲಿ ಮುಖ್ಯವಾಗಿ ಭಾಷೆಯ ವರ್ಣವಿಚಾರ, ಶಬ್ದವಿಚಾರ ಮತ್ತು ವಾಕ್ಯ ವಿಚಾರಗಳನ್ನು ಮಾತ್ರ ಗಮನಿಸಲಾಗುತ್ತದೆ. ಈ ದೃಷ್ಟಿಯಿಂದ ಇವು ವ್ಯಾಕರಣಶಾಸ್ತ್ರದ ಮೂರು ಮುಖ್ಯ ಅಂಶಗಳಾಗಿ ಕಾಣಿಸಿಕೊಳ್ಳುತ್ತವೆ. ಭಾಷೆಯ ವರ್ಣಗಳು, ಅವುಗಳ ವರ್ಗೀಕರಣ, ವರ್ಣವಿನ್ಯಾಸ, ವರ್ಣಾನುಕ್ರಮ ಮುಂತಾದುವುಗಳನ್ನು ವರ್ಣವಿಚಾರ ಎಂಬುದರಲ್ಲಿಯೂ, ಶಬ್ದ, ಶಬ್ದಗಳ ವರ್ಗೀಕರಣ, ಶಬ್ದರಚನೆ, ಶಬ್ದಾನುಕ್ರಮ, ಶಬ್ದಶಕ್ತಿ ಮುಂತಾದುವುಗಳನ್ನು ಶಬ್ದವಿಚಾರ ಎಂಬುದ ರಲ್ಲಿಯೂ, ವಾಕ್ಯಗಳು ಅವುಗಳ ವರ್ಗೀಕರಣ ವಾಕ್ಯರಚನೆ, ವಾಕ್ಯ ವಿಶ್ಲೇಷಣೆ ಮುಂತಾದುವುಗಳನ್ನು ವಾಕ್ಯವಿಚಾರ ಎಂಬುದರಲ್ಲಿಯೂ ವಿವಿಧ ರೀತಿಯಲ್ಲಿ ವಿವೇಚಿಸ ಲಾಗುತ್ತದೆ. ಭಾಷೆಯ ವರ್ಣಸಂಬಂಧಿ ವಿಚಾರಗಳನ್ನು ವಿವರಿಸಿ ತೋರಿಸುವ ವರ್ಣ ವಿಚಾರವು ವ್ಯಾಕರಣದ ಮೊದಲನೆಯ ಅಂಗವಾಗಿಯೂ, ಶಬ್ದಸಂಬಂಧಿ ವಿಚಾರ ಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವ ಶಬ್ದವಿಚಾರವು ವ್ಯಾಕರಣದ ಇನ್ನೊಂದು ಅಂಗವಾಗಿಯೂ, ವಾಕ್ಯಸಂಬಂಧಿ ವಿಚಾರಗಳನ್ನು ವಿಶ್ಲೇಷಿಸಿ ವಿವೇಚಿಸುವ ವಾಕ್ಯ ವಿಚಾರವು ವ್ಯಾಕರಣದ ಮತ್ತೊಂದು ಅಂಗವಾಗಿಯೂ ಕಾಣಿಸಿಕೊಳ್ಳುತ್ತವೆ. ಆದರೆ ಈ ವಿಚಾರಗಳನ್ನು ವಿವೇಚಿಸುವ ವಿಧಾನಗಳು ಇಂದು ಬೇರೆಬೇರೆಯಾಗಿ ತೋರಿಬರುವ ಕಾರಣದಿಂದಲೇ ಬೇರೆಬೇರೆ ಬಗೆಯ ವ್ಯಾಕರಣಗಳು ಹೊರಬರಲು ಸಾಧ್ಯವಾಗಿವೆ. ಅವುಗಳನ್ನು ಈ ಕೆಳಗಿನಂತೆ (1) ಸಾಂಪ್ರದಾಯಿಕ ವ್ಯಾಕರಣ (Traditional grammar) (2) ನಿರ್ದೇಶನಾತ್ಮಕ ವ್ಯಾಕರಣ (Prescriptive grammar) (3) ವಿವರಣಾತ್ಮಕ ವ್ಯಾಕರಣ (Descriptive grammar) (4) ಐತಿಹಾಸಿಕ ವ್ಯಾಕರಣ (Historical grammaı) (5) ತೌಲನಿಕ ವ್ಯಾಕರಣ (Comparative grammar) (6) ದಾರ್ಶನಿಕ ವ್ಯಾಕರಣ (Philosophical grammar) (7) ಪ್ರರೂಪಾತ್ಮಕ ವ್ಯಾಕರಣ (Tagmemic grammar) (8) ವಿಭೇದಾತ್ಮಕ ವ್ಯಾಕರಣ (Differential grammar) (9) ಬೋಧನಾತ್ಮಕ ವ್ಯಾಕರಣ (Pedagogical grammar) (10) ರಚನಾತ್ಮಕ ವ್ಯಾಕರಣ (Structural grammar) (11) ವ್ಯವಸ್ಥಿತ ವ್ಯಾಕರಣ (Systemic grammar) (12) ಸ್ತರಾತ್ಮಕ ವ್ಯಾಕರಣ (Stratificational grammar) (13) ಕಾರಕ

ವ್ಯಾಕರಣ (Case grammar) (14) ರೂಪಾಂತರಣ ವ್ಯಾಕರಣ (Transformational grammar) (15) ರೂಪಾಂತರಣ ಉತ್ಪಾದನಾತ್ಮಕ ವ್ಯಾಕರಣ (Transformational generative grammar) (16) ಸಾರ್ವತ್ರಿಕ ವ್ಯಾಕರಣ (Universal grammar) ಎಂದು ಬೇರೆ ಬೇರೆ ಹೆಸರುಗಳಿಂದ ಕರೆದುಕೊಳ್ಳಬಹುದಾಗಿದೆ. ಇವು ಒಂದೇ ಬಗೆಯ ವ್ಯಾಕರಣದಿಂದ ಬೇರೆ ಬೇರೆಯಾಗಿ ವಿಕಾಸಗೊಂಡ ಬೇರೆಬೇರೆ ವ್ಯಾಕರಣಗಳು.

1. ಸಾಂಪ್ರದಾಯಿಕ ವ್ಯಾಕರಣ (Traditional grammar)

ಇದೊಂದು ಬಗೆಯ ವ್ಯಾಕರಣ, ಇದು ಹೆಚ್ಚು ಪ್ರಾಚೀನವಾದದ್ದು ಮಾತ್ರವಲ್ಲದೆ ಇದು ಪರಂಪರಾಗತವಾಗಿ ಹಾಗೂ ಸಾಂಪ್ರದಾಯಿಕವಾಗಿ ಬೆಳೆದುಬಂದದ್ದು. ಈ ಬಗೆಯ ವ್ಯಾಕರಣಗಳಲ್ಲಿ ಪಾಣಿನಿಯ ಅಷ್ಟಾಧ್ಯಾಯಿ ಎಂಬ ವ್ಯಾಕರಣವೇ ಮೊತ್ತಮೊದಲನೆಯದು. ಪತಂಜಲಿಯ ಮಹಾಭಾಷ್ಯ ಎಂಬ ವ್ಯಾಕರಣ ಇವುಗಳಲ್ಲಿ ಎರಡನೆಯದು. ಈ ಎರಡು ವ್ಯಾಕರಣ ಗ್ರಂಥಗಳು ಅತಿ ಹೆಚ್ಚು ಪ್ರಾಚೀನವಾಗಿವೆ ಮಾತ್ರವಲ್ಲದೆ ಇವನ್ನು ಅನುಸರಿಸಿ ಜಗತ್ತಿನ ಇತರ ವ್ಯಾಕರಣ ಗ್ರಂಥಗಳು ರಚನೆಯಾಗಿವೆ. ಹೀಗೆ ಒಂದು ಇನ್ನೊಂದನ್ನು ಅನುಸರಿಸಿ ಬೆಳೆದುಬಂದ ವ್ಯಾಕರಣ ಸಂಪ್ರದಾಯ ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿತು. ಈ ಸಂಪ್ರದಾಯವೇ ಬಹಳ ಕಾಲ ಮುಂದುವರಿಯಿತು. ಪಾಣಿನಿ ಮತ್ತು ಪತಂಜಲಿಯವರ ವ್ಯಾಕರಣ ಸಂಪ್ರದಾಯವನ್ನು ಅನುಸರಿಸಿ ವಾಮನ, ಜಯಾದಿತ್ಯ, ಜಿನೇಂದ್ರಬುದ್ಧಿ, ಹರದತ್ತ, ಭರ್ತೃಹರಿ, ವಿಮಲಸರಸ್ವತಿ, ಕಯ್ಯಟ, ರಾಮಚಂದ್ರ, ಹೇಮಚಂದ್ರ, ಭಟ್ಟೋಜಿ ದೀಕ್ಷಿತ್ ಮುಂತಾದವರು ಅದೇ ಮಾದರಿಯಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಬೇರೆ ಬೇರೆ ವ್ಯಾಕರಣಗಳನ್ನು ರೂಢಿಬದ್ಧ ಶೈಲಿಗಳಲ್ಲಿ ಪರಂಪರಾಗತವಾಗಿ ಹಾಗೂ ಸಾಂಪ್ರದಾಯಿಕವಾಗಿ ರಚಿಸಿಕೊಂಡರು. ಇದರಿಂದ ಅನೇಕ ಸಾಂಪ್ರದಾಯಿಕ ವ್ಯಾಕರಣಗಳು ಹೊರಬರಲಾರಂಬಿಸಿದವು. ಪ್ರಾಚೀನ ಗ್ರೀಕರು, ರೋಮನರು, ಅರಬ್ಬರು ಮುಂತಾದವರು ಈ ವ್ಯಾಕರಣ ಸಂಪ್ರದಾಯವನ್ನೇ ಅನುಸರಿಸಿ ತಮ್ಮ ತಮ್ಮ ಭಾಷೆಗಳ ವ್ಯಾಕರಣ ಗ್ರಂಥಗಳನ್ನು ರಚಿಸಿಕೊಂಡರು. ಇವರೆಲ್ಲರಿಗೂ ಆ ಪ್ರಾಚೀನ ಭಾರತೀಯ ವೈಯಾಕರಣರ ವ್ಯಾಕರಣ ಗ್ರಂಥಗಳು ಮೂಲವಾಗಿ ಉಳಿದವು. ಅನಂತರ ಈ ಸಂಪ್ರದಾಯ ಪಾಶ್ಚಾತ್ಯರನ್ನು ಆಕರ್ಷಿಸಿ ಈ ಸಂಪ್ರದಾಯ ಪಾಶ್ಚಾತ್ಯರಲ್ಲಿ ಹನ್ನೆರಡನೇ ಶತಮಾನದಿಂದ ಆರಂಭಗೊಂಡು ಅದು ಹದಿನೆಂಟನೇ ಶತಮಾನದವರೆಗೆ ಮುಂದುವರಿಯಿತು. ಪಾಶ್ಚಾತ್ಯರೂ ತಮ್ಮತಮ್ಮ ವ್ಯಾಕರಣಗಳನ್ನು ಈ ಸಂಪ್ರದಾಯವನ್ನು ಅನುಸರಿಸಿಯೇ ರಚಿಸಿಕೊಂಡರು. ರೋಜರ್‌ಬೇಕನ್, ಸ್ಕಲಿಗರ್, ಬುಲುಕೆರ್, ಜಾನ್‌ವ್ಯಾಲೀಸ್, ಕೂಪರ್, ಕೊವ್ಸ್ತ, ಸಿಮನ್‌ಪಲ್ಲಾಸ್, ವಾರ್ಡ್, ಜಾರ್ಜ್ ಕ್ಯಾಂಬೆಲ್ ಮುಂತಾದ ಪಾಶ್ಚಾತ್ಯರು ಈ ವ್ಯಾಕರಣ ಸಂಪ್ರದಾಯದ

ಮುನ್ನಡೆಗೆ ಶ್ರಮಿಸಿದವರಲ್ಲಿ ಮುಖ್ಯರೆನಿಸಿಕೊಂಡಿದ್ದಾರೆ. ಇವರ ಪರಿಶ್ರಮದ ಫಲವಾಗಿ ಸಾಂಪ್ರದಾಯಿಕ ವ್ಯಾಕರಣ ಜಗತ್ತಿನಾದ್ಯಂತ ನಾನಾ ಮುಖಗಳಲ್ಲಿ ಬೆಳೆದು ಬರಲು ಸಹಾಯಕವಾಯಿತು ಎಂದರೆ ಅತಿಶಯೋಕ್ತಿಯಾಗಲಾರದು. ವ್ಯಾಕರಣ ವಿಚಾರಗಳು ತಮ್ಮ ಭಾಷೆಗೆ ಅನ್ವಯವಾಗಲಿ, ಅಥವಾ ಆಗದಿರಲಿ ಅವನ್ನೇ ಸಾಂಪ್ರದಾಯಿಕವಾಗಿ ಮುಂದುವರಿಸಿಕೊಂಡು ಹೋಗುವುದು ಈ ವ್ಯಾಕರಣಗಳ ಮುಖ್ಯ ಉದ್ದೇಶ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಆಡುಭಾಷೆಗಳ ಅಧ್ಯಯನ ಆರಂಭಗೊಂಡಮೇಲೆ ಈ ಸಾಂಪ್ರದಾಯಿಕ ವ್ಯಾಕರಣದ ಮುನ್ನಡಗೆ ಅಡ್ಡಿಯುಂಟಾಯಿತು. ಆಧುನಿಕ ಭಾಷಾವಿಜ್ಞಾನಿಗಳು ಆಡುಭಾಷೆ ಮತ್ತು ಬರಹದ ಭಾಷೆಗಳಿಗೆ ತಮ್ಮದೇ ಆದ ವಿವರಣಾತ್ಮಕ ವ್ಯಾಕರಣಗಳನ್ನು ರಚಿಸಿಕೊಂಡರು. ಇದರಿಂದಾಗಿ ಸಾಂಪ್ರದಾಯಿಕ ವ್ಯಾಕರಣ ಮತ್ತು ವಿವರ್ಣನಾತ್ಮಕ ವ್ಯಾಕರಣಗಳು ಬೇರೆ ಬೇರೆಯಾಗಿ ಕಾಣಿಸಿಕೊಂಡವು. ಈ ವಿವರಣಾತ್ಮಕ ವ್ಯಾಕರಣವನ್ನು ಭಾಷಾವಿಜ್ಞಾನಿಗಳು ವಿಶ್ಲೇಷಣಾತ್ಮಕ ವ್ಯಾಕರಣವೆಂದೂ, ರಚನಾತ್ಮಕವ್ಯಾಕರಣವೆಂದೂ ಬೇರೆಬೇರೆ ಹೆಸರಿನಿಂದ ಕರೆದುಕೊಂಡರು. ಅಂತೆಯೇ ಎಲ್ಲ ಸಾಂಪ್ರದಾಯಿಕ ವ್ಯಾಕರಣಗಳನ್ನು ಪರಂಪರಾಗತ ವೈಯಾಕರಣರು, ನಿರ್ದೇಶಾತ್ಮಕ ವ್ಯಾಕರಣ (Prescriptive grammar) ಎಂದೂ, ರೂಢಿಗತ ವ್ಯಾಕರಣ (Conventional grammar) ಎಂದೂ ಹೆಸರಿಸಿಕೊಳ್ಳಲಾರಂಭಿಸಿದರು.

ಈ ಎಲ್ಲಾ ಸಾಂಪ್ರದಾಯಿಕ ವ್ಯಾಕರಣಗಳನ್ನು ನಿರ್ದೇಶಾತ್ಮಕ ವ್ಯಾಕರಣಗಳು ಎಂದೇ ಕರೆಯಲಾಗುತ್ತಿದೆ. ಕಾರಣವೇನೆಂದರೆ ಈ ಬಗೆಯ ವ್ಯಾಕರಣಗಳು ಭಾಷೆಯ ವಿವಿಧ ವ್ಯಾಕರಣ ವಿಚಾರಗಳನ್ನು ಅವುಗಳ ಕಾರ್ಯವನ್ನು ನಿರ್ದೇಶಿಸುವ ಉದ್ದೇಶದಿಂದ ರಚಿಸಿಕೊಂಡ ವ್ಯಾಕರಣಗಳಾಗಿವೆ. ವಿವರಣಾತ್ಮಕ ವ್ಯಾಕರಣಗಳು ಆ ಭಾಷೆಯ ವಿವಿಧ ಅಂಶಗಳ ವಿಶ್ಲೇಷಣೆ ಮತ್ತು ವಿವರಣೆಗೆ ಸಂಬಂಧಿಸಿದುವುಗಳಾಗಿದ್ದರೆ, ನಿರ್ದೇಶಾತ್ಮಕ ವ್ಯಾಕರಣವು ವ್ಯಾಕರಣ ವಿಚಾರಗಳ ನಿರ್ದೇಶನಕ್ಕೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ವ್ಯಾಕರಣ ವಿಚಾರಗಳನ್ನು ವಿವರಣಾತ್ಮಕವಾಗಿ ವಿವರಿಸಿಕೊಳ್ಳುವಂತೆಯೇ ವ್ಯಾಕರಣ ವಿಚಾರಗಳ ವಿವಿಧ ಕಾರ್ಯಗಳನ್ನು ನಿರ್ದೇಶಾತ್ಮಕವಾಗಿ ವಿವರಿಸಿ ತೋರಿಸಲು ಸಾಧ್ಯವಿದೆ. ಈ ದೃಷ್ಟಿಯಿಂದಲೇ ಕೆಲವು ವಿದ್ವಾಂಸರು ಎಲ್ಲಾ ಸಾಂಪ್ರದಾಯಿಕ ವ್ಯಾಕರಣಗಳು ನಿರ್ದೇಶಾತ್ಮಕ ವ್ಯಾಕರಣಗಳನ್ನು ಹೆಚ್ಚು ಹೋಲುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸುವರು.

2. ವಿವರಣಾತ್ಮಕ ವ್ಯಾಕರಣ (Descriptive grammar)

ಇದು ಇನ್ನೊಂದು ಬಗೆಯ ವ್ಯಾಕರಣ, ಇದು ವ್ಯಾಕರಣ ಬಗೆಗಳಲ್ಲಿ ಬಹಳ ಮುಖ್ಯವಾದದ್ದು. ಯಾವುದಾದರೊಂದು ಭಾಷೆ ಅಥವಾ ಉಪಭಾಷೆಯ ಒಳರಚನೆಗೆ ಸಂಬಂಧಿಸಿದ ಧ್ವನಿ, ಪದ, ವಾಕ್ಯ ವಿಚಾರಗಳನ್ನು ಅವುಗಳ ಕಾರ್ಯವನ್ನು ಆ ಭಾಷೆ

ಯಲ್ಲಿರುವಂತೆಯೇ ವಿಶ್ಲೇಷಿಸಿ ವಿವರಿಸಿ ತೋರಿಸುವುದು ವಿವರಣಾತ್ಮಕ ವ್ಯಾಕರಣದ ಬಹುಮುಖ್ಯ ಉದ್ದೇಶ. ಆದರೆ ಈ ವ್ಯಾಕರಣದಲ್ಲಿ ಎಲ್ಲ ಕಾಲದ, ಎಲ್ಲ ಸ್ಥಳದ, ಎಲ್ಲ ವ್ಯಕ್ತಿಗಳ, ಎಲ್ಲ ಗ್ರಂಥಗಳ ಭಾಷೆ ಅಥವಾ ಉಪಭಾಷೆಯನ್ನು ಏಕ ಕಾಲದಲ್ಲಿ ವಿಶ್ಲೇಷಿಸಿ ವಿವರಿಸಿಕೊಳ್ಳಲು ಬರುವುದಿಲ್ಲ. ಅಂತಹ ವ್ಯಾಕರಣದಿಂದ ಹೆಚ್ಚಿನ ಪ್ರಯೋಜನವೇನೂ ಆಗುವುದಿಲ್ಲ. ಆದಕಾರಣ ಯಾವುದಾದರೊಂದು ಕಾಲದ, ಯಾವುದಾದರೊಂದು ಸ್ಥಳದ, ಯಾವುದಾದರೊಬ್ಬ ವ್ಯಕ್ತಿಯ, ಯಾವುದಾದರೊಂದು ಗ್ರಂಥದ ಭಾಷೆಯನ್ನು ಆರಿಸಿಕೊಂಡು ಅದರ ಒಳರಚನೆಗೆ ಸಂಬಂಧಿಸಿದ ವ್ಯಾಕರಣ ವಿಚಾರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಶ್ಲೇಷಿಸಿ ಪ್ರತ್ಯೇಕ ಪ್ರತ್ಯೇಕವಾಗಿಯೇ ವಿವರಿಸಿಕೊಳ್ಳುವ ವ್ಯಾಕರಣಗಳನ್ನು ರೂಪಿಸಿಕೊಳ್ಳುವುದು ಭಾಷಾವಿಜ್ಞಾನ ಕ್ಷೇತ್ರ ದಲ್ಲಿ ರೂಢಿಗೆ ಬಂದಿತು. ಆಗ ಒಂದು ಭಾಷೆಯ ಹಿರಿಯ ಘಟಕವಾದ ವಾಕ್ಯದಿಂದ ಹಿಡಿದು ಕಿರಿಯ ಘಟಕವಾದ ವರ್ಣದವರೆಗೆ ಬೇರೆ ಬೇರೆ ಹಂತಗಳಲ್ಲಿ ಅವುಗಳನ್ನು ವಿಶ್ಲೇಷಿಸಿ ಅವುಗಳ ವರ್ಣನಾತ್ಮಕ ವ್ಯಾಕರಣವನ್ನು ತಯಾರಿಸಿಕೊಂಡಂತಾಗುವುದು. ಆಗ ಅಂತಹ ಭಾಷೆಯ ವರ್ಣವಿಚಾರ, ಶಬ್ದವಿಚಾರ, ವಾಕ್ಯವಿಚಾರ ಮುಂತಾದುವು ಗಳನ್ನು ವೈಜ್ಞಾನಿಕವಾಗಿ ವಿವೇಚಿಸಿದಂತಾಗುತ್ತದೆ. ನಮ್ಮ ಅನುಕೂಲಕ್ಕೆ ತಕ್ಕಂತೆ ಈ ಬಗೆಯ ವ್ಯಾಕರಣ ವಿವೇಚನೆಗೆ ಬರಹದ ಅಥವಾ ಆಡುಭಾಷೆಗಳನ್ನು ಆರಿಸಿ ಕೊಳ್ಳಬಹುದಾದ ಅವಕಾಶಗಳಿವೆ. ಭಾಷೆಯ ಸಾಮಾನ್ಯ ವ್ಯಾಕರಣ ವಿಚಾರಗಳ ವಿವೇಚನೆ ಸಾಮಾನ್ಯ ವ್ಯಾಕರಣವೆನಿಸಿಕೊಳ್ಳುವಂತೆ ಭಾಷೆಯ ವಿವರಣಾತ್ಮಕ ವಿವೇಚನೆ ವರ್ಣನಾತ್ಮಕ ವ್ಯಾಕರಣವೆನಿಸಿಕೊಳ್ಳುತ್ತದೆ. ಇದನ್ನು ಬೇರೆ ಬೇರೆ ವಿದ್ವಾಂಸರು ಇದರ ಅಧ್ಯಯನ ವಿಧಾನವನ್ನು ಗಮನಿಸಿ ಏಕಕಾಲಿಕ ವ್ಯಾಕರಣ (Synchronic grammar) ಎಂದೂ, ಸಾಮಾನ್ಯ ವ್ಯಾಕರಣ (General grammar) ಎಂದೂ, ರಚನಾತ್ಮಕ ವ್ಯಾಕರಣ (Structural grammar) ಎಂದೂ, ಅಚಲಾತ್ಮಕ ವ್ಯಾಕರಣ (Static grammar) ಎಂದೂ ಕರೆಯುವರು. ಈ ಎಲ್ಲ ಹೆಸರಿನ ವ್ಯಾಕರಣಗಳು ಈ ವಿವರಣಾತ್ಮಕ ವ್ಯಾಕರಣವನ್ನೇ ಹೆಚ್ಚು ಹೋಲುತ್ತವೆ ಎಂದು ಹೇಳಬಹುದು.

3. ಐತಿಹಾಸಿಕ ವ್ಯಾಕರಣ (Historical grammar)

ಜಗತ್ತಿನ ಪ್ರತಿಯೊಂದು ಭಾಷೆಯು ತನ್ನದೇ ಆದ ರೀತಿಯಲ್ಲಿ ಬೆಳೆದುಬಂದು ತನ್ನ ಇತಿಹಾಸವನ್ನು ರೂಪಿಸಿಕೊಂಡಿರುತ್ತದೆ. ಭಾಷೆಯು ಐತಿಹಾಸಿಕವಾಗಿ ಬೆಳೆದು ಬಂದ ವಿಧಾನವನ್ನು ಅನುಸರಿಸಿ ಅದರ ಐತಿಹಾಸಿಕ ವ್ಯಾಕರಣವನ್ನು ತಯಾರಿಸಿ ಕೊಳ್ಳಬಹುದು. ಈ ಬಗೆಯ ವ್ಯಾಕರಣದಲ್ಲಿ ಭಾಷೆಗಳ ಅಥವಾ ಉಪಭಾಷೆಗಳ ಧ್ವನಿ ಗಳು, ಶಬ್ದಗಳು, ವಾಕ್ಯಗಳು ಹೇಗೆ ಐತಿಹಾಸಿಕವಾಗಿ ಬೆಳೆದುಬಂದಿವೆ ಎಂಬುದನ್ನು ವಿವೇಚಿಸಲು ಸುಲಭಸಾಧ್ಯ. ಈ ರೀತಿಯ ಐತಿಹಾಸಿಕ ಅಧ್ಯಯನದಿಂದ ಜಗತ್ತಿ

ನಾದ್ಯಂತ ಹರಡಿಕೊಂಡಿರುವ ಅಸಂಖ್ಯಾತ ಭಾಷೆಗಳನ್ನು ವರ್ಗೀಕರಿಸಿಕೊಳ್ಳಲು ಅವುಗಳ ಮೂಲಭಾಷೆಯನ್ನು ಪುನರ್ರಚಿಸಿಕೊಳ್ಳಲು ಸಹಾಯಕವಾಗುತ್ತದೆ.

ಭಾಷೆ ಚಿರಪರಿವರ್ತನಶೀಲವುಳ್ಳದ್ದು, ಇದು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಪರಿವರ್ತನೆಯಾಗುತ್ತಿರುತ್ತದೆ. ಇದರಿಂದಾಗಿ ಭಾಷೆಯು ಬೆಳವಣಿಗೆ ಸಾಧ್ಯವಾಗಿದೆ. ಇದರಿಂದ ಬೇರೆ ಬೇರೆ ಭಾಷೆಗಳು ಉಪಭಾಷೆಗಳು ಬೆಳೆದುಬಂದಿವೆ. ಹೀಗೆ ಬೆಳೆದುಬಂದಿರುವ ಬೇರೆ ಬೇರೆ ಭಾಷೆಗಳ ವ್ಯಾಕರಣ ವಿಚಾರಗಳ ಸಹಾಯದಿಂದ ಅವುಗಳಲ್ಲಿ ಕಂಡುಬರುವ ಸಮಾನ ಹಾಗೂ ಅಸಮಾನ ಅಂಶಗಳನ್ನು ಗುರುತಿಸಿಕೊಂಡು ಅವುಗಳನ್ನು ಐತಿಹಾಸಿಕವಾಗಿ ಬೇರೆ ಬೇರೆ ವರ್ಗ ಮತ್ತು ಉಪವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದಾಗಿದೆ. ಇದರಿಂದ ಭಾಷೆಗಳು ಐತಿಹಾಸಿಕವಾಗಿ ಬೆಳೆದುಬಂದ ರೀತಿ ಅವುಗಳ ಸಾಮಾನ್ಯ ಸಿದ್ಧಾಂತಗಳನ್ನು ವಿವರಿಸಿಕೊಳ್ಳಲು ನೆರವಾಗುವುದು. ಐತಿಹಾಸಿಕ ವ್ಯಾಕರಣವನ್ನು ಕೆಲವು ವಿದ್ವಾಂಸರು ದ್ವಿಕಾಲಿಕ ವ್ಯಾಕರಣ (Diachronic grammar) ಎಂದೂ, ವಿಕಾಸಾತ್ಮಕ ವ್ಯಾಕರಣ (Evolutionary grammar) ಎಂದೂ ಬೇರೆ ಬೇರೆ ಹೆಸರಿನಿಂದ ಕರೆಯುವರು. ಈ ಬಗೆಯ ಅಧ್ಯಯನದಿಂದ ಮೂಲಭಾಷೆ, ತಾಯಿಭಾಷೆ ಸೋದರಭಾಷೆಗಳು, ಮರಿಭಾಷೆಗಳು ಐತಿಹಾಸಿಕವಾಗಿ ಬೆಳೆದುಬಂದ ವಿಧಾನವನ್ನು ಸ್ಪಷ್ಟವಾಗಿ ವಿವರಿಸಿಕೊಳ್ಳಲು ಸಹಾಯಮಾಡುತ್ತದೆ.

4. ತೌಲನಿಕ ವ್ಯಾಕರಣ (Comparative grammar)

ವ್ಯಾಕರಣಗಳಲ್ಲಿ ವಿವರಣಾತ್ಮಕ ವ್ಯಾಕರಣ ಹಾಗೂ ಐತಿಹಾಸಿಕ ವ್ಯಾಕರಣಗಳಂತೆ ಇದು ಮತ್ತೊಂದು ಬಗೆಯ ವ್ಯಾಕರಣ. ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳ ಬೇರೆ ಬೇರೆ ರಚನಾತ್ಮಕ ಅಂಶಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸುವುದರ ಮೂಲಕ ತಯಾರಿಸಿಕೊಳ್ಳಬಹುದಾದ ವ್ಯಾಕರಣವನ್ನು ತೌಲನಿಕ ವ್ಯಾಕರಣ ಎನ್ನುವರು. ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ, ಆರ್ಯಭಾಷೆಗಳ ತೌಲನಿಕ ವ್ಯಾಕರಣ, ಗೌಡಿಯನ್ ಭಾಷೆಗಳ ತೌಲನಿಕ ವ್ಯಾಕರಣ ಮುಂತಾದುವು ಇದಕ್ಕೆ ಉತ್ತಮವಾದ ಉದಾಹರಣೆ. ಮೂಲತಃ ಒಂದೇ ಭಾಷೆಯಿಂದ ಹುಟ್ಟಿ ಬೆಳೆದುಬಂದ ಬೇರೆ ಬೇರೆ ಭಾಷೆಗಳಲ್ಲಿ ಸಾಮಾನ್ಯವಾಗಿ ಒಂದಲ್ಲ ಒಂದು ರೀತಿಯ ಸಾಮ್ಯ ಇದ್ದೇ ಇರುತ್ತದೆ. ಇಂತಹ ಭಾಷೆಗಳ ಧ್ವನಿ, ಶಬ್ದ, ವಾಕ್ಯ ಮುಂತಾದವುಗಳಲ್ಲಿರುವ ಸಾಮ್ಯವನ್ನು ಆಧರಿಸಿ ತೌಲನಿಕ ವ್ಯಾಕರಣವನ್ನು ತಯಾರಿಸಿಕೊಳ್ಳುವುದು ರೂಢಿ. ಈ ಬಗೆಯ ವ್ಯಾಕರಣಗಳ ಸಹಾಯದಿಂದ ಒಂದೇ ಭಾಷಾಪರಿವಾರಕ್ಕೆ ಸೇರಿದ ಬೇರೆ ಬೇರೆ ಭಾಷೆಗಳ ಸಮಾನ ಹಾಗೂ ಅಸಮಾನ ಅಂಶಗಳನ್ನು ವಿವರಿಸಿಕೊಳ್ಳಬಹುದಲ್ಲದೆ ಅವು ಐತಿಹಾಸಿಕವಾಗಿ ಬೆಳೆದು ಬಂದ ವಿಧಾನವನ್ನು ವಿವರಿಸಿ ತೋರಿಸಬಹುದು. ಈ ಕಾರಣದಿಂದಲೇ ತೌಲನಿಕ ವ್ಯಾಕರಣದ

ಅಧ್ಯಯನವನ್ನು ಐತಿಹಾಸಿಕ ವ್ಯಾಕರಣ ಅಧ್ಯಯನದ ಒಂದು ಪ್ರಮುಖ ಅಂಗ ವನ್ನಾಗಿ ಪರಿಗಣಿಸಿಕೊಳ್ಳಲಾಗಿದೆ. ಈ ದೃಷ್ಟಿಯಿಂದ ತೌಲನಿಕ ವ್ಯಾಕರಣ ಹಾಗೂ ಐತಿಹಾಸಿಕ ವ್ಯಾಕರಣಗಳು ಎರಡು ಪರಸ್ಪರ ಒಂದನ್ನೊಂದು ಅವಲಂಬಿಸಿವೆ ಎನ್ನುವರು. ಭಾಷಾ ವರ್ಗೀಕರಣ, ಭಾಷಿಕ ಪರಿವರ್ತನೆ, ಭಾಷಿಕ ಸ್ವೀಕರಣ, ಭಾಷಿಕ ಸೃಷ್ಟಿ ಮುಂತಾದುವುಗಳಿಗೆ ಸಂಬಂಧಿಸಿದ ಬೇರೆ ಬೇರೆ ಸಮಸ್ಯೆಗಳನ್ನು ಹೆಚ್ಚು ಖಚಿತ ಹಾಗೂ ನಿಖರವಾಗಿ ವಿವರಿಸಿಕೊಳ್ಳಲು ಈ ಐತಿಹಾಸಿಕ ಹಾಗೂ ತೌಲನಿಕ ವ್ಯಾಕರಣ ಗಳು ತುಂಬ ಸಹಾಯಮಾಡುತ್ತವೆ. ಅಂತೆಯೇ ಮೂಲ ಭಾಷೆಯನ್ನು ಪುನರ್ರಚಿಸಿ ಕೊಳ್ಳಲು ತೌಲನಿಕ ವ್ಯಾಕರಣವು ತುಂಬ ಸಹಾಯಕಾರಿ. ಇದರಿಂದ ಭಾಷೆಗಳು ಬೆಳೆದುಬಂದ ಇತಿಹಾಸವನ್ನು ಹೆಚ್ಚು ವೈಜ್ಞಾನಿಕವಾಗಿ ಗುರುತಿಸಿಕೊಳ್ಳಲು ಸಾಧ್ಯ ವಾಗುವುದು.

ಮೇಲೆ ಹೇಳಿದ ವಿವರಣಾತ್ಮಕ, ಐತಿಹಾಸಿಕ ಮತ್ತು ತೌಲನಿಕ ವ್ಯಾಕರಣಗಳು ಜಗತ್ತಿನಾದ್ಯಂತ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ.

5. ರಚನಾತ್ಮಕ ವ್ಯಾಕರಣ (Structural grammar)

ಒಂದು ಭಾಷೆಯ ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ, ಪದಪುಂಜ ಮತ್ತು ವಾಕ್ಯ ಮುಂತಾದ ಒಳ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿಕೊಳ್ಳುವುದು ರಚನಾತ್ಮಕ ವ್ಯಾಕರಣವೆನಿಸಿಕೊಳ್ಳುತ್ತದೆ. ಈ ಬಗೆಯ ವ್ಯಾಕರಣವು ಎಲ್ಲ ರೀತಿಯಲ್ಲಿಯೂ ವಿವರಣಾತ್ಮಕ ವ್ಯಾಕರಣವನ್ನು ಹೆಚ್ಚು ಹೋಲುವುದು. ಆದಕಾರಣ ಈ ಬಗೆಯ ರಚನಾತ್ಮಕ ವ್ಯಾಕರಣದ ರಚನೆಗೆ ವಿವರಣಾತ್ಮಕ ವ್ಯಾಕರಣದ ತಂತ್ರ ವಿಧಾನ ಗಳನ್ನೇ ಅನುಸರಿಸಲಾಗುತ್ತದೆ. ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಪ್ರಮುಖ ಭಾಷಾವಿಜ್ಞಾನಿಗಳಾದ ಸಪೀರ್, ಸಸ್ಸೂರ್, ಬೋಆಸ್, ಬ್ಲೂಮ್‌ಫೀಲ್ಡ್ ಮುಂತಾದವರು ಈ ಬಗೆಯ ವ್ಯಾಕರಣ ರಚನೆಗೆ ಶ್ರಮಿಸಿದವರಲ್ಲಿ ಮುಖ್ಯರೆನಿಸಿ ಕೊಂಡಿದ್ದಾರೆ. ಈ ವಿದ್ವಾಂಸರ ಪ್ರಯತ್ನದ ಫಲವಾಗಿ ಆಧುನಿಕ ಭಾಷಾವಿಜ್ಞಾನವು ಆರಂಭಗೊಂಡಿತಲ್ಲದೆ ಅದರಿಂದ ರಚನಾತ್ಮಕ ವ್ಯಾಕರಣ ರಚನೆಯ ವಿಧಿ ವಿಧಾನಗಳು ರೂಪುಗೊಂಡವು. ಭಾಷೆಯ ವಿವಿಧ ರಚನಾತ್ಮಕ ಅಂಶಗಳನ್ನು ಇದ್ದುದನ್ನು ಇದ್ದಹಾಗೆಯೇ ವಿವರಿಸಿ ತೋರಿಸುವುದು ಈ ರಚನಾತ್ಮಕ ವ್ಯಾಕರಣದ ಮುಖ್ಯ ಉದ್ದೇಶ. ಈ ಬಗೆಯ ವ್ಯಾಕರಣ ಆಧುನಿಕ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಸಂಪಾದಿಸಿಕೊಂಡಿದೆ ಮಾತ್ರವಲ್ಲದೆ ಇದರಿಂದ ಜಗತ್ತಿನಾದ್ಯಂತ ಬೇರೆ ಬೇರೆ ಬಗೆಯ ವ್ಯಾಕರಣಗಳು ರೂಪುಗೊಳ್ಳಲು ಸಾಧ್ಯವಾಗಿದೆ. ಇದರ ಫಲವಾಗಿ ಜಗತ್ತಿನ ಅನೇಕ ಭಾಷೆಗಳ ರಚನಾತ್ಮಕ ವ್ಯಾಕರಣಗಳು ಹೊರ ಬಂದವು. ಇದರಲ್ಲಿ ಅರ್ಥಕ್ಕಿಂತ ಆ ಭಾಷೆಯ ಭಾಷಿಕ ರಚನೆಗೆ ಪ್ರಾಮುಖ್ಯತೆ ಹೆಚ್ಚು.

6. ಪ್ರರೂಪಾತ್ಮಕ ವ್ಯಾಕರಣ (Tagmemic grammar)

ಒಂದು ಭಾಷೆಯ ವಿವಿಧ ವ್ಯಾಕರಣ ವರ್ಗಕ್ಕೆ ಸೇರಿದ ಬೇರೆ ಬೇರೆ ರೂಪಗಳನ್ನು ಬೇರೆ ಬೇರೆ ವ್ಯಾಕರಣ ಘಟಕಗಳ ಸ್ಥಾನದಲ್ಲಿ ಪ್ರತಿಸ್ಥಾಪಿಸುವುದರ ಮೂಲಕ ವಿವಿಧ ವ್ಯಾಕರಣಾಂಶಗಳನ್ನು ವಿಶ್ಲೇಷಿಸಿ ವಿವರಿಸಿಕೊಳ್ಳುವುದು ಪ್ರರೂಪಾತ್ಮಕ ವ್ಯಾಕರಣ ವೆನಿಸಿಕೊಳ್ಳುತ್ತದೆ. ಈ ಬಗೆಯ ವ್ಯಾಕರಣವನ್ನು ಕೆ. ಎಲ್. ಪೈಕ್ ಎಂಬ ವಿದ್ವಾಂಸನು ಮೊತ್ತ ಮೊದಲಿಗೆ ರೂಪಿಸಿದನು. ಇವನು ಭಾಷೆಯ ಪ್ರತಿಯೊಂದು ರೂಪವನ್ನು ವ್ಯಾಕರಣದ ಬೇರೆ ಬೇರೆ ಘಟಕಗಳ ಸ್ಥಾನದಲ್ಲಿ ಪ್ರತಿಸ್ಥಾಪಿಸುತ್ತಾ ಅವುಗಳ ವ್ಯಾಕರಣ ಸಂಬಂಧವನ್ನು ವಿವರಿಸಿ ತೋರಿಸಿದ್ದಾನೆ. ಇದರಿಂದ ಯಾವ ಯಾವ ಭಾಷ ರೂಪಗಳು ಯಾವ ಯಾವ ವ್ಯಾಕರಣ ವರ್ಗಕ್ಕೆ ಸೇರುತ್ತವೆ ಅವುಗಳನ್ನು ಬೇರೆ ಬೇರೆ ವಾಕ್ಯ ಘಟಕಗಳಲ್ಲಿ ಹೇಗೆ ಬಳಸಬಹುದು ಎಂಬುದನ್ನು ಇವನು ತೋರಿಸಿಕೊಟ್ಟನು. ಇದರಿಂದ ಧ್ವನಿಮಾ, ಆಕೃತಿಮಾ ಮುಂತಾದ ಭಾಷಿಕಾಂಶಗಳು ಯಾವ ಯಾವ ವ್ಯಾಕರಣ ಘಟಕದೊಡನೆ ಸಂಬಂಧವನ್ನು ಪಡೆದುಕೊಂಡಿವೆ ಎಂಬುದನ್ನು ತಿಳಿಯಬಹುದಲ್ಲದೆ ಅವುಗಳಿಂದ ವಾಕ್ಯದ ಕರ್ತೃ, ಕರ್ಮ, ಕ್ರಿಯೆ ಮುಂತಾದುವುಗಳ ಸ್ಥಾನವನ್ನು ನಿರ್ಧರಿಸಿಕೊಳ್ಳಬಹುದು. ಹಾಗೆಯೇ ಅಂತಹ ಸ್ಥಾನಗಳಲ್ಲಿ ಬರುವ ಎಲ್ಲಾ ರೂಪಗಳನ್ನು ಬೇರೆ ಬೇರೆ ವ್ಯಾಕರಣ ವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದು. ವ್ಯಾಕರಣ ಘಟಕಗಳು ಅವುಗಳ ಸ್ಥಾನದಲ್ಲಿ ಪ್ರತಿಸ್ಥಾಪಿಸಬಹುದಾದ ರೂಪಗಳು ಮತ್ತು ಪ್ರತ್ಯಯಗಳು ಅವುಗಳ ವ್ಯಾಕರಣ ಸಂಬಂಧ ಮುಂತಾದುವು ಪ್ರರೂಪಾತ್ಮಕ ವ್ಯಾಕರಣದಲ್ಲಿ ಬಹಳ ಮುಖ್ಯ.

ಯಾವ ಯಾವ ವ್ಯಾಕರಣ ಘಟಕಗಳ ಸ್ಥಾನದ ಭಾಷೆಯ ಯಾವ ಯಾವ ರೂಪಗಳನ್ನು ಪ್ರತಿಸ್ಥಾಪಿಸಬಹುದೋ ಹಾಗೇ ಪ್ರತಿ ಸ್ಥಾಪಿಸುವುದರ ಮೂಲಕ ಬೇರೆ ಬೇರೆ ವಾಕ್ಯಗಳನ್ನು ರಚಿಸಿಕೊಳ್ಳಬಹುದು ಎಂಬ ವಿಚಾರಗಳನ್ನು ಪ್ರರೂಪಾತ್ಮಕ ವ್ಯಾಕರಣವು ನಿರ್ದೇಶಿಸುತ್ತದೆ ಎಂಬುದನ್ನು ಗಮನಿಸಿದ ಪೈಕ್ ಮಹಾಶಯನ ಶಿಷ್ಯರಾದ ಕುಕ್ ಮುಂತಾದವರು ಈ ಬಗೆಯ ಸಿದ್ಧಾಂತವನ್ನು ಅನುಸರಿಸಿ ಬಗೆ ಬಗೆಯ ಪ್ರರೂಪಾತ್ಮಕ ವ್ಯಾಕರಣಗಳನ್ನು ತಯಾರಿಸಿ ಅವುಗಳನ್ನು ಹೆಚ್ಚು ಪ್ರಚಾರಕ್ಕೆ ತರಲು ಪ್ರಯತ್ನಿಸಿದರು. ಈ ರೀತಿಯ ವ್ಯಾಕರಣ ರಚನೆ ಅವುಗಳ ಸಿದ್ಧಾಂತ ಬೇರೆ ಬೇರೆ ಬಗೆಯ ವ್ಯಾಕರಣಗಳ ರಚನೆಗೆ ದಾರಿಮಾಡಿಕೊಟ್ಟಿತು. ಈ ಬಗೆಯ ವ್ಯಾಕರಣವು ಒಂದು ರೀತಿಯಲ್ಲಿ ರಚನಾತ್ಮಕ ವ್ಯಾಕರಣವನ್ನೇ ಹೆಚ್ಚು ಹೋಲುತ್ತದೆಯಾದರೂ ಇದರಲ್ಲಿ ತನ್ನದೇ ಆದ ಇತಿಮಿತಿಗಳಿವೆ. ಪ್ರರೂಪಾತ್ಮಕ ವ್ಯಾಕರಣದಲ್ಲಿ ರೂಪಗಳ ರಚನಾತ್ಮಕ ಸಿದ್ಧಾಂತವನ್ನು ಹೆಚ್ಚು ಗಮನಿಸಲಾಗುತ್ತದೆ ಯಾದರೂ ಅವುಗಳ ಅರ್ಥ ಮತ್ತು ಕಾರ್ಯವನ್ನು ಅಷ್ಟಾಗಿ ಗಮನಿಸಲಾಗುವುದಿಲ್ಲ. ಈ ಕಾರಣದಿಂದ ಕೆಲವರು ಭಾಷೆಯ ವಿವಿಧ ರೂಪಗಳನ್ನು ಗಮನಿಸುವುದರ ಜೊತೆಗೆ ಇವುಗಳ ಕ್ರಿಯೆಯನ್ನು ಇದರಲ್ಲಿ ಗಮನಿಸುವುದು ಹೆಚ್ಚು ಉಪಯುಕ್ತವಾದುದೆಂದು

ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗೆಯ ವ್ಯಾಕರಣದಲ್ಲಿ ರಚನಾತ್ಮಕ ಅಂಶಗಳನ್ನು ಅವುಗಳ ವ್ಯಾಕರಣ ಸಂಬಂಧವನ್ನು ವಿಶ್ಲೇಷಿಸಿ ವಿವರಿಸಬಹುದಾದರೂ ಅವುಗಳ ಅರ್ಥಕ್ಕೆ ಹೆಚ್ಚು ಮಹತ್ವ ತೋರದಿರುವುದೊಂದು ದೊಡ್ಡ ಕೊರತೆಯಾಗಿದೆ.

7. ವಿಭೇದಾತ್ಮಕ ವ್ಯಾಕರಣ (Differential grammar)

ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ, ಪದರಚನೆ, ವಾಕ್ಯ ಮತ್ತು ವಾಕ್ಯರಚನೆ ಮುಂತಾದುವನ್ನು ಸಂಪಾದಿಸಿಕೊಂಡಿರುತ್ತದೆ. ಇವು ಭಾಷೆಯಿಂದ ಭಾಷೆಗೆ ಭಿನ್ನವಾಗಿರುತ್ತವೆ. ಈ ಕಾರಣದಿಂದಾಗಿಯೇ ಒಂದು ಭಾಷೆ ಆಡುವವನು ಕಲಿಯದೆ ಇನ್ನೊಂದು ಭಾಷೆ ಆಡಲಾರದ ಸ್ಥಿತಿ ಉಂಟಾಗಿದೆ. ಒಂದೇ ಒಂದು ಭಾಷಾಪರಿವಾರಕ್ಕೆ ಸೇರಿದ ಭಾಷೆಗಳಲ್ಲಿ ಎಷ್ಟೇ ಸಾಮ್ಯ ಕಂಡು ಬಂದರೂ ಅವು ತಮ್ಮದೇ ಆದ ಸಾಮ್ಯವಲ್ಲದ ಅಂಶಗಳನ್ನು ಹೊಂದಿರುತ್ತವೆ. ಅವುಗಳ ಅಸಮಾನ ಅಂಶಗಳು ಆಭಾಷೆಗಳು ಬೇರೆ ಬೇರೆಯಾಗಿವೆ ಎಂಬುದನ್ನು ನಿರ್ದೇಶಿಸುತ್ತವೆ. ಈ ಅಸಾಮ್ಯ ಅಂಶಗಳು ಹೆಚ್ಚಿದ್ದರೆ ಅಂತಹ ಭಾಷೆಗಳು ಸಾಮಾನ್ಯವಾಗಿ ಬೇರೆ ಬೇರೆ ಪರಿವಾರಗಳಿಗೆ ಸೇರಿದ ಭಾಷೆಗಳಾಗಿರುತ್ತವೆ. ಈ ಭಿನ್ನತೆ ಭಾಷೆಗಳಲ್ಲಿ ಸಹಜವಾದದ್ದು, ಈ ಭಿನ್ನ ಭಿನ್ನ ಅಂಶಗಳನ್ನು ಆಧರಿಸಿ ಭಾಷೆಯ ವ್ಯಾಕರಣವನ್ನು ತಯಾರಿಸಿಕೊಳ್ಳಬಹುದಾದುದನ್ನೇ ವಿಭೇದಾತ್ಮಕ ವ್ಯಾಕರಣವೆಂದು ಕರೆಯುವರು. ಈ ಬಗೆಯ ವ್ಯಾಕರಣದಿಂದ ಭಾಷೆಯ ಭಿನ್ನ ಭಿನ್ನ ಅಂಶಗಳನ್ನು ಗುರುತಿಸಿಕೊಳ್ಳಬಹುದಲ್ಲದೆ ಅಂತಹ ಅಂಶಗಳು ಭಾಷೆಯಲ್ಲಿ ತಮ್ಮ ತಮ್ಮ ಕಾರ್ಯವನ್ನು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಸುಲಭವಾಗಿ ನಿರ್ಧರಿಸಿಕೊಳ್ಳಬಹುದು. ಇದು ಭಾಷಾ ಬೋಧನೆ ಮತ್ತು ಭಾಷಾ ಕಲಿಕೆಗೆ ತುಂಬ ಸಹಾಯಕವಾಗುತ್ತದೆ. ಈ ಕಾರಣದಿಂದ ಈ ಬಗೆಯ ವ್ಯಾಕರಣವು ಬೋಧನಾತ್ಮಕ ವ್ಯಾಕರಣವನ್ನು ಹೆಚ್ಚು ಹೋಲುತ್ತದೆ ಎನ್ನುವರು.

8. ವ್ಯವಸ್ಥಿತ ವ್ಯಾಕರಣ (Systemic grammar)

ಹೆಸರಾಂತ ಭಾಷಾ ವಿಜ್ಞಾನಿ ಹಾಲಿಡೆ ಮತ್ತು ಫರ್ಥರವರ ಸಿದ್ಧಾಂತಗಳನ್ನು ಆಧರಿಸಿ ಕೆಲವು ಬ್ರಿಟಿಷ್ ಭಾಷಾ ವಿಜ್ಞಾನಿಗಳು ಈ ಬಗೆಯ ವ್ಯಾಕರಣವನ್ನು ಮೊತ್ತ ಮೊದಲಿಗೆ ರೂಪಿಸಿಕೊಂಡರು. ಇದರಲ್ಲಿ ಒಂದು ಭಾಷೆಯ ಎಲ್ಲ ರಚನಾತ್ಮಕ ಅಂಶಗಳನ್ನು ಬೇರೆ ಬೇರೆ ಹಂತಗಳಲ್ಲಿ ಗಮನಿಸಲಾಗುತ್ತದೆ ಅಲ್ಲದೆ ಒಂದು ಭಾಷಾ ರೂಪ ಯಾವ ಯಾವ ಹಂತಗಳಲ್ಲಿ ಯಾವ ಯಾವ ಸಂಧರ್ಭಗಳಲ್ಲಿ ಯಾವ ಅರ್ಥವನ್ನು ವ್ಯಕ್ತಗೊಳಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. ರಚನಾತ್ಮಕ, ಪ್ರರೂಪಾತ್ಮಕ, ವಿಭೇಧಾತ್ಮಕ ವ್ಯಾಕರಣಗಳಲ್ಲಿ ಭಾಷೆಯ ರಚನಾತ್ಮಕ ಅಂಶಗಳಿಗೆ ಮಾನ್ಯತೆ ಹೆಚ್ಚು ಆದರೆ ಇಲ್ಲಿ ಅರ್ಥ ಗೌಣ. ವ್ಯವಸ್ಥಿತ ವ್ಯಾಕರಣದಲ್ಲಿ ಭಾಷೆಯ

ರಚನಾತ್ಮಕ ಅಂಶಗಳ ಜೊತೆಗೆ ಅವುಗಳ ಸಾಂದರ್ಭಿಕ ಅರ್ಥವನ್ನು ವಿಶೇಷವಾಗಿ ಗಮನಿಸಲಾಗುತ್ತದೆ. ಭಾಷೆಯ ವಿವಿಧ ರಚನಾತ್ಮಕ ಅಂಶಗಳನ್ನು ಅವುಗಳ ಅರ್ಥಕ್ಕನುಗುಣವಾಗಿ ವಿವರಿಸಿ ತೋರಿಸುವುದು ವ್ಯವಸ್ಥಿತ ವ್ಯಾಕರಣದ ಬಹು ಮುಖ್ಯವಾದ ಉದ್ದೇಶ. ಫರ್ಥ್‌ಮಹಾಶಯನ ಅನಂತರ ಕಾಣಿಸಿಕೊಂಡ ಬೇರೆ ಬೇರೆ ವಿದ್ವಾಂಸರು ಇವನ ಸಿದ್ಧಾಂತಕ್ಕೆ ಪ್ರಭಾವಿತರಾಗಿ ವ್ಯವಸ್ಥಿತ ವ್ಯಾಕರಣವನ್ನು ರೂಪಿಸಿಕೊಂಡು ಅದನು ಹೆಚ್ಚು ಪ್ರಚಾರಕ್ಕೆ ತರಲು ಶ್ರಮಿಸಿದರು. ಅವರಲ್ಲಿ ವಿಲ್ಕಿನ್‌ಸನ್, ಸ್ಕಾಟ್, ಹಾಲಿಡೆ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಇವರು ಈ ಬಗೆಯ ವ್ಯಾಕರಣವನ್ನು Systemic grammar ಎಂದೂ, Scale and category grammar ಎಂದೂ, System structure grammar ಎಂದೂ ಬೇರೆ ಬೇರೆ ಹೆಸರಿನಿಂದ ಕರೆದುಕೊಂಡರು.

ಹಾಲಿಡೆ ಎಂಬುವವನು ಒಂದು ಭಾಷೆಯ ವಿವಿಧ ಭಾಷಿಕಾಂಶಗಳನ್ನು ನಾಲ್ಕು ಹಂತಗಳಲ್ಲಿ ವ್ಯವಸ್ಥಿತವಾಗಿ ವಿಶ್ಲೇಷಿಸಿ ವಿವರಿಸಿ ತೋರಿಸುವ Scale and category grammar ಎಂಬುದನ್ನು ಮೊತ್ತ ಮೊದಲಿಗೆ ರೂಪಿಸಿದನು. ಭಾಷೆಯಲ್ಲಿ ನಾಲ್ಕು ವರ್ಗಗಳಿಗೆ ಸಂಬಂಧಿಸಿದ ವ್ಯಾಕರಣ ವಿಚಾರಗಳಿರುತ್ತವೆ ಎಂಬುದನ್ನು ನಿರ್ದೇಶಿಸುವುದು Catergorical grammar ಎಂಬ ವ್ಯಾಕರಣದ ಮುಖ್ಯಗುರಿ. ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯೆ, ಇವು ಪ್ರಧಾನವಾಗಿರುವಂತೆ, ಪದ ಪುಂಜಗಳಲ್ಲಿ ನಾಮಪದ ಪುಂಜಗಳು, ಕ್ರಿಯಾಪದ ಪುಂಜಗಳು ಪ್ರಧಾನವಾಗಿರುತ್ತವೆ. ಈ ಪದಪುಂಜಗಳ ನಡುವಿನ ಸಂಬಂಧವನ್ನು ಕೆಲವು ವಿಶಿಷ್ಟ ವರ್ಗಕ್ಕೆ ಸೇರಿದ ರೂಪಗಳು ಮತ್ತು ಪ್ರತ್ಯಯಗಳು ನಿರ್ವಹಿಸುತ್ತವೆ. ಹೀಗೆ ಭಾಷೆಯ ವಿವಿಧ ಅಂಶಗಳನ್ನು ಅವುಗಳ ಆಂತರಿಕ ಸಂಬಂಧವನ್ನು ವ್ಯವಸ್ಥಿತವಾಗಿ ಹಂತ ಹಂತಗಳಲ್ಲಿ ವಿವರಿಸಬಹುದಾದುದನ್ನೇ ವ್ಯವಸ್ಥಿತ ವ್ಯಾಕರಣವೆನ್ನುವುದು. ಭಾಷೆಯಲ್ಲಿ ಮುಖ್ಯವಾದ ವಾಕ್ಯ ರಚನೆಗೆ ಆ ಬೇರೆ ಬೇರೆ ರೂಪಗಳು ನೆರವಾಗುತ್ತವೆ. ವಾಕ್ಯದ ವಿವಿಧ ರೂಪಗಳು ಅವುಗಳ ಸಂಬಂಧವನ್ನು ವ್ಯವಸ್ಥಿತವಾಗಿ ವಿವರಿಸಿಕೊಳ್ಳಲು ಇವು ಸಹಾಯ ಮಾಡುತ್ತವೆ.

9. ಸ್ತರಾತ್ಮಕ ವ್ಯಾಕರಣ (Stratificational grammar)

ಅಮೆರಿಕದ ಪ್ರಮುಖ ಭಾಷಾವಿಜ್ಞಾನಿ ಸಿಡ್ನಿಲ್ಯಾಂಬ್ ಎಂಬುವವನು ಈ ಬಗೆಯ ವ್ಯಾಕರಣವನ್ನು ಮೊತ್ತಮೊದಲಿಗೆ ರೂಪಿಸಿದನು. ಜಗತ್ತಿನ ಪ್ರತಿಯೊಂದು ಭಾಷೆಯಲ್ಲಿಯೂ ಧ್ವನಿ ಮತ್ತು ಅರ್ಥ ಎಂಬ ಎರಡು ಅಂಶಗಳು ಪ್ರಧಾನವಾಗಿರುತ್ತವೆ. ಇವುಗಳ ನಡುವೆ ಕಂಡುಬರುವ ಅಂಶಗಳು ಬೇರೆ ಬೇರೆ ಸ್ತರಗಳಲ್ಲಿ ಗೋಚರಿಸುತ್ತವೆ ಅವುಗಳನ್ನು ಅರ್ಥಸ್ತರ, ಶಬ್ದಸ್ತರ, ರೂಪಸ್ತರ, ಧ್ವನಿಮಾಸ್ತರ ಇತ್ಯಾದಿಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಈ ಬೇರೆ ಬೇರೆ ಸ್ತರಗಳಿಗೆ ಸಂಬಂಧಿಸಿದ ಬೇರೆ ಬೇರೆ ವ್ಯಾಕರಣ ವಿಚಾರಗಳು ಒಂದಲ್ಲಾ ಒಂದು ರೀತಿಯಲ್ಲಿ ಆ

ಭಾಷೆಯ ಅರ್ಥ ಮತ್ತು ಧ್ವನಿಗಳೊಡನೆ ನಿಕಟವಾದ ಸಂಬಂಧವನ್ನು ಸ್ಥಾಪಿಸಿ ಕೊಂಡಿರುತ್ತವೆ ಎಂಬುದನ್ನು ಸಿಡ್ನಿ ಲ್ಯಾಂಬ್ ಮಹಾಶಯನು ತನ್ನ ವ್ಯಾಕರಣದಲ್ಲಿ ವಿಶ್ಲೇಷಿಸಿ ವಿವರಿಸಿ ತೋರಿಸಿಕೊಟ್ಟಿದ್ದಾನೆ. ಅಲ್ಲದೆ ಆ ವಿವಿಧ ಸ್ತರಗಳನ್ನು ವಿವಿಧ ಹಂತಗಳಲ್ಲಿ ವಿವೇಚಿಸಲು ಯತ್ನಿಸಿದ್ದಾನೆ. ಧ್ವನಿಗಳೊಡನೆ ಧ್ವನಿಮಾಗಳು, ಧ್ವನಿಮಾ ಗಳೊಡನೆ ರೂಪಗಳು, ರೂಪಗಳೊಡನೆ ಶಬ್ದಗಳು, ಪದಗಳೊಡನೆ ಬೇರೆ ಬೇರೆ ವ್ಯಾಕರಣಾಂಶಗಳು ಹೇಗೆ ಪರಸ್ಪರ ಸಂಬಂಧವನ್ನು ಹೊಂದಿವೆ ಎಂಬುದನ್ನು ವಿವರಿಸಿಕೊಳ್ಳಲು ಇದು ಸಹಾಯಮಾಡುವುದು.

ಭಾಷೆಯಲ್ಲಿ ಮೂಲ (deep) ಹಾಗೂ ಸ್ಥೂಲ (Surface) ಅಂಶಗಳು ಮಾತ್ರ ವಲ್ಲದೆ ಇನ್ನೂ ಬೇರೆ ಬೇರೆ ಅಂಶಗಳು ಸ್ತರಾತ್ಮಕವಾಗಿ ಕಾಣಿಸಿಕೊಳ್ಳುತ್ತವೆ ಎಂಬುದು ಸಿಡ್ನಿ ಲ್ಯಾಂಬ್‌ರವರ ಅಭಿಪ್ರಾಯ. ಈ ಬಗೆಯ ಭಾಷಿಕಾಂಶಗಳನ್ನು ಸ್ತರಾತ್ಮಕ ವಾಗಿ ವಿವರಿಸಿ ತೋರಿಸಬಹುದಾದುದನ್ನೇ ಇವನು ಸ್ತರಾತ್ಮಕ ವ್ಯಾಕರಣವೆಂದು ಕರೆದನು. ಸಿಡ್ನಿಯ ಅಭಿಪ್ರಾಯದಂತೆ ಅರ್ಥ, ದ್ವನಿ ಮತ್ತು ವ್ಯಾಕರಣ ಇವು ಮೂರು ಭಾಷೆಯ ಮುಖ್ಯಾಂಶಗಳು. ಈ ಮೂರು ಮುಖ್ಯ ಅಂಶಗಳನ್ನು ಬೇರೆ ಬೇರೆ ಸ್ತರಗಳಲ್ಲಿ ಬೇರೆಬೇರೆ ಹಂತಗಳಲ್ಲಿ ವಿವರಿಸಬಹುದು. ಧ್ವನಿ, ಭಾಷೆಯ ಉಚ್ಚಾರಕ್ಕೆ ಸಂಬಂಧಿಸಿದ್ದು. ಈ ಧ್ವನಿಗಳ ಸಮೂಹ ಅರ್ಥಕ್ಕೆ ಸಂಬಂಧಿಸಿದ್ದು. ಅರ್ಥ ಮತ್ತು ಧ್ವನಿಗಳ ನಡುವೆ ಬೇರೆ ಬೇರೆ ವ್ಯಾಕರಣ ವಿಚಾರಗಳು ಅವುಗಳ ಪರಸ್ಪರ ಸಂಬಂಧ ವನ್ನು ನಿರ್ದೇಶಿಸುತ್ತವೆ ಎಂಬುದನ್ನು ಸಿಡ್ನಿ ಲ್ಯಾಂಬ್ ತನ್ನ (outline of stratificational grammar 1956) ಗ್ರಂಥದಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ.

10. ಬೋಧನಾತ್ಮಕ ವ್ಯಾಕರಣ (Pedagogical grammar)

ಭಾಷೆಯನ್ನು ಬೋಧಿಸುವ ಉದ್ದೇಶದಿಂದ ರೂಪಿಸಿಕೊಂಡ ವ್ಯಾಕರಣವನ್ನೇ ಬೋಧನಾತ್ಮಕ ವ್ಯಾಕರಣ ಎನ್ನುವರು. ಇದು ಭಾಷೆಯ ಕಲಿಕೆಗೆ ತಂಬ ಉಪಯುಕ್ತ ವಾದದ್ದು. ಭಾಷೆಯ ಆಂತರಿಕ ಅಂಶಗಳು ಅವುಗಳ ರಚನೆ ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಈ ಕಾರಣದಿಂದ ಒಂದು ಭಾಷೆಯ ಬೋಧನೆಗೆ ತಯಾರಿಸಿ ಕೊಂಡ ವ್ಯಾಕರಣ ಇನ್ನೊಂದು ಭಾಷೆಯ ಬೋಧನೆಗೆ ನೆರವಾಗಲಾರದು. ಆದ್ದರಿಂದ ಒಂದು ಭಾಷೆಯ ವಿಭಿನ್ನ ಅಂಶಗಳನ್ನು ಗಮನಿಸಿ ಈ ಬಗೆಯ ಬೋಧನಾತ್ಮಕ ವ್ಯಾಕರಣವನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ಈ ಬಗೆಯ ವ್ಯಾಕರಣ ತಯಾರಿಸಿ ಕೊಳ್ಳುವಲ್ಲಿ ಅಧ್ಯಾಪಕನ ಪಾತ್ರ ಬಹಳ ಮುಖ್ಯವಾದದ್ದು. ಭಾಷೆಯನ್ನು ಬೋಧಿಸುವ ಅಧ್ಯಾಪಕನು ತಾನು ಯಾವ ಭಾಷೆಯನ್ನು ಬೋಧಿಸಬೇಕು ಎಂಬುದನ್ನು ಅರಿತು ಆ ಭಾಷೆಗೆ ಅನುಗುಣವಾದ ಹಾಗೂ ಅನ್ವಯವಾಗುವ ವ್ಯಾಕರಣವನ್ನು ತಯಾರಿಸಿ ಕೊಳ್ಳುವುದು ಭಾಷಾ ಬೋಧನೆಯ ಕ್ಷೇತ್ರದಲ್ಲಿ ರೂಢಿಯಲ್ಲಿದೆ. ಇದು ಅವನು ತನ್ನ ಉದ್ದೇಶಕ್ಕೆ ಆರಿಸಿಕೊಂಡ ಭಾಷೆ ಮತ್ತು ಅದರ ರಚನಾತ್ಮಕ ಅಂಶಗಳಿಗೆ ಮಾತ್ರ

ಸಂಬಂಧಿಸಿದ್ದಾಗಿರುತ್ತದೆ. ಇಲ್ಲದಿದ್ದರೆ ಅದರಿಂದ ಅಂತಹ ಪ್ರಯೋಜನವೇನೂ ಆಗುವುದಿಲ್ಲ. ಇದು ಅದರ ವೈಶಿಷ್ಟ್ಯ.

11. ಕಾರಕವ್ಯಾಕರಣ (Case grammar)

ಚಾರ್ಲೆಸ್ ಫಿಲ್ಮೋರ್ ಎಂಬುವವನು ಈ ಬಗೆಯ ವ್ಯಾಕರಣವನ್ನು ಮೊತ್ತ ಮೊದಲಿಗೆ ರೂಪಿಸಿಕೊಂಡನು. ಇದು ಒಂದು ರೀತಿಯಲ್ಲಿ ರೂಪಾಂತರಣ ವ್ಯಾಕರಣ ವನ್ನು ಹೆಚ್ಚು ಹೋಲುತ್ತದೆ. ಭಾಷೆಯ ಮೂಲ ರಚನೆಗಳು ಅವುಗಳ ಸಂಬಂಧ ವನ್ನು ರೂಪಾಂತರಣ ಸಿದ್ಧಾಂತದ ಮೇಲೆ ವಿವರಿಸಿ ತೋರಿಸುವುದು ಈ ವ್ಯಾಕರಣದ ಮುಖ್ಯ ಉದ್ದೇಶ. ಭಾಷೆಯ ವಿವಿಧ ರಚನಾತ್ಮಕ ಅಂಶಗಳು ವಾಕ್ಯಗಳಲ್ಲಿ ತಮ್ಮ ತಮ್ಮ ಸ್ಥಾನವನ್ನು ಹೇಗೆ ಸ್ಥಾಪಿಸಿಕೊಂಡಿವೆ ಅವುಗಳ ಆಂತರಿಕ ಸಂಬಂಧವೇನು ಎಂಬುದನ್ನು ಈ ಬಗೆಯ ವ್ಯಾಕರಣದಲ್ಲಿ ವಿವರಿಸಿ ತೋರಿಸಬಹುದು, ಭಾಷೆಯಲ್ಲಿ ವಿಭಕ್ತಿ ಪ್ರತ್ಯಯ ಗಳಿಗೆ ಪ್ರಮುಖವಾದ ಸ್ಥಾನವಿದೆ. ಇವು ಆ ಭಾಷೆಯ ನಾಮಪದಗಳನ್ನು ನಿಯಂತ್ರಿಸು ತ್ತವೆಯಾದರೂ ಅವು ವಾಕ್ಯದಲ್ಲಿ ತಮ್ಮದೇ ಆದ ಸ್ಥಾನವನ್ನು ಸಂಪಾದಿಸಿ ಕೊಂಡಿವೆ. ಇವು ನಾಮಪದಗಳಿಗೂ ಕ್ರಿಯಾಪದಗಳಿಗೂ ಸಂಬಂಧವನ್ನು ಸೂಚಿಸು ತ್ತವೆ. ಕಾಲಸೂಚಕ ಪ್ರತ್ಯಯಗಳು ವಾಕ್ಯದಲ್ಲಿ ನಾಮ ಸೂಚಕ ಅಂಶಗಳೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳಲು ಇವು ನೆರವಾಗುತ್ತವೆ. ಕೆಲವು ವೇಳೆ ವಿಭಕ್ತಿ ಪ್ರತ್ಯಯಗಳು ವಾಕ್ಯದ ಇತರ ರೂಪಗೊಡನೆಯೂ ಸಂದರ್ಭಕ್ಕೆ ತಕ್ಕಂತೆ ಯಾವ ಬಗೆಯ ಸಂಬಂಧ ಪಡೆದುಕೊಂಡಿರುತ್ತವೆ ಎಂಬುದನ್ನು ಕಾರಕ ವ್ಯಾಕರಣದಲ್ಲಿ ವಿವರಿಸಿ ತೋರಿಸಬಹುದು. ಫಿಲ್ಮೋರ್ ಮಹಾಶಯನು ವಿಭಕ್ತಿ ಪ್ರತ್ಯಯಗಳು ಅವುಗಳ ಸಂಬಂಧವನ್ನು ಇದರಲ್ಲಿ ವಿವರಿಸಿ ತೋರಿಸಲು ಪ್ರಯತ್ನಿಸಿ ಸಫಲನಾಗಿದ್ದಾನೆ.

12. ರೂಪಾಂತರಣ ವ್ಯಾಕರಣ (Transformational grammar)

ಭಾಷೆಯ ವಿವಿಧ ಭಾಷಿಕಾಂಶಗಳನ್ನು ರೂಪಾಂತರಿಸುವುದರ ಮೂಲಕ ತಯಾರಿಸಿಕೊಳ್ಳಬಹುದಾದ ವ್ಯಾಕರಣವನ್ನೇ ರೂಪಾಂತರಣವ್ಯಾಕರಣ ಎನ್ನುವರು. ಇದು ತುಂಬ ವೈಜ್ಞಾನಿಕ ಹಾಗೂ ಪ್ರಾಯೋಗಿಕವಾದ ವ್ಯಾಕರಣವೆಂದು ಕೆಲವರ ಅಭಿಪ್ರಾಯ. ಇದನ್ನು ಅಮೆರಿಕದ ನೋಮ್ ಚೊಮ್‌ಸ್ಕಿ ಎಂಬುವವನು ಮೊತ್ತ ಮೊದಲಿಗೆ ರೂಪಿಸಿದನು. ಭಾಷೆಯ ಸಾಮಾನ್ಯ ಅಂಶಗಳನ್ನು ಕೇವಲ ರೂಪಾಂತರಿಸು ವುದರ ಮೂಲಕ ಬೇರೆ ಬೇರೆ ಬಗೆಯ ವಾಕ್ಯಗಳನ್ನು ರೂಪಿಸಿಕೊಳ್ಳಬಹುದು ಎಂಬುದನ್ನು ಇವನು ಇದರಲ್ಲಿ ವಿವರಿಸಿ ತೋರಿಸಿಕೊಟ್ಟಿದ್ದಾನೆ. ರಚನಾತ್ಮಕ, ಪ್ರರೂಪಾತ್ಮಕ, ಸ್ತರಾತ್ಮಕ ಮುಂತಾದ ವ್ಯಾಕರಣಗಳಲ್ಲಿ ವಿವಿಧ ವ್ಯಾಕರಣ ವಿಚಾರಗಳು ಇವುಗಳ ಸಂಬಂಧವನ್ನು ವಿವರಿಸಿ ತೋರಿಸುವಂತೆ ಒಂದು ಭಾಷೆಯ ವಿವಿಧ ರಚನಾತ್ಮಕ ಅಂಶಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವುದರಿಂದ ಅಷ್ಟೇನು

ಪ್ರಯೋಜನವಾಗಲಾರದು ಎಂಬ ಉದ್ದೇಶದಿಂದ ಚೊಮ್‌ಸ್ಕಿಯು ಈ ಬಗೆಯ ವ್ಯಾಕರಣವನ್ನು ಹೊರತಂದನು. ಇದರಿಂದ ರೂಪಾಂತರಣ ಉತ್ಪಾದನಾತ್ಮಕ ವ್ಯಾಕರಣ (Transformational generative grammar) ಹೊರಬಂದಿತು. ಈ ವ್ಯಾಕರಣ ಆ ಸಾಂಪ್ರದಾಯಿಕ ವ್ಯಾಕರಣಕ್ಕಿಂತ ಭಿನ್ನವಾಗಿದೆ. ರೂಪಾಂತರಣ ವ್ಯಾಕರಣ ಮತ್ತು ರೂಪಾಂತರಣ ಉತ್ಪಾದನಾತ್ಮಕ ವ್ಯಾಕರಣಗಳಲ್ಲಿ ಭಾಷೆಯ ಎಲ್ಲ ರಚನಾತ್ಮಕ ಅಂಶಗಳನ್ನು ಸಮಗ್ರ ಹಾಗೂ ಸಮರ್ಪಕವಾಗಿ ವಿವೇಚಿಸಬಹುದೆಂದು ಕೆಲವರ ಅಭಿಪ್ರಾಯ. ರಚನಾತ್ಮಕ ವ್ಯಾಕರಣಗಳು ಸಾಧಿಸಲಾಗದ ಅತ್ಯಪೂರ್ವವಾದ ಸಾಧನೆಯನ್ನು ರೂಪಾಂತರಣ ವ್ಯಾಕರಣ ಸಾಧಿಸಿತೋರಿಸಿದೆ. ಭಾಷಿಕಾಂಶಗಳನ್ನು ಹೆಚ್ಚು ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿವರಿಸಿ ತೋರಿಸುವಲ್ಲಿ ಇದು ಹೆಚ್ಚು ಯಶಸ್ವಿಯಾಗಿದೆ. ಭಾಷೆಯಲ್ಲಿ ಕ್ರಿಯಾಪದ ಪುಂಜಗಳು ಮತ್ತು ನಾಮಪದ ಪುಂಜಗಳು ಎಂಬ ಎರಡು ಪ್ರಧಾನ ಘಟಕಗಳು ಆ ಭಾಷೆಯ ವಾಕ್ಯಗಳ ನಿರ್ಮಾಣಕ್ಕೆ ಸಹಾಯಕವಾಗಿವೆ. ಈ ಎರಡು ಪ್ರಧಾನ ಘಟಕಗಳು ಇಡೀ ಭಾಷೆಯ ರಚನಾತ್ಮಕ ಅಂಶಗಳನ್ನು ನಿಯಂತ್ರಿಸುತ್ತವೆ. ಅವುಗಳಲ್ಲಿ ಕಂಡುಬರುವ ವಿವಿಧ ರಚನಾತ್ಮಕ ಅಂಶಗಳನ್ನು ರೂಪಾಂತರಿಸುವುದರಿಂದ ಬಗೆ ಬಗೆಯ ವಾಕ್ಯಗಳು ಸಿದ್ಧವಾಗುತ್ತವೆ. ಈ ವ್ಯಾಕರಣ ಸಂಪ್ರದಾಯವನ್ನು ಹೆಚ್ಚು ಪ್ರಚಾರಕ್ಕೆ ತಂದವರಲ್ಲಿ ಚೊಮ್‌ಸ್ಕಿ, ಜಾನ್ ಲಯನ್ಸ್, ಹಾರ್‌ಮನ್, ಪೋಸ್ಟಲ್, ಬರ್ಟ್, ಫೌಲರ್, ಫಿಲ್ಮೋರ್, ಲಾಂಗ್‌ಡನ್, ಕಿಂಗ್ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ.

13. ಸಾರ್ವತ್ರಿಕ ವ್ಯಾಕರಣ (Universal grammar)

ಹನ್ನೆರಡನೆಯ ಶತಮಾನದಲ್ಲಿ ಗ್ರೀಕರು ಮತ್ತು ರೋಮನರು ಎಲ್ಲ ಭಾಷೆಗಳಿಗೆ ಅನ್ವಯವಾಗುವ ವ್ಯಾಕರಣವೊಂದನ್ನು ರೂಪಿಸಿಕೊಂಡಿದ್ದರು. ಈ ವ್ಯಾಕರಣ ಸಂಪ್ರದಾಯ ಹದಿನೆಂಟನೇ ಶತಮಾನದ ತನಕ ಮುಂದುವರಿದು ಫ್ರೆಂಚರ ಪೋರ್ಟ್ ರಾಯಲ್ ಗ್ರಾಮರ್ಸ್‌ಗಳ ರಚನೆಗೆ ದಾರಿಮಾಡಿಕೊಟ್ಟಿತು. ಹೀಗೆ ಸಾಂಪ್ರದಾಯಿಕವಾಗಿ ನಡೆದುಬಂದ ಸಾರ್ವತ್ರಿಕ ವ್ಯಾಕರಣ ಸಂಪ್ರದಾಯ ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಅನೇಕ ಪಾಶ್ಚಾತ್ಯ ವಿದ್ವಾಂಸರನ್ನು ಆಕರ್ಷಿಸಿತು. ಇದರಿಂದಾಗಿ ಜಗತ್ತಿನ ಎಲ್ಲ ಭಾಷೆಗಳಿಗೆ ಅನ್ವಯವಾಗುವ ಸಾಮಾನ್ಯ ಹಾಗೂ ಸಾಧಾರಣ ವ್ಯಾಕರಣಗಳು ರೂಪುಗೊಂಡವು. ಈ ಬಗೆಯ ವ್ಯಾಕರಣವನ್ನೇ ಸಾರ್ವತ್ರಿಕ ವ್ಯಾಕರಣ ಅಥವಾ ಸಾಧಾರಣ ವ್ಯಾಕರಣ ಎನ್ನುವರು. ಕೆಲವು ಭಾಷೆಗಳು ಸಾಮಾನ್ಯವಾಗಿ ಸಮಾನವಾದ ವ್ಯಾಕರಣಾಂಶಗಳನ್ನು ಒಳಗೊಂಡಿರುತ್ತವೆ. ಅಂತಹ ಸಮಾನ ಅಂಶಗಳನ್ನು ಹೊಂದಿರುವ ಭಾಷೆಗಳ ವ್ಯಾಕರಣವೊಂದನ್ನು ರೂಪಿಸಿಕೊಳ್ಳುವುದು ಈ ವ್ಯಾಕರಣದ ಉದ್ದೇಶ. ಜಗತ್ತಿನ ಎಲ್ಲ ಭಾಷೆಗಳಲ್ಲಿ ಸಾಮಾನ್ಯ ಹಾಗೂ ಸಾಧಾರಣವಾಗಿ ಕಂಡುಬರುವ ಸಮಾನ ವ್ಯಾಕರಣ ವಿಚಾರ

ಗಳನ್ನು ವಿಶ್ಲೇಷಿಸಿ ವಿವರಿಸಿಕೊಂಡ ವ್ಯಾಕರಣಗಳನ್ನು ಕೆಲವರು ಬೇರೆ ಬೇರೆ ಹೆಸರುಗಳಿಂದ ಕರೆದುಕೊಂಡರು. ಇದನ್ನು ಸಾಮಾನ್ಯ ವ್ಯಾಕರಣ (General grammar) ಎಂದೂ. ಸಾಧಾರಣ ವ್ಯಾಕರಣ (Common grammar) ಎಂದೂ ಸಾರ್ವತ್ರಿಕ (Universal grammar) ಎಂದೂ ಕರೆದುಕೊಂಡಿರುವ ಉದಾಹರಣೆಗಳಿವೆ. ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಕಂಡುಬರುವ ಸಮಾನ ವ್ಯಾಕರಣಾಂಶಗಳನ್ನು ನಿರ್ಧರಿಸಿಕೊಳ್ಳಲು ಭಾಷೆಗಳ ತೌಲನಿಕ ಅಧ್ಯಯನ ಕಾರ್ಯ ಜಗತ್ತಿನಾದ್ಯಂತ ಆರಂಭಗೊಂಡು ಅಂತಹ ಭಾಷೆಗಳ ಸಮಾನ ಅಂಶಗಳನ್ನು ವಿವರಿಸಿಕೊಳ್ಳಲಾಯಿತು. ಇದು ಸಾರ್ವತ್ರಿಕ ವ್ಯಾಕರಣ ರಚನೆಗೆ ದಾರಿಮಾಡಿಕೊಟ್ಟಿತು. ಸಾಂಪ್ರದಾಯಿಕ ವೈಯಾಕರಣರು ಇದನ್ನು ತತ್ವಶಃ ಒಪ್ಪಿಕೊಂಡರು. ಹನ್ನೆರಡನೆಯ ಶತಮಾನದಲ್ಲಿ ಗ್ರೀಕರು ಮತ್ತು ರೋಮನರು, ಹದಿನೆಂಟನೆಯ ಶತಮಾನದಲ್ಲಿ ಫ್ರೆಂಚರು ಮತ್ತು ಇಂಗ್ಲಿಷರು, ಅನಂತರ ಅಮೆರಿಕನರು ಮುಂತಾದವರು ಈ ಸಾರ್ವತ್ರಿಕ ವ್ಯಾಕರಣ ರೂಪಿಸಿಕೊಳ್ಳಲು ಶ್ರಮಿಸಿದವರಲ್ಲಿ ಮುಖ್ಯರೆನಿಸಿಕೊಂಡಿದ್ದಾರೆ. ಈ ಸಾಮಾನ್ಯ ಅಥವಾ ಸಾರ್ವತ್ರಿಕ ವ್ಯಾಕರಣ ಇಂದು ಭಾಷೆಗಳ ಬೇರೆ ಬೇರೆ ಅಂಶಗಳ, ಬೇರೆ ಬೇರೆ ರೀತಿಯ ವ್ಯಾಕರಣಗಳ ರಚನೆಗೆ ದಾರಿಮಾಡಿಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಚಂದ್ರಮತಿ ಸೋಂದಾ

ನನ್ನ ಅವ್ವ

ನನ್ನವ್ವನನ್ನು
ನೆನೆದಾಗಲೆಲ್ಲ ಏನೇನೋ ನೆನಪಾಗುತ್ತದೆ
ನನ್ನಪ್ಪನ ಸಂಗಾತಿಯಾದ ಆಕೆ
ಆತನ ತಾಳಕ್ಕೆ ತಕ್ಕಂತೆ ಕುಣಿದಳು
ಅವ್ವ ಕುಣಿಯುವುದನ್ನು ಕಂಡ ಅಪ್ಪ
ಒಡಹುಟ್ಟಿದವರ ಅವರ ಹೆಂಡಿರ ಮಕ್ಕಳ
ರಾಗಕ್ಕೆಲ್ಲ ತಾಳಹಾಕಿದ, ಅವ್ವನೂ ಕುಣಿದಳು
ರಾಗದ ಆರ್ಭಟ ಹೆಚ್ಚಾದಾಗ ಯಾವಾಗಲೋ
ಅಪ್ಪನಿಗೆ ಅರಿವಾಗಿ ತಾಳಹಾಕುವುದನ್ನು ನಿಲ್ಲಿಸಿದ
ಕುಣಿದು ಸುಸ್ತಾಗಿದ್ದ ಅವ್ವ
ಅಪ್ಪನ ತಾಳ ನಿಂತಾಗ ತಾನೂ ಕುಣಿತ ನಿಲ್ಲಿಸಿದಳು.
ಹಾಸಿಗೆಯ ಗಿಡ್ಡಕ್ಕೆ ಹೆದರಿದ ಅವ್ವ
ಕಾಲುಚಾಚಲೇ ಇಲ್ಲ. ಮುದುಡಿಯೇ ಮಲಗಿದಳು ನಮಗೆಲ್ಲ
ಊಟಕ್ಕಿಟ್ಟು ನಮ್ಮ ನಲಿವ ಕಂಡ ನಮ್ಮವ್ವನಿಗೆ
ಏಕಾದಶಿ ಶಿವರಾತ್ರಿಗಳ ಆಚರಣೆ ವಾರಕ್ಕೊಮ್ಮೆ
ಬಾಳಿನ ಝಳಕ್ಕೆ ಸಿಕ್ಕ ನನ್ನವ್ವನ ಕನಸುಗಳು
ಚಿಗುರಲೇ ಇಲ್ಲ. ಬದುಕೆಲ್ಲ
ಮಾತು ಬೆಳ್ಳಿ ಮೌನ ಬಂಗಾರ ಎಂದುಕೊಂಡಿದ್ದ
ನನ್ನವ್ವ ಇತ್ತೀಚೆಗೆ ಚಕ್ರಬಡ್ಡಿಸಹಿತ
ಗೊಣಗುತ್ತಾಳೆ. ಹತ್ತಿಕ್ಕಿದ ಯೌವನದ ಆಸೆ ಆಕಾಂಕ್ಷೆಗಳು
ರೆಕ್ಕೆಪುಕ್ಕ ಕಟ್ಟಿಕೊಂಡು ಹುಯಿಲಿಡುತ್ತಿವೆ.
ಆಕೆ ನೀರೆರೆದ ಗಿಡಗಳು ಕೊಂಬೆರೆಂಬೆ ಸಹಿತ
ಚಿಗುರಿ ಹೂಬಿಡುತ್ತಿದ್ದರೂ ಆಕೆ
ಈ ಕಂಪಕಾಣಲಾರದೆ ಅಂದಿನ ಬೇಗುದಿಗೆ
ಸಂಕಟಪಡುತ್ತಾಳೆ; ಅರೆಹುಚ್ಚಿಯಂತೆ ಕಾಣುತ್ತಾಳೆ.
ಕನಸುಗಳೇ, ನೀವೇಕೆ ಹೀಗೆ ನನ್ನವ್ವನನು ಕಾಡಿ
ನನಗೆ ದಿಗಿಲು ಹುಟ್ಟಿಸುವಿರಿ?

ಎಂ. ಎಸ್. ಪುಟ್ಟಣ್ಣ
ಸಂಗ್ರಹ: ಡಾ. ಎಚ್. ಎಸ್. ಸುಜಾತಾ

ಹಾತಿಂ ತಾಯ್

(ಮುಂದುವರೆದುದು)

2ನೇ ಅಧ್ಯಾಯ

ಈ ಪ್ರಕಾರದಲ್ಲಿ ಅವನು ಹೇಳಿಕೊಂಡ ಕಥೆಯನ್ನು ಕೇಳಿ ಹತೀಮನು ಆ ಯೌವನಸ್ಥನಿಗೆ ಆಪ್ಯಾಯನವಾಗುವ ಹಾಗೆ ಹೇಳಿದ್ದೇನೆಂದರೆ–"ಸಂತೋಷಿಯಾಗಿರು. ದೇವರ ದಯದಿಂದ ಈ ಮೂರು ಸಮಯಬಂಧಗಳನ್ನೂ ನಾನು ನಿನಗಾಗಿ ನೆರವೇರಿಸಿ ಕೊಟ್ಟು ನಿನ್ನ ಇನಿಯಳನ್ನು ನಿನ್ನ ಸ್ವಾಧೀನವಾಗುವ ಹಾಗೆ ಮಾಡುತೇನೆ" ಹೀಗೆಂಬುದಾಗಿ ಹತೀಮನು ಹೇಳಿ, ಮಸಾಂದರಾನ್ ಕಾಡಿನಿಂದ ಪರೀರು ಎಂಬ ಮೃಗದ ತಲೆಯನ್ನು ನರಿ ತಂದುಕೊಟ್ಟ ಸಂಗತಿಯಂ ಜ್ಞಾಪಿಸಿಕೊಂಡು ಆ ಕೂಡಲೆ ಅಲ್ಲಿಗೆ ಹೊರಡಲು ನಿಷ್ಕರ್ಷೆ ಮಾಡಿಕೊಂಡನು. ಹತೀಮನು ಆ ತರುಣನ ಅನುಮತಿ ಹೊಂದಿ ಮಸಾಂಡರಾನ್‌ಗೆ ಹೊರಟನು. ಕೆಲವು ದಿವಸಗಳಲ್ಲಿ ಒಂದು ಪಟ್ಟಣ ಸಿಕ್ಕಿತು. ಅದರ ಸುತ್ತಲೂ ಕೋಟೆಗೋಡೆಯ ಮೇಲೆಯೂ ಅಗಳತೆಯಲ್ಲಿಯೂ ಸೌದೆಯನ್ನು ಗುಡ್ಡೆ ಹಾಕಿಕೊಂಡು ಅದಕ್ಕೆ ಬೆಂಕಿಹಾಕಿ ಉರಿಸುತಾ ಇದ್ದರು.

ಹತೀಮನಿಗೆ ಆಶ್ಚರ್ಯವಾಗಿ ಈ ಉರಿಗೆ ಕಾರಣವೇನೆಂದು ಕೇಳಿದನು. ಅದಕ್ಕೆ ಅವರಲ್ಲಿ ಒಬ್ಬನು—ನಮ್ಮ ಹೊರ ಕೋಟೇಗೋಡೆಯ ಮೇಲೆ ಸುತ್ತಲೂ ನಿರಂತರ ವಾಗಿ ನಾವು ಬೆಂಕಿಯನ್ನು ಉರಿಸದೇ ಇದ್ದರೆ, ಒಂದು ದೊಡ್ಡ ಭೂತವು ನಮ್ಮ ಪುರಕ್ಕೆ ಪ್ರವೇಶ ಮಾಡಿ ನಮ್ಮನ್ನು ನುಂಗಿಬಿಡುವುದು, ಎಂಬುದಾಗಿ ಹೇಳಿದನು. ಹತೀಮನು—ನಿಮ್ಮನ್ನು ಅಷ್ಟು ಬಾಧಿಸುವ ಆ ಕೆಟ್ಟ ಜಂತುವು ಯಾತರ ಹಾಗಿದೆ, ಹೇಳಿ, ಎಂದು ಕೇಳಿದನು. ಇದಕ್ಕೆ ಅವರು—ಅದು ದೊಡ್ಡ ಮೃಗ, ಬಹು ಭಯಂಕರವಾದ್ದು, ಅದು ಬಂದಾಗ ಮೂರು ನಾಲ್ಕು ಜನರನ್ನು ಒಂದು ಸಾರಿಗೆ ನುಂಗಿ ಬಿಡುವುದು, ಎಂದು ಉಸುರಿದರು. ಇದನ್ನು ಹತೀಮನು ಕೇಳಿ ಈ ಕೇಡನ್ನು ಇವರಿಗೆ ತಪ್ಪಿಸುವುದು ಹೇಗೆ ಸಾಧ್ಯ ಎಂದು ಯೋಚಿಸುತಾ ಕಾರವಾನ್‌ಸಿರೈ ಸತ್ರದಲ್ಲಿ ಸುಧಾರಿಸಿಕೊಳ್ಳಲು ಹೋದನು.

ತರುವಾಯ ಊರ ಹೊರಭಾಗದ ಮೈದಾನದಲ್ಲಿ ಒಂದು ಹಳ್ಳವನ್ನು ತೆಗೆಯಿಸಿ ಅದರ ಸುತ್ತಲೂ ಮರದ ತುಂಡುಗಳು ಮುಳ್ಳು ಪೊದೆ ಇವುಗಳಿಂದ ಬೇಲಿ ಹಾಕಿಸಿದನು ಮತ್ತು ತಾನು ಒಂದು ಬಿಲ್ಲು ಅಂಬುಗಳನ್ನು ತುಂಬಿದ ಒಂದು ಬತ್ತಳಿಕೆ ಇವುಗಳನ್ನು ಸಂಪಾದಿಸಿಕೊಂಡು ಸಾಯಂಕಾಲದ ಸಮಯದಲ್ಲಿ ಆ ಪೊದೆಯ ಹಿಂದೆ ಕಾದುಕೊಂಡು ಕೂತುಕೊಂಡನು. ರಾತ್ರಿ ಮೊದಲು ಕಾವಲು ಆದ ಮೇಲೆ ಬಿರುಗಾಳಿಯ ಸದ್ದಿನ ಹಾಗೆ ಆದ ಸದ್ದಿನಿಂದ ಆ ಭೂತವು ಸಮೀಪಕ್ಕೆ ಬಂತು ಎಂದು ಸೂಚನೆ ತೋರಿತು. ಅದು ಸಮೀಪಕ್ಕೆ ಬಂದ ಮೇಲೆ, ಅದಕ್ಕೆ ಎಂಟು ಕಾಲು, ಏಳು ತಲೆ, ಅದರಲ್ಲಿ ಸಿಂಹದ ತಲೆಯ ಹಾಗೆ ಆರು ತಲೆ, ಆನೆಯ ತಲೆಯ ಹಾಗೆ ಇನ್ನೊಂದು ತಲೆ, ಮೂರು ಕಣ್ಣು, ಹೀಗಿತ್ತು.

ಹತೀಮನು ಆ ಪಟ್ಟಣವನ್ನು ಬಿಟ್ಟು ಹೊರಡುವಾಗ ಆ ಪುರವಾಸಿಗಳು ಆ ಭೂತವನ್ನು ವಿವರಿಸಿದ್ದರು. ಈಗ ಆ ವರ್ಣನೆಯು ನಿಶ್ಚಯವೆಂದು ಗೊತ್ತಾಯಿತು. ಆ ಜನರು ಹೇಳಿದ್ದರಲ್ಲಿ ಇನ್ನೂ ವಿಶೇಷವೇನೆಂದರೆ: ಆ ಭೂತದ ಆನೇ ತಲೆಯ ಮಧ್ಯದ ಕಣ್ಣು ಮಾತ್ರ ಅಪಾಯಕರವಾದ್ದು. ಒಂದು ಅಂಬಿನಿಂದ ಆ ಕಣ್ಣಿಗೆ ಹೊಡೆಯುವುದು ಸಾಧ್ಯವಾಗಿದ್ದರೆ, ಈ ವಿಪತ್ತನ್ನು ತಪ್ಪಿಸಲು ಅದೇ ಮಾರ್ಗ, ಹಾಗಾದರೆ ಆ ಭೂತವು ಓಡಿಹೋಗುವುದು, ಅನಂತರ ಮನುಷ್ಯರು ವಾಸವಾಗಿರುವ ಕಡೆಗೆ ಎಂದಿಗೂ ಬರುವುದಿಲ್ಲ; ಹೀಗೆಂದು ಆ ಪುರವಾಸಿಗಳು ಹೇಳಿದ್ದರು. ಈ ಮಧ್ಯೆ ಪುರವಾಸಿಗಳು ಆ ಭೂತ ಬರುವುದೆಂದು ಕೇಳಿ ಊರ ಸುತ್ತಲೂ ಬೆಂಕಿಯನ್ನು ಹತ್ತಿಸಿದರು. ಅದರಿಂದ ಎಲ್ಲವೂ ಮೋಡಮುಚ್ಚಿಕೊಂಡ ಹಾಗೆ ಹೊಗೆಯಿಂದ ಮುಚ್ಚಿಕೊಂಡು ಹೋಯಿತು. ಭೂತವು ಕೋಟೆಯ ಸುತ್ತಲೂ ಸುತ್ತಿ ಅದರ ಎಲ್ಲಾ ಬಾಯಿಗಳಿಂದಲೂ ಭಯಂಕರವಾಗಿ ಗರ್ಜಿಸುವುದಕ್ಕೆ ಮೊದಲು ಮಾಡಿತು. ಆ ಗರ್ಜನೆಗೆ ಊರ ಅಸ್ತಿಭಾರವೆಲ್ಲಾ ಅಳ್ಳಾಡಿ ಹೋಯಿತು. ಕೊನೆಗೆ ಹತೀಮನು ಅವಿತುಕೊಂಡಿರುವ ಸ್ಥಳದ ಹತ್ತರಕ್ಕೆ ಬಂತು. ಅವನು ಅದನ್ನು ಕಂಡು ದೇವರಲ್ಲಿ ನಂಬಿಕೆ ಕೊಟ್ಟು, ಆನೇ ತಲೆಯ ಮಧ್ಯದ ಕಣ್ಣಿಗೆ ಗುರಿಕಟ್ಟಿ ಅಂಬಿನಿಂದ ಹೊಡೆದು ಚುಚ್ಚಿದನು. ಆ ಭೂತವು ತಲೆಸುತ್ತಿ ಭೂಮಿಯ ಮೇಲೆ ಅಪ್ಪಳಿಸಿಕೊಂಡು ಬಿತ್ತು; ಮತ್ತು ಇಂಥಾ ಭಯಂಕರವಾದ ಗರ್ಜನೆಯನ್ನು ಮಾಡಿತು (ಏನ ಹೇಳಲಿ) ಆ ಪಟ್ಟಣವೂ ಆ ಕಾಡು ಸಹಾ ಬಹುದೂರದವರೆಗೂ ಅಳ್ಳಾಡಿಹೋಯಿತು. ಅದು ಸ್ವಲ್ಪ ಹೊತ್ತಿನ ಮೇಲೆ ತಟ್ಟನೆ ಎದ್ದು ಅತಿ ವೇಗವಾಗಿ ಕಾಡ ಕಡೆ ಓಡಿಹೋಯಿತು. ಹಿಂತಿರುಗಿ ನೋಡಲೇ ಇಲ್ಲ. ಹತೀಮನು ರಾತ್ರಿಯನ್ನೆಲ್ಲಾ ಆ ಕೋಟೆಯ ಹೊರ ಭಾಗದಲ್ಲಿಯೇ ಕಳೆದನು. ಅರುಣೋದಯಕ್ಕೆ ಊರ ಬಾಗಿಲಿನಿಂದ ಒಳಕ್ಕೆ ಹೋದನು. ಆ ವೂರ ಜನರು ಅವನ ಸುತ್ತಲೂ ಸುತ್ತಿಕೊಂಡು ಅವನು ಅದನ್ನು ನೋಡಿದನೆ, ಜೀವಸಹಿತವಾಗಿತ್ತೆ ಎಂದು ಕೇಳಿದರು.

ಹತೀಮ—ಅದು ಎಂದೆಂದಿಗೂ ಬರದ ಹಾಗೆ ನಿಮ್ಮ ಸೀಮೆಯಿಂದ ಓಡಿಸಿಬಿಟ್ಟೆ.

ಜನರು—ಅದು ಖಂಡಿತವೆಂದು ನಾವು ಹೇಗೆ ತಿಳಿಯಬೇಕು ?

ಹತೀಮ—ಆ ಭಾಗದಲ್ಲಿ ನೀವು ಸಮಾಧಾನಪಟ್ಟುಕೊಂಡಿರಬಹುದು. ಈ ದಿನ ರಾತ್ರೆ ಆ ವೂರ ಕೋಟೇ ಗೋಡೆಯ ಮೇಲೂ ಫಿರಂಗಿ ಬತೇರಿಯ ಮೇಲೂ ನೀವು ಕಾದಿದ್ದು ಈ ರಾತ್ರೆ ನೋಡಬಹುದು. ಅವನ ಸದ್ದು ಕೇಳಿದರೆ ನಾನು ಸುಳ್ಳುಗಾರನೆಂದು ತಿಳಿಯಿರಿ. ಆ ಸದ್ದು ಕೇಳದೇ ಹೋದರೆ ನಾನು ಹೇಳಿದ್ದು ನಿಜವೆಂದು ಒಪ್ಪಬಹುದು.

ಈ ಮಾತಿಗೆ ಅವರೆಲ್ಲರೂ ಹಾಗೆಯೇ ಕಾದಿದ್ದರು. ರಾತ್ರೆ ಕಳೆದು ಎಲ್ಲಾ ಸರಿಯಾಗಿದ್ದ ಮೇಲೆ ಅವರೆಲ್ಲರೂ ಬಂದು ಹತೀಮನ ಕಾಲಿಗೆ ಬಿದ್ದು ಅಟ್ಟಹಾಸವಾಗಿ ಅವನನ್ನು ಎತ್ತಿಕೊಂಡು ತಮ್ಮ ವೂರ ಅಧಿಕಾರಿಯ ಮನೆಗೆ ಹೋದರು. ಅವನು ವಿಶೇಷವಾದ ವಿನಯದಿಂದಲೂ ಮರ್ಯಾದೆಯಿಂದಲೂ ಹತೀಮನನ್ನು ಕಂಡು ತನ್ನ ಮಗ್ಗಲಲ್ಲಿ ಕೂರಿಸಿಕೊಂಡು ಮಿತಿ ಇಲ್ಲದ ಹಾಗೆ ಅತಿಥಿ ಸತ್ಕಾರವನ್ನು ಮಾಡಿದನು. ಆ ವೂರ ಜನರೂ ಅಲ್ಲಿನ ಅಧಿಕಾರಿ ಸಹಾ ತೀವ್ರವಾಗಿ ತಮ್ಮ ಹಣ ಒಡವೆ ಮೊದಲಾದ ಐಶ್ವರ್ಯವನ್ನೆಲ್ಲಾ ತಂದು ಹತೀಮನಿಗೆ ಕೊಡಲು ಹೋದರು. ಆಗ ಅವನು ಅವರನ್ನು ಕುರಿತು—ನಾನು ಒಬ್ಬ ಬಡವನಾದ ಮಾರ್ಗಸ್ಥ. ನೀವು ಕೊಡತಕ್ಕ ಐಶ್ವರ್ಯಕ್ಕೆ ನನಗೆ ಸ್ವಲ್ಪವೂ ಆಶೆ ಇಲ್ಲ, ಎಂದನು. ಅದನ್ನು ಅಂಗೀಕರಿಸಿ ಅವನು ಬೇಕಾದ ಹಾಗೆ ವಿನಿಯೋಗಿಸಬಹುದು ಎಂದು ಅವನನ್ನು ಕೇಳಿಕೊಂಡರು.

ಈ ರೀತಿಯಲ್ಲಿ ಬಲವಂತ ಮಾಡಿ ಅವರು ಕೊಟ್ಟ ಕನಕನಿಧಾನವನ್ನು ಅಂಗೀಕರಿಸಿ, ಆ ವೂರಲ್ಲಿದ್ದ ಫಕೀರರಿಗೂ ಬಡ ಜನರಿಗೂ ಅದೆಲ್ಲವನ್ನೂ ಕೊಟ್ಟು ಬಿಟ್ಟು ಆ ಜನರ ಅನುಮತಿಯನ್ನು ಪಡೆದು ಮಸಾನ್‌ಡರಾನ್‌ಗೆ ಹೊರಟನು. ಅವನು ಮುಂದು ಮುಂದಕ್ಕೆ ಪ್ರಯಾಣ ಮಾಡುತಾ ಇರುವಾಗ ಒಂದು ಕ್ಷುದ್ರಸರ್ಪವು ಒಂದು ಉಡದೊಡನೆ ವಿಶೇಷವಾಗಿ ಜಗಳವಾಡುತಿರುವುದನ್ನು ಕಂಡನು. ಸ್ವಲ್ಪ ಹೊತ್ತು ಅದನ್ನು ನೋಡುತಾ ನಿಂತುಕೊಂಡ. ಆ ಎರಡು ಮೃಗಗಳಲ್ಲಿ ಯಾವುದೂ ಗೆಲ್ಲುವ ಹಾಗೆ ಕಾಣಿಸಲಿಲ್ಲ. ಕಡೆಗೆ ಕೆಟ್ಟ ಜಂತುಗಳ, ನಿಮನಿಮಗೆ ಇಂಥಾ ಘೋರ ವಾದ ಜಗಳವಾಗಲು ಕಾರಣವೇನು ? ಎಂದು ಕೇಳಿದನು.

ಹಾವು—ಈ ನನ್ನ ಶತ್ರುವು ನಮ್ಮ ತಂದೆಯನ್ನು ಕೊಂದು ಹಾಕಿದನು.

ಉಡ—ಹಾವು ನನ್ನ ಜಾತಿಯ ಜಂತುಗಳಿಗೆ ಸಹಜವಾದ ಆಹಾರ. ಆದ್ದರಿಂದ ಇದರ ತಂದೆಯನ್ನು ಕೊಂದೆ. ನನ್ನ ಆಹಾರಕ್ಕಾಗಿ ಇದನ್ನೂ ನಾನು ಕೊಲ್ಲುತೇನೆ.

ಹತೀಮ—(ಉಡವನ್ನು ಕುರಿತು) ಮಾಂಸ ನಿನಗೆ ಇಚ್ಛೆಯಾದರೆ ಹೇಳು. ನನ್ನ ಶರೀರದಿಂದ ಮಾಂಸವನ್ನು ತೆಗೆದುಕೊಡುತೇನೆ. (ಹಾವನ್ನು ಕುರಿತು) ಮತ್ಸರವನ್ನು ತೀರಿಸಿಕೊಳ್ಳುವುದು ನಿನ್ನ ಕೋರಿಕೆಯಾದರೆ, ಹಾವ ಕೊಲ್ಲುವುದಕ್ಕಿಂತ ನನ್ನನ್ನು ಕೊಲ್ಲು.

ಈ ಮಾತನ್ನು ಕೇಳಿ ಅವೆರಡೂ ಜಗಳವಾಡುವುದನ್ನು ಬಿಟ್ಟವು.

ಉಡ—(ಹತೀಮನನ್ನು ಕುರಿತು) ನಿನ್ನ ಮಾಂಸವನ್ನು ಕೊಡುತೇನೆಂದು ಹೇಳಿದೆ ಯಲ್ಲಾ, ಕೊಡು.

ಹತೀಮ—ನನ್ನ ಶರೀರದ ಯಾವ ಭಾಗವನ್ನು ಅಪೇಕ್ಷಿಸುತೀಯೆ ?

ಉಡ—ನಿನ್ನ ಕೆನ್ನೆ.

ಆಗ ಹತೀಮನು ಒಂದು ಚೂರಿಯನ್ನು ತೆಗೆದುಕೊಂಡು ತನ್ನ ಕೆನ್ನೆಯ ಮಾಂಸವನ್ನು ಕುಯ್ಯುವನಾಗಿದ್ದನು.

ಉಡ—ತಾಳು ಹುಡುಗ, (ಗಟ್ಟಿಯಾಗಿ ಕೂಗುತಾ) ನಿನ್ನ ಮನೋದಾರ್ಢ್ಯವನ್ನು ನೋಡಲು ನಾನು ಹಾಗೆ ಹೇಳಿದೆ. ಈಗ ನಿನ್ನಲ್ಲಿ ಔದಾರ್ಯ ಗುಣವಿದೆ ಎಂದು ಮನದಟ್ಟಾಯಿತು.

ಆ ಕ್ಷಣವೇ ಆ ಎರಡು ಮೃಗಗಳೂ ಮನುಷ್ಯ ರೂಪವನ್ನು ತಾಳಿದವು. ಇದನ್ನು ಕಂಡು

ಹತೀಮ—ಅಯ್ಯಾ ಮಿತ್ರರ, ಇದೇನಾಶ್ಚರ್ಯವಾದ ವಿಷಯ ?

ಉಡ—ನಾವಿಬ್ಬರೂ ಪಿಶಾಚಿವರ್ಗಕ್ಕೆ ಸೇರಿದವರು. ಇವನ ತಂದೆಯನ್ನು ನಾನು ಕೊಂದು ಹಾಕಿದೆನೆಂಬದಾಗಿ ನಾನು ಒಪ್ಪಿಕೊಳ್ಳುತೇನೆ. ಕಾರಣವೇನೆಂದರೆ, ಆ ಮುದುಕನ ಮಗಳಲ್ಲಿ, ಬಂದದ್ದೆಲ್ಲಾ ಬರಲಿ ಎಂದು ನನಗೆ ಅತ್ಯಂತ ಪ್ರೀತಿ ಹುಟ್ಟಿತು. ನಮ್ಮ ಮದುವೆಗೆ ಅವನು ಒಪ್ಪಲಿಲ್ಲ. ಸಹೋದರನು ನೀನು ಕಂಡ ಹಾಗೆಯೇ ವಿಪರೀತವಾದ ದ್ವೇಷವನ್ನು ಹಿಡಿದಿದಾನೆ. ನನ್ನ ಕ್ಷೇಮಾರ್ಥ ವಾಗಿ ನಾನು ಅವನನ್ನು ಕೊಲ್ಲಬೇಕು.

ಹತೀಮನು ಸಮಾಧಾನವನ್ನೂ ಮೈತ್ರಿಯನ್ನೂ ಇಟ್ಟುಕೊಳ್ಳಿ ಎಂದು ಆ ಪಿಶಾಚಿಗಳಿಗೆ ಹೇಳಿದನು. ಆಗ ಉಡದ ರೂಪದಲ್ಲಿದ್ದದು

ಉಡ—ಪಿಶಾಚಿಗಳಿಗೆ ದೊರೆಯಾಗಿರುವ ನಮ್ಮ ತಂದೆಯು ಈ ಮಾತಿಗೆ ಒಪ್ಪುವುದಿಲ್ಲ.

ಹತೀಮ—(ನಿಮ್ಮ ತಂದೆಯ) ಮುಂದೆ ನನ್ನನ್ನು ಕರೆದುಕೊಂಡು ನಡೆ. ನಾನು ಒಪ್ಪಿಸುತೇನೆ.

ಪಿಶಾಚಿ—ಹಾಗಾದರೆ ನನ್ನ ಹಿಂದೆ ಬಾ, ನಮ್ಮ ತಂದೆಯ ಆಸ್ಥಾನಕ್ಕೆ ಹೋಗೋಣ ನಡೆ. ಜಾಗ್ರತೆಯಾಗಿ ಅಲ್ಲಿಗೆ ಸೇರಬಹುದು.

ಹೀಗೆ ಅವರಿಬ್ಬರೂ ಒಟ್ಟಿಗೆ ಸ್ವಲ್ಪ ದೂರ ಹೋಗಿ ಒಂದು ದೊಡ್ಡ ಪಟ್ಟಣ ವನ್ನು ಸೇರಿದರು. ಅಲ್ಲಿ (ಉಡದ ರೂಪದಲ್ಲಿದ್ದ) ದೊರೆ ಮಗನು ಹೇಳಿದ್ದೇನೆಂದರೆ :

ಉಡ—ಇದೇ ನಮ್ಮ ತಂದೆಯ ರಾಜಧಾನಿ. ನಾನು ನಿನ್ನನ್ನು ಇಲ್ಲಿ ಬಿಟ್ಟು ನನ್ನ ಮನೆಗೆ ಹೋಗುತೇನೆ. ಆದರೆ ನಮ್ಮ ಪರಿವಾರದವರು ನಿನ್ನ ಕೈಹಿಡಿದು ನಮ್ಮ ತಂದೆಯ ಬಳಿಗೆ ಕರೆದುಕೊಂಡು ಹೋಗುತಾರೆ.

ಆ ಪ್ರಕಾರ ಒಂದು ಪಿಶಾಚಿಗಳ ಗುಂಪೇ ಬಂದು ಹತೀಮನ ಸಮೀಪವನ್ನೈದಿ ಅವನನ್ನು ತಮ್ಮ ದೊರೆಯಾದ ಮುಹ್ಯಾರ್ ಎಂಬುವನ ಬಳಿಗೆ ಕರೆದುಕೊಂಡು ಹೋದರು. ಆ ದೊರೆಯು ಹತೀಮನನ್ನು ಕಂಡ ಕೂಡಲೆ, ಅವನನ್ನು ಕುರಿತು,

ದೊರೆ—ಮಾನವ ಸಂತತಿಗೆ ಸೇರಿದ ಅಭ್ಯಾಗತನೆ, ನನ್ನ ರಾಜಧಾನಿಗೆ ಯಾವ ದೊಡ್ಡ ಕೆಲಸದ ಮೇಲೆ ಬಂದೆ?

ಹತೀಮ—ಸಮಾಧಾನವನ್ನೂ ಮೈತ್ರಿಯನ್ನೂ ವೃದ್ಧಿಮಾಡುವುದಕ್ಕೆ ಬಂದೆ.

ದೊರೆ—ಮನುಷ್ಯ ವರ್ಗದವರು ಪಿಶಾಚಿಗಳಿಗೆ ಇಂಥಾ ಉಪಕಾರವನ್ನು ಹೇಗೆ ಮಾಡಿಯಾರು? ನೀನು ಮಾಡುವ ಉಪಕೃತಿಯ ಸ್ವಭಾವ ಎಂಥಾದ್ದು?

ಹತೀಮ—ನಿನಗೆ ಒಬ್ಬ ಮಗ ಇದಾನೆ. ಅವನ ಪ್ರಾಣವನ್ನು ಉಳಿಸಬೇಕೆಂದು ನಿನ್ನ ಇಷ್ಟವಿದೆಯೆ ಅಥವಾ ಅವನನ್ನು ಕೊಲ್ಲಿಸಬೇಕೆಂದು ನಿಷ್ಕರ್ಷೆ ಮಾಡಿಕೊಂಡಿದ್ದೀಯು?

ಪಿಶಾಚಿರಾಜ—ನಿಜವಾಗಿಯೂ ನನಗೆ ಒಬ್ಬ ಮಗ ಇದಾನೆ. ಆದರೇನು?

ಹತೀಮ—ನಿನಗೆ ಅವನ ಮೇಲೆ ಪ್ರೀತಿ ಇದ್ದರೆ, ನಾನು ಹೇಳುವ ಹಾಗೆ ನಡೆಯುವನಾಗು. ಅವನ ಪ್ರಾಣವನ್ನು ಉಳಿಸಬೇಕು. ಇಲ್ಲವಾದರೆ ಅವನಿಗೆ ಮರಣ ಸಂಭವಿಸುವುದು.

ಪಿಶಾಚಿರಾಜ—ದೇವರದಯ ನಿನ್ನ ಮೇಲೆ ಇರಲಿ. ನನ್ನ ಮಗನಿಗೆ ಪ್ರಾಣಾಪಾಯ ಸಂಭವಿಸಿರುವುದರ ಸಂಗತಿಯೇನು?

ಹತೀಮ—ಅವನು ಬಹ್ರಾಂ ಎಂಬ ಹುಡುಗನ ತಂದೆಯನ್ನು ಕೊಂದುಬಿಟ್ಟನು. ಅದಕ್ಕಾಗಿ ಆ ಹುಡುಗನಿಗೆ ಅವನ ಮೇಲೆ ದ್ವೇಷ ಇದೆ. ಆ ಹುಡುಗನು (ನಿನ್ನ ಮಗನನ್ನು) ಕೊಲ್ಲುವುದು ಖಂಡಿತ. ಈ ದಿವಸ ಅವರಿಬ್ಬರಿಗೂ ವಿಶೇಷವಾದ ಜಗಳ ಹತ್ತಿತ್ತು. ನಾನು ಬಲವಂತವಾಗಿ ಅವರನ್ನು ಬಿಡಿಸದೇ ಇದ್ದರೆ, ನಿನ್ನ ಮಗನ ಆಯುಸ್ಸು (ಬಹಳ) ಕಡಮೆಯಾಗುತಿತ್ತು. ಇನ್ನೊಂದು ದಿವಸ ಅವರು ಒಬ್ಬರನ್ನೊಬ್ಬರು ಸಂಧಿಸುತಾರೆ. ಆದರ ಫಲ ಅಪಾಯಕರವಾದ್ದು. ಅವರು ನನ್ನ ಮಾತನ್ನು ಕೇಳಿದರೆ ಅವರವರಿಗೆ ಸಮಾಧಾನ ಮಾಡಿಸಲು ನನ್ನ ಮೂಲಕ ಆಗಬಹುದು. ವಿವಾದದ ಸಂಗತಿಯೇನೆಂದರೆ, ನಿನ್ನ ಮಗನು ಬಹ್ರಾಂನ ತಂಗಿಯನ್ನು ಮೋಹಿಸಿದನು. ಅವರ ಮದುವೆಗೆ ಅವನು ಒಪ್ಪದೆ ಹೋದ ಕಾರಣ ಅವರ ತಂದೆಯನ್ನು ಕೊಂದು ಹಾಕಿದನು. ಬಹ್ರಾಂನು ನಿನ್ನ ಮಗಳನ್ನು ಪ್ರೀತಿಸುತಾನೆ. ಉಭಯತ್ರರಲ್ಲಿಯೂ ದ್ವೇಷವನ್ನು ನಿರ್ಮೂಲ ಮಾಡುವುದಕೋಸ್ಕರ ನಿನ್ನ ಮಗಳನ್ನು ಬಹ್ರಾಮನಿಗೆ ಕೊಡುವುದು ನಿನ್ನ ಮಗನನ್ನು ಮದುವೆಯಾಗೆಂದು ಅವನ ತಂಗಿಗೆ ಹೇಳತಕ್ಕದ್ದು ಅವಶ್ಯವಾಗಿದೆ. ಹೀಗೆ ಹತೀಮ ಹೇಳಿದ್ದಕ್ಕೆ ಮುಹ್ಯಾರನು ಬಹಳವಾಗಿ ತೃಪ್ತಿಪಟ್ಟುಕೊಂಡು ತನ್ನ ಮಗ ಬಹ್ರಾಂನನ್ನು ಬರುವಂತೆ ಕರೆಯಿಸಿದನು.

ಹತೀಮನು ಅವರಿಗೂ ಸ್ನೇಹ ಮಾಡಿಸಿದನು. ಆಯಾ ಹೆಂಣು ಆಯಾ ಗಂಡಿಗೆ ಮದುವೆಯಾದ ತರುವಾಯ, ಮುಹ್ಯಾರನು ತನ್ನ ಅನುಮತಿಯನ್ನು ಹೊಂದಿ ಹತೀಮನು ಮುಂದಕ್ಕೆ ಹೊರಡುವಾಗ, ಹೇಳಿದ್ದೇನೆಂದರೆ:

ಮುಹ್ಯಾರ—ಅಯ್ಯಾ ಧೈರ್ಯಶಾಲಿಯೆ, ನೀನು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ನಮ್ಮಿಂದ ಒಂದು ಬಹುಮಾನವನ್ನು ಹೊಂದಬೇಕು.

ಹತೀಮ—ಮನುಷ್ಯ ಮಾತ್ರದವರು ಮಾಡಬೇಕಾದ ಕರ್ತವ್ಯವನ್ನು ನಾನು ಮಾಡಿದ್ದಕ್ಕೆ, ಇದುವರೆಗೂ ನಾನು ಯಾವ ಬಹುಮಾನವನ್ನೂ ತೆಗೆದು ಕೊಂಡವನಲ್ಲ.

ಮುಹ್ಯಾರ—ಅಯ್ಯಾ ಉದಾರಿಯಾದ ಪುರುಷನೆ, ಈ ಕೋಲನ್ನು ಹಿಡಿ, ಇದು (ನಾವು ತೋರಿಸುವ ಗೌರವಕ್ಕೆ) ಒಂದು ಗುರುತು. ಇದು ನಿನಗೆ ಉಪ ಯೋಗಕ್ಕೆ ಬರಬಹುದು. ಇದನ್ನು ನಿನ್ನ ಕೈಯಲ್ಲಿ ನೆಟ್ಟಗೆ ಹಿಡಿದುಕೊಂಡರೆ, ಇದಕ್ಕೆ ಅಪೂರ್ವವಾದ ಕೆಲವು ಗುಣಗಳುಂಟಾಗುವವು: ಹೇಗೆಂದರೆ ನಿನ್ನನ್ನು ಹಾವಾಗಲಿ ಚೇಳಾಗಲಿ ಕಡಿದರೆ ಅದರ ವಿಷವೇರುವುದಿಲ್ಲ. ಬೆಂಕಿ ನಿನ್ನನ್ನು ಏನೂ ಮಾಡಲಾರದು. ಯಾರಾದರೂ ನಿನಗೆ ಮಂತ್ರವನ್ನು ಹಾಕಿದರೆ. ದೊಣ್ಣೆಯನ್ನು ತಿರುಗಿಸು, ಆ ಮಂತ್ರದಿಂದ (ನಿನಗೆ) ಏನೂ ಆಗುವುದಿಲ್ಲ, ಕೆಂಪು ಭೂತದ ವಿಷವು ನಿನಗೆ ವ್ಯಾಪಿಸುವುದಿಲ್ಲ ಮತ್ತು ಈ ಯಂತ್ರವನ್ನು ಹಿಡಿ, ನೀನು ಹಾವನ್ನು ಕಂಡಾಗ ಅದು ಕೆಂಪದಾಗಲಿ, ಕರೀದಾಗಲಿ ಹಸರ ದಾಗಲಿ ಬಿಳೀದಾಗಲಿ, ಈ ಯಂತ್ರವನ್ನು ನಿನ್ನ ಬಾಯಲ್ಲಿರಿಸಿಕೊ; ನಿನಗೆ ಕ್ಷೇಮವಾಗುವುದು. ನೀನು ನದಿಯ ಸಮೀಪಕ್ಕೆ ಬಂದಾಗ, ಆ ದೊಂಣೆ ಯನ್ನು ನೀರಿಗೆ ಹಾಕು, ಆ ಕ್ಷಣವೇ ಅದು ಒಂದು ದೋಣಿಯಾಗುವುದು.

ಆಗ ಹತೀಮನು ಆ ದೊಂಣೆಯನ್ನು ಯಂತ್ರವನ್ನು ತೆಗೆದುಕೊಂಡು, ಪಿಶಾಚಿರಾಜನ ಅಪ್ಪಣೆಯನ್ನು ಹೊಂದಿ, ಮುಂದಕ್ಕೆ ಮಸಾಂಡರಾನ್‌ಗೆ ಹೊರಟನು. ಹಗಲು ರಾತ್ರಿಯೂ ನಡೆದುಕೊಂಡು ಹೋಗುತಾ ಇರುವಾಗ ಒಂದು ನದಿ ಸಿಕ್ಕಿತು. ಅದರ ದಡದಲ್ಲಿ ನಿಂತುಕೊಂಡಿರುವಾಗ ಅದರ ತೆರೆಯು ಮೇಘ ಮಂಡಲವವರೆಗೂ ಏಳುತಿದ್ದ ಹಾಗೂ ಅದು ನಕ್ಷತ್ರಗಳಿಗೆ ಬಡಿಯುತಿದ್ದ ಹಾಗೂ ಕಾಣಿಸಿತು. ಅದನ್ನು ದಾಟಿ ಹೋಗುವುದಕ್ಕೆ ದಿಕ್ಕುದಿಕ್ಕ ನೋಡಿದ. ಈ ಯೋಚನೆಯನ್ನು ಮಾಡುತಿರುವಾಗ ಪಿಶಾಚಿರಾಜನಾದ ಮುಹ್ಯಾರನು ಕೊಟ್ಟಿದ್ದ ದೊಂಣೆಯ ಜ್ಞಾಪಕ ಬಂತು. ಅದನ್ನು ತನ್ನ ಬಲಗೈಯಲ್ಲಿ ಕೂಡಲೆ ಹಿಡಿದುಕೊಂಡು (ನದಿಯ) ತೆರೆಗೆ ಎಸೆದನು. ಅದು ಒಂದು ದೋಣಿಯಾಯಿತು. ಅದರಲ್ಲಿ ಕೂತುಕೊಂಡು (ನದಿಯನ್ನು) ದಾಟಲು ಆರಂಭಿಸಿದನು. ಅರ್ಧದಾರಿ ಹೋದ ಮೇಲೆ, ಒಂದು ದೊಡ್ಡ ನಿಹಾಂಗ್ ಎಂಬ ಜಂತು ಕಂಡು ಅವನನ್ನೂ ಆ ದೋಣಿಯನ್ನೂ ಎಳೆದುಕೊಂಡು ಹೊರಟುಹೋಯಿತು. ಹತೀಮನು ಅದೃಷ್ಟದಲ್ಲಿದ್ದ ಹಾಗಾಗಲಿ ಎಂದು ತಳಾರವಾಗಿ

ಸುಮ್ಮನಿದ್ದನು. ಕಡೆಗೆ ಆ ಮೃಗವು ನೀರಿನೊಳಗೆ ಏಳು ಹರಿದಾರಿ ದೂರ ಹೋದ ಮೇಲೆ ಗಟ್ಟಿಯಾದ ನೆಲ ಕಾಲಿಗೆ ಸಿಕ್ಕಿತು. ಅಲ್ಲಿ ಕಂಣಬಿಟ್ಟು ನೋಡಿದನು. ಅಲ್ಲಿ ನಿಹಾಂಗ್ ಮೃಗವು ಒಳ್ಳೆ ವಾಗ್ಝರಿಯಿಂದ ಅವನನ್ನು ಕಂಡು ಮಾತನಾಡು ವುದನ್ನು ಕಂಡು ಆಶ್ಚರ್ಯವಾಯಿತು.

ನಿಹಾಂಗ್—ಹತೀಮು, ನೀನು ನನಗೆ ನ್ಯಾಯವನ್ನು ತೀರ್ಮಾನಿಸಿಕೊಡಲೆಂದು ನಿನ್ನನ್ನು ಇಲ್ಲಿಗೆ ಕರೆದುತಂದೆ.

ಹತೀಮು—ಯಾವ ನ್ಯಾಯವನ್ನು ಅಪೇಕ್ಷಿಸುತೀಯೆ ?

ನಿಹಾಂಗ್—ನನ್ನ ವಾಸಸ್ಥಾನವನ್ನು ದೊಡ್ಡ ನಳ್ಳಿ ಅನ್ಯಾಯವಾಗಿ ಆಕ್ರಮಿಸಿ ಕೊಂಡಿದೆ. ನನ್ನ ಹಕ್ಕಿಗೆ ಸೇರಿದ್ದನ್ನು ನೀನು ನನ್ನ ಸ್ವಾಧೀನಕ್ಕೆ ಕೊಡಿಸ ಬೇಕೆಂಬುವುದು ನನ್ನ ಇಷ್ಟ.

ಹತೀಮು—ನಿನಗಿಂತಲೂ ನಳ್ಳಿ ಬಲವಾಗಿರುವುದು ಸಾಧ್ಯವೆ ?

ನಿಹಾಂಗ್—ಬಡಜಂತುವಾಗಿ ಅದು ಕಾಣಿಸಿಕೊಂಡಾಗ್ಯೂ ಆದರ ಅಂಗೈನಿಂದ ನನ್ನನ್ನು ಚೂರು ಚೂರು ಮಾಡುವ ಶಕ್ತಿ ಅದಕ್ಕಿದೆ. ಅದು ಈಗ ಆಹಾರ ವನ್ನು ಹುಡುಕಿಕೊಂಡು ಎಲ್ಲಿಗೋ ಹೋಗಿದೆ. ಈ ಮಧ್ಯೆ ನಿನ್ನನ್ನು ನಾನು ಇಲ್ಲಿಗೆ ಕರೆದುತಂದೆ.

ಹತೀಮನು ತನ್ನಿಂದ ಏನೂ ನಡೆಯುವುದಿಲ್ಲವೆಂದು ಚೆನ್ನಾಗಿ ತಿಳಿದು ದೇವರನ್ನು ನಂಬಿಕೊಂಡಿದ್ದನು. ಆಗ ವಿಪರೀತವಾದ ಆಕೃತಿಯುಳ್ಳ ನಳ್ಳಿಯು ಬಂತು. ಆಗ ನಿಹಾಂಗ್ ಮೃಗವು ಕೂಡಲೆ ಓಡಿಹೋಯಿತು. ನಳ್ಳಿಯು ಮೆಲ್ಲಗೆ ಬಂತು. ನಿಹಾಂಗ್ ಓಡಿಹೋದ್ದನ್ನು ಕಂಡು ದೊಡ್ಡದಾಗಿ ಅರಚಿಕೊಂಡಿತು. ಅದರಿಂದ ಭೂಮಿ ಎಲ್ಲಾ ನಡಗಿಹೋಯಿತು. ಹತೀಮು ಕೂಡ ಹೆದರಿಕೊಂಡು, ಆಗ ತನಗೆ ಆಸನ್ನವಾಗಿರುವ ವಿಪತ್ತಿನಿಂದ ತನ್ನನ್ನು ಕಾಪಾಡಬೇಕೆಂದು ಭಕ್ತಿಯಿಂದ ದೇವರನ್ನು ಪ್ರಾರ್ಥಿಸಿದನು ಮತ್ತು ಮುಹ್ಯಾರನು ತನಗೆ ಕೊಟ್ಟು ತನ್ನಲ್ಲಿದ್ದ ಮಾಯದ ದೊಂಣೆಯನ್ನು ಜಾಗ್ರತೆಯಿಂದ ಕೈಗೆ ತೆಗೆದುಕೊಂಡನು. ಅದನ್ನು ಕಂಡು ನಳ್ಳಿಯು ತಾನು ಇದ್ದ ಕಡೆಯಲ್ಲಿಯೇ ಸುಮ್ಮನಾಯಿತು. ಆಗ ಹತೀಮನು ಆ ವಿಪರೀತವಾದ ಜಂತುವನ್ನು ಕುರಿತು.

ಹತೀಮು—ಹಿಂಸಕನು ತನ್ನ ಮೋಸದಿಂದಲೇ ತಾನು ಕೆಡುತಾನೆಂದು ಅರಿಯೆಯ ? ನಿಹಾಂಗ್‌ನನ್ನು ಹಾಗಿದ್ದರೆ ಯಾಕೆ ಹಿಂಸಿಸುತೀಯೆ ? ಈ ನದಿಯಲ್ಲಿ ನಿಮ್ಮಿಬ್ಬರಿಗೂ ಸಾಕಾಗುವಷ್ಟು ಸ್ಥಳ ಇಲ್ಲವೆ, ನೀನು ಇನ್ನೊಬ್ಬರ ಮನೆಯನ್ನು ಕಿತ್ತುಕೊಳ್ಳುವುದಕ್ಕೆ ?

ನಳ್ಳಿ—ನಾನೂ ನಿಹಾಂಗು ಸಹಾ ಒಂದೇ ಬುಡಕಟ್ಟಿನವರು. ನಮನಮಗಿರುವ ವಿಚಾರದಲ್ಲಿ ಮನುಷ್ಯವರ್ಗದವರಿಗೇನಿದೆ ?

ಹತೀಮ—ನೀನು ಹೇಳುವುದರಲ್ಲಿ ಸ್ವಲ್ಪ ನಿಶ್ಚಯವಿದೆ. ಆದರೆ ಎಲ್ಲರೂ ದೇವರ ನಿರ್ಮಾಣ. ಅವನು ನ್ಯಾಯದಲ್ಲಿ ಸಂತೋಷವನ್ನು ಹೊಂದಿ ಹಿಂಸಕರನ್ನು ಶಿಕ್ಷಿಸುತಾನೆ. ಅವನಿಗೆ ನೀನು ಭಯಪಡುವುದಾದರೆ, ನಮ್ಮ ಸಮಾನ ಜಂತುವನ್ನು ಹಿಂಸಿಸಬೇಡ.

ನಳ್ಳಿ—ನಿನ್ನ ಸಂಗಡ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕಿಂತ ಸದ್ಯದಲ್ಲಿ ನಾನು ಈ ಸ್ಥಳವನ್ನು ಬಿಟ್ಟುಹೋಗುತೇನೆ. ಅದಕ್ಕೆ ಸಹಾಯಮಾಡಲು ನೀನಿಲ್ಲದಿರುವಾಗ ಮುಂದಕ್ಕೆ ಒಂದು ದಿವಸ ಆ ನಿಹಾಂಗನನ್ನು ಕಾಣುತೇನೆ.

ಹತೀಮ—ಖಂಡಿತವಾಗಿಯೂ ನೀನು ಬಹಳ ಕೆಟ್ಟ ಮೃಗ. ನಿನ್ನ ಪ್ರಾಣಕ್ಕೆ ಏನಾದರೂ ಬೆಲೆ ಇದೆ ಎಂದು ನೀನು ತಿಳಿದಿದ್ದರೆ ಒಂದೇ ಸಾರಿ ಈ ಸ್ಥಳವನ್ನು ಬಿಟ್ಟು ಹೊರಟುಹೋಗು.

ಇದನ್ನು ಕೇಳಿ ನಳ್ಳಿಯು ಹತೀಮನ ಮೇಲೆ ನುಗ್ಗಿ ತನ್ನ ಹಸ್ತದಿಂದ ಹಿಡಿದುಕೊಳ್ಳುವುದಾಗಿತ್ತು. ಆಗ ಅವನು ಪಿಶಾಚಿರಾಜನಿಂದ ತನಗೆ ದತ್ತವಾಗಿ ಬಂದಿದ್ದ ದೊಂಣೆಯಿಂದ ಒಂದೇಟುಕೊಡಲು ಆ ಭೂತವು ಇವನ ಮೇಲೆ ಬಿದ್ದದ್ದು ವ್ಯರ್ಥವಾಯಿತು. ಆ ಮಹಾಭೂತವು ಹಿಂತಿರುಗಿಕೊಂಡು ಓಡಿಹೋಯಿತು. ಆಗ ನಿಹಾಂಗು ಧೈರ್ಯಗೊಂಡು ಅದನ್ನು ಹಿಂದಟ್ಟಿಕೊಂಡುಹೋಯಿತು. ಆಗ ಹತೀಮನು ನಿಹಾಂಗನನ್ನು ಕುರಿತು "ಬಿಡು, ಈಗಿನ ಸ್ಥಿತಿಯಲ್ಲಿ ಅದನ್ನು ಹಿಂದಟ್ಟಿಹೋಗುವುದು ಹೇಡಿತನ, (ನಿಹಾಂಗು)ನ ಆಯುಧವೇನೂ ನಡೆಯುವುದಿಲ್ಲ. ಇತಃ ಪರ ಅದು ನಿನಗೆ ತೊಂದರೆಕೊಡುವುದಿಲ್ಲ. ನೀನು ಅದಕ್ಕೆ ಹಿಂಸೆ ಮಾಡಿದರೆ, ನಿನ್ನ ಆಯುಸ್ಸನ್ನು ಪೂರ್ತಿ ಮಾಡಿಬಿಡುತೇನೆ.

ಈ ಪ್ರಕಾರ ಹತೀಮನು ಆ ಉಭಯ ಜಲಚರ ಭೂತಗಳಿಗೂ ಇದ್ದ ವಿವಾದವನ್ನು ವ್ಯವಸ್ಥೆಮಾಡಿ ತನ್ನ ಕೈ ದೊಂಣೆಯನ್ನು ಎಸೆಯಲು ಅದು ಒಂದು ದೋಣಿಯಾಯಿತು. ಅದರಲ್ಲಿ ಕೂತುಕೊಂಡು ನದಿಯ ಆಚೆ ದಡವನ್ನು ಸೇರಿ ಮುಸ್ಲಾನ್‌ಡರಾನನ್ನು ಕುರಿತು ಪ್ರಯಾಣ ಮಾಡಿದನು. ಕೊನೆಗೆ ಆ ವಿಸ್ತಾರವಾದ ಕಾಡಿಗೆ ಬಂದು ಒಂದು ಮರದ ನೆರಳಲ್ಲಿ ಒರಗಿಕೊಂಡು ಮಲಗಿಕೊಂಡು ಪರೀರು ಎಂಬುವುದನ್ನು ಹೊಂದಲು ಉತ್ತಮವಾದ ಮಾರ್ಗ ಯಾವುದು ಎಂಬದಾಗಿ ಯೋಚಿಸುತಾ ಇದ್ದನು. ರಾತ್ರಿಯಾಗಿ ಸುತ್ತಲೂ ಕತ್ತಲೆಯು ಕವಿಯಲು, ಆಹಾರಕ್ಕಾಗಿ ಹೊರಗೆ ಹೋಗಿದ್ದ ಪಕ್ಷಿಗಳು ಬಂದು ಆ ಮರದ ಮೇಲೆ ಕೂತುಕೊಂಡು ತಮ್ಮೊಳಗೆ ಮಾತನಾಡಿಕೊಳ್ಳಲು ಮೊದಲು ಮಾಡಿದ್ದು ಹೇಗೆಂದರೆ :

"ನಮ್ಮ ಒಂಟಿಯಾಗಿರುವ ವಾಸಸ್ಥಾನಕ್ಕೆ ಹತೀಂ ಬಿನ್ ತಾಯಿ್‌ ಎಂಬುವನು ಬಂದಿದಾನೆ. ಆರ್ತರಾದವರ ಕಷ್ಟವನ್ನು ನಿವಾರಣ ಮಾಡುವುದೇ ಅವನು ಪ್ರಯಾಣಮಾಡಿ ಬರುವುದಕ್ಕೆ ಕೋರಿಕೆ. ನಾವು ಏನ ಮಾಡಬೇಕು ?"

“ಹತೀಮನು ಅತ್ಯಂತ ಉದಾರವಾದ ಸ್ವಭಾವವುಳ್ಳವನು, ಅವನಿಗೆ ಆಶಾ ಭಂಗವಾಗಿ ಅವನು ಇಲ್ಲಿಂದ ಹೋಗಕೂಡದು.” ಈ ಪ್ರಕಾರ ನಿಷ್ಕರ್ಷೆ ಮಾಡಿ ಕೊಂಡು ಆ ಜಂತುಗಳೆಲ್ಲಾ ಅವನ ಸುತ್ತಲೂ ನಿಂತುಕೊಂಡು ವಿಧೇಯವಾಗಿ ಅವನ ಕಾಲನ್ನು ಕಟ್ಟಿಕೊಳ್ಳಲು ಆರಂಭಿಸಿದವು. ಅವುಗಳ ವಿಚಿತ್ರವಾದ ರೂಪನ್ನು ನೋಡಿ ಅವನಿಗೆ ಹೆಚ್ಚಾಗಿ ಆಶ್ಚರ್ಯವಾಯಿತು. ಅವುಗಳಲ್ಲಿ ಪ್ರತಿಯೊಂದೂ ಮುಖಭಾವದಲ್ಲಿ ದೇವತೆಗಳನ್ನು ಹೋಲುತಿತ್ತು. ಅವುಗಳ ಮುಖದ ಸೌಂದರ್ಯವನ್ನು ನೋಡಿ ವಿಸ್ಮಿತವಾಗಿ ಯತ್ನ ಮೀರಿ ಹೇಳಿಕೊಳ್ಳುತಿದ್ದದ್ದು ಹೇಗೆಂದರೆ: “ದಯಾಳುವಾದ ದೇವರೆ, ನಿನ್ನ ತೀರ್ಮಾನಗಳು ಏನು ದುರವಗಾಹವಾಗಿವೆ ? ಪಕ್ಷಿಗಳ ಹಾಗೆ ಶರೀರ, ದೇವಕನ್ನಿಕೆಯರ ಹಾಗೆ ಸುಂದರವಾದ ಮುಖ.”

ಈ ಮಧ್ಯೆ ಆ ಜಂತುಗಳು ಹತೀಮನನ್ನು ಕುರಿತು ಇಂಪಾದ ಸರಣಿಯುಳ್ಳ ಭಾಷೆಯಲ್ಲಿ ಪಠೀರು—ಓ, ಹತೀಮ, ನಿನ್ನ ಔದಾರ್ಯದ ಖ್ಯಾತಿಯು ಶಾಶ್ವತವಾಗಿರಲಿ. ಅನ್ಯರಿಗೋಸ್ಕರ ನೀನು ಶ್ರಮಕ್ಕೂ ಅಪಾಯಕ್ಕೂ ಗುರಿಯಾಗಿದ್ದೀಯೆ. ನೀನು ಈ ಕಡೆಗೆ ಪ್ರಯಾಣಮಾಡಿ ಬಂದ ಕಾರಣ ನಮಗೆ ಗೊತ್ತಿದೆ. ಒಬ್ಬ ಯೌವನಶಾಲಿಯು ಮಂತ್ರವಾದಿಯ ಮಗಳನ್ನು ಮೋಹಿಸಿದಾನೆ. ತಂದೆಯು ಕೆಲವು ಸಮಯಬಂಧದ ಮೇಲೆ ಅದಕ್ಕೆ ಒಪ್ಪುತಾನೆ. ನಮ್ಮ ಜಾತಿಯಲ್ಲಿ ಎರಡು ಪಕ್ಷಿಗಳನ್ನು ತಂದುಕೊಡ ಬೇಕಾಗಿದೆ. ಇದರಲ್ಲಿರುವ ಅಪಾಯವನ್ನರಿಯದೆ, ಅದಕ್ಕೋಸ್ಕರ ಇಲ್ಲಿಗೆ ಬಂದಿದೀಯೆ.”

ಹತೀಮ—ನೀವು ಹೇಳುವುದು ನಿಜ. ನಿಮ್ಮ ಮರಿಗಳಲ್ಲಿ ಒಂದು ಜೊತೆಯನ್ನು ತೆಗೆದುಕೊಳ್ಳಬಹುದೆಂದು ಸಮ್ಮತಿಸಿದರೆ ಮಹೋಪಕಾರ ಮಾಡಿದಂತಾಗು ವುದು. ನಿರಾಶೆಯಿಂದ (ಸಂಕಟ ಪಡುತ್ತಿರುವ ಇನಯನ ಕೆಲಸವೂ ನಡೆದಂತಾಗುವುದು.)

ಆ ಜಂತುಗಳು ತಮ್ಮೊಳಗೆ ಮಾತನಾಡಿಕೊಂಡು, ನಮ್ಮಲ್ಲಿ ಚೆನ್ನಾಗಿ ಬೆಳೆದವರು ಯಾರೂ ಈ ಮನುಷ್ಯನೊಡನೆ ಹೋಗುತಾರೆಂದು ನಿರೀಕ್ಷಿಸುವುದಕ್ಕಾ ಗುವುದಿಲ್ಲ. ಹಾಗಾದರೆ ಒಂದು ಜೊತೆ ಮರಿಗಳನ್ನು ಇವನಿಗೆ ಕೊಡಲು ನಮ್ಮಲ್ಲಿ ಯಾರಿದಾರೆ ? ಅದು ದೇವರಿಗೆ ಅಂಗೀಕಾರವಾಗತಕ್ಕ ಕಾರ್ಯ, ಎಂದುಕೊಂಡವು.

ಅವುಗಳಲ್ಲಿ ಒಂದು ಪರೀರು ಹಕ್ಕಿಯು ಹತೀಮನನ್ನು ಕುರಿತು—ಇಗೋ ನನ್ನ ಮರಿಗಳಲ್ಲಿ ಒಂದು ಜೊತೆಯನ್ನು ನಾನು ಕೊಡುತೇನೆ. ಸಮಸ್ತವನ್ನೂ ಕೊಡತಕ್ಕ ಆ ಪರಮಾತ್ಮನಿಗಾಗಿ ಕೊಡುತೇನೆ. ಅದನ್ನು ಅಂಗೀಕಾರಮಾಡು, ನೀನು ಎಲ್ಲಿಗೆ ಹೋದರೆ ಅದನ್ನು ಅಲ್ಲಿಗೆ ತೆಗೆದುಕೊಂಡು ಹೋಗುವನಾಗು, ಎಂದು ಹೇಳಿತು. ಹತೀಮ ಸಂತೋಷವಾಗಿ ಆ ಚಿಕ್ಕ ಪಕ್ಷಿಗಳನ್ನು ತೆಗೆದುಕೊಂಡು, ಆ ರಾತ್ರಿಯನ್ನು ಕಾಡಿನಲ್ಲಿಯೇ ಕಳೆದು, ಮಾರನೇ ದಿವಸ ಬೆಳಗ್ಗೆ ಈ ವಿಚಿತ್ರವಾದ ಜಂತುಗಳ ಅನುಮತಿಯನ್ನು ಹೊಂದಿ ಮಂತ್ರವಾದಿಯ ಊರಿಗೆ ಹಿಂತಿರುಗಿ

ಹೊರಟನು. ಅನೇಕ ಪರ್ವತಗಳನ್ನು ಕಾಡುಗಳನ್ನು ಕ್ರಮೇಣ ದಾಟಿದ ಮೇಲೆ ಆ ಯೌವನಸ್ಥನಾದ ಸಿಪಾಯಿಯು ಇನ್ನೂ ಜೀವ ಹತ್ತಿಕೊಂಡು ಬಿದ್ದಿರುವ ಕಡೆಗೆ ಬಂದನು. ಮತ್ತು ಆ ಪರೀರು ಪಕ್ಷಿಗಳನ್ನು ಅವನಿಗೆ ಕೊಟ್ಟು ಹತೀಮನು— ಸಂತೋಷ ಪಡೈ ಮಿತ್ರ, ಇಲ್ಲಿಗೆ ಮಂತ್ರವಾದಿಯ ಒಂದು ಸಮಯಬಂಧ ಪೂರೈಸಿತು, ಎಂದನು. ಆ ತರುಣನು ಆ ಪಕ್ಷಿಗಳನ್ನು ಕಂಡು ಅತ್ಯಂತವಾದ ಆನಂದದಿಂದ ಹತೀಮನ ಕಾಲಿಗೆ ಬಿದ್ದು, ಹೇಳಿದ್ದೇನೆಂದರೆ:— ಅಯ್ಯಾ, ಉದಾರಿಯಾದ ಉಪಕಾರಿಯೆ, ನಾವು ಈಗ ಹೋಗಿ ಈ ಸುಂದರವಾದ ಪಕ್ಷಿಗಳನ್ನು ಮಂತ್ರವಾದಿಗೆ ಕೊಡೋಣ ಎಂದು ಹೇಳಿದನು. ಅದಕ್ಕಾಗಿ ಇಬ್ಬರೂ ಹೊರಟು. ದಾರಿಯಲ್ಲಿ ತನ್ನ ಪ್ರಯಾಣದೊಳು ನಡೆದ ಸಂಗತಿಗಳನ್ನೆಲ್ಲಾ ಮತ್ತು ಮುಸಾಂಡರಾನ್ ಕಾಡಿನ ಸ್ಥಿತಿಯನ್ನೆಲ್ಲಾ ತನ್ನ ಮಿತ್ರನಿಗೆ ಹೇಳಿ, ಎರಡು ಪರೀರು ಪಕ್ಷಿಗಳನ್ನು ಅವನಿಗೆ ಕೊಟ್ಟು, ಅವನೇ ಹೋಗಿ ಅವುಗಳನ್ನು ಮುಸಾಹೀರನಿಗೆ ಕೊಡಬೇಕೆಂತಲೂ, ಅವುಗಳನ್ನು ಪಡೆಯಲು ತನಗೆ ಆದ ಸಹಾಯದ ವಿಚಾರವನ್ನೇನೂ ಅವನೊಡನೆ ಸೂಚಿಸಕೂಡದೆಂತಲೂ ಆ ಮಿತ್ರನೊಡನೆ ಹೇಳಿದನು.

ಆ ಪಟ್ಟಣಕ್ಕೆ ಹೋದಮೇಲೆ ಹತೀಮನು ಕಾರವಾನ್ ಸಿರೈಗೆ ಹೋಗಿ ಇಳಿದು ಕೊಂಡನು. ಆ ತರುಣನು ಆ ಪಕ್ಷಿಗಳನ್ನು ತೆಗೆದುಕೊಂಡುಹೋಗಿ ಮಂತ್ರವಾದಿಗೆ ಕೊಟ್ಟನು. ಅದನ್ನು ನೋಡಿ ಮಂತ್ರವಾದಿಗೆ ಆಶ್ಚರ್ಯವಾಯಿತು.

ಮಂತ್ರವಾದಿ—ಎಲ ತರುಣ, ಈ ಕಾರ್ಯವನ್ನು ನೀನೇ ಮಾಡಿದೆಯ ? ಹಾಗಿದ್ದರೆ, ಹೇಳು ಪ್ರಪಂಚದಲ್ಲಿ ಯಾವ ಕಡೆ ಇಂಥಾ ಪಕ್ಷಿಗಳು ಸಿಕ್ಕುವವು ?

ತರುಣ—(ಸ್ವಲ್ಪವೂ ಸಂದೇಹಪಡದೆ) ಮುಸಾಂಡರಾನ್ ಕಾಡಿನಲ್ಲಿ,

ಆಗ ಆ ಮಂತ್ರವಾದಿಯು ಅಲ್ಲಿಗೆ ದಾರೀ ವಿಚಾರವನ್ನೇ ಮುಂತಾಗಿ ಅನೇಕ ವಿವರಗಳನ್ನು ಕೇಳಿದನು. ಇದೆಲ್ಲವನ್ನೂ ಹತೀಮನು ಮೊದಲೇ ಹೇಳಿಕೊಟ್ಟಿದ್ದ ನಾದ್ದರಿಂದ, ಆ ಹುಡುಗನು ತೃಪ್ತಿಕರವಾಗಿ ಉತ್ತರಕೊಟ್ಟನು.

ಮಂತ್ರ—ನೀನು ಹೇಳಿದ್ದು ಸರಿ. ಮೊದಲನೇ ಮಾತಿಗೆ ಇಷ್ಟಾಯಿತು. ಕೆಂಪು ಭೂತದ ಬಾಯಲ್ಲಿರುವ ಮುಹ್ರವನ್ನು ತಂದುಕೊಡು.

ತರುಣ—ನಾನು ಆರಾಧಿಸತಕ್ಕವಳ ಮುಖವನ್ನು ಒಂದು ಕ್ಷಣಮಾತ್ರ ನೋಡುವ ಹಾಗೆ ಮಾಡೈ. ಇಲ್ಲವಾದರೆ ನಾನು (ಅತ್ತ ಇತ್ತ) ಚಲಿಸುವುದಕ್ಕೆ ಕೂಡ ಶಕ್ತಿ ಇರುವುದಿಲ್ಲ.

ಇದಕ್ಕೆ ಮಂತ್ರವಾದಿಯು ಒಪ್ಪಿ, ಕಿಟಕಿಯಲ್ಲಿ ಸ್ವಲ್ಪ ತಲೆಯನ್ನಿಟ್ಟು ಅವಳನ್ನು ಇನಿಯನಿಗೆ ಮುಖವನ್ನು ತೋರಿಸೆಂದು ಮಗಳಿಗೆ ಹೇಳಿಕಳುಹಿಸಿದನು. ಆ ತರುಣನು ಪರಮಾನಂದದಿಂದ ಅವಳ ಕಿಟಕಿಯ ಬಳಿಯಲ್ಲಿ ತಾನೇ ಹೋಗಿ ಕಾದುಕೊಂಡಿದ್ದನು. ಆ ಕನ್ನೆಯು ತಂದೆಯ ಅಪ್ಪಣೆಯಾದ ಮೇಲೆ ಆ ಕಿಟಕಿಯಲ್ಲಿ ಕತ್ತನ್ನು ಹಾಕಿ ತನ್ನ ಮುಗುಳು ನಗುವಿನಿಂದ ಅವನಿಗೆ ಆನಂದವನ್ನುಂಟುಮಾಡಿದಳು. ಅವರಿಬ್ಬರೂ

ಪ್ರೇಮಸೂಚಕವಾದ ನೋಟಗಳಿಂದ ಪರಸ್ಪರ ನೋಡಿಕೊಂಡು ತರುವಾಯ ಆ ತರುಣನು ಅವಳನ್ನು ಕುರಿತು—ಈಗ ಕೆಂಪುಭೂತದ ಬಾಯಲ್ಲಿರುವ ಮುಹ್ರವನ್ನು ಹುಡುಕಿಕೊಂಡು ಹೋಗುವುದರಲ್ಲಿದೇನೆ; ಅದು ಎಲ್ಲಿ ದೊರೆಯುವುದು ಹೇಳ ಬಲ್ಲೆಯ? ಎಂದು ಕೇಳಿದನು. ಅದಕ್ಕೆ ಆ ಕನ್ನೆಯು ಕಾಫ್ ಪರ್ವತದ ಪ್ರಾಂತ ದಲ್ಲಿರುವ ಕೆಂಪುಕಾಡಿನಲ್ಲಿ ಅದಿದೆ ಎಂದು ನಾನು ಕೇಳಿದೇನೆ, ಎಂಬದಾಗಿ ಉತ್ತರ ಕೊಟ್ಟಳು.

3ನೇ ಅಧ್ಯಾಯ

ಆ ತರುಣನು ತನ್ನ ನಿಯಳ ಅನುಮತಿಯನ್ನು ಹೊಂದಿ ಹತೀಮನ ಬಳಿಗೆ ಬಂದು ನಡೆದ ಸಂಗತಿಯನ್ನೆಲ್ಲಾ ಆತನಿಗೆ ಹೇಳಿದನು. ಹತೀಮನು ಅವನಿಗೆ ಆಪ್ಯಾಯಮಾನವಾಗುವಂತೆ ಹೇಳಿ ಮುಂದೆ ನುಡಿದದ್ದೇನೆಂದರೆ—ನಿನ್ನ ಅಳುವನ್ನೂ ವ್ಯಸನವನ್ನೂ ನಿಲ್ಲಿಸು; ನಿನ್ನ ಕಷ್ಟ ನಿವಾರಣೆಗಾಗಿ ಕೈಲಾದ್ದನ್ನೆಲ್ಲಾ ಮಾಡಿಬಿಡು ತೇನೆ. ನಾನು ಹಿಂತಿರುಗಿ ಬರುವತನಕ ದೇವರು ನಿನ್ನನ್ನು ಕಾಪಾಡಬೇಕು. ಇಷ್ಟರ ಮಟ್ಟಿಗೆ ಹೇಳಿ ಹತೀಮನು ತನ್ನ ಮಿತ್ರನನ್ನು ಬಿಟ್ಟು ಕಾಫ್ ಪರ್ವತಕ್ಕೆ ಹೊರಟನು. ಒಂದು ಮಜಲು ತಟಹಾದ ಕೂಡಲೆ ಒಂದು ಕಾಡು ಸಿಕ್ಕಿತು. ಒಂದು ದಿನ ಉಷಃ ಕಾಲದಲ್ಲಿ ಒಂದು ಭೂತ ಕಾಣಿಸಿತು. ಕಾಮನಬಿಲ್ಲಿನ ಏಳು ಬಂಣವೂ ಅದರ ಮೇಲಿತ್ತು. ಅದು ಹದ್ದಿನಹಾಗೆ ರೆಕ್ಕೆಗಳನ್ನುಳ್ಳದ್ದಾಗಿ ಕಾಡಿನಲ್ಲಿ ಎಲ್ಲಾ ಕಡೆ ಯಲ್ಲಿಯೂ ಹಾರಾಡುತಿತ್ತು.

ಈ ಭಯಂಕರವಾದ ನೋಟವನ್ನು ನೋಡಿ ಹತೀಮನು ಆಶ್ಚರ್ಯಪಟ್ಟು ನಿಂತು ಕೊಂಡನು. ಮತ್ತು ತನ್ನ ಮನದೊಳಗೆ—ನಾನು ಇದಕ್ಕೆ ಮುಂಚೆ ನನ್ನ ಸುತ್ತಲೂ ಇರುವಂಥಾ ಕಾಡುಗಳಲ್ಲಿಯೂ ಪರ್ವತಗಳಲ್ಲಿಯೂ ಓಡಿಯಾಡಿದೇನೆ. ಆದರೆ ಇಂಥಾ ಪ್ರಾಣಿಯನ್ನು ಹಿಂದಕ್ಕೆ ಎಂದಿಗೂ ನೋಡಲಿಲ್ಲ. ಸಾಧ್ಯವಾದರೆ ಇದರ ಗೂಡು ಇರುವ ಸ್ಥಳವನ್ನು ಕಂಡುಕೊಳ್ಳಲು, ಇದು ಹಾರಾಡುವುದನ್ನೇ, ನಾನು ಚೆನ್ನಾಗಿ ನೋಡುತಿರಬೇಕು, ಎಂದುಕೊಂಡನು. ತರುವಾಯ ಹತೀಮನು ಆ ದಿವಸವೆಲ್ಲಾ ಆ ಭೂತವನ್ನೇ ನೋಡುತಿದ್ದು, ಆ ಮೃಗವು ಒಂದು ಬಂಡೆಯ ಸಂದಿನಲ್ಲಿ ಹೊಕ್ಕಿ ಕೊಳ್ಳಲು, ತಾನೂ ಆ ಬಂಡೆಯ ಸಮೀಪದಲ್ಲಿ ವಿಶ್ರಮಿಸಿಕೊಂಡು ಆ ವಿಚಿತ್ರವಾದ ಜಂತುವಿನ ನಡತೆಯನ್ನು ನೋಡುತಿದ್ದನು. ಅಲ್ಲಿಗೆ ಸಮೀಪವಾಗಿ ಒಂದು ಗ್ರಾಮ ವಿತ್ತು. ಆ ಬಂಡೆಯ ಸಮೀಪದಲ್ಲಿದ್ದ ಭಾವಿಗೆ ಆ ಗ್ರಾಮದವರು ನೀರಿಗೋಸ್ಕರ ಬರುತಿದ್ದರು. ಅವರು ಹತೀಮನನ್ನು ಕಂಡು ಅವನು ಯಾರೋ ಪರಸ್ಥಳದವನೆಂದು ತಿಳಿದು ಅವನಿಗೆ ರೊಟ್ಟಿಯನ್ನೂ ನೀರನ್ನೂ ಆದರದಿಂದ ಕೊಟ್ಟರು. ಇವನು ಅದನ್ನು ಸ್ವೀಕರಿಸಿದ ತರುವಾಯ ಅವರು ಅವನನ್ನು ತಮ್ಮ ವೂರಿಗೆ ಬರಬೇಕೆಂದು ಕರೆದರು.

ಅದಕ್ಕೆ ಅವನು ಸಮೀಪದಲ್ಲಿರುವ ಮರದ ಕೆಳಗೆ ರಾತ್ರಿಯೆಲ್ಲಾ ಇರತಕ್ಕದ್ದು ತನಗೆ ಅನುಕೂಲವೆಂದು ಹೇಳಿದನು.

ಆ ಗ್ರಾಮಸ್ಥರು ತಂತಮ್ಮ ಮನೆಗಳಿಗೆ ಹೋದರು. ಆ ಬೆಟ್ಟದ ತಪ್ಪಲಲ್ಲಿ ಹಸುರಾಗಿ ಕಾಣುತಿದ್ದ ಮಾಳದಲ್ಲಿ ಅವರು ತಮ್ಮ ದನಗಳನ್ನೂ ಕುರೀಮಂದೆಗಳನ್ನೂ ಬಿಟ್ಟಿದ್ದರು. ಅವುಗಳನ್ನು ನೋಡಿಕೊಳ್ಳಲು ತರುಣರು ಆ ದಿನ ರಾತ್ರಿ ಅಲ್ಲಿಯೇ ಇದ್ದರು. ಮೊದಲ ಕಾವಲಿನ ಕಡೆಯಲ್ಲಿ ರೆಕ್ಕೆಯುಳ್ಳ ಆ ಹಾವು ತನ್ನ ಸ್ಥಳದಿಂದ ಬಂದು ದನಗಳ ಮೇಲೆ ನುಗ್ಗಿ ಒಂದರ ತರುವಾಯ ಒಂದನ್ನು ತನ್ನ ವಿಷದ ಕೊಂಡಿಯಿಂದ ಕೊಂದುಹಾಕಿತು. ಅದು ಮಾಡಿದ ನಾಶವು ಅಷ್ಟಕ್ಕೇ ನಿಲ್ಲಲಿಲ್ಲ. ಆ ನೀರಿನ ಭಾವಿಯ ಬಳಿಯಲ್ಲಿಳಿದುಕೊಂಡಿದ್ದ ಕಾರವಾನ್‌ರವನಿಗೆ ಸೇರಿದ ಎರಡು ಕುದುರೆಗುಂಪನ್ನು ಕೊಂದುಹಾಕಿತು. ಹತೀಮನು ಈ ಭಯಂಕರವಾದ ಹಾವಳಿಯನ್ನು ಕಂಡು ದುಃಖದಿಂದ ಸಂಕಟಪಡುತಾ ಕೈ ಕೈ ಮುರಿದುಕೊಂಡನು. ಇದಲ್ಲದೆ ಅಗೋ ಆ ಭೂತವು ಇನ್ನೂ ರಕ್ತಪಾನ ಮಾಡಬೇಕೆಂಬ ಆಶೆಯಿಂದ ಹತೀಮನಿಂತಿದ್ದ ಮರದ ಬಳಿಗೆ ಬಂದು ಕ್ಷಣಮಾತ್ರದಲ್ಲಿ ಕಾರವಾನ್‌ರ ಕಾವಲುಗಾರರನ್ನೂ ಅಲ್ಲಿದ್ದ ಕುರೀಕಾಯುವವರನ್ನೂ ಕೊಂದುಹಾಕಿ ತಿರುಗಿ ಕಲ್ಲುಪೊಟ್ಟರೆಯೊಳಕ್ಕೆ ಹೊಕ್ಕಿಕೊಂಡಿತು.

ಹತೀಮನು ರಾತ್ರಿ ಉಳಿದಿದ್ದ ಕಾಲವನ್ನು ದುಃಖಪಡುವುದರಲ್ಲಿಯೂ ಆಶ್ಚರ್ಯಪಡುವುದರಲ್ಲಿಯೂ ಕಳೆದನು. ಬೆಳಕು ಹರೆದ ಮೇಲೆ ಆ ಗ್ರಾಮದವರು ತಮ್ಮ ಮಂದೆಗಳನ್ನು ನೋಡಿಕೊಳ್ಳಲು ಬಂದರು. ಕುರುಬರ ಹೆಣಗಳೂ ಸತ್ತುಬಿದ್ದಿದ್ದ ಅವರ ದನಗಳೂ ಕುದುರೆಗಳೂ ಅಲ್ಲೆಲ್ಲಾ ಬಿದ್ದಿರುವುದನ್ನು ಕಂಡು ಆಶ್ಚರ್ಯಪಟ್ಟರು. ಈ ಭೂತದ ವಿಷವು ಅಷ್ಟೊಂದು ತೀಕ್ಷ್ಣವಾಗಿದ್ದದರಿಂದ ಬೆಳಗಾಗುವುದರೊಳಗಾಗಿ ಸತ್ತುಹೋದ ಆ ಜಂತುಗಳ ಮಾಂಸವು ಕರಗಿಹೋಗಿತ್ತು. ಅದೆಲ್ಲಾ ಹಸರುವರ್ಣವಾಗಿರತಕ್ಕ ದ್ರವದ ಹಾಗಿತ್ತು. ಆ ಜನರಲ್ಲಿ ಒಬ್ಬನು ಈ ವ್ಯಸನಕರವಾದ ವರ್ತಮಾನವನ್ನು ಆ ವೂರಿಗೆ ಕೊಂಡುಹೋಗಿ ತಿಳಿಸಿದನು. ಅದರ ಮೇಲೆ ಗ್ರಾಮವಾಸಿಗಳೆಲ್ಲಾ ಅಳುತಾ ದುಃಖಪಡುತಾ ಬಂದರು. ಅವರು ಹತೀಮನನ್ನು ಕಂಡು—ಹೇಳಯ್ಯಾ ವಿದೇಶಿ, ನೀನು ಜೀವಂತನಾಗಿ ಇಲ್ಲಿರುವ ಬಗೆ ಹೇಗೆ ? ಈ ಭಯಂಕರವಾದ ಕೇಡು ಹೇಗೆ ಸಂಭವಿಸಿತು ? ಎಂದು ಕೇಳಿದರು. ಅದಕ್ಕೆ ಹತೀಮನು—ಅಯ್ಯಾ ಮಿತ್ರರ, ಇಲ್ಲಿ ನಾನು ಮಹಾಭಯಂಕರವಾದ ಅಕೃತ್ಯಗಳನ್ನು ಕಂಡೆ. ಇಂಥಾದ್ದನ್ನು ನನ್ನ ಜನ್ಮ ಪ್ರಭೃತಿ ನಾನು ಕಂಡದ್ದೂ ಇಲ್ಲ ಕೇಳಿದ್ದೂ ಇಲ್ಲ. ಒಂದು ಏಳು ಬಂಣದ ಭೂತ ಹದ್ದಿನಗಾತ್ರ ಇರತಕ್ಕದ್ದು ಈ ಕೊಲೆಯನ್ನೆಲ್ಲಾ ಮಾಡಿತು. ತರುವಾಯ ಈ ಕಲ್ಲುಪೊಟ್ಟರೆಯೊಳಕ್ಕೆ ಹೋಗಿ ಹೊಕ್ಕಿಕೊಂಡಿತು. ಅದನ್ನು ಅಲ್ಲಿ ಈಗಲೂ ನೋಡಬಹುದು, ಎಂದನು.

ಆ ವೂರಜನರು ಆ ಕಲ್ಲಪೊಟರೆಯ ಸುತ್ತಿಕೊಂಡು ನೋಡುತಿರುವಾಗ ಆ ಭೂತ ಕಾಣಿಸಿತು. ಅದನ್ನು ನೋಡಿ ಅವರು—ನಿಜವಾಗಿಯೂ ಇಂಥಾ ವಿಪರೀತ ವಾದ ಭೂತವನ್ನು ನಾವು ಎಂದಿಗೂ ನೋಡಲಿಲ್ಲ, ಎಂದುಕೊಂಡರು. ಆಗ ಆ ಘೋರವಾದ ವೃಗವು ಆ ಪೊಟ್ಟರೆಯಿಂದ ಈಚೆಗೆ ಸರ್ರನೆ ಬಂದು ಆ ಗ್ರಾಮದ ಮುಖ್ಯಾಧಿಕಾರಿಯ ಮೇಲೆ ನುಗ್ಗಿ ಅದರ ವಿಷದ ಮೂತಿಯಿಂದ ಬಡಿಯಿತು. ಆಗಲೇ ಅವನು ಕೆಳಕ್ಕೆ ಬಿದ್ದು ಒದ್ದಾಡಿ ಪ್ರಾಣವನ್ನು ಬಿಟ್ಟನು. ಅವನ ಕಡೆ ಜನರೂ ಅವನ ಮಿತ್ರರೂ ಇದನ್ನು ನೋಡಿ ಅಳುತಾ ಅರಚಿಕೊಳ್ಳುತಾ ಇದ್ದರು. ಆ ಭೂತವು ಮೆಲ್ಲಗೆ ಕಾಡಿನಕಡೆಗೆ ಹಾರಿಹೋಯಿತು. ಮುಂದಕ್ಕೆ ಏನಾಗುವುದೋ ನೋಡೋಣವೆಂದು ಹತೀಮನು ಹಿಂದೆಯೇ ಹೋದನು. ಹೀಗೆ ಆ ದಿವಸವೆಲ್ಲಾ ಅದರ ಹಿಂದೆಯೇ ಸುತ್ತಿದನು. ಸಾಯಂಕಾಲದ ಸಮಯದಲ್ಲಿ ಆ ಭೂತವು ಒಂದು ದೊಡ್ಡ ಪಟ್ಟಣದ ಬಳಿಯಲ್ಲಿ ನಿಂತಿತು. ಸ್ವಲ್ಪ ದೂರದಲ್ಲಿ ನಿಂತು ಹತೀಮ ನೋಡುತಿದ್ದನು. ಹೇಳುವುದಕ್ಕೆ ಆಶ್ಚರ್ಯವಾಗುವುದು. ಆ ಭೂತವು ಭೂಮಿಗೆ ಸೋಕಿತೋ ಇಲ್ಲವೊ, ಅದು ಒಂದು ಕೃಷ್ಣಸರ್ಪವಾಯಿತು. ಹತೀಮನು ಆಶ್ಚರ್ಯ ದಿಂದ ಮುಂದೆ ಇನ್ನೂ ಏನು ವ್ಯತ್ಯಾಸವಾಗುವುದೋ ಎಂದು ಕಳವಳದಿಂದ ನಿಂತು ಕೊಂಡನು. ಆ ಕೃಷ್ಣಸರ್ಪವು ಒಂದು ಹುತ್ತದ ಕೋಟೆಯೊಳಕ್ಕೆ ಹೋಗಿ ಸುತ್ತಿ ಕೊಂಡು ಸಾಯಂಕಾಲದವರೆಗೂ ಇದ್ದು ರಾತ್ರೆ ಮೊದಲನೇ ಕಾವಲು ಮುಗಿಯು ವಾಗ ಹೊರಟು ನೆಟ್ಟಗೆ ಪಟ್ಟಣದೊಳಕ್ಕೆ ಹೋಯಿತು. ಹತೀಮನು ಬಿಡದೆ ಅಲ್ಲಿಗೂ ಅದರ ಹಿಂದೆಯೇ ಹೋದನು. ಕಡೆಗೆ ಆ ಹಾವು ಅರಮನೆ ಗೋಡೆಯ ಸಮೀಪಕ್ಕೆ ಬಂದು ಮಚ್ಚಿನ ಮೆಟ್ಟಿಲ ಮೇಲೆ ಹತ್ತಿತು. ಹತೀಮನು ಅದರ ಹಿಂದೆ ಹೋಗುವುದಕ್ಕೆ ಮುಂಚೆಯೇ—ಅದೇ ದಾರಿಯಲ್ಲಿ ಹಿಂದಕ್ಕೆ ಬಂದು ಇನ್ನೊಂದು ಮನೆಗೆ ಹೋಯಿತು. ಸ್ವಲ್ಪ ಹೊತ್ತಿನಲ್ಲಿ ಆ ಮನೆಯಿಂದಲೂ ಈಚೆಗೆ ಬಂದು ಊರನ್ನು ಬಿಟ್ಟು ತನ್ನ ಹುತ್ತದೊಳಕ್ಕೆ ಹೋಯಿತು. ಹತೀಮನು ತನ್ನ ಮನಸ್ಸಿನಲ್ಲಿ ರಾತ್ರೆ ಯಾರನ್ನು ಬಲಿ ತೆಗೆದುಕೊಂಡಿತೋ ಎಂದು ಬೆರಗಾದನು. ಬೆಳಗಾದ ಮೇಲೆ ನಿಜಸ್ಥಿತಿ ಗೊತ್ತಾಯಿತು. ಜನರ ದುಃಖದಿಂದಲೂ ಗೋಳಿನಿಂದಲೂ ಆ ವೂರ ದೊರೆಮಗನೂ ಮಂತ್ರಿಯ ಮಗನೂ ಹಾವು ಕಡಿದು ಸತ್ತುಹೋದರೆಂದೂ ಅವರನ್ನು ಚಟ್ಟದ ಮೇಲೆ ಮಲಗಿಸಿ ಅವರನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗುತಾರೆಂದೂ ಕೂಡಲೆ ತಿಳಿಯಿತು.

ಬೆಳಗಾದ ಮೇಲೆ ಆ ಕೃಷ್ಣಸರ್ಪವು ಹುತ್ತವನ್ನು ಬಿಟ್ಟು ಇನ್ನೊಂದು ದಿಕ್ಕಿಗೆ ಹೋಯಿತು. ಹತೀಮನು ಉದ್ದಕ್ಕೂ ಅದರ ಹಿಂದೆಯೇ ಹೋಗುತಾ ಸಾಯಂಕಾಲದ ವರೆಗೂ ಅದರ ಬೆನ್ನು ಬಿಡಲಿಲ್ಲ. ಸಾಯಂಕಾಲದ ಸಮಯಕ್ಕೆ ಹಾವು ಒಂದು ನದೀ ತೀರಕ್ಕೆ ಬಂತು. ಅಲ್ಲಿ ಕೂಡಲೆ ಒಂದು ಸಿಂಹದ ರೂಪವನ್ನು ತಾಳಿತು. ಸಮೀಪದಲ್ಲಿ ಒಂದು ಗ್ರಾಮ ಸಿಕ್ಕಿತು. ಆ ಗ್ರಾಮವಾಸಿಗಳು ಹತ್ತು ಹನ್ನೆರಡು ಜನರು ಒಬ್ಬರ

ಹಿಂದೆ ಒಬ್ಬರು ನದಿಯಿಂದ ನೀರ ತರುವುದಕ್ಕೆ ಹೋಗುತಾ ಇದ್ದರು. ಅವರಲ್ಲಿ ಹದಿನಾರು ವರುಷದ ಲಕ್ಷಣವಾದ ಒಬ್ಬ ಹುಡುಗ ಇದ್ದನು. ಆ ವೂರಲೆಲ್ಲಾ ಆಯಪಾಣಿಯಾಗಿದ್ದ ಈ ಹುಡುಗನನ್ನು ಆ ಸಿಂಹ ಹಿಡಿದುಕೊಂಡು ತುಂಡುತುಂಡು ಮಾಡಿ ಪುನಃ ಕಾಡಿಗೆ ಓಡಿಹೋಯಿತು. ಅಲ್ಲಿ ಅದು ಹದಿನಾರು ವರುಷದ ಸುಂದರಿಯಾದ ಹುಡುಗಿಯಾಯಿತು. ಹಶೀಮನು ಆ ಹುಡುಗಿಯನ್ನು ನೋಡಿ ತನ್ನ ಮನದಲ್ಲಿ — ದೇವರೇ ಕಾಪಾಡಬೇಕು. ಮುಂದೆ ಇನ್ನೇನಾಗುವುದೊ ಚೋಜಿಗವಾಗಿದೆ, ಎಂದುಕೊಂಡನು.

ಆಗ ಆ ಹುಡುಗಿಯು ಒಳ್ಳೇ ಉಡುಪನ್ನು ಹಾಕಿಕೊಂಡು ಭಾರಿಯಾದ ಒಡವೆಗಳನ್ನಿಟ್ಟು ಸೌಂದರ್ಯದಲ್ಲಿ ಪೂರ್ಣಚಂದ್ರನನ್ನು ಹೋಲುತಾ ಆ ದಾರಿಯ ಪಕ್ಕದಲ್ಲಿದ್ದ ಒಂದು ಮರದ ಕೆಳಗೆ ಕೂತುಕೊಂಡಳು. ಈ ಮಧ್ಯೆ ಚೀಣಾದೇಶಸ್ಥರಾಗಿ ಸಿಪಾಯಿಗಳಾಗಿದ್ದ ಇಬ್ಬರು ಸಹೋದರರು ತಾವು ಒಪ್ಪಿಕೊಂಡಿದ್ದ ಗಡಬದ ಪ್ರಕಾರ ಚಾಕರಿಮಾಡಿ ಹಣವನ್ನು ಹೊತ್ತುಕೊಂಡು ತಮ್ಮ ಊರಿಗೆ ಹೋಗುತಾ ಆ ದಾರಿಯಲ್ಲಿ ಬರುವಾಗ ಆ ಕನ್ನೆಯು ಅವರನ್ನು ಕಂಡು ಅತ್ಯಂತ ಕನಿಕರ ಹುಟ್ಟುವ ಹಾಗೆ ಅಳುವುದಕ್ಕೆ ಆರಂಭಿಸಿದಳು. ಈ ಅಳುವ ಸದ್ದು ಅವರಿಗೆ ಕೇಳಿಸಿ, ಅವರಲ್ಲಿ ಅಂಣನಾದವನು ಆ ಮರದ ಬಳಿಗೆ ಬಂದು ಅತ್ಯಂತ ಸುಂದರಿಯಾದ ಹೆಂಗಸು ವಿಪರೀತವಾದ ಶೋಕದಿಂದ ಮಗ್ನಳಾಗಿರುವುದನ್ನು ಕಂಡು, ಆಶ್ಚರ್ಯದಿಂದ.

ಸಿಪಾಯಿ—ಪೆಣ್ಮಣಿಯೆ, ನಿನಗೆ ಏನು ವಿಪತ್ತು ಸಂಭವಿಸಿದೆ, ನಿರ್ಮಾನುಷ್ಯ ಪ್ರದೇಶದಲ್ಲಿ ಹೀಗೆ ದುಃಖಪಡುತಾ ಕೂತಿದ್ದೀಯಲ್ಲಾ ?

ಹೆಂಗಸು—ನಾನು ಒಬ್ಬ ಹಳ್ಳಿ ನಾಡವನ ಹೆಂಡತಿ. ಕೆಲವು ದಿವಸಕ್ಕೆ ಮುಂಚೆ ನಮ್ಮ ತೌರುಮನೆಗೆ ನೋಡಿಕೊಂಡು ಬರಲು ಹೋಗಿದ್ದೆ. ನನ್ನ ಗಂಡನೊಡನೆ ಹಿಂದಕ್ಕೆ ಬರುವಾಗ ಈ ಕಾಡಿನಲ್ಲಿ ದಾರಿ ತಪ್ಪಿಹೋಯಿತು. ಆಗನಿಂದ ಇಲ್ಲಿ ಸುತ್ತುತಾ ಇದೇನೆ. ನಮ್ಮ ತೌರುಮನೆ ದಾರಿಯೂ ಸಿಕ್ಕಲಿಲ್ಲ. ನನ್ನ ಗಂಡನನ್ನು ಹುಡುಕಿಕೊಂಡಾಗಲಿ ನಮ್ಮ ಮನೆಯನ್ನು ಹುಡುಕಿಕೊಂಡಾಗಲೀ ಯಾವ ದಿಕ್ಕಿಗೆ ಹೋಗಬೇಕೋ ಗೊತ್ತಿಲ್ಲ. ನನ್ನ ಗಂಡ ಎತ್ತ ಹೋದನೋ ದೇವರಿಗೇ ತಿಳಿಯಬೇಕು. ಈಗ ನನ್ನ ಗತಿಯೇನಾಗಬೇಕು. ನಾನು ಹೇಗೆ ಜೀವಿಸಬೇಕು ? ಎಂದು ಹೇಳಿಕೊಂಡಳು. ಧೈರ್ಯಶಾಲಿಯಾದ ಆ ಸಿಪಾಯಿಯು ವ್ಯಥೆಕರವಾದ ಈ ಸಂಗತಿಯನ್ನು ಕೇಳಿ ಆ ತರುಣಿಯನ್ನು ಕುರಿತು

ಸಿಪಾಯಿ—ನಾನು ನಿನಗೆ ಗಂಡನಾಗುತೇನೆಂದರೆ ನೀನು ಅಂಗೀಕಾರ ಮಾಡುತೀಯ ?

ಹೆಂಗಸು—ನನ್ನ ಮೂರು ಮಾತಿಗೆ ನೀನು ಒಪ್ಪುವುದಾದರೆ ನಾನು ಈ ಕ್ಷಣ ನಿನಗೆ ಹೆಂಡತಿಯಾಗುತೇನೆ.

1. ನಾನು ಹೊರತು ಇನ್ನು ಯಾರೂ ನಿನಗೆ ಹೆಂಡತಿಯಾಗಿರಕೂಡದು.

2. ಮನೆಯ ಕೆಲಸ ಯಾವುದನ್ನೂ ನಾನು ಮಾಡದ ಹಾಗಿರಬೇಕು.

3. ನಾನು ನನ್ನ ಮನಸ್ಸಿಗೆ ಬಂದ ಹಾಗೆ ಏನು ಮಾಡಿದರೂ ನೀನು ನನ್ನನ್ನು ಅಂಕೆ ಮಾಡಕೂಡದು.

ಆ ಸಿಪಾಯಿಯು ಇದೆಲ್ಲಕ್ಕೂ ಒಪ್ಪಿಕೊಂಡು ಹೇಳಿದ್ದೇನೆಂದರೆ

ಸಿಪಾಯಿ—ನನಗೆ ಇನ್ನೂ ಮದುವೆ ಇಲ್ಲ. ನಿನ್ನ ಮೂರು ಮಾತಿಗೂ ಒಪ್ಪಿಕೊಳ್ಳು ತೇನೆಂದು ನಾನು ಪ್ರಮಾಣವಾಗಿ ವಾಗ್ದಾನ ಮಾಡುತೇನೆ. ನಾನು ಜೀವಂತ ನಾಗಿರುವಾಗ ನಿನ್ನ ಹೊರತು ನಾನು ಇನ್ನು ಯಾರನ್ನೂ ಹೆಂಡತಿಯಾಗಿ ಮಾಡಿಕೊಳ್ಳುವುದಿಲ್ಲ. ನನ್ನ ಮನೆಯಲ್ಲಿ ಗುಲಾಮರೂ ಗುಲಾಮಗಿತ್ತೀರೂ ವಿಶೇಷವಾಗಿದಾರೆ. ಆದಕಾರಣ ಮನೆಕೆಲಸದ ವಿಷಯದಲ್ಲಿ ನಿನಗೆ ಯಾವ ತೊಂದರೆಯೂ ಇಲ್ಲ. ಆದರೆ ನಿನಗೆ ಬೇಕಾದ್ದರ ವಿಷಯದಲ್ಲಿ ನೀನೇ ಅಪ್ಪಣೆ ಮಾಡಬೇಕು. ನೀನು (ಹಾಕಿರುವ) ಕೊನೇ ಮಾತು ಅನಾವಶ್ಯಕವಾದ್ದು. ಒಬ್ಬ ಪುರುಷನಿಗೆ ಯಾರ ಮೇಲೆ ಪ್ರೀತಿ ಇರುವುದೋ ಅಂಥವರ ಸಂಗಡ ಕಠಿಣವಾದ ಮಾತುಗಳನ್ನಾಡುವುದು ಸಾಧ್ಯವೆ ?

ಹೆಂಗಸು—ಬೇಕಾದಷ್ಟು ಹೇಳಿದ್ದೀಯೆ. ನಾನು ನಿನ್ನನ್ನು ಪತಿಯಾಗಿ ಅಂಗೀಕಾರ ಮಾಡುತೇನೆ.

ಈ ಪ್ರಕಾರ ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡರು. ತರುವಾಯ ಆ ಸಿಪಾಯಿಯು ಕುದುರೆಯನ್ನು ಹತ್ತಿಕೊಂಡು ತನ್ನ ಹೊಸ ಹೆಂಡತಿಯನ್ನು ಹಿಂದುಗಡೆ ಕೂರಿಸಿಕೊಂಡು ಹೊರಟನು. ಆದರೂ ಹತೀಮನು (ಬಿಡದೆ) ಈ ವಿಚಿತ್ರವಾದ ಸಂಗತಿಗಳ ಕೊನೆ ಏನು ಎಂದು ನೋಡುವುದಕ್ಕಾಗಿ ಅವರ ಹಿಂದೆಯೇ ಹೋದನು. ಸ್ವಲ್ಪದೂರ ಹೋದಮೇಲೆ

ಹೆಂಗಸು—ಪತಿಯೆ, ನಾನು ಹಸಿವು ಬಾಯಾರಿಕೆಯಿಂದ ಬಹಳ ಬಳಲಿದೇನೆ. ಕಳೆದ ಮೂರು ದಿವಸದಿಂದ ನಾನು ಉಪವಾಸ ಇದೇನೆ. ತಿನ್ನುವುದಕ್ಕೆ ನಿಮ್ಮಲ್ಲೇನೂ ಇಲ್ಲದಿದ್ದರೆ, ಕೊನೆಗೆ ಕುಡಿಯಲು ನೀರನ್ನಾದರೂ ಕೊಡಿ.

ಆ ಸಿಪಾಯಿಯು ಕೂಡಲೆ ಕುದುರೆಯನ್ನಿಳಿದು, ಆ ಹೆಂಗಸನ್ನು ಇಳಿಸಿ ಒಂದು ಮರದ ನೆರಳಲ್ಲಿ ಕೂರಿಸಿ ಒಂದು ಪಾತ್ರೆಯನ್ನು ತೆಗೆದುಕೊಂಡು ನೀರಿಗಾಗಿ ಹುಡುಕುತಾ ಹೋದನು.

ಆ ಹೆಂಗಸು ತನ್ನ ಗಂಡ ದೂರವಾಗಿ ಹೋಗುವುದನ್ನ ನೋಡಿಕೊಂಡಿದ್ದು ತರುವಾಯ ಅವನ ತಮ್ಮನನ್ನು ಕುರಿತು—ಸುಂದರನೆ, ನಿನ್ನ ಮೇಲಿನ ಪ್ರೀತಿಯಿಂದ ನಿಮ್ಮಂಣನ ಸಂಗಡ ನಾನು ಬಂದೆ. ನಿನ್ನನ್ನು ನೋಡಿದಾಗಿನಿಂದ ನನ್ನ ಮನಸು, ನನ್ನ ವಶ ತಪ್ಪಿಹೋಯಿತು. ಇದೇ ಸಮಯ ನನ್ನನ್ನು ನಿನ್ನವಳನ್ನಾಗಿಮಾಡಿಕೊ ಎಂದಳು. ಆ ಚಿಕ್ಕವನಾದ ಸಿಪಾಯಿಯು—ನೀನು ನಮ್ಮಂಣನ ಹೆಂಡತಿಯಲ್ಲವೆ.

ನೀನು ನನಗೆ ತಾಯಿ, ಸಹೋದರಿಯರು ಹೇಗೋ ಹಾಗೆ. ಆದ್ದರಿಂದ ನೀನು ಹೇಳುವ ಮಾತು ಎಷ್ಟು ಅಕ್ರಮವಾದ್ದು ? ಖಂಡಿತವಾಗಿ ತಿಳಿದುಕೋ, ಇದಕ್ಕೆ ನಾನು ಎಂದಿಗೂ ಒಪ್ಪಲಾರೆ, ಎಂದು ಧಿಕ್ಕರಿಸಿದನು. ಈ ಮಾತಿಗೆ ಆ ಸ್ತ್ರೀಯು-ನಾನು ನಿಮ್ಮಂಣನಿಗೆ ನಿಜವಾದ ಪತ್ನಿಯಾಗಿದ್ದರೆ ನೀನು ಹೇಳುವಮಾತು ನಿಜವೇ ಸರಿ. ಹಾಗಿದ್ದರೆ ನಿನ್ನ ಪ್ರೀತಿಗೆ ನಾನು ಪಾತ್ರಗಳಾಗತಕ್ಕದ್ದು ತಪ್ಪು, ಎಂದಳು. ಆ ಸಿಪಾಯಿಯು ಅವಳ ಮಾತನ್ನು ನಿಲ್ಲಿಸಿ, ಅಕ್ಕಯ್ಯಾ, ಇಂಥಾ ಅಯೋಗ್ಯವಾದ ಕೃತ್ಯವನ್ನು ನನ್ನಿಂದ ಅಪೇಕ್ಷಿಸಬೇಡ. ಇಂಥಾ ಅನುಚಿತವಾದ ಅಭಿಪ್ರಾಯವನ್ನು ನಿನ್ನ ಮನಸ್ಸಿಂದ ದೂರಮಾಡು, ಎಂದು ಹೇಳಿದನು.

ಆ ಹೆಂಗಸು ಆಶಾಭಂಗವಾಗಿ—ಒಳ್ಳೆಯದು, ನೀನು ಒಪ್ಪದಿದ್ದರೆ, ಈ ಮತ್ಸರ ವನ್ನು ತೀರಿಸಿಕೊಳ್ಳುತೇನೆ. ನಿಮ್ಮಂಣ ಬಂದೊಡನೆಯೇ ನೀನು ನನ್ನಮೇಲೆ ಅಕ್ರಮವಾದ ನಡತೆಯನ್ನು ನಡಿಸಲು ಪ್ರಯತ್ನಮಾಡಿದೆ ಎಂದು ಹೇಳುತೇನೆ, ಎಂಬುದಾಗಿ ನುಡಿದಳು. ಅದಕ್ಕೆ ಆ ಸಿಪಾಯಿಯು—ನೀನು ಬೇಕಾದ್ದು ಹೇಳು, ನನಗೆ ಏನು ಕೊಟ್ಟರೂ ನೀನು ಹೇಳುವ ಪ್ರಕಾರ ಒಡಂಬಡಲಾರೆ, ಎಂಬದಾಗಿ ಖಂಡಿತವಾಗಿ ಹೇಳಿದನು. ಈ ಮಾತೆಲ್ಲಾ ಜರಗುವಾಗ ಹತೀಮನು ಸಮೀಪ ದಲ್ಲಿಯೇ ಅವಿತುಕೊಂಡಿದ್ದು ಸುಮ್ಮನೆ ಎಲ್ಲವನ್ನೂ ನೋಡುತಲೇ ಇದ್ದನು. ಈ ಮಧ್ಯೆ ಅಂಣನು ಒಂದು ಮಡಕೆ ತುಂಬ ನೀರನ್ನು ತೆಗೆದುಕೊಂಡು ಬಂದನು. ಆ ಹೆಂಗಸು ಅವನನ್ನು ನೋಡಿದ ಕ್ಷಣದಲ್ಲಿಯೇ ತನ್ನ ತಲೇ ಕೂದಲನ್ನು ಕಿತ್ತುಕೊಂಡು ಉಗುರಿನಿಂದ ತನ್ನ ಮುಖವನ್ನೆಲ್ಲಾ ಪರಚಿಕೊಂಡು ತಲೆಯಮೇಲೆ ಮಂಣನ್ನು ಹಾಕಿಕೊಂಡು ಅತ್ಯಂತ ಕನಿಕರ ಉಂಟಾಗುವ ಹಾಗೆ ಅಳುವುದಕ್ಕೆ ಆರಂಭಿಸಿದಳು. ಅವಳ ಗಂಡನು ಅವಳ ಅಳುವನ್ನು ಕೇಳಿ ಅವಳ ಸಹಾಯಕ್ಕಾಗಿ ಓಡಿಬಂದು—ಯಾಕೆ ಪ್ರಿಯಳೆ ಅಳುತೀಯೆ ? ನಿನ್ನ ತಲೆಯಮೇಲೆ ಯಾವ ಕಾರಣಕ್ಕಾಗಿ ಮಂಣನ್ನು ಹಾಕಿಕೊಂಡಿದ್ದೀಯೆ ? ನಿನ್ನನ್ನು ಯಾರಾದರೂ ಬಲವಂತಮಾಡಲು ಧೈರ್ಯ ಮಾಡಿದರೆ ? ಎಂದು ಕೇಳಿದನು. ಇದಕ್ಕೆ ಆ ಸ್ತ್ರೀಯು—ಪತಿಯೆ, ನಿನ್ನನ್ನೂ ನಿನ್ನ ತಮ್ಮನನ್ನೂ ಇಬ್ಬರನ್ನೂ ದೇವರು ಕಾಪಾಡಲಿ. ನಿನ್ನ ತಮ್ಮನಂಥಾ ಪಟಿಂಗನ ಬಳಿಯಲ್ಲಿ ಯಾವ ಮನುಷ್ಯನಾದರೂ ತನ್ನ ಹೆಂಡತಿಯನ್ನು ಬಿಟ್ಟುಹೋದನೆಂದು ಯಾವಾಗಲಾದರೂ ತಿಳಿಯಬಂದಿದೆಯೇ ? ಈ ದಿವಸ ನೀರನ್ನು ತರುವುದಕ್ಕೆ ನೀನು ಹೊರಟುಹೋದಾಗ ನನ್ನ ಪಾತಿವ್ರತ್ಯ ಕಾಪಾಡತಕ್ಕದ್ದನ್ನು ನಾನು ದೇವರಿಗೇ ಬಿಟ್ಟಿದ್ದೆ. ಈ ನೀಚ ಮನುಷ್ಯನು ಅಪಮಾನಕ್ಕೂ ನಾಶಕ್ಕೂ ನಾನು ಸಿಕ್ಕಿಕೊಳ್ಳುವ ಹಾಗೆ ಯತ್ನಿಸಿದನು. ಅವನು ನನ್ನ ಕೈಯನ್ನು ಹಿಡಿದು ನನ್ನ ಮೇಲೆ ದುರಾಗತ ನಡಿಸಲು ಪ್ರಯತ್ನಿಸಿದನು. ನನ್ನ ಕೈಲಾದಮಟ್ಟಿಗೆ ನಾನು ಎದುರಿಸಿದೆ. ನನಗೆ ಸಹಾಯ ಮಾಡತಕ್ಕವರು ಯಾರೂ ಇಲ್ಲವೆ ಎಂದು ನಾನು ಕೂಗಿಕೊಂಡಾಗ್ಯೂ, ನನ್ನ ಸಹಾಯಕ್ಕೆ ಬರಲು ಯಾರೂ ಇರಲಿಲ್ಲ. ನಿನಗಿಂತಲೂ ತಾನು ನನಗೆ

ಯೋಗ್ಯನಾದ ಗಂಡನಾಗುತ್ತೇನೆ ಎಂದು ಹೇಳುವಷ್ಟು ದುಡುಕನ್ನು (ತೋರಿಸಿದ), ಮತ್ತು ತನಗೆ ಹದಿನಾಲ್ಕುವರುಷವೆಂತಲೂ ತಾನು ಇನ್ನೂ ಪ್ರಾಯದವನೆಂತಲೂ, ನೀನು ಮುದುಕನಾಗಿ ದುರ್ಬಲನಾಗಿದ್ದೀಯೆ ಎಂತಲೂ ಹೇಳಿದನು. ಮತ್ತು ತನಗೆ ನನ್ನ ಮೇಲಿರುವ ಪ್ರೀತಿಗೋಸ್ಕರ ನಿನ್ನನ್ನು ತಾನು ಮೊದಲು ಕಂಡಕೂಡಲೆ ಕೊಂದು ಹಾಕಿಬಿಡುತ್ತೇನೆ ಎಂದನು. ನೀನು ಸಮೀಪಕ್ಕೆ ಬರುವುದನ್ನು ಕಂಡು ನನ್ನನ್ನು ಒಂದು ಪಕ್ಕಕ್ಕೆ ಎಳೆದುಕೊಂಡು ಹೋಗುತ್ತಿದ್ದನು. ನೀನು ಬರುವುದನ್ನು ಕಂಡು ನನ್ನ ಕೈಬಿಟ್ಟು, ಈಗ ನೀನು ಕಾಣುವ ಹಾಗೆ ಹತ್ತಿರ ನಿಂತಿದ್ದಾನೆ, ಎಂಬದಾಗಿ ಅನ್ಯಾಯವನ್ನು ನುಡಿದಳು.

ಅಣ್ಣನು ಈ ಮಾತನ್ನು ಕೇಳಿ ಅತಿಯಾಗಿ ಆಗ್ರಹಗೊಂಡು—ಮನುಷ್ಯನು ಯಾವಾಗಲಾದರೂ ತಾಯಿಯ ಮೇಲಾಗಲಿ ಸಹೋದರಿಯರ ಮೇಲಾಗಲಿ ನೀನು ತೋರಿಸಿದ ನಡತೆಯನ್ನು ಯಾವಾಗಲಾದರೂ ತೋರಿಸಿದ್ದಾರೆಯೆ ? ಎಂದನು. ಆಗ ತಮ್ಮನು ತಾನು ನಿರಪರಾಧಿ ಎಂದು ಎಷ್ಟು ಪ್ರಮಾಣ ಮಾಡಿದಾಗ್ಯೂ ಅವನ ಮಾತನ್ನು ನಂಬದೆ ಅಣ್ಣನು (ಕರ್ಣ ಕಠೋರವಾದ) ಬೈಗಳನ್ನು ಬೈದು ತನ್ನ ಕತ್ತಿಯನ್ನು ಒರೆಯಿಂದ ಹಿರಿದುಕೊಂಡು ತಮ್ಮನನ್ನು ಹೊಡೆದನು. ಆಗ ತಮ್ಮನು ಆತ್ಮ ಸಂರಕ್ಷಣಾರ್ಥವಾಗಿ ತನ್ನ ಕತ್ತಿಯನ್ನು ಹಿಡಿದುಕೊಳ್ಳಬೇಕಾಯಿತು. ಅವರಿಬ್ಬರಿಗೂ ಜಗಳ ಹತ್ತಿ ಇಬ್ಬರೂ ಅದೇ ಸ್ಥಳದಲ್ಲಿ ಸತ್ತುಬಿದ್ದು ದೇವರಿಗೋಸ್ಕರ ತಮ್ಮ ಪ್ರಾಣವನ್ನು ಒಪ್ಪಿಸಿದರು. ಆ ಪಿಶಾಚಿಸ್ವರೂಪಳಾದ ಹೆಂಗಸು ಹೀಗೇ (ಅವರನ್ನು ನಾಶಮಾಡಿ) ಹತ್ತಿರಿದ್ದ ಹಳ್ಳಿಗೆ ಹೋದಳು. ಆದಾಗ್ಯೂ ಹತೀಮನು ಹಿಂದೆಯೇ ಹೋಗುತ್ತಾ, ಮುಂದೆ ಇನ್ನೂ ಯಾರು ಈ ಪರಮ ನೀಚತನಕ್ಕೆ ಬಲಿಯಾಗುತ್ತಾರೋ ನೋಡಬೇಕೆಂದು ಆಶ್ಚರ್ಯಪಡುತ್ತಿದ್ದನು. ಆ ಊರಿಗೆ ಬಂದ ಮೇಲೆ ಆ ಹೆಂಗಸಿಗೆ ಎಮ್ಮೆಯ ಜನ್ಮ ಬಂತು. ಜನರು ಅದನ್ನು ಹಿಡಿಯಬೇಕೆಂದು ಹೋಗಲು ಆ ಎಮ್ಮೆಯು ತನ್ನ ಗೊರಸಿನಿಂದಲೂ ಕೊಂಬಿನಿಂದಲೂ ಅನೇಕರನ್ನು ಕೊಂದುಹಾಕಿ ಕಾಡಿಗೆ ಓಡಿಹೋಯಿತು.

ಹತೀಮನು ಆಶ್ಚರ್ಯಭರಿತನಾಗಿ ಈ ಗೂಢವಾದ ವ್ಯಕ್ತಿಯ ಹಿಂದೆಯೇ ಹೋಗುತ್ತಾ ಮರಳಕಾಡಿಗೆ ಬರಲು (ಆ ವ್ಯಕ್ತಿಯು ಎಮ್ಮೆಯ ರೂಪುಹೋಗಿ) ಗಡ್ಡವೆಲ್ಲಾ ಬೆಳ್ಳಗಾಗಿರುವ ಹಣ್ಣುಹಣ್ಣು ಮುದುಕನ ರೂಪವನ್ನು ತಾಳಿತು. ಈ ಕೊನೇ ರೂಪಾಂತರವನ್ನು ನೋಡಿ ಹತೀಮನು ಆ ಮುದುಕನನ್ನು ಮಾತನಾಡಿಸ ಬೇಕೆಂದು ನಿಷ್ಕರ್ಷೆ ಮಾಡಿಕೊಂಡು, ಅಂಥಾ ನೀಚಕೃತ್ಯಗಳಿಗೂ ದೈವ ನಿರ್ಮಾಣದ ಪ್ರಾಣಿಗಳಿಗೆ ನಾಶವನ್ನುಂಟುಮಾಡಿ ಸಂತೋಷಪಡುವುದಕ್ಕೂ ರಹಸ್ಯವಾದ ಕಾರಣ ವೇನೆಂದು ವಿಚಾರಿಸಬೇಕೆಂದು ನಿಷ್ಕರ್ಷೆ ಮಾಡಿಕೊಂಡನು. ಅದರಂತೆ ಹತೀಮನು ಜಾಗ್ರತೆಯಾಗಿ (ಆ ಮುದುಕನ ಬಳಿಗೆ) ಬಂದು ಪಕ್ಕದಲ್ಲಿ ನಿಂತುಕೊಂಡನು. ಆಗ ಆ ವೃದ್ಧನು ಹೇಳಿದ್ದೇನೆಂದರೆ:

ವೃದ್ಧ—ಹತೀಮು, ನೀನು ಏನ ಹೇಳಬೇಕೋ ಹೇಳು.
ಹತೀಮು—ವೃದ್ಧರೆ, ನನ್ನ ಹೆಸರು ತಮಗೆ ಹೇಗೆ ತಿಳಿಯಿತು?
ವೃದ್ಧ—ಅಷ್ಟೇ ಅಲ್ಲ. ನಿಮ್ಮ ಕುಲದಲ್ಲಿ ಪ್ರತಿಯೊಬ್ಬ ಮನುಷ್ಯನ ಹೆಸರನ್ನೂ ನಾನು ಬಲ್ಲೆ. ಈಗ ನೀನು ನನ್ನನ್ನು ಏನಾದರೂ ಕೇಳತಕ್ಕದ್ದಿದ್ದರೆ ಜಾಗ್ರತೆ ಮಾಡು. ನನಗೆ ಬಹಳ ಕೆಲಸವಿದೆ. ನನ್ನ ಕಾಲಕ್ಕೆ ವಿಶೇಷವಾದ ಬೆಲೆಯುಂಟು.

ಹತೀಮನು ಹೆಚ್ಚಾಗಿ ಸಾವಕಾಶಮಾಡದೆ ಅವನೊಡನೆ ಹೇಳಿದ್ದೇನೆಂದರೆ:– ಗೂಢವಾದ ವ್ಯಕ್ತಿಯೆ, ಮೊದಲು ನಿನ್ನನ್ನು ಭೂತದರೂಪಿನಲ್ಲಿ ಕಂಡೆ. ಆಗ ನೀನು ಒಂದು ವೂರಿಗೆ ವೂರನ್ನೇ ದುಃಖದಿಂದ ತುಂಬಿಬಿಟ್ಟೆ. ತರುವಾಯ ನೀನು ಕರೀಹಾವಾದೆ. ಆಗ ನೀನು ಒಬ್ಬ ದೊರೆಮಗನನ್ನೂ ಒಬ್ಬ ಮಂತ್ರಿಮಗನನ್ನೂ ಮಂಣಮಾಡಿಸಿದೆ. ತರುವಾಯ ಸಿಂಹವಾದೆ. ಬಹು ಲಕ್ಷಣವಾಗಿ ಬೆಳೆದಿದ್ದ ಒಬ್ಬ ತರುಣನನ್ನು ತುಂಡುತುಂಡುಮಾಡಿದೆ. ಆಮೇಲೆ ನೀನು ಹದಿನಾಲ್ಕು ವರುಷದ ಸುಂದರಿಯಾದೆ, ನಿನ್ನ ದ್ರೋಹದಿಂದ ಇಬ್ಬರು ಸಹೋದರರ ಪ್ರಾಣವನ್ನು ತೆಗೆಯಿಸಿದೆ. ಅನಂತರ ಎಮ್ಮೆಯಾದೆ, ಗ್ರಾಮದ ಜನರನ್ನು ಕೊಂದೆ, ಈಗ ಒಬ್ಬ ಮುದುಕನಾಗಿದ್ದೀಯೆ, ಈಗ ದೇವರ ಮುಂದೆ ಹೇಳಿದ ಹಾಗೆ ಹೇಳು. ನೀನು ಯಾರು ಎಲ್ಲಿಗೆ ಹೋಗುತೀಯೆ? ಎಂದು ಕೇಳಿದನು. ಅದಕ್ಕೆ ಆ ಮುದುಕನು ಅಹಂಕಾರಯುಕ್ತವಾದ ಮುಗುಳುನಗುವಿನಿಂದ ಹೇಳಿದ್ದೇನೆಂದರೆ: "ಇದಕ್ಕೂ ನಿನಗೂ ಏನು ಸಂಬಂಧ? ನಿನ್ನ ಕೆಲಸವನ್ನು ನೀನು ನೋಡು. ಒಂದು ರೂಪದಲ್ಲಿ ಅಲ್ಲದಿದ್ದರೆ ಮತ್ತೊಂದು ರೂಪದಲ್ಲಿ ನಿನ್ನನ್ನು ನಾನು ಬಂದು ನೋಡುತೇನೆ. ಅದರಿಂದ ನಿನಗೆ ಮರಣ ಸಂಭವಿಸುವುದೇ ಅದರ ಫಲ".

ಆ ಕಾಲದಲ್ಲಿ ಹತೀಮನು—ಈ ಗೂಢವಾಗಿರುವ ವಿಷಯವನ್ನು ನೀನು ಸ್ಪಷ್ಟಮಾಡುವವರೆಗೆ ನಿನ್ನ ಸೆರಗನ್ನು ನಾನು ಬಿಡುವುದಿಲ್ಲ, ಎಂದನು. ಆ ಮಾತಿಗೆ ಆ ಮುದುಕನು–ಹಾಗಾದರೆ ನಾನು ಮರಣಕ್ಕೆ ಅಧಿದೇವತೆ ಎಂದು ತಿಳಿ. ಭೂತದ ಆಕೃತಿಯಲ್ಲಿ ಮೊದಲ ದಿವಸ ನೀನು ನನ್ನನ್ನು ನೋಡಿದೆಯಷ್ಟೇ; ನಾನು ಬಲಿಯಾಗಿ ತೆಗೆದುಕೊಂಡ ಜನರೂ ಪ್ರಾಣಿಗಳೂ ಆ ಮೂಲಕವಾಗಿ ಮರಣವನ್ನು ಹೊಂದಬೇಕೆಂದು ದೇವರ ನಿಯಾಮಕವಿತ್ತು. ರಾಜಕುಮಾರನೂ ಮಂತ್ರಿಪುತ್ರನೂ ಸರ್ಪದಂಷ್ಟವಾಗಿ ಮರಣ ಹೊಂದಬೇಕೆಂದು ಮೊದಲೆ ವಿಧಿಯಾಗಿತ್ತು; ಅದರ ಪ್ರಕಾರ ನಾನು ಸರ್ಪದ ರೂಪವನ್ನು ತಾಳಿದೆ. ನಾನು ಸಿಂಹವಾಗಿ ಲಕ್ಷಣವಾಗಿದ್ದ ಯೌವನಸ್ಥನನ್ನು ಕೊಂದೆ; ಅವನ ಅದೃಷ್ಟ ಹಾಗಿತ್ತು. ಆ ಇಬ್ಬರು ಸಹೋದರರ ವಿಚಾರದಲ್ಲಿ, ಅವರು ತಮ್ಮ ದೇಶವನ್ನು ಬಿಟ್ಟು ಪರದೇಶದಲ್ಲಿ ಚಾಕರಿಮಾಡಿ ಹಣವನ್ನು ಸಂಪಾದಿಸಿ ತಮ್ಮ ದೇಶಕ್ಕೆ ಹೊರಡಬೇಕೆಂತಲೂ, ಅವರು ಒಬ್ಬ ಹೆಂಗಸಿನ ಸಂಬಂಧದಲ್ಲಿ ಒಬ್ಬರನ್ನು ಒಬ್ಬರು ಕೊಲ್ಲಬೇಕೆಂತಲೂ ಮೊದಲೇ ವಿಧಾಯಕ

ವಾಗಿತ್ತು ; ಆದ್ದರಿಂದ ದೈವನಿಯಾಮಕದಂತೆ ನಡಿಸಲು ನಾನು ಒಬ್ಬ ಹೆಂಗಸಿನ ರೂಪನ್ನು ತಾಳಿದೆ. ನೀನು ಕೊನೆಯಲ್ಲಿ ನನ್ನನ್ನು ಕಂಡ ವೂರಿನಲ್ಲಿ ಒಂದು ಯಮ್ಮೆಯಿಂದ ಜನರು ಕೊಲ್ಲಲ್ಪಡಬೇಕೆಂದು ನಿಯಾಮಕವಾಗಿತ್ತು ; ಅದಕ್ಕೋಸ್ಕರ ನಾನು ಎಮ್ಮೆಯಾದೆ. ಹತೀಮ, ನೀನು ಖಂಡಿತವಾಗಿ ತಿಳಿದುಕೊ, ಮತ್ತೊಬ್ಬನನ್ನು ಕೊಲ್ಲುವುದು ಒಬ್ಬ ಮನುಷ್ಯನ ಕೈಯಲ್ಲಿಲ್ಲ; ಯಾವ ರೀತಿಯಾಗಿ ಒಬ್ಬ ಮನುಷ್ಯನ ಅದೃಷ್ಟವು ವಿಧಾಯಕವಾಗಿರುವುದೋ ಆ ರೀತಿಯಲ್ಲಿಯೇ ಅವನ ಪ್ರಾಣ ಹೋದೀತು, ಎಂಬದಾಗಿ ಆ ಮುದುಕನು ನುಡಿದನು. ಅದಕ್ಕೆ ಹತೀಮನು– ಹಾಗಾದರೆ ನನ್ನ ಅದೃಷ್ಟದಲ್ಲಿಯೇನಿದೆ ಹೇಳು ನಿಜವಾಗಿ, ಎನಲು,

ಮುದುಕ—ನಿನಗೆ ಇನ್ನೂ ಅರ್ಧ ಆಯುಸ್ಸಿಗಿಂತಲೂ ಹೆಚ್ಚಾಗಿ ಕಳೆಯಬೇಕೆಂದು ಹೇಳಿದರೆ ಸಾಕಾಗಿದೆ.

ಹತೀಮ—ನಿಶ್ಚಯವನ್ನೆಲ್ಲಾ ನಿನ್ನಿಂದ ನಾನು ತಿಳಿದುಕೊಳ್ಳಕೂಡದೊ ?

ಮುದುಕ—ಹಾಗಾದರೆ ತಿಳಿದುಕೊ; ನಿನಗೆ ಇನ್ನೂರು ವರುಷ ತುಂಬಿದ ಕೂಡಲೆ, ಆ ಸರ್ವಶಕ್ತನ ಕೈಯಿಂದ ನೀನು ಬೀಳುತೀಯೆ (ಸಾಯುತೀಯ). ನಿನ್ನ ಮೂಗಿನಿಂದ ರಕ್ತದ ಪ್ರವಾಹ ಹರಿಯುವುದು. ಅದರಿಂದ ನಿನಗೆ ಸ್ವಲ್ಪ ನೋವಾಗುವುದು. ತರುವಾಯ ಕೆಲವು ದಿವಸದವಟ್ಟಿಗೆ ಗುಣವಾಗುವುದು. ಆ ಕಾಲದಲ್ಲಿ ಸಜಾತೀಯ ಜಂತುಗಳಿಗೆ ವಾಡಿಕೆಯಾಗಿ ಧರ್ಮಮಾಡುವುದರಲ್ಲಿ ನಿನ್ನ ಕೈ ನೀಡಿಕೊಂಡಿರುವುದು. ಸ್ವಲ್ಪ ಕಾಲಾನಂತರ ಪುನಃ ನಿನ್ನ ಮೂಗಿನಿಂದ ರಕ್ತ ಸುರಿದು ನೀನು ಮರಣವನ್ನು ಹೊಂದುತೀಯೆ. ನಿನಗೆ ಇನ್ನೂ ದೀರ್ಘಾಯುಸ್ಸು ಇದೆ. ಮುಂದಿನ ಕೆಲಸಮಾಡು, ಜನರಿಗೆ ಇಷ್ಟಪೂರ್ತಿ ಅನಿಷ್ಟ ನಿವೃತ್ತಿ ಆಗುವ ಹಾಗೆ ಧರ್ಮಕಾರ್ಯವನ್ನು ಮಾಡುವುದರಲ್ಲಿ ಹಿಂತೆಗೆಯ ಬೇಡ ’’

ಹತೀಮನು ಇದೆಲ್ಲವನ್ನೂ ಕೇಳಿ ಹಣೆಯನ್ನು ನೆಲಕ್ಕೆ ಹಾಕಿ ದೇವರಿಗೆ ನಮಸ್ಕಾರಮಾಡಿ ಮೇಲಕ್ಕೆ ಎದ್ದು ಸುತ್ತಲೂ ನೋಡಿದನು. ಆ ಮುದುಕ ಮಾಯವಾಗಿದ್ದನು.

(ಮುಂದುವರೆಯುವುದು)

ಬಿ. ಜಿ. ಕನಕೇಶಮೂರ್ತಿ

ಸ್ವಾಗತವ ಕೋರಿ

ನಿದ್ರೆ ಎಚ್ಚರಗಳ ನಡುವೆ
ಸುಂದರ ಕನಸೊಂದು ಬೀಳುವುದಾದರೆ,
ನೀರೇ ಕಾಣದ ನೆಲದಲ್ಲೊಂದು
ನೀರಿನ ಚಿಲುಮೆ ಚಿಮ್ಮುವುದಾದರೆ,
ಹಸಿರಡಗಿದ ಮರಗಿಡಗಳು
ಮತ್ತೆ ಚಿಗುರುವುದಾದರೆ,
ಡಾಂಬರುಮಯ ನೆಲದಲ್ಲಿ
ಗುಲಾಬಿ ಹೂವೊಂದು ಅರಳುವುದಾದರೆ,
ಕಿರುಗುಡುವ ಕಾರ್ಖಾನೆ, ಬಸ್ಸು, ಕಾರು, ಲಾರಿ, ಟ್ರಕ್ಕು-
ಗಳ ಸದ್ದುಗಳ ನಡುವೆ
ಇಂಪಾದ ಹಾಡೊಂದು ತೇಲಿಬರುವುದಾದರೆ,
ನಮ್ಮೆಲ್ಲರೆದೆಯನ್ನು ಆವರಿಸಿರುವ ಕತ್ತಲೆಯನ್ನು ಸೀಳಿ,
ಬೆಳಕು ತುಂಬುವ ಕಿರಣವೊಂದು
ಎಲ್ಲಿಂದಲಾದರೂ ಸರಿ, ತೂರಿಬರುವುದಾದರೆ ;
ಸುಡುವ ಕಣ್ಣುಗಳಲ್ಲಿ, ಉಗಿವ ಮಾತುಗಳಲ್ಲಿ
ಪ್ರೀತಿ ಹುಟ್ಟುವುದಾದರೆ
ಅದಕ್ಯಾಕೆ ತಂಟಿ–ತಕರಾರು
ಸುಮ್ಮನೆ ಸ್ವಾಗತವ ಕೋರಿ.

రాళ్లపల్లి అనంతకృష్ణ శర్మ
అను: డి. ఆర్. వెంకటరమణన్

ವೇಮನ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಕನ್ನಡ ವಚನಕಾರರು

ವೇಮನನಂತೆಯೇ ಯೋಗಮಾರ್ಗವನ್ನಾಶ್ರಯಿಸಿ ಶಿವಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಿದವರು ಕನ್ನಡ ವೀರಶೈವರಲ್ಲಿ ಅನೇಕರಿದ್ದಾರೆ. ಅವರಲ್ಲಿ ಹೆಚ್ಚು ಮಂದಿ ತಮ್ಮ ತಮ್ಮ ಅನುಭವಗಳನ್ನು ಸಿದ್ಧಾಂತಗಳನ್ನು ಕೊಂಚ ಪದ್ಯದ ನಡೆಯುಳ್ಳ ವಚನಗಳಲ್ಲಿ ಬರೆದರು ಬಸವೇಶ್ವರನೇ ಈ ಪದ್ಧತಿಯನ್ನು ಮೊದಲು ಮಾಡಿದವ ನೆಂದು ತೋರುತ್ತದೆ. ಇವರು ಸರ್ವಜ್ಞ ವೇಮನರಂತೆ ಸಿಕ್ಕಿದ ವಿಷಯಕ್ಕೆಲ್ಲ ಕೈ ಹಾಕರು. ಹಾಗೆ ಮಾಡಿದರೂ ನಿರ್ವಹಿಸಿಕೊಳ್ಳಬಲ್ಲ ಕವಿತಾಶಕ್ತಿ ಅವರಿಗಿಲ್ಲ. ಇತರರ ಬಾಹ್ಯಾಚಾರ ಖಂಡನೆ, ಸ್ವಮತದಲ್ಲಿ ಭಕ್ತಿ, ಶಿವಪಾರಮ್ಯದಲ್ಲಿ ನಂಬಿಕೆ, ಶಿವ ಯೋಗ ಸಾಧನ ಪದ್ಧತಿಗಳು—ಇವು ಇವರುಗಳ ರಚನೆಯಲ್ಲಿ ಪ್ರಮುಖವಾಗಿ ಕಾಣ ಬರುತ್ತದೆ. ಇವರಲ್ಲಿ ಕೆಲವರು ಹೆಂಗಸರೂ ಇದ್ದಾರೆ.

ಉದಾಹರಣೆಗೆ ಈ ಎರಡು ಮೂರು ವಚನಗಳನ್ನು ನೋಡಿ :

೧. ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಯವರ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವ.

೨. ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಮೂವತ್ತೆರಡು ರಾಗವ ಹಾಡಯ್ಯ ಎನ್ನ ಉರದಲೊತ್ತಿ ನಿನ್ನ ಜಯಗಾನವಂ ಬಾರಿಸು ಕೂಡಲ ಸಂಗಮದೇವಾ.

೩. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ
ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ
ಚೆನ್ನಮಲ್ಲಿಕಾರ್ಜುನ ಕೇಳಯ್ಯ, ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ
ನಿಂದೆಗಳು ಬಂದಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

೪. ಆನೆಯು ಜರಿದು ಕೋಣನವನೇರಿದರೆ, ಆರೇನು ಮಾಡುವರು ? ಕಸ್ತುರಿಯು ಬಿಟ್ಟು ಕೆಸರು ಪೂಸಿಕೊಂಡರೆ, ಆರೇನು ಮಾಡುವರು ? ಪಾಯಸ ಜರಿದು ಮದ್ಯವ ಕುಡಿದರೆ ಆರೇನು ಮಾಡುವರು ? ಅರಿದರಿದು ಮಹೇಶ್ವರನ ಶರಣರಲ್ಲಿ ವಾದಿಸಿದರೆ ಆರೇನು ಮಾಡುವರು ಹೇಳಾ ಮಡಿವಾಳಾ.

ಒಟ್ಟಿನ ಮೇಲೆ ಇವರೆಲ್ಲರೂ ಶಿವಾದ್ವೈತವಾದಿಗಳು. ಇಂಥ ವಚನಗಳು ಕನ್ನಡ ಭಾಷೆಯಲ್ಲಿ ಲೆಕ್ಕವಿಲ್ಲದಷ್ಟಿವೆ.

ಇದೂ ಅಲ್ಲದೆ ವಿಷ್ಣು ಭಕ್ತಿಯಿರುವ ಕನ್ನಡ ಮಾಧ್ವರಲ್ಲಿ ಪಂಡಿತರು ಹಾಗಿರಲಿ, ಪಾಮರರಲ್ಲಿ ಸಾಮಾನ್ಯವಾದ ವೇಷಭಾಷೆಗಳು ವಾದಗಳು ಜಾತಿಭೇದಗಳು ಮೊದ ಲಾದವುಗಳ ಪ್ರಾಬಲ್ಯವನ್ನು ಕಂಡು ಅಸಹ್ಯಪಟ್ಟು ಆ ಭಾವಗಳನ್ನೂ ತಮ್ಮ ಭಕ್ತಿ ಯನ್ನೂ ಹಾಡುಗಳ ರೂಪದಲ್ಲಿ ವ್ಯಕ್ತಪಡಿಸಿದ ಪುರಂದರದಾಸರು ಕನಕದಾಸರು ಮುಂತಾದವರು ಅನೇಕರಿದ್ದಾರೆ. ಇವುಗಳನ್ನೇ “ ದೇವರನಾಮಗಳು ” ಎನ್ನುತ್ತಾರೆ. ನಮ್ಮಲ್ಲಿ ರಾಮದಾಸ, ತ್ಯಾಗರಾಜ ಮುಂತಾದವರ ಕೀರ್ತನೆಗಳು ಇಂಥವೇ. ತತ್ತ್ವ ಸಿದ್ಧಾಂತಗಳಲ್ಲಿ ಅದೆಷ್ಟು ಭೇದವಿದ್ದರೂ ಮತಾಂತರಗಳಲ್ಲಿ ದ್ವೇಷಾಸೂಯೆಗಳಿದ್ದರೂ ನಿರರ್ಥಕ ಕರ್ಮಗಳು ಡಂಭಾಚಾರಗಳು ಮುಂತಾದವನ್ನು ಸ್ವೀಕರಿಸಿ ಅದೇ ಮತವೆಂದು ಆಚಾರದಲ್ಲಿಟ್ಟುಕೊಳ್ಳುವವರ ದುರ್ಗುಣಗಳ ಮೇಲೆ ಕತ್ತಿಗಟ್ಟುವುದರಲ್ಲಿ ಇವರೆಲ್ಲರೂ ಬಹಳ ಕೆಲಸ ಮಾಡಿದವರು. ಪಾಮರ ಜನರಲ್ಲಿ ಇಂದಿಗೂ ನಿಷ್ಕಲ್ಮಷ ಭಕ್ತಿ, ನಂಬಿಕೆ, ಸೌಶೀಲ್ಯ ಮುಂತಾದ ಗುಣಗಳು ನಿಂತಿರುವುದಕ್ಕೆ ಇವರು ಕಾರಣಭೂತರೇ ಹೊರತು ಸೂತ್ರಗಳು, ಭಾಷ್ಯಗಳು ವ್ಯಾಖ್ಯಾನಗಳು ಇವನ್ನು ಬರೆದ ಪಂಡಿತರಲ್ಲ.

ತಿರುವಳ್ಳುವರು

ನಮ್ಮ ಇನ್ನೊಬ್ಬ ನೆರೆಮನೆಯವರಾದ ತಮಿಳಿನವರಲ್ಲಿ ಬಹುವ್ಯಾಪ್ತಿಯಿರುವ ತಿರುವಳ್ಳುವ ನಾಯನಾರ್ ಅವರ ತಿರುಕ್ಕುರಳ್ ಎಂಬ ಗ್ರಂಥದೊಡನೆ ವೇಮನನ ಪದ್ಯ ಗಳನ್ನು ಹೋಲಿಸಿ ನೋಡಬೇಕೆಂಬುದು ಪ್ರಕೃತೋಪನ್ಯಾಸ ನಿಬಂಧನೆಗಳಲ್ಲಿ ಒಂದು. ಆದರೆ ಇಬ್ಬರಿಗೂ ಹೋಲಿಕೆಗಳು ಬಹಳ ಕಡಿಮೆ. ನನಗೆ ತಮಿಳಿನ ಜ್ಞಾನವು ಅದಕ್ಕಿಂತ ಕಡಿಮೆ. ಆದರೆ ತಿಳಿದಿದ್ದರಲ್ಲಿ ಆತನನ್ನು ಕುರಿತು ಸ್ವಲ್ಪ ಸಂಗ್ರಹವಾಗಿ ಬಿನ್ನವಿಸುತ್ತೇನೆ.

ತಿರುವಳ್ಳುವರು ಬಹಳ ಪ್ರಾಚೀನರು. ಈತನ ಕಾಲ ಕ್ರಿಸ್ತಶಕದ ಮೊದಲ ನೆಯ ಶತಕವೆಂದು ಅನೇಕರು ಭಾವಿಸುತ್ತಾರೆ. ಮದ್ರಾಸಿನಲ್ಲಿ ಮೈಲಾಪೂರಿನಲ್ಲಿ ಇದ್ದವನು. ಭಗವಂತನೆಂಬ ಬ್ರಾಹ್ಮಣನಿಗೂ ಆಧಿ ಎಂಬ ಕೆಳಜಾತಿಯ ಸ್ತ್ರೀಗೂ ಜನಿಸಿದವನೆಂದು ಕಥೆ*. ವಳ್ಳುವರ್ ಎಂಬುವರು ಒಂದು ರೀತಿಯ ಹರಿಜನರೇ.

* 'ಕುರಳ್' ತೆಲುಗಿನಲ್ಲಿ ಕುರಳ್, ತ್ರಿವರ್ಗದೀಪಿಕೆಯಾಗಿ ಬಂದಿದೆ. ಅದರ ಪೀಠಿಕೆಯಲ್ಲಿ ಅತ್ಯದ್ಭುತವಾದ ಕಥೆಗಳು ಇವನನ್ನು ಕುರಿತು ಇವೆ. ಆದರೆ ಅದು ಶುದ್ಧ ಕಂತೆ ಪುರಾಣ.

ಆದ್ದರಿಂದ ಮೇಲಿನ ಕಥೆಯಲ್ಲಿ ಕೊಂಚ ಸತ್ಯವಿರಬಹುದೆಂಬುದನ್ನು ಈತನ ಹೆಸರು ಸೂಚಿಸುತ್ತದೆ. ಈತನ ನಿಜವಾದ ಹೆಸರೇನೋ ತಿಳಿಯದು. ನೇಯ್ಗೆ ಕೆಲಸವನ್ನು ವೃತ್ತಿಯಾಗಿಟ್ಟುಕೊಂಡು ಜೀವಿಸಿದವನು. ಈತನ ಹೆಂಡತಿ ವಾಸುಕಿ. ಇವರಿಬ್ಬರ ದಾಂಪತ್ಯ ಅಪೂರ್ವವಾಗಿದ್ದು ಬಹಳ ಸೌಖ್ಯಾವಹವಾಗಿ ಇತ್ತಂತೆ. ಈತನು ಬರೆದ ಗ್ರಂಥ 'ಕುರಳ್'. ಕುರಳ್ ಎಂದರೆ ಒಂದು ವಿಧವಾದ ಚಿಕ್ಕ ಛಂದಸ್ಸು. ಹತ್ತಿರ ಹತ್ತಿರ ಆಟವೆಲದಿಯಂಥಾದು. ಈತನ ಪದ್ಯಗಳೆಲ್ಲವೂ ಆ ಛಂದಸ್ಸಿನಲ್ಲಿವೆ. ಇದು ಧರ್ಮ, ಅರ್ಥ, ಕಾಮ ಎಂದು ಮೂರು ಪುರುಷಾರ್ಥಗಳನ್ನು ಕುರಿತು ಮೂರು ಭಾಗವಾಗಿ ಬರೆಯಲ್ಪಟ್ಟ ಉಪದೇಶ ಶಾಸ್ತ್ರ. ತಾನು ಬ್ರಾಹ್ಮಣನಲ್ಲದೆ ಹೋದುದರಿಂದ ತನಗೆ ಅಧಿಕಾರವಿಲ್ಲವೆಂದು ಈತನು ಮೋಕ್ಷವನ್ನು ಕುರಿತು ಬರೆಯದೆ ಹೋದನೆಂದು ಕಥೆ. ಆದರೆ ಉಪೋದ್ಘಾತದ ಪದ್ಯಗಳಲ್ಲಿ ಸನ್ಯಾಸ ಧರ್ಮ ಪ್ರಕರಣದಲ್ಲಿ ಭಗವಂತನನ್ನು ಕುರಿತೂ ಮೋಕ್ಷೋಪಾಯಗಳನ್ನು ಕುರಿತೂ ಸಂಗ್ರಹವಾಗಿಯಾದರೂ ಬರೆದಿದ್ದಾನೆ. ಆದ್ದರಿಂದ ಆ ಕಥೆಯನ್ನು ನಾವು ನಂಬಬೇಕಾಗಿಲ್ಲ ಮತ್ತು ಈತನು ಸುಖಿಯಾದ ಸಂಸಾರಿಯಾಗಿದ್ದು ಗೃಹಸ್ಥಧರ್ಮದಲ್ಲಿಯ ಅತಿಥಿ ಪೂಜೆ ಮೊದಲಾದುವನ್ನು ಮಾಡುವ ಕರ್ಮನಿಷ್ಠನಾಗಿ, ಸತ್ಯ ನೀತಿ ಮುಂತಾದ ಸಾಮಾನ್ಯ ಲೌಕಿಕ ಧರ್ಮಗಳನ್ನು ಹೆಚ್ಚು ಶ್ರದ್ಧೆಯಿಂದ ನಡಸುತ್ತ ದೃಢವಾದ ದೈವಭಕ್ತಿಯನ್ನು ಹೊಂದಿದವನಾಗಿ ಇದ್ದವನೇ ಹೊರತು ವೇದಾಂತ ವಿಷಯಗಳನ್ನು ಹೆಚ್ಚು ಪರಿಶೀಲಿಸಿದವನಾಗದಿರಬಹುದು. ಈತನು ಧರ್ಮಾರ್ಥಕಾಮಗಳಲ್ಲಿ ಒಂದೊಂದರ ಅಂಗಗಳನ್ನೂ ಪ್ರತ್ಯೇಕವಾಗಿ ವಿಭಾಗಿಸಿ ಪ್ರತಿ ವಿಷಯಕ್ಕೂ ಹತ್ತು ಪದ್ಯಗಳ ಪ್ರಕಾರ ೧೩೩೦ ಪದ್ಯಗಳನ್ನು ಬರೆದಿದ್ದಾನೆ. ಗ್ರಂಥಕರ್ತನ ವಿಷಯ ವಿಭಜನ ಶಕ್ತಿಯನ್ನು ಸೂಕ್ಷ್ಮ ದೃಷ್ಟಿಯನ್ನು ಇಲ್ಲಿ ಕಾಣಬಹುದು.

ಇದರೊಡನೆ ಒಳ್ಳೆಯ ಕವಿತಾಶಕ್ತಿಯೂ ಇದೆ. ಆದರೆ ವೇಮನನಂತೆ ಆಶುಧಾರೆಯಲ್ಲ. ತಿಕ್ಕನನಂತೆ ನೆಮ್ಮದಿಯಾಗಿ ಕೆತ್ತಿ ಪೂರೈಸಿದ ರಚನೆ ಈತನದು. ಭಾವಗಳಲ್ಲಿಯೂ ಆ ಉದ್ರೇಕ ಈತನಿಗಿಲ್ಲ. ಮಾರ್ದವ, ಸಹನೆ, ನೆಮ್ಮದಿ ಇವನ್ನು ಇಲ್ಲಿ ಕಾಣಬಹುದು. ಆದದ್ದರಿಂದಲೇ ವೇಮನ ಪದ್ಯದಂತೆ ಒಂದು ಸಾರಿ ಕೇಳಿದ ತಕ್ಷಣ ಅದು ಬಾಣದಂತೆ ಎದೆಯಲ್ಲಿ ಹಾಯುವುದಿಲ್ಲ. ಸೂತ್ರದಂತೆ ಹಲವು ಬಾರಿ ಮನನ ಮಾಡಬೇಕು. ಹಿಂದೂ ದೇಶದ ಎಲ್ಲ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಕಂಡು ಬರುವ ಅಹಿಂಸೆ, ಸತ್ಯ, ವೈರಾಗ್ಯ, ಶಾಂತಿ, ದಾಂತಿ, ಆತಿಥ್ಯ, ರಾಜಧರ್ಮ ಮುಂತಾದವುಗಳನ್ನು ಕುರಿತು ಎಲ್ಲರೂ ಆದರಿಸಲರ್ಹವಾದ ಸಾಮಾನ್ಯ ನೀತಿಗಳನ್ನು ಈತನು ಬರೆದಿದ್ದಾನೆಯೇ ಹೊರತು ಇಲ್ಲಿ ಹೊಸದಾದದ್ದೇನೂ ಇಲ್ಲ. ಆದರೆ ಅವುಗಳನ್ನು ಈತನು ಸಂಗ್ರಹಿಸಿ, ಸಾರವನ್ನು ತೆಗೆದು ಅಣಿ ಮಾಡಿ, ಚಿತ್ರಕಾರನು ಚಿತ್ರವನ್ನು ರಚಿಸಿದಂತೆ, ನಾಲ್ಕು ಕಡೆಯೂ ನಿಧಾನವಾಗಿ ಪರೀಕ್ಷಿಸಿ, ಹೆಚ್ಚು ಕಮ್ಮಿಗಳನ್ನು ಸರಿಮಾಡಿ, ಪೂರ್ತಿಮಾಡಿ, ನೆಮ್ಮದಿಯಾಗಿ ಕವಿತೆಯ ಮೆರುಗನ್ನ ಕೊಟ್ಟು ಪರಿ

ಪೂರ್ಣಮಾಡಿ ಕೊಟ್ಟಿದ್ದಾನೆ. ಆದರೆ ಪ್ರಾಚೀನರೆಲ್ಲರಂತೆ ವಿಷಯಗಳನ್ನು ಮಿತಿ ಮೀರಿ ತುಂಡು ತುಂಡಾಗಿ ವಿಭಜಿಸಲು ಪ್ರಯತ್ನಿಸಿರುವುದರಿಂದಲೂ ಪ್ರತಿ ವಿಷಯದ ಮೇಲೂ ಹತ್ತು ಪದ್ಯಗಳನ್ನು ತಪ್ಪದೆ ಬರೆಯಬೇಕೆಂಬ ನಿಯಮವನ್ನಿಟ್ಟುಕೊಂಡದ್ದ ರಿಂದಲೂ ಅಲ್ಲಲ್ಲಿ ಕವಿತಾಶಿಲ್ಪವು ಶಿಥಿಲವಾಗಿ ಸಪ್ಪೆಯಾಗಿರುವಂತೆ ಕಾಣುತ್ತದೆ.

ವೇಮನ ವಿರಕ್ತ ಕವಿ. ಈತನು ಸಂಸಾರಿ ಕವಿ. ಆದ್ದರಿಂದಲೇ ಆತನು ಚಿಕ್ಕ ಮಕ್ಕಳು "ಮುರಿಕಿಮುದ್ದ" "ಕೊಳಕಿನ ಮುದ್ದೆ" ಯೆಂದೂ ಮುದ್ದಂ ಜಂಕ ಚಿಟ್ಟಿ ಮುದ್ದಾಡನೇಲರಾ ಕೊಳಕು ಮುದ್ದೆಯನು ಶಂಕುಳಲ್ಲಿಟ್ಟು ಮುದ್ದಾಡಲೇಕೋ (೧೧೧೨) ಎಂದು ಅಸಹ್ಯಪಟ್ಟು ಮುಖವನ್ನಾಕಡೆ ತಿರುಗಿಸಿಕೊಳ್ಳಲು ಈತನು :

ಅಮಿಳ್‌ದಿನುಮ್ ಆಟ್ರ
ಇನಿದೇ ತಮ್ ಮಕ್ಕಳ್
ಸಿರುಗೈ ಅಳಾವಿಯ ಕೂಳ್

ಅಮೃತಕ್ಕಿಂತ ಹೆಚ್ಚು ಇನಿದು ತಮ್ಮ ಮಕ್ಕಳ
ಪುಟ್ಟಕೈ ಕದಡಿದ ಕೂಳು

(ಅರತ್ತುಪ್ಪಾಲ್—ಪುದಲರ್ವೈಪ್ಪೆರುದಲ್ ೪)

ಎಂದನು. ವೇಮನ ಸ್ತ್ರೀ ವ್ಯಕ್ತಿಯನ್ನು ತಿರಸ್ಕರಿಸಿ ವಿಧಿಯಿಲ್ಲದೆ ಆಕೆಗೆ ಅಧೀನ ನಾದಂತೆ ಕಾಣುವನು. ತಿರುವಳ್ಳುವನು ಸ್ತ್ರೀಯಲ್ಲಿ ಬಹಳ ಗೌರವವನ್ನು ಅಭಿಮಾನ ವನ್ನೂ ಹೊಂದಿದವನು. ತನಗೆ ಪ್ರಿಯಳಾದವಳ ಆಲಿಂಗನಕ್ಕಿಂತ ಕಮಲಾಕ್ಷನ ಲೋಕದಲ್ಲಿ ಏನು ಸುಖವಿದೆ ಎಂದು ಆತನ ಪ್ರಶ್ನೆ (ಕುರಲ್—ಕಾಮತ್ತುಪ್ಪಾಲ್ ಪುಣರ್ಚ್ಚಿಮಹಿಳ್ದಲ್ ೩) ಈ ಕಾರಣದಿಂದಲೇ ಈತನನ್ನು ತಿರಸ್ಕರಿಸಿದವರು ಯಾರೂ ಇಲ್ಲದಿರುವುದು ಹಾಗಿರಲಿ, ಅನೇಕ ಪಂಡಿತರು ಇದನ್ನು ಹೊಗಳಿ ವ್ಯಾಖ್ಯಾನಗಳನ್ನು ಬರೆದರು. ಇದು ಒಂದು ಪ್ರಮಾಣ ಗ್ರಂಥವಾಯಿತು. ಉತ್ತರ ವೇದವೆಂದೂ ದೇವಗ್ರಂಥವೆಂದೂ ಇದಕ್ಕೆ ಹೆಸರು ಬಂತು. ಸುಮತಿ ಶತಕದ ಕರ್ತನಾದರೂ "ಶ್ರೀ ರಾಮುನಿ ದಯ ಚೇತನು" "ಶ್ರೀ ರಾಮನ ದಯದಿಂದ" ಎಂದು ಉಪಕ್ರಮ ಮಾಡುವುದರಿಂದ ಶ್ರೀರಾಮದ್ವೇಷಿಗಳು ಯಾರಾದರೂ ಅದನ್ನು ತಿರಸ್ಕರಿಸಬಹುದು. ಆದರೆ ಈತನು ನಾಮಲಿಂಗಾನುಶಾಸನವನ್ನು ಬರೆದ ಅಮರನಂತೆ, ಯಾವ ದೇವತೆ ಯನ್ನೂ ಹೆಸರಿಸದೆ "ಆದಿ ಭಗವಂತನಿಗೆ" ನಮಸ್ಕರಿಸಿ ಗ್ರಂಥವನ್ನು ಉಪಕ್ರಮಿಸಿ ಅಲ್ಲಿ ಯಾವ ಮತಪಕ್ಷಪಾತವನ್ನು ತೋರಿಸದೆ, ಸರ್ವಮತಸಾಧಾರಣವಾದ ಶಾಶ್ವತ ನೀತಿಗಳನ್ನು ಕುರಿತು ಮಾತ್ರ ಬರೆದಿರುವುದರಿಂದ ಎಲ್ಲರಿಗೂ ಬೇಕಾದವನಾದನು. ಆದ್ದರಿಂದಲೇ ಈ ಗ್ರಂಥವನ್ನು ೧೫೦ ವರ್ಷಗಳಿಗೆ ಮುಂಚೆಯೇ ಲ್ಯಾಟಿನ್ ಭಾಷೆಗೆ ಆಮೇಲೆ ಜರ್ಮನ್, ಫ್ರೆಂಚ್, ಇಂಗ್ಲಿಷ್ ಭಾಷೆಗಳಿಗೆ ಪಾಶ್ಚಾತ್ಯರು ಭಾಷಾಂತರಿಸಿಕೊಂಡರಂತೆ.* ಇಂದಿಗೆ ೪೦ ವರ್ಷಗಳಿಗೆ ಮೊದಲೇ "ತ್ರಿವರ್ಗ ದೀಪಿಕ" ಎಂಬ ಹೆಸರಿನಲ್ಲಿ ಕನುಪರ್ತಿವೆಂಕಟರಾಮ ಶ್ರೀ ವಿದ್ಯಾನಂದರೆಂಬುವರು ಇದನ್ನು

* V.V.S. Iyer's Preface LXIII

ತೆಲುಗಿನಲ್ಲಿ ಮೊದಲಿನ ಎರಡು ಧರ್ಮಾರ್ಥಕಾಂಡಗಳನ್ನು ಅನುವಾದಿಸಿ ಪ್ರಕಟಿಸಿದರು. ಆಂಧ್ರರು ಅದನ್ನು ಹೆಚ್ಚಾಗಿ ಗಮನಿಸಿದಂತೆ ಕಾಣುವುದಿಲ್ಲ. ಸಹಜವೇ, ಏಕೆಂದರೆ ಆಂಧ್ರೀಕರಿಸಿದ ಅವರಿಗೇ ಅದು ಇತರರಿಗೆ ಅರ್ಥವಾಗದೆಂಬ ಸ್ಥಿರನಂಬಿಕೆ ಬಂದದ್ದರಿಂದ ಅವರೇ ಅದಕ್ಕೆ ವ್ಯಾಖ್ಯೆ, ಅದಕ್ಕೆ ತಾತ್ಪರ್ಯ ಇವನ್ನು ಬರೆಯಬೇಕಾಯಿತು. ಹೀಗೆ ವ್ಯಾಖ್ಯಾನದೊಡನೆ ಆಂಧ್ರೀಕರಣವನ್ನೂ ಅದರೊಡನೆ ಮೂಲವನ್ನೂ ಅರ್ಥ ಮಾಡಿಕೊಳ್ಳುವವರೆಗೂ ನಿಂತಿರುವಂಥ ಕವಿತ್ವವನ್ನು ರಚಿಸಬಲ್ಲವನು ಈ ಪ್ರಪಂಚದಲ್ಲಿ ಇನ್ನೂ ಹುಟ್ಟಿಲಿಲ್ಲ. ಇದೂ ಅಲ್ಲದೆ ಶ್ರೀಗರಿಮಳ್ಳ ಸತ್ಯನಾರಾಯಣ ಅವರು ತೆಲುಗಿಸಿದರಂತೆ. ಆದರೆ ಇನ್ನೂ ಅದು ಹಸ್ತಪ್ರತಿಯ ಸ್ಥಿತಿಯಲ್ಲೇ ಇರುವಂತಿದೆ.* ಇದರ ಒಳ್ಳೆಯ ಆಂಧ್ರೀಕರಣವೊಂದನ್ನು ತೆಲುಗು ಭಾಷೆಗೆ ತ್ವರೆಯಾಗಿ ತರುವ ಭಾರ ನಮ್ಮದಾಗಿದೆ. ಇರಲಿ.

ಸಾಮಾನ್ಯವಾದ ನೀತಿಯ ವಿಷಯವನ್ನು ಬಿಟ್ಟು ವೇಮನನಿಗೂ ಈತನಿಗೂ ಹೋಲಿಕೆ ಬಹಳವಿಲ್ಲ. ಆತನು ದುರ್ನೀತಿಯನ್ನು ಖಂಡಿಸಿದವನು. ಈತನು ನೀತಿಯೆಂಥಾದ್ದು ಎಂಬುದನ್ನು ಎತ್ತಿ ಹೇಳಿದವನು. ಆತನದು ವಿರಕ್ತಿ, ಈತನದು ರಕ್ತಿ. ಅದಲ್ಲದೆ ವೇಮನ ಅನ್ವಯ ಮಾರ್ಗದಲ್ಲಿ ಹೇಳಿದರೆ ಈತನಂತೆಯೇ ಹೇಳುವನು. ಆದರೆ ಈ ಹೋಲಿಕೆ ಇಬ್ಬರು ಮನುಷ್ಯರಿಗೆ ಮನುಷ್ಯತ್ವದಲ್ಲಿರುವಂಥ ಹೋಲಿಕೆಯಿದ್ದಂತೆ, ಅಪಕಾರವನ್ನು ಮಾಡಿದವನಿಗೆ ಉಪಕಾರವನ್ನು ಮಾಡುವುದೇ ಒಳ್ಳೆಯದು, ಮನೆಗೆ ಬಂದ ಅತಿಥಿಯನ್ನಾದರಿಸಬೇಕು, ಅಸತ್ಯವನ್ನಾಡಬಾರದು— ಇತ್ಯಾದಿ ವಿಷಯಗಳಲ್ಲಿ ಯಾವ ನೀತಿಶಾಸ್ತ್ರಕಾರನೂ ಬೇರೆ ವಿಧವಾಗಿ ಹೇಳನು. ಆದ್ದರಿಂದ ಇಂಥ ವಿಷಯಗಳಲ್ಲಿ ಇಬ್ಬರನ್ನೂ ಹೋಲಿಸಿ ನೋಡುವುದಕ್ಕಿಂತ ತಿರುವಳ್ಳುವರರಿಂದ ಎರಡು ಪದ್ಯಗಳನ್ನು ಯಥಾಶಕ್ತಿ ಭಾಷಾಂತರಿಸಿ ಆತನ ವಿಷಯ ಸಾಕು ಮಾಡುತ್ತೇನೆ.

ನಿಷ್ಕಲ್ಮಷತ್ವ

ಮನತ್ತುಕ್ಕಳ್ ಮಾಶಿಲನಾದಲ ವೈತ್ತಿರನ್
ಆಗುಲ ನೀರಪರ

ಮನಸಿನಲಿ ಮಾಸಿಲ್ಲದವನಿಗೆ ಅದೆ ಧರ್ಮ
ಮಿಕ್ಕೆಲ್ಲ ಬರಿ ಆಡಂಬರ

(ಅರತ್ತುಪ್ಪಾಲ್—ಆರನ್ ವಲಿಯುರುತ್ತಲ್) (೪)

ಮಿತ್ತುಮಿಡಲ್ವೇಣ್ಡು ಜೊಲ್ಲೊ ನಿರುನ್ದೋಂಬಿ
ಯಿಚ್ಚಿನ್ ಮಿಶೈವಾನ್ ಪೂಲಮ್

ಬಿತ್ತಗಳನು ಬಿತ್ತಬೇಕೊ ಅತಿಥಿಗಳಿಗಿಟ್ಟು
ಮಿಕ್ಕುದನು ತಿನ್ನುವವನ ಹೊಲಕೆ.

(ಅರತ್ತುಪ್ಪಾಲ್—ವಿರುಂದೊಂಬಲ್ ಪ. (೫)

* Vide *Maxims of Thiruvalluvar by* V.V.S. Iyer. Preface XX
ತಿರುವಳ್ಳುವರನ್ನು ಕುರಿತು ಅನೇಕ ವಿಷಯಗಳನ್ನು ಇಲ್ಲಿಂದಲೇ ಗ್ರಹಿಸಿದ್ದೇನೆ.

ಪೊರುತ್ತಲಿರಪ್ಪಿನ್ನೈ ಯಿನ್ನುಮದನ್ನೈ
ಮರತ್ತಲಿದ ನಿರು ನನ್ರು
(ಅರತ್ತುಪ್ಪಾಲ್—ಪೊರೈಯುಡೈಮೈ) (೨)

ಸಹಿಸುವುದು ಇತರರ ಕೇಡನೆಂದೂ ಲೇಸು
ಮರೆವುದದನು ಇನ್ನೂ ಲೇಸು

ಕಂಡುಕೇಟ್ಟುಂಡುಯಿರೆ ತುಟ್ರರಿಯುಂ
ಮೈಂಪುಲನು
ಮೊಂಡೋಡಿ ಕಣ್ಣೇಯುಳ್
(ಕಾಮತ್ತುಪ್ಪಾಲ್—ಪುಣರ್ಚಿ ಮಗಿಳ್‌ದಲ್) (೧)

ಕಂಡು ಕೇಳಿ ಉಂಡು ಮೂಸಿ ಮುಟ್ಟಿ
ಬರುವ ಸಂತೋಷವೆಲ್ಲವು ಕೂಡಿವೆ
ಕಡಗವನು ಕೊಟ್ಟ ಈ ಪ್ರಮದೆಯಲ್ಲಿ

ಇತರರ ಮಾತು ಹಾಗಿರಲಿ ತೆಲುಗಿನವರಲ್ಲೇ ವೇಮನನಂಥವರು ಹಲವರಿದ್ದಾರೆ. ವೇಮನನಂಥವರೆಂದರೆ ಆತನ ಮತದಂತೆ ಮತವನ್ನಾಶ್ರಯಿಸಿದವರು. ಬಹಿರಾಡಂಬರ ವನ್ನು ಬಿಟ್ಟು, ಜಾತಿಭೇದಗಳನ್ನು ತಿರಸ್ಕರಿಸಿ, ಯೋಗಸಾಧನೆಯಿಂದ ಅದ್ವೈತವನ್ನು ಸಾಧಿಸಿದವರು. ಇಲ್ಲ, ಸಾಧಿಸಬೇಕೆಂದಿದ್ದವರು ಅಂಥವರಲ್ಲಿ ಒಬ್ಬ ಪೋತಲೂರಿ ವೀರಬ್ರಹ್ಮಂ

ಪೋತಲೂರಿ ವೀರಬ್ರಹ್ಮಂ

ಜಾತಿಯಲ್ಲಿ ಈತ ಅಕ್ಕಸಾಲಿ. ಈತನ ಕಾಲ ಸುಮಾರು ೧೭ನೆಯ ಶತಾಬ್ದದ ಮಧ್ಯ ಭಾಗ. ವೇಮನನನ್ನು ಕುರಿತು ನಾವು ನಿಶ್ಚಯಿಸಿದ ಕಾಲವೇ ಸರಿಯಾದರೆ ಈತನು ಆತನ ಸಮಕಾಲೀನನಾಗುತ್ತಾನೆ. ಸ್ಥಳ ಪೋತಲೂರು. ಕರ್ನೂಲ ಮಂಡಲದಲ್ಲಿಯ ಬಣಗಾನ ಪಲ್ಲೆಯಲ್ಲಿದ್ದ ಗರಿಮರೆಡ್ಡಿ ವೆಂಕಟರೆಡ್ಡಿ ಎಂಬಾತನ ಮನೆಯಲ್ಲಿ ಈತನು ಚಿಕ್ಕಂದಿನಲ್ಲಿ ದನಕಾಯುತ್ತಿದ್ದನು. ಆ ವಯಸ್ಸಿನಲ್ಲೇ ಈತನು ಅನೇಕ ಅದ್ಭುತಕಾರ್ಯಗಳನ್ನು ಮಾಡಿದನು. ಸತ್ತವರನ್ನು ಬದುಕಿಸಿದನು. ಊರ ದೇವರ ಜಾತ್ರೆಯಲ್ಲಿ ಈತನ ಆಜ್ಞೆಯ ಪ್ರಕಾರ ಎಲ್ಲರೆದುರಿಗೆ ಚಂಡಿಕಾ ವಿಗ್ರಹವು ಎದ್ದು ಬಂದು ಈತನಿಗೆ ಚುಟ್ಟಹಚ್ಚಿಕೊಳ್ಳಲು ಬೆಂಕಿಯನ್ನು ತಂದು ಕೊಟ್ಟಿತಂತೆ. ಈತನೂ ವಿಗ್ರಹಾರಾಧನೆ, ಜಾತಿ ಭೇದ, ಜಾತ್ರೆಗಳು ಮೊದಲಾದ ವನ್ನು ಖಂಡಿಸಿ ಜನರಿಗೆ ಹಿತೋಪದೇಶಮಾಡಿದನು. ಈತನು ಸನ್ಯಾಸಿಯಲ್ಲ. ದೊಡ್ಡ ಸಂಸಾರಿ. ಭಾರ್ಯೆ ಗೋವಿಂದಮ್ಮ. ಐದು ಜನ ಗಂಡು ಮಕ್ಕಳು, ಒಬ್ಬ ಮಗಳು ಇದ್ದರು. ಈತನ ಶಿಷ್ಯರೆಲ್ಲರಲ್ಲಿ ದೂದೇಕುಲ ಸಿದ್ದಯ್ಯ ಪ್ರಸಿದ್ಧನು. ೧೨ ವರ್ಷ ಚಿಕ್ಕ ವಯಸ್ಸಿನಿಂದಲೇ ತನ್ನ ಮಹಮ್ಮದೀಯ ಮತವನ್ನು ತಾಯಿ ತಂದೆಯವರನ್ನೂ ಬಿಟ್ಟು ವೀರಬ್ರಹ್ಮನನ್ನು ಆಶ್ರಯಿಸಲಾಗಿ ಆತನೂ ಯಾವ ಆಕ್ಷೇಪವಿಲ್ಲದೆ ಈತನನ್ನು ಶಿಷ್ಯನನ್ನಾಗಿ ಅಂಗೀಕರಿಸಿ ಬೋಧಿಸಿದನು. ಈ ಗುರು ಶಿಷ್ಯರ ಭಕ್ತಿ ವಾತ್ಸಲ್ಯಗಳು ಮನಸ್ಸನ್ನು ಬಹು ಕರಗಿಸುವಂಥವು. ಶಿಷ್ಯನಿಗೋಸ್ಕರ ಈತನು "ಸಿದ್ಧಬೋಧಮು" ಎಂಬ ಗ್ರಂಥವನ್ನೂ ಬರೆದನಂತೆ. ಅದರಲ್ಲಿ ಈ ಕೆಳಕಂಡ ಎರಡು ಪದ್ಯಗಳಿವೆ.

ಕ॥ ನೀವನು ನೇನುನು ತಾನುನು ಭಾವಿಂಪಗ ನೊಕ್ಕಡನುಚು ಬರಗೆಡುಗಾದೆ ನೀವುನು ನಿನ್ನೆರಿಗಿನಚೊ 1 ನೀವೇಯಗು ದಾನುನೇನು ನಿಜಮುಗ ಸಿದ್ಧಾ	ನೀನೂ ನಾನೂ ತಾನೂ ಭಾವಿಸಲು ಒಬ್ಬನೆಂದೂ ನೀನೊ ನಿನ್ನನು ತಿಳಿದವನಾದರೆ ನೀನೇ ಅವನು ನಾನು ಆಗುವೆನು ನಿಜವಾಗಿ ಸಿದ್ಧಾ.
ಕ॥ ನೀಲೋನ ವೆಲುಗು ನೆಯ್ಯದಿ ನಾಲೋನನು ವೇಲುಗುನದಿಯೆ ನಖಿಲಂಬುನ ದಾ ನಾಲೋಕನಂಬು ಗಲಿಗಿನ ನೀಲೋನನೆ ಗಾಂತುವಯ್ಯಾ ನಿಜಮುಗಸಿದ್ಧಾ	ನಿನ್ನಲ್ಲಿ ಬೆಳಗುವ ಬೆಳಕು ನನ್ನೊಳಗೂ ಬೆಳಗುತಿದೆ ಅದೇ ಎಲ್ಲೆಲ್ಲೂ ಅದನ್ನು ಕಂಡರೆ ನಿನ್ನೊಳಗೇ ಕಾಣುವೆ ಯಯ್ಯಾ

ಈತನೂ ವೇಮನನಂತೆ ಸರ್ವಸಮ್ಮತವಾದ ಅದ್ವೈತವಿದ್ಯೆಯನ್ನು ಬೋಧಿಸುವ ಅನೇಕ ಪದ್ಯಗಳನ್ನು ಹಾಡುಗಳನ್ನು ಬರೆದಂತಿದೆ. ಆದರೆ ಅವು ಹೆಚ್ಚಾಗಿ ನನಗೆ ಸಿಕ್ಕಲಿಲ್ಲ. ''ಪೋತಲೂರಿ ವೀರಬ್ರಹ್ಮ ಮುಗಾರಿ ನಾಟಕಮು'' ಎಂಬ ಗ್ರಂಥದಲ್ಲಿ ಕೆಲವು ಇದ್ದರೂ ಅವು ನಾಟಕಕರ್ತನೇ ಬರೆದವೋ ವೀರಬ್ರಹ್ಮ ಬರೆದವೋ ಹೇಳಲಾರೆ * ಉದಾಹರಣೆಗೆ ಒಂದು :

ರಾಗ ಮಧ್ಯಮಾವತಿ—ಆದಿತಾಳ

ಸಂಸಾರೈನಾ ಪಕಟೆ—ಸಂಸಾರ ಮು ವಿಡಿಚಿನ ನೊಕಟಿ (ಪಲ್ಲವಿ)
ಹಂಸನಟಿಂಚೆ ವಿಧಮೆರಿಂಗುಂಟೆ ಸಂಶಯಮುಲು ತನಮದಿವಿಡಿಚುಂಟೆ. ಸಂ
ಇಲವಾರ್ತಲು ವಿನಕುಂಟೇ—ತನ—ಯಿಂದ್ರಿಯಮುಲು ವಶಮುಂಟೆ
ಕಲರೋ ಮರ ನಕಯುಂಟೇ ಮರಿ ಕಲ್ಲಲನ್ನಿ ತೊಲಗುಂಟೆ ॥ ಸಂ ॥
ನಿಲಕಡ ಶಾಂತಂಬುಂಟೇ—ತನ—ನಿಜಸಮಾಧಿಗಲಿಗುಂಟೆ ॥
ಪಲುಮರು ಯೋಗುಲು ಭಾಷಲು ವಿನಚುನು ಚೆಲಮು ಮರಚಿ ತಾನಿಲುಕಡಯುಂಟೆ
(ವೀರಬ್ರಹ್ಮಮುಗಾರಿ ನಾಟಕಮು ಪು. ೫೧)

ಇದೂ ಅಲ್ಲದೆ "ವೀರಾಚಾರ್ಯ ಚರಿತ್ರೆ"ಯಲ್ಲಿ ಈ ಕೆಳಗಿನ ಪದ್ಯದ ತುಣುಕು ಒಂದು ಉದಾಹರಿಸಲ್ಪಟ್ಟಿದೆ.

ಚಿಲ್ಲರ ರಾಳ್ಳಕು ಮುಕ್ಕುಚುನುಂಟೆ ಚಿತ್ತಮುಚೆಡುನುರ ವೊರೆವೊರೆ
ಚಿತ್ತಮುನಂದಲಿ ಚಿನ್ಮಯ ಜ್ಯೋತಿನಿ ಚೂ ಚುನುಂಡುಟ ಸರೆಸರೆ
ಪೊಕ್ಕಪ್ರೊದ್ದುಲನಿ ಯೆಂಚುಕನುಂಟೆ ಪೊನರಗ ಚೆಡುದುಷ ವೊರೆವೊರೆ
(ವೀರಾಚಾರ್ಯ ಚರಿತ್ರಮು ಪು. ೭)

---

* ಬೆಜವಾಡ ಟಿ. ವಿ. ರಾಘವಾಚಾರ್ಯರು ಪ್ರಕಟಿಸಿದ "ವೀರಾಚಾರ್ಯ ಚರಿತ್ರಮು" ಪೀಠಿಕೆ ಪು ೧೭. ಇಲ್ಲಿ ಹೇಳಿರುವ ವಿಷಯಗಳು ಈ ಗ್ರಂಥದಿಂದಲೇ ಗ್ರಹಿಸಲ್ಪಟ್ಟಿದ್ದು. ಇದೂ ಅಲ್ಲದೆ ತಪ್ಪುಗಳಿಂದ ಕೂಡಿದ ಗುಜರಿ ಪ್ರತಿಯೊಂದರಲ್ಲಿಯೂ ಕೆಲವು ಇಂಥ ಹಾಡುಗಳನ್ನು ನೋಡಿದ್ದೇನೆ.

ಸಂಸಾರಿಯಾದರೂ ಒಂದೇ. ಸಂಸಾರವ ಬಿಟ್ಟರೂ ಒಂದೇ
ಹಂಸ ನಟಿಸುವ ವಿಷಯವನ್ನು ಅಲ್ಲದೆ ಸಂಶಯವು ತನ್ನ ಮನಸಿನಲಿ ಬಿಟ್ಟರೆ
ಇಳೆಯವಾರ್ತೆಗಳು ಕೇಳದಿದ್ದರೆ–ತನ್ನ ಇಂದ್ರಿಯಗಳು ವಶವಿದ್ದರೆ,
ಕನಸಿನಲ್ಲೂ ಮರೆಯದಿದ್ದರೆ, ಮತ್ತು ಸುಳ್ಳುಗಳೆಲ್ಲ ತೊಲಗಿಬಿಟ್ಟರೆ
ನಿಲುವಿನಲ್ಲಿ ಶಾಂತಿಯಿಂದಲೆ ತನ್ನ ನಿಜ ಸಮಾಧಿ ದೊರಕಿದರೆ
ಆಗಾಗ್ಗೆ ಯೋಗಿಗಳ ಮಾತುಗಳು ಕೇಳುತ್ತಿದ್ದರೆ, ಫಲಮರೆತು ತಾನು ಇದ್ದರೆ
ಚಿಲ್ಲರೆ ಕಲ್ಲುಗಳಿಗೆ ವಂದಿಸುತ್ತಿದ್ದರೆ ಚಿತ್ರವು ಕೆಡುವುದು
ಎಲಎಲ ಚಿತ್ರದಲ್ಲಿ ಚಿನ್ಮಯಜ್ಯೋತಿಯ ಒಳಗಿದ್ದರೆ...ನೀನು ಕೆಡುತ್ತೀಯ ?

ಈ ಮೇಲಿನ ಪದ್ಯಗಳನ್ನು ನೋಡಲಾಗಿ ವೇಮನನ ಕವಿತ್ವದಲ್ಲಿ ಇರುವಂಥ ವೇಗವಾಗಲೀ ಅಚ್ಚುಕಟ್ಟಾಗಲಿ ಇದರಲ್ಲಿ ಇಲ್ಲವೆಂಬುದು ತಿಳಿಯುತ್ತದೆ. ಆದರೆ ಸಾಮಾನ್ಯ ಜನರಿಗೆ ಇಷ್ಟುಮಾತ್ರ ಸಾಕು. ಇದರೊಂದಿಗೆ, ಬರೆದವನು ವಿರಕ್ತನಾಗಿ ಹಠಯೋಗ ಸಿದ್ಧಿಗಳ ಚಮತ್ಕಾರಗಳನ್ನು ತೋರಿಸಿದ ಮಹನೀಯನಾದ್ದರಿಂದ, ಆತನ ಅನೇಕ ಪದಗಳು ಹಾಡುವುದಕ್ಕೂ, ಆತನನ್ನು ಅನೇಕರು ಪೂಜಿಸುತ್ತ ಉತ್ಸವಾದಿಗಳನ್ನು ಇಂದಿಗೂ ನಡೆಸುವುದಕ್ಕೂ ಕಾರಣವಾಯಿತು. ಕಟಾರ್ಲಪಲ್ಲೆ ಎಂಗ ವೇಮನ್ನನೂ ಇಂಥವನೇ ಅಲ್ಲವೇ, ವೀರಬ್ರಹ್ಮ ಸಮಾಧಿಯೂ ಅವನು ಸ್ಥಾಪಿಸಿದ ಮಠವೂ ಕಂದಿಮಲ್ಲೆಯ ಪಾಳೆಯದಲ್ಲಿದೆಯಂತೆ. ಈತನೂ ಸಜೀವವಾಗಿ ಸಮಾಧಿಯಲ್ಲಿ ಪ್ರವೇಶಿಸಿದವನೇ. ಈತನ ಪೌತ್ರಿಯಾದ ಈಶ್ವರಮ್ಮ ಎಂಬಾಕೆಯೂ ಬ್ರಹ್ಮಚಾರಿಣಿಯಾದ ಯೋಗಿನಿಯಾಗಿದ್ದು ಪ್ರಸಿದ್ಧಿ ಹೊಂದಿದಳಂತೆ. ಈಶ್ವರಮ್ಮ ನವರ ಮಠವೂ ಆ ಊರಿನಲ್ಲೇ ಇದೆಯಂತೆ ಈತನ ಶಿಷ್ಯ ದೂದೇಕುಲ ಸಿದ್ಧಯ್ಯನೂ ಇಂಥವೇ ಕೆಲವು ಹಾಡುಗಳನ್ನು ಬರೆದನು. ಈ ವಿಷಯದ ಸ್ತೋತ್ರಗಳೂ ಸಂಸ್ಕೃತ ಭಾಷೆಯಲ್ಲಿವೆ.†

ಏಗಂಟಿಯವರು

ಹೀಗೆಯೇ ಅದ್ವೈತವನ್ನು ಬೋಧಿಸುವ ಹಾಡುಗಳು ''ಏಗಂಟಿವಾರಿ ವಚನಾಲು'' 'ಏಗಂಟಿಯವರ ವಚನಗಳು' ಎಂಬ ಹೆಸರಲ್ಲಿ ಮದ್ರಾಸು ಪ್ರಾಚ್ಯ ಲಿಖಿತ ಗ್ರಂಥಮಂದಿರದಲ್ಲಿವೆ.

ಏಗಂಟಿಯವರು ಯಾರೋ, ಒಬ್ಬರೋ, ಅನೇಕರೋ, ಯಾವ ಊರಿನವರೋ, ಎಂದಿನವರೋ ತಿಳಿಯುವ ಅವಕಾಶ ನನಗೆ ಸಿಕ್ಕಲಿಲ್ಲ. ಕೆಲವು ಗುಜರಿ ಪ್ರತಿಗಳಲ್ಲಿ ಈ ಕೆಲವು ಹಾಡುಗಳು, "ಏಗಂಟಿ ಲಕ್ಷ್ಮಯ್ಯನವರ ವಚನಗಳು" ಎಂದು ಮುದ್ರಿತವಾಗಿವೆ. ಆಂಧ್ರ ದೇಶದಲ್ಲಿ ಇವಕ್ಕೆ ಹೆಚ್ಚಿನ ವ್ಯಾಪ್ತಿ ಉಂಟೆಂದು ಕೇಳಿದ್ದೇನೆ. ಜನರಲ್ಲಿ ಹೆಚ್ಚು ವ್ಯಾಪ್ತಿಯನ್ನು ಪಡೆಯಲೂ ಮನನ ಮಾಡುವುದಕ್ಕೂ ಪದ್ಯಗಳಿ

† ವೀರಬ್ರಹ್ಮನಾಟಕಮು ಪು. ೮೭.

ಗಿಂತ ಹಾಡುಗಳೇ ಹೆಚ್ಚು ಉಪಯುಕ್ತವಾಗುತ್ತವೆ ಎಂಬ ತತ್ತ್ವವನ್ನು ಪಂಡಿತರನೇಕರು ಗಮನಿಸದಿದ್ದರೂ ಪಾಮರರು ಮಾತ್ರ ಇದನ್ನು ತಿಳಿದುಕೊಂಡು ಆಚರಣೆಯಲ್ಲೂ ತಂದರು. ಅಂಥ ಹಾಡುಗಳಲ್ಲಿ ಸಾಮಾನ್ಯವಾಗಿ ಕಾಣಬಾರದ ಭಾಷಾ ಸೌಷ್ಟವ, ವಿಷಯವನ್ನು ಸಂಗ್ರಹಿಸಿ ಹೇಳುವ ಶಕ್ತಿ, ಧಾರಾಳವಾದ ಶಯ್ಯೆ—ಇವು ಈ ಏಗಂಟಿಯುವರ ಪದಗಳಲ್ಲಿ ಹೆಚ್ಚಾಗಿ ಕಾಣಬರುತ್ತವೆ. ಒಂದನ್ನು ಉದಾಹರಿಸುತ್ತೇನೆ:

ಪ॥ ಆನಂದ ಮಯುಡು ಗಾವಲೆನು	ಆನಂದಮಯನಾಗಬೇಕು
ಮನಸು ಪದಿಲಮು ಸೇಯವಲೆನು ಈ	ಮನಸ್ಸನ್ನು ಸ್ಪಷ್ಟವನ್ನಾಗಿ ಮಾಡಬೇಕು ಈ
ತನುವು ಲೋಪಲಿ ತೆಲಿವಿ ತಾನೆನವಲೆನು	ತನುವಿನೊಳಗಿನ ತಿಳಿವು ತಾನೇ ಕಾಣಬೇಕು
ಕನುಚೂಪು ಲೋಕಟಿಕಾವಲೆನು ಅಂದು	ಕಣ್ಣಿಗೆ ನೋಟಗಳು ಒಂದಾಗಬೇಕು ಅದರಲ್ಲಿ
ಘನಚಿದಾನಂದಲಿಂಗಮು ಗಾನವಲೆನು (೧)	ಘನಚಿದಾನಂದನಾಗಲೇಬೇಕು
ವಾಯುವುಲ ಕುಂಭಿಂಚವಲೆನುಮಿಕ್ಕಿಲಿ ಯು	ವಾಯುವನು ಕುಂಭಿಸಬೇಕು ಮತ್ತು ಪಾ
ಪಾಯುಮುನ ಕುಂಡಲಿನಿ ಪೈಕೆತ್ತವಲೆನು	ಯುದಲಿ ಕುಂಡಲಿನಿಯು ಮೇಲೆತ್ತಬೇಕು
ತೋಯಜಂಬುಲು ದಾಂಟವಲೆನು ಅಂದು	ಪದ್ಮಗಳ ದಾಟಬೇಕು ಅಲ್ಲಿ
ಪಾಯ ಕುಂಡೇಡು ನಾದು ಪಲುಕು ವಿನವಲೆನು (೨)	ಬಿಟ್ಟುಹೋಗದ ನನ್ನ ಮಾತುಗಳ ಕೇಳಬೇಕು
ಮೂಂಡು ಯೇರುಲು ದಾಟವಲೆನು ಅಂದು	ಮೂರು ನದಿಗಳ ದಾಟಬೇಕು ಅಲ್ಲಿ
ಜೋಡುಬಾಯನಿ ಗುರುನಿ ಜೂಡಗನವಲೆನು	ಜೊತೆಬಿಡದ ಗುರುವ ನೋಡಲೆಬೇಕು
ಮೇಡಮಿಂದಿಕಿ ಚೋರವಲೆನು, ಅಂದು	ಮಹಡಿಯ ಮೇಲೆ ಹಾರಬೇಕು
ಜೋಡುಬಾಯನಿ ಹಂಸ ಚೂಡವಲೆನು (೩)	ಜತೆಯ ಬಿಡದ ಹಂಸೆಯ ನೋಡಲೇಬೇಕು
ರೇಯುಂಪಗಲೊಕಟಿ ಗಾವಲೆನು, ಅಂದು	ರಾತ್ರಿ ಹಗಲೊಂದಾಗಬೇಕು ಅಲ್ಲಿ
ವೇಯು ರೇಕುಲಮಿಂದಿ ವೆಲುಗುಗನವಲೆನು	ಸಾವಿರ ಎಸಳುಗಳ ಮೇಲೆ ಬೆಳಕನು ಕಾಣಬೇಕು
ಆಯೆಡನು ಹಂಸಗಾವಲೆನು ಆತ್ಮ	ಅಲ್ಲಿ ಹಂಸವಾಸವಾಗಬೇಕು ಆತ್ಮವನು
ಬಾಯಕೇಗಂಟಿ ಗುರು ಪದವಿಗನವಲೆನು ಆನಂದ (೪)	ಬಿಡದೆ ವಾಗಂಟಿಗುರುಪದದಿ ಕಾಣಬೇಕು

ಕನ್ನಡದಲ್ಲಿಯ "ದೇವರ ನಾಮ"ಗಳಂತೆ ತೆಲುಗಿನಲ್ಲಿ ಇಂಥ ಅದ್ವೈತ ಬೋಧಕಗಳಾದ ಪದಗಳು ಲೆಕ್ಕಕ್ಕೆ ಮೀರಿದಂತೆ ಇವೆ. ಇದೂ ಅಲ್ಲದೆ ಇಂಥ ವೇದಾಂತವನ್ನೇ ಪದ್ಯರೂಪಗಳಲ್ಲಿ ಬರೆದ ಶತಕ ಕರ್ತರು ಅಸಂಖ್ಯರು. ಶ್ರೀ ವಂ॥ ಸುಬ್ಬರಾವು ಅವರು ಇಂಥ ಸುಮಾರು ಐವತ್ತು ಜನರನ್ನು ಹೆಸರಿಸಿದ್ದಾರೆ (ವಂ ಸು. ವೇವ ನ ಪು ೧೮೭). ಇಂಥವರಲ್ಲಿ ಒಬ್ಬ ಆನಂದ ವರದ ರಾಜಯೋಗಿ :

ಆನಂದ ವರದ ರಾಜಯೋಗಿ

ಈತನು ರಚಿಸಿದ " ಸದಾನಂದ ಯೋಗಿ ಶತಕ "ದಿಂದ ಎರಡು ಪದ್ಯಗಳು :

ತ॥ ಸ್ನಾನಮೆಲ್ಲಂದು ದೇವತಾರ್ಚನಮು ಸೇಯ	ಸ್ನಾನಮಾಡದೆ ದೇವತಾರ್ಚನವ ಮಾಡುವನು
ಡಮಲ ವಿಜ್ಞಾನ ಸಂಪನ್ನುಡೈನ ಯೋಗಿ	ಅಮಲವಿಜ್ಞಾನ ಸಂಪನ್ನನಾದ ಯೋಗಿ
ಲೋಕುಲಕು ತೆಲಿಯುನೆ ವಾನಿಲೋನಿಗುಟ್ಟು	ಲೋಗರಿಗೆ ತಿಳಿವುದೆ ಅವನೊಳಗುಟ್ಟು
ನವ್ಯತರ ಭೋಗಿ ಶ್ರೀ ಸದಾನಂದಯೋಗಿ (೨೪)	ನವ್ಯತರಭೋಗಿ ಶ್ರೀ ಸದಾನಂದಯೋಗಿ

ಬ್ರಾಹ್ಮಲ ಮಟಂಚು ಕೊಂದರು ಪಲುಕುಟೆಟ್ಲು	ಬ್ರಾಹ್ಮಣರೆಂದು ಕೆಲವರು ಹೇಗೆ ಹೇಳುವರು
ಬ್ರಹ್ಮ ಸೆರುಗಂಗ ನೇರಕ ಬ್ರಾಹ್ಮಡಗುನೇ	ಬ್ರಹ್ಮವನು ತಿಳಿಯದವನು
ಬ್ರಹ್ಮನೆರೆಗಿನ ವಾಡೆಪ್ಪೋ ಬ್ರಾಹ್ಮಣುಂಡು	ಬ್ರಾಹ್ಮಣನು ನಪ್ಯತರಭೋಗಿ
ನಪ್ಯತರಭೋಗಿ ಶ್ರೀ ಸದಾನಂದಯೋಗಿ (೬೬)	ಶ್ರೀ ಸದಾನಂದ ಯೋಗಿ

ಆಧುನಿಕರಲ್ಲಿ ವೇಮನನಲ್ಲಿ ಹೆಚ್ಚಿನ ಭಕ್ತಿಯುಂಟಾಗಿ ಆತನ ಅನೇಕ ಪದ್ಯಗಳನ್ನು ಆರಿಸಿ, ಪೋಣಿಸಿ "ವೇಮನ ಜ್ಞಾನಮಾರ್ಗ ಪದ್ಯಗಳು" ಎಂಬ ಹೆಸರಿನಲ್ಲಿ ಪ್ರಕಟಿಸಿದವನು ನಲ್ಲೂರು ಜಿಲ್ಲಾ ನಾರಾಯಣರೆಡ್ಡಿ ಪೇಟೆ ರಾಮಸ್ವಾಮಿಯೋಗಿಯ ಕುಮಾರನೂ ದಿಗಂಬರ ಯೋಗಿಯ ಶಿಷ್ಯನೂ ಆದ ಮುತ್ಯಾಲ ನಾರಸಿಂಹಯೋಗಿ. ಈತ "ಜೀವತತ್ತ್ವ ಪ್ರಬೋಧಕ ಕುಸುಮಾವಳಿ" ಎಂಬ ಹೆಸರಿನಲ್ಲಿ ಈ ವೇಮನ ಮತವನ್ನೇ ಪ್ರಕಟಿಸುತ್ತಾ ಚೆನ್ನಾದ ಕಂದಪದ್ಯಗಳ ಒಂದು ಗ್ರಂಥವನ್ನು ಬರೆದನು.

ಇವರೆಲ್ಲರಿಗೂ ಯೋಗಶಾಸ್ತ್ರ ಪರಾಯಣವಾದ ಅಮನಸ್ಕ ಸಮಾಧಿಯೂ ಪರತತ್ತ್ವ ಸಾಕ್ಷಾತ್ಕಾರವೂ ಎಷ್ಟರ ಮಟ್ಟಿಗೆ ಲಭಿಸಿತೋ ಲಭಿಸಲೇ ಇಲ್ಲವೋ ಹೇಳಲಾರೆವು. ಪ್ರಥಮಾವಸ್ಥೆಯನ್ನು ಅನುಭವಿಸಿದ ಸಾಧಕರು, ಕೇವಲ ನಂಬಿಕೆಯಿಂದಲೇ ಬರೆದ ಭಕ್ತರು ಇದರಲ್ಲಿ ಎಷ್ಟೋ ಮಂದಿಯಿರಬಹುದು? ರಾಮಕೃಷ್ಣ ಪರಮಹಂಸರು, ವಿವೇಕಾನಂದ ಮುಂತಾದವರ ಅನುಭವಗಳನ್ನು ಕುರಿತು, ಮಾತುಗಳನ್ನು ಕುರಿತು, ನಂಬಿಕೆ ಹುಟ್ಟಿ, ತಮಗೆ ಅಂಥ ಅನುಭವಗಳೇನೂ ಇಲ್ಲದಿದ್ದರೂ ಆ ವಿಷಯವನ್ನು ಕುರಿತು ಉಪನ್ಯಾಸಮಾಡಿ ಬೋಧಿಸಹೊರಡುವವರು ನಮ್ಮಲ್ಲಿ ಎಷ್ಟು ಜನವಿಲ್ಲ?

ಇದರೊಡನೆ ಇಂದಿನ ಉಪನ್ಯಾಸ ಮುಗಿಸಿಬಿಡಬೇಕಾದಷ್ಟೇ. ಆದರೆ ರಾಮಕೃಷ್ಣ ಪರಮಹಂಸರ ಹೆಸರನ್ನೆತ್ತಿದಮೇಲೆ ಸುಮ್ಮನೆ ದಾಟಿಹೋಗುವುದು ಸಾಧ್ಯವಿಲ್ಲ. ಇದುವರೆವಿಗೂ ಹೇಳಿದ ಯೋಗಿಗಳೆಲ್ಲರೂ ತಮ್ಮ ತಮ್ಮ ದೇಶದ ಎಲ್ಲೆಯನ್ನು ಮೀರಿದವರಲ್ಲ. ಕೆಲವರಂತೂ ತಾವಿದ್ದ ಊರನ್ನೇ ದಾಟಿ ಹೊರಗೆ ಬಂದಂತೆ ತೋರದು. ಆದರೆ ಶ್ರೀ ರಾಮಕೃಷ್ಣರು ಭರತ ಖಂಡದಲ್ಲೇ ಅಲ್ಲದೆ ಖಂಡಾಂತರಗಳಲ್ಲೂ ಕೀರ್ತಿಯನ್ನು ಪಡೆದವರು. ಕಳೆದ ಶತಮಾನದಲ್ಲಿ (೧೮೩೬) ವಂಗ ದೇಶದಲ್ಲಿ ಸಾಮಾನ್ಯ ಬ್ರಾಹ್ಮಣ ಕುಲದಲ್ಲಿ ಜನಿಸಿ, ಹೆಚ್ಚಿನ ಓದು ಬರಹವಿಲ್ಲದೆ, ಒಂದಾನೊಂದು ಕಾಳಿಕಾ ದೇವಿ ಗುಡಿಯ ಪೂಜಾರಿಯಾಗಿ ಇದ್ದವರು ಈತ. ಆದರೆ ಸಹಜವಾದ ಆರ್ದ್ರಹೃದಯ, ಆಧ್ಯಾತ್ಮಿಕ ತತ್ತ್ವಗಳಲ್ಲಿ ಅಭಿಮಾನ, ದೈವಭಕ್ತಿ ಇವುಗಳಿದ್ದುದರಿಂದ ಪ್ರಯತ್ನವಿಲ್ಲದೆಯೇ ಅವರಿಗೆ ದೇವತಾಸಾಕ್ಷಾತ್ಕಾರ ಮೊದಲಾದ ಆಧ್ಯಾತ್ಮಿಕಾನುಭವಗಳು ತಾವಾಗಿಯೇ ಆಗುತ್ತಿದ್ದುವಂತೆ. ಇದ್ದಕ್ಕಿದ್ದಂತೆ ಚಿಕ್ಕಂದಿನಿಂದಲೇ ಅವರಿಗೆ ಸಮಾಧಿಯ ಅನುಭವವಾಗುತ್ತಿತ್ತಂತೆ. ಇವರು ತಾಂತ್ರಿಕ ಪೂಜೆ, ಹಠಯೋಗಾದಿ ಸಾಧನೆಗಳು ಇವನ್ನು ಸಕ್ರಮವಾಗಿ ಆಚರಿಸಿ ಕಡೆಗೆ ರಾಜಯೋಗಿಯಾಗಿಬಿಟ್ಟರು. ಇವರ

ಜೀವಿತದಲ್ಲಿ ಜರುಗಿದವೆಂದು ಹೇಳಲ್ಪಡುವ ವಿಚಿತ್ರಗಳಿಗೆ ಲೆಕ್ಕವಿಲ್ಲ. ಹಿಂದೂ ದೇಶದಲ್ಲಿಯ ಎಲ್ಲ ಮತಗಳ ಪ್ರಕಾರಗಳನ್ನೂ ಇವರು ಆಚರಿಸಿ ತತ್ತ್ವಾನುಭಾವವನ್ನು ಹೊಂದಿದರಂತೆ. ಇವರನ್ನು ಹುಚ್ಚನೆಂದು ಕೆಲವರು ಭಾವಿಸಿದರು. ಇಂದಿಗೂ ಹಾಗೆಂದುಕೊಳ್ಳುವವರು ಇಲ್ಲದಿಲ್ಲ ಅದು ಹೇಗಾದರೂ, ವಿಜ್ಞಾನಪ್ರಧಾನವಾದ ಆಂಗ್ಲ ವಿದ್ಯೆಯನ್ನು ಅಭ್ಯಾಸಮಾಡಿದ ಅನೇಕರು ಆಧ್ಯಾತ್ಮಿಕ ಪ್ರಪಂಚದಲ್ಲಿಯೇ ನಂಬಿಕೆಯಿಲ್ಲದೆ ಕೇವಲ ನಾಸ್ತಿಕರಾಗಿದ್ದ ಸಮಯದಲ್ಲಿ—ಆಸ್ತಿಕತೆಯುಳ್ಳವರು, ಹಿಂದೂಧರ್ಮ ಮೋಕ್ಷಸಾಧಕವಲ್ಲವೆಂದು ತಿರಸ್ಕರಿಸಿ ಕ್ರಿಸ್ತಮತವನ್ನೋ, ಇಲ್ಲ ಅದರ ರೂಪಾಂತರವಾದ ಬ್ರಹ್ಮಸಮಾಜವನ್ನೋ ಆರ್ಯಸಮಾಜವನ್ನೋ ಆಶ್ರಯಿಸುತ್ತಿದ್ದ ಕಾಲವದು. ಅದು ಹಿಂದುಗಳಲ್ಲಿ ಆಸ್ತಿಕರೆಂದೆನಿಸಿಕೊಂಡವರು ಪರಸ್ಪರ ಜಾತಿ ಮತ ದ್ವೇಷಗಳಿಂದ ಅವರಿಗೆ ಮೋಕ್ಷವಿಲ್ಲವೆಂದು ಇವರೂ, ಇವರಿಗಿಲ್ಲವೆಂದು ಅವರೂ, ಒದ್ದಾಡಿಕೊಳ್ಳುತ್ತಿದ್ದ ಕಾಲವಾಗಿತ್ತು. ಅಂಥ ಸಂದರ್ಭದಲ್ಲಿ—ಈ ಮಹಾಪುರುಷರು ಜನ್ಮತಾಳಿ ಸಗುಣ ನಿರ್ಗುಣೋಪಾಸನೆಗಳ ವಿವಿಧ ಭೇದಗಳನ್ನು ತಾನು ಪ್ರಯತ್ನ ಪೂರ್ವಕವಾಗಿ ಸಾಧಿಸಿ, ಎಲ್ಲ ಮತಗಳ ಸಾರವೂ ಒಂದೇ ಎಂದೂ, ದೈವವೆಂದು ಒಂದನ್ನು ಅಂಗೀಕರಿಸುವ ಯಾವ ಮತದಲ್ಲಾದರೂ ಶ್ರದ್ಧೆಯಿಂದ ಉಪಾಸನೆ ಮಾಡಿದರೆ ಪರಮಫಲವಾದ ಅದ್ವೈತ ಲಭಿಸುತ್ತದೆಂದೂ ನಂಬುವಂತೆ ತಾನೇ ಆಚರಿಸಿ ತೋರಿಸಿದರು. ವಿಜ್ಞಾನಧನರಾದ ವಿವೇಕಾನಂದರಂಥವರು ಅನೇಕ ಲೌಕಿಕ ವೈದಿಕ ರನ್ನು ಶಿಷ್ಯರನ್ನಾಗಿ ಮಾಡಿಕೊಂಡು, ಅದರ ಮೂಲಕವಾಗಿ ಹಿಂದೂಮತ ಶಾಸ್ತ್ರಗಳ ಘನತೆ ಯೂರೋಪು ಅಮೆರಿಕಾ ಮುಂತಾದ ಖಂಡಾಂತರಗಳಲ್ಲಿಯೂ ಹರಡು ವಂತೆ ಮಾಡಿದರು. ಇವರ ಪ್ರಕಾರ ಅದ್ವೈತವೇ ಪ್ರಧಾನತತ್ತ್ವವೆಂದು ಹೇಳುವುದ ಕ್ಕಾಗಲಿ ಖಂಡಿಸುವುದಕ್ಕಾಗಲಿ, ನನಗೆ ಶಕ್ತಿಯಿಲ್ಲವೆಂದು ಮೊದಲೇ ಹೇಳಿದೆನಲ್ಲವೆ ? ಅದು ಹೇಗಿದ್ದರೂ ದೇಶಕ್ಕೆ ಈತನು ಅನುಗ್ರಹಿಸಿದ ಮಹಾ ಉಪದೇಶ ಬೇರೆ ಬೇರೆ ಮತದವರು ಒಬ್ಬರಲ್ಲೊಬ್ಬರು ಜಗಳವಾಡಬೇಕಾದ ಅಗತ್ಯವಿಲ್ಲ ಎಂಬುದೇ, ಯಾವ ಮತವನ್ನು ಆಶ್ರಯಿಸಿದರೂ ಫಲವೊಂದೇ ಆದದ್ದರಿಂದ ಅವರವರ ಸಂಪ್ರದಾಯಕ್ಕೆ, ಇಷ್ಟಕ್ಕೆ ತಕ್ಕ ಮತವನ್ನು ಅನುಸರಿಸಬಹುದು. ಹೊರ ಪ್ರಪಂಚದಲ್ಲಿ ಶಾಂತಿದಾಂತಿ ಗಳನ್ನು ಹೊಂದಿ ಪರೋಪಕಾರ, ಅನಾಥಸೇವೆ ಮಾಡುವುದೇ ಪರಮ ಧರ್ಮವೆಂದು ಇವರು ಬೋಧಿಸಿದರು. ಸಮಾಜ ಸಂಸ್ಕಾರ, ಮತಸಂಸ್ಕಾರ ಎಂಬ ಹೆಸರಿನಲ್ಲಿ ಜಾತಿ ಭೇದ ವಿಗ್ರಹಾರಾಧನೆ ಮೊದಲಾದುವನ್ನೆಲ್ಲ ಒಂದೇ ಸಲ ಬುಡಸಹಿತ ನಾಶಮಾಡಲು ಪ್ರಯತ್ನಪಡುವುದು ಹುಚ್ಚುತನ. ಅವು ಒಂದು ಕಡೆ ನಡೆದರೂ ಇನ್ನೊಂದು ಕಡೆ, ಒಂದು ರೂಪವನ್ನು ಹಾಳುಮಾಡಿದರೂ ಬೇರೊಂದು ರೂಪದಲ್ಲಿ ಮೇಲೇಳುವುದು. ದಯ ದಾಕ್ಷಿಣ್ಯ ಭಕ್ತಿ ನಂಬಿಕೆ ಮೊದಲಾದ ಉದಾರ ಗುಣಗಳು ಜನಗಳಲ್ಲಿ ಹೆಚ್ಚಾಗುತ್ತಾ ಬಂದಾಗ ಮೇಲಿನ ಜಾತಿಭೇದಾದಿಗಳು ತಾವಾಗಿಯೇ ಬಲಹೀನ ವಾಗುವುವು. ಆದ್ದರಿಂದ ಅವುಗಳನ್ನು ಅಡಗಿಸುವುದಕ್ಕಾಗಲೀ ಸ್ಥಾಪಿಸುವುದರಲ್ಲಾಗಲಿ,

ಶ್ರದ್ಧೆವಹಿಸದೆ ಉದಾಸೀನವಾಗಿರುವುದೇ ಅವಶ್ಯ...."ತಿರುಪತಿಗೆ ಹೋಗಿ ದೇವರಿಗೆ ಪೊಂಗಲಿನ ಸೇವಾರ್ಥ ಮಾಡಿಸಿದರೆ ನನಗೂ ಮುಕ್ತಿ ಲಭಿಸುತ್ತದೆಂದು" ದೃಢವಾಗಿ ನಂಬಿ ತಿರುಪತಿಯಾತ್ರೆ ಖರ್ಚಿಗೆ ಸಂಪಾದಿಸಿಕೊಂಡು ಕಾಲುನೋವನ್ನು ಗಮನಿಸದೆ ಬೆಟ್ಟ ಹತ್ತಿ ಪರಮಾನಂದದಿಂದ ದೇವರನ್ನು ದರ್ಶಿಸಿ "ಧನ್ಯನಾದೆನಲ್ಲವೆ" ಎಂದು ಕಣ್ಣೀರು ಸುರಿಸುವವನಿಗೆ "ಇದು ಬರೀ ಕರಿಯ ಬೊಂಬೆಯೋ, ದೇವರೂ ಅಲ್ಲ ದೆಯ್ಯವೂ ಅಲ್ಲ, ಇದಕ್ಕೇಕೆ ನಮಸ್ಕಾರ" ಎಂದು ಎಷ್ಟು ಹೇಳಿದರೂ ಪ್ರವಾಹಕ್ಕೆ ಎದುರಾಗಿ ಹೋದಂತಾಗುತ್ತದಲ್ಲದೆ ಫಲವಿಲ್ಲ. ಅವರ ಮನಸ್ಸಿನ ನೆಮ್ಮದಿಯನ್ನು ಕೆಡಿಸಿದಂತಾಗುತ್ತದೆಯಷ್ಟೆ. ಒಂದು ಅಭಿಪ್ರಾಯವನ್ನು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಿಸಲು ಎಷ್ಟು ಕಾಲ ಹಿಡಿಯುವುದೋ, ಅದನ್ನು ಹೋಗಲಾಡಿಸುವುದಕ್ಕೂ ಅದಕ್ಕಿಂತ ಹೆಚ್ಚು ಕಾಲ ಬೇಕಾಗುತ್ತದೆ. ಈ ತತ್ತ್ವವನ್ನು ರಾಮಕೃಷ್ಣ ಪರಮಹಂಸರಂತೆ—ನನಗೆ ತಿಳಿದಂತೆ—ಇತರ ಬೋಧಕರಾರೂ ಗಮನಿಸಲಿಲ್ಲ. ಈ ಜಾತಿಭೇದ ಮುಂತಾದವನ್ನೆಲ್ಲ ಕಡೆಗೆ ತಾನು ಬಿಟ್ಟವನೇ. ಆದರೆ ಇತರರನ್ನು ಹಾಗೆ ಮಾಡಬೇಕೆಂದು ನಿರ್ಬಂಧಿಸಿ ಬೈಯಲಿಲ್ಲ. ನಿರ್ಬಂಧದಿಂದಲೂ ದೂಷಣೆಯಿಂದಲೂ ಶ್ರದ್ಧೆಯನ್ನುಂಟು ಮಾಡುವುದು ಅಸಾಧ್ಯವೆಂದೂ ಅನಾವಶ್ಯಕವೆಂದೂ ಖಂಡಿಸಿ ಉಪದೇಶ ಮಾಡುವವನಿಗಿಂತ ಮೌನವಾಗಿ ಆಚರಿಸುವವನೇ ಒಳ್ಳೆಯ ಸಂಸ್ಕಾರಕನೆಂದು ಇವರು ತಿಳಿದಿದ್ದರು. ಬಲವಂತದ ಮಾಘಸ್ನಾನದಿಂದ ಪುಣ್ಯ ಬರಬಹುದೇನೋ, ಆದರೆ ಚಳಿ ಹೋಗದಲ್ಲವೇ !

ರಾಮಕೃಷ್ಣ ಪರಮಹಂಸರ ಜೀವಿತ ಚರಿತ್ರ ವಿಷಯಗಳನ್ನು *The Life of Sri Ramakrishna* ಎಂಬ ಗ್ರಂಥದಿಂದ ಸಂಗ್ರಹಿಸಿದೆ.

ಅವಲೋಕನ

ಜನಪದ ಭಾಷಾವಿಜ್ಞಾನ : ವಿಲ್ಯಂ ಮಾಡ್ತ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೭.

ಇಂದು ಜಾನಪದ ಅಧ್ಯಯನದಲ್ಲಿ ಭಾಷಾವಿಜ್ಞಾನದ ಜ್ಞಾನ ಎಷ್ಟು ಅನಿವಾರ್ಯ ಹಾಗೂ ಅಗತ್ಯ ಎಂಬುದನ್ನು ಡಾ. ವಿಲ್ಯಂಮಾಡ್ತ ಅವರು ತಮ್ಮ 'ಜನಪದ ಭಾಷಾ ವಿಜ್ಞಾನ' ಎಂಬ ಪುಟ್ಟ ಕೃತಿಯಲ್ಲಿ ಓದುಗರಿಗೆ ಮನದಟ್ಟುಮಾಡಿಸಿದ್ದಾರೆ. ಅನ್ವಯಿಕ ಭಾಷಾವಿಜ್ಞಾನದಿಂದ ವಿಶೇಷವಾಗಿ ಲಾಭ ಪಡೆಯುತ್ತಿರುವ ಸಮಾಜ ಶಾಸ್ತ್ರ, ಮನಃಶಾಸ್ತ್ರ, ಮಾನವಶಾಸ್ತ್ರಗಳಂತೆ, ಜಾನಪದವೂ ತನ್ನ ಕಾರ್ಯಕ್ಷೇತ್ರ ವನ್ನು ಭಾಷಾವಿಜ್ಞಾನದ ಸಹಾಯದಿಂದ ವಿಸ್ತರಿಸಿಕೊಳ್ಳುವತ್ತ ದಾಪುಗಾಲು ಹಾಕುತ್ತಿದೆ. ಸಾಮಾಜಿಕ ಭಾಷಾವಿಜ್ಞಾನ (Sociolinguistics), ಮನೋ ಭಾಷಾವಿಜ್ಞಾನ (Psycholinguistics), ಮಾನವ ಭಾಷಾವಿಜ್ಞಾನ (Ethno-linguistics)ಗಳಂತೆಯೆ ಭಾಷಾವಿಜ್ಞಾನದ ಸಂಸರ್ಗದಿಂದಾಗಿ ಜನಪದ ಭಾಷಾ ವಿಜ್ಞಾನ(Floklinguistics) ತಲೆ ಎತ್ತುತ್ತಿದೆ. ಈ ನಿಟ್ಟಿನಲ್ಲಿ ಕನ್ನಡಕ್ಕೆ ಸಂಬಂಧಿಸಿ ದಂತೆ ಡಾ. ಮಾಡ್ತ ಅವರ ಈ ಕೃತಿ ಅತ್ಯಂತ ಗಮನಾರ್ಹವಾದುದು.

ಭಾಷಾವಿಜ್ಞಾನದ ಶಾಖೆಗಳಲ್ಲಿ ಇತ್ತೀಚೆಗೆ ಹೆಚ್ಚಿನ ಮಾನ್ಯತೆಯನ್ನು ಪಡೆದು ಕೊಂಡಿರುವ 'ಸಾಮಾಜಿಕ ಭಾಷಾವಿಜ್ಞಾನ'ದ ವಿವಿಧ ಆಯಾಮಗಳಲ್ಲಿ 'ಜನಪದ ಭಾಷಾವಿಜ್ಞಾನ'ವೂ ಒಂದೆಂಬುದನ್ನು ಐದು ದಶಕಗಳಷ್ಟು ಹಿಂದೆಯೇ ವಿಲಿಯಂ ಬ್ರೈಟ್ ಅವರು ಒತ್ತಿಹೇಳಿದ್ದಾರೆ. ಹಾಗೆ ನೋಡಿದರೆ ಭಾಷಾವಿಜ್ಞಾನ-ಜಾನಪದ ಇವುಗಳ ಅವಿನಾಸಂಬಂಧ ಇಂದು ನಿನ್ನೆಯದಲ್ಲ. "ಜಾನಪದವನ್ನು ಕುರಿತು ಭಾಷಾವಿಜ್ಞಾನಿಗಳ ಆಸಕ್ತಿ ೧೯ನೆಯ ಶತಮಾನದ ಆದಿಯಲ್ಲಿಯೇ ಸಾಕಷ್ಟು ಕ್ರಿಯಾ ಶೀಲವಾಗಿತ್ತು. ಅಂದಿನ ಭಾಷಾವಿಜ್ಞಾನಿಗಳು ಜಾನಪದ ಕ್ಷೇತ್ರದಲ್ಲಿಯೂ ದುಡಿಯು ತ್ತಿದ್ದರು. ಈ ಕಾರಣದಿಂದಲೇ ಜಾನಪದ ವೈಜ್ಞಾನಿಕ ವಿಶ್ಲೇಷಣೆಯಲ್ಲಿ ಭಾಷಾ ವೈಜ್ಞಾನಿಕ ವಿಶ್ಲೇಷಣೆಯ ಪದ್ಧತಿಗಳೇ ಅಂದಿನಿಂದ ಇಂದಿನವರೆಗೂ ಮಾದರಿಗಳಾಗಿ ಉಳಿದಿವೆ" ಎನ್ನುವ ಮಾಡ್ತ ಅವರ ಮಾತುಗಳಲ್ಲಿ ಹುರುಳಿದೆ. ಇದಕ್ಕೆ ಪೂರಕವಾಗಿ ಜನಪದ ಕಥೆಗಳಲ್ಲಿಯ ಪಾಠಾಂತರಗಳ ಭೌಗೋಳಿಕ ವಿತರಣೆಯನ್ನು ಅವಲಂಬಿಸಿ ಅವುಗಳ ಪ್ರಾಗ್‌ರೂಪವನ್ನು ನಿರ್ಧರಿಸುವ ಫಿನ್ನಿಷ್ ಪದ್ಧತಿಗೂ ಭಾಷಾವಿಜ್ಞಾನದಲ್ಲಿ ಭಾಷೆಗಳ ನಡುವಣ ಜ್ಞಾತಿಸಂಬಂಧವನ್ನು ಗುರುತಿಸಲು ಬಳಸುವ ತೌಲನಿಕ ಪದ್ಧತಿಗೂ ಇರುವ ಸ್ಪಷ್ಟ ಹೋಲಿಕೆಯನ್ನು ಇಲ್ಲಿ ಅವರು ನಿದರ್ಶನವಾಗಿಸಿದ್ದಾರೆ.

ಚಿಕ್ಕದಾದರೂ ಚೊಕ್ಕವಾಗಿ ರೂಪುತಳೆದಿರುವ ' ಜನಪದ ಭಾಷಾವಿಜ್ಞಾನ ' ಅನೇಕ ಮೌಲಿಕ ಮಾಹಿತಿಗಳನ್ನು ಒಳಗೊಂಡಿದೆ. ' ಭಾಷಾವಿಜ್ಞಾನ ಮತ್ತು ಜಾನಪದ ವಿಜ್ಞಾನ ', ' ಜಾನಪದ ವಿಜ್ಞಾನ ಮತ್ತು ಕನ್ನಡ ಜಾನಪದ ', ಜಾನಪದ ವಿಜ್ಞಾನ ಮತ್ತು ಕ್ಷೇತ್ರಕಾರ್ಯ ', ಎಂಬ ಈ ಮೂರು ಲೇಖನಗಳು ಸೈದ್ಧಾಂತಿಕ ಹಿನ್ನೆಲೆಯ ಅಸ್ತಿಭಾರವನ್ನು ಹಾಕುವಲ್ಲಿ ಉಪಯುಕ್ತವೆನಿಸಿವೆ. ' ಜನಪದ ಕಥೆ : ಸೈರ ವಿಶ್ಲೇಷಣೆ ' ಮತ್ತು ' ಜನಪದ ಕಥೆ : ಪಠ್ಯ ವಿಶ್ಲೇಷಣೆ ' ಎಂಬ ಈ ಎರಡು ವಿಶ್ಲೇಷಣ ಮಾದರಿಗಳು, ಪ್ರಾಯೋಗಿಕವಾಗಿ ಹೊಸತನ್ನು ಜನಪದ ಭಾಷಾ ವಿಜ್ಞಾನದಲ್ಲಿ ದುಡಿಯಲಿಚ್ಛಿಸುವವರಿಗೆ ನೀಡಿವೆ. ಜೊತೆಗೆ ಕೃತಿಯ ಅಂತ್ಯಘಟ್ಟದಲ್ಲಿ ಅಡಕಗೊಳಿಸಲಾಗಿರುವ ' ಪಾರಿಭಾಷಿಕ ಪದಕೋಶಗಳು ' ಮತ್ತು ' ಆಕರ ಗ್ರಂಥ ಸೂಚಿ ' ಈ ಬಗೆಯ ಅಧ್ಯಯನದ ಮುಂದುವರಿಕೆಗೆ ಪ್ರಚೋದಕ ಪರಾಮರ್ಶನ ಸಾಮಗ್ರಿಗಳಾಗಿವೆ.

ಭಾಷಾವಿಜ್ಞಾನ ಮತ್ತು ಜಾನಪದ ವಿಜ್ಞಾನಗಳ ನಡುವಣ ಸಂಬಂಧದ ಗಾಢತೆ ಹಾಗೂ ಪ್ರಾಚೀನತೆಯನ್ನು ಮೊದಲ ಲೇಖನದಲ್ಲಿ ಅತ್ಯಂತ ಸೂಕ್ಷ್ಮವಾಗಿ ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಈ ಎರಡೂ ಶಾಖೆಗಳು ಹೇಗೆ ಒಂದರಿಂದ ಮತ್ತೊಂದು ಲಾಭಗಳಿಸಬಹುದು, ಅರೆಕೊರೆಗಳನ್ನು ತುಂಬಿಕೊಳ್ಳಬಹುದು, ಈ ದೃಷ್ಟಿಯಲ್ಲಿ ಹಿಂದೆ ನಡೆದಿರುವ ಪ್ರಯತ್ನಗಳಾವುವು ? ಮುಂದೆ ಸಾಗಬೇಕಾಗಿರುವ ನಿಚ್ಚಳ ಮಾರ್ಗ ಯಾವುದು ? ಇತ್ಯಾದಿ ವಿಷಯಗಳ ಸ್ಥೂಲ ವಿವರಣೆ ಈ ಭಾಗದಲ್ಲಿ ಲಭ್ಯವಿದೆ.

' ಜಾನಪದವಿಜ್ಞಾನ ಮತ್ತು ಕನ್ನಡ ಜಾನಪದ ' ಎಂಬ ಎರಡನೆಯ ಶೀರ್ಷಿಕೆ ಯಡಿಯಲ್ಲಿ ' ಜಾನಪದ ' ಪಾರಿಭಾಷಿಕ ಶಬ್ದವಾಗಿ ಬಳಕೆಗೊಂಡ ಬಗೆ, ಜನಪದ ಅಧ್ಯಯನದ ನೆಲೆಬೆಲೆ, ಪ್ರಸ್ತುತ ಧೋರಣೆ, ಹಾಗೂ ಪಾಶ್ಚಾತ್ಯರು ಬಳಸುತ್ತಿರುವ ವಿಶ್ಲೇಷಣ ಮಾದರಿಗಳ ಪರಿಚಯವನ್ನು ಮಾಡಲಾಗಿದೆ ಇವುಗಳ ಜೊತೆಗೆ ಆರೋಗ್ಯಕರವಾದ ರೀತಿಯಲ್ಲಿ ಕನ್ನಡ ಜಾನಪದ ಬೆಳೆಯಬೇಕಾದ ವೈಜ್ಞಾನಿಕ ಕಳಕಳಿ ಈ ಭಾಗದಲ್ಲಿ ಕಂಡುಬರುತ್ತದೆ.

' ಜನಪದ ಭಾಷಾವಿಜ್ಞಾನ ಮತ್ತು ಕ್ಷೇತ್ರಕಾರ್ಯ ' ಎಂಬ ಭಾಗ ಹಲವಾರು ದೃಷ್ಟಿಕೋನಗಳಿಂದ ಇಡೀ ಕೃತಿಯಲ್ಲಿ ಮಹತ್ವದ್ದಾಗಿದೆ. ಈ ಭಾಗದ ವಸ್ತು ನಿರ್ವಹಣೆಯಲ್ಲಿ ಸರಳತೆ, ವಿಚಾರ ಸ್ಪಷ್ಟತೆ, ಹಾಗೂ ಅನುಭವ ನೈಪುಣ್ಯ ಎದ್ದು ಕಾಣುತ್ತವೆ. ಭಾಷಾವಿಜ್ಞಾನಕ್ಕಿಂತಲೋ ಅಂತೆಯೇ ಜಾನಪದ ಅಧ್ಯಯನಕ್ಕೂ ಅನಿವಾರ್ಯವಾಗಿರುವ ಕ್ಷೇತ್ರಕಾರ್ಯದ ಮಹತ್ವ, ಕ್ಷೇತ್ರಕಾರ್ಯವನ್ನು ಯಶಸ್ವಿ ಯಾಗಿಸುವುದರಲ್ಲಿ ಅನ್ವೇಷಕನ ಪಾತ್ರ, ಅವನಿಗಿರಬೇಕಾದ ಕೌಶಲಗಳು, ಈತನ ಕರ್ತವ್ಯ, ಇವನ ಜೊತೆಗೆ ಸಹಕರಿಸುವಲ್ಲಿ ನಿರೂಪಕನ ಜವಾಬ್ದಾರಿ, ಹಾಗೂ ದತ್ತ ಸಂಗ್ರಹಣೆಯಲ್ಲಿ ಬಳಸಬಹುದಾದ ವೈಜ್ಞಾನಿಕ ತಂತ್ರಗಳು ಇತ್ಯಾದಿಗಳ ಬಗೆಗೆ

ಲೇಖಕರು ಮೊದಲ ದರ್ಜೆಯ ಜ್ಞಾನವನ್ನಿಲ್ಲಿ ಪ್ರದರ್ಶಿಸಿದ್ದಾರೆ. ಪಾರಿಭಾಷಿಕ ಶಬ್ದಗಳ ಗೊಂದಲವಿಲ್ಲದೆ, ಸಂಕೀರ್ಣ ವಿಷಯದ ವಿವೇಚನೆ ಇಲ್ಲದೆ, ಸರಳ ಸುಂದರವಾದ ಅನುಭವಾಭಿವ್ಯಕ್ತತೆಯನ್ನು ಪಡೆದಿರುವ ಈ ಭಾಗ ಇಡೀ ಪುಸ್ತಕದ ಹೃದಯಂಗಮ ತಾಣವಾಗಿದೆ. ಲೇಖಕರ ಬರವಣಿಗೆಯ ಈ ಬನಿ, ಸರಳ ಅಭಿವ್ಯಕ್ತಿ ಇದೇ ಮಟ್ಟದಲ್ಲಿ ಉಳಿದ ಭಾಗಗಳಲ್ಲೂ ಪ್ರದರ್ಶಿತವಾಗಿದ್ದಲ್ಲಿ ಇಡೀ ಕೃತಿಗೆ ವಿಶೇಷ ಶೋಭೆ ಪ್ರಾಪ್ತವಾಗುತ್ತಿತ್ತು.

'ಜನಪದಕಥೆ: ಪ್ಯೆರ ವಿಶ್ಲೇಷಣೆ' ಹಾಗೂ 'ಜನಪದಕಥೆ: ಪಠ್ಯವಿಶ್ಲೇಷಣೆ'ಗಳು ಮಾಡ್ತ ಅವರಿಗೆ ಭಾಷಾವಿಜ್ಞಾನ ಹಾಗೂ ಜಾನಪದ ಈ ಎರಡೂ ವಿಷಯಗಳ ಮೇಲೆ ಇರುವ ಹಿಡಿತಕ್ಕೆ ನಿದರ್ಶನಗಳಾಗಿವೆ. ಮುಂದೆ ನಡೆಯಬೇಕಾದ ಕನ್ನಡ ಜನಪದ ಭಾಷಾವಿಜ್ಞಾನ ವಿಶ್ಲೇಷಣೆಗೆ ಇಲ್ಲಿ ಮಾರ್ಗಸೂಚಿ ಕೈಮರವಿದೆ.

ಭಾಷಾವಿಜ್ಞಾನ ಮತ್ತು ಜಾನಪದ ಕ್ಷೇತ್ರಾಭಿರುಚಿಯುಳ್ಳ ಎಲ್ಲರಿಗೂ ಆಸ್ವಾದನಯೋಗ್ಯವಾದ ಕೃತಿಯನ್ನು ಡಾ. ವಿಲ್ಯಂಮಾಡ್ತ ಹೊರತಂದಿದ್ದಾರೆ. ವೈಜ್ಞಾನಿಕ ಬರವಣಿಗೆಗೆ ಇರಬೇಕಾದ ಕಸುವು, ಕಾಳಜಿ, ಭಾಷಾಶೈಲಿ ಇಲ್ಲಿ ಎದ್ದು ಕಾಣುತ್ತವೆ. ಕೃತಿಯೊಡಲಲ್ಲಿ ಹಾಗೂ ಮುಖಪುಟದಲ್ಲಿ ಬಿಡಿಸಲಾಗಿರುವ ರೇಖಾ ಚಿತ್ರಗಳು ಒಂದೆಡೆ ಮನಮೋಹಕವಾಗಿದ್ದರೆ, ಇನ್ನೊಂದೆಡೆ ಮುದ್ರಣ ದೋಷಗಳು ಕಣ್ಣು ಕುಕ್ಕುತ್ತವೆ. ಪಾರಿಭಾಷಿಕ ಪದಕೋಶ ರಚನೆಯಲ್ಲಿ ಈಗಾಗಲೇ ಪ್ರಚಾರದಲ್ಲಿರುವ ಪದಗಳನ್ನು ಕೈಬಿಟ್ಟು ಸ್ವಲ್ಪ 'ಚೂಸಿ' ಆಗಿದ್ದರೆ ಒಳಿತಾಗುತ್ತಿತ್ತು. ಕುಂದುಕೊರತೆಗಳೇನೇ ಇರಲಿ ಇದೊಂದು ಸ್ತುತ್ಯರ್ಹ ಪುಟ್ಟ ಕೃತಿ. ಮೂಲತಃ ಭಾಷಾವಿಜ್ಞಾನಿಯಾದ ಡಾ. ವಿಲ್ಯಂ ಮಾಡ್ತ ಅವರು ಭಾಷಾವಿಜ್ಞಾನದೊಡನೆ ನೇರ ಸಂಬಂಧವನ್ನಿಟ್ಟುಕೊಂಡಿರುವ ಜಾನಪದದಂಥ ಪ್ರಚಲಿತ ಅಧ್ಯಯನ ಕ್ಷೇತ್ರದಲ್ಲಿ ಆಸಕ್ತಿ ತೋರಿಸಿರುವುದು ಅಭಿನಂದನಾರ್ಹ.

— ಡಾ. ಸೋಮಶೇಖರಗೌಡ

ನವ ಮಾನವತಾವಾದ : ಎಂ. ಎನ್. ರಾಯ್ ; ಅನು—ಬಿ. ಕೃಷ್ಣಭಟ್ಟ, ಜಯಕುಮಾರ ಅನಗೋಳ, ಪ್ರಕಾಶನ ; ಎಂ. ಎನ್. ರಾಯ್ ಶತಮಾನೋತ್ಸವ ಸಮಿತಿ, ಕರ್ನಾಟಕ, ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು, ೧೯೮೭

ಮಾನವೇಂದ್ರನಾಥರಾಯ್ ಭಾರತದ ಕಮ್ಯೂನಿಸ್ಟ್ ಚಳುವಳಿಯಲ್ಲಿ ಕೆಲವು ಬಾರಿ ಕೇಳಿಬರುವ ಹೆಸರು. ಬಂಗಾಳದ ಮುಂದುವರಿದ ಜಾತಿಗೆ ಸೇರಿದ ಅವರು ತಮ್ಮ ರಾಜಕೀಯ ಜೀವನವನ್ನು ಈ ಶತಮಾನದ ಆದಿ ಭಾಗದಲ್ಲಿದ್ದ ರಾಷ್ಟ್ರವಾದಿ (Nationalist) ಭಯೋತ್ಪಾದಕ ಚಳುವಳಿಯಿಂದ ಪ್ರಾರಂಭಿಸಿದರು. ಶಸ್ತ್ರಾಸ್ತ್ರಗಳಿಗಾಗಿ ಮತ್ತು ಬ್ರಿಟಿಷರಿಂದ ತಲೆಮರೆಸಿಕೊಳ್ಳುವುದಕ್ಕಾಗಿ ದೇಶದೇಶಗಳನ್ನು ಅಲೆಯುತ್ತಿದ್ದಾಗ, ಬೋರೋಡಿನ್ ಎಂಬ ಮಹಾಶಯನ ಮುಖಾಂತರ ಕಮ್ಯುನಿಸ್ಟ

ರಾದರು. ೧೯೨೦ರ ಹೊತ್ತಿಗೆ ಕೇವಲ ತಮ್ಮ ಮೂವ್ವತ್ತಮೂರನೇ ವರ್ಷಕ್ಕೇ ಕಮ್ಯುನಿಸ್ಟ್ ಅಂತಾರಾಷ್ಟ್ರೀಯದ (International) ಸದಸ್ಯರಾಗಿ, ಲೆನಿನ್‌ರಿಗೆ ಸಮನಾಗಿ ಸೈದ್ಧಾಂತಿಕವಾದ ವಿವಾದ ನಡೆಸುವ ಸಾಮರ್ಥ್ಯ ಹೊಂದಿದ್ದರು. ವಸಾಹತು ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಪಾತ್ರದ ಬಗ್ಗೆ ರಾಯ್‌ರ ವಿಚಾರಗಳನ್ನು ಲೆನಿನ್‌ರ ಸಿದ್ಧಾಂತದೊಟ್ಟಿಗೇ ಸಮನಾಗಿ ಅಂತಾರಾಷ್ಟ್ರೀಯ ಮನ್ನಿಸಿತ್ತು. ಚೀನಾದ ಕ್ರಾಂತಿಯಲ್ಲಿ ಕೌಮಿಂಗ್‌ಟಾಂಗ್ ಪಕ್ಷದೊಡನೆ ಅಲ್ಲಿನ ಕಮ್ಯೂನಿಸ್ಟ್ ಪಕ್ಷ ಹೇಗೆ ವ್ಯವಹರಿಸಬೇಕೆಂಬುದರ ಬಗೆಗಿನ ಸ್ಟಾಲಿನ್‌ರ ಮಾರ್ಗದರ್ಶನದಿಂದಾಗಿ, ಅಲ್ಲಿನ ಕಮ್ಯೂನಿಸ್ಟರ ಹತ್ಯಾಕಾಂಡ ನಡೆಯಿತು. ಈ ಅನಾಹುತಕ್ಕೆ ರಾಯ್ ಮತ್ತು ಬೊರೋಡಿನ್ ಕಾರಣ ಎಂದು ಸ್ಟಾಲಿನ್ ತಪ್ಪುಹೊರಿಸಿದ. ರಷ್ಯಾದಲ್ಲಿನ ಸ್ಟಾಲಿನ್‌ರ ಆಳ್ವಿಕೆಯಿಂದ ಬೇಸತ್ತು, ಭ್ರಮನಿರಸನಗೊಂಡು ಸಕ್ರಿಯ ರಾಜಕೀಯದಿಂದ ಹಿಂದೆಗೆದು, ಸೈದ್ಧಾಂತಿಕ ಅವಲೋಕನದಲ್ಲಿ ತೊಡಗಿದರು. ಕಮ್ಯೂನಿಸ್ಟ್ ಅಂತಾರಾಷ್ಟ್ರೀಯದಿಂದ ಉಚ್ಚಾಟಿಸಲ್ಪಟ್ಟ ರಾಯ್, ಭಾರತಕ್ಕೆ ಹಿಂದಿರುಗಿದ ನಂತರ, ತಮ್ಮ ಕ್ರಾಂತಿಕಾರಿ ಚಟುವಟಿಕೆಗಳಿಂದಾಗಿ ಆರುವರ್ಷಗಳ ಸೆರೆ ಅನುಭವಿಸಿದರು. ಜೈಲಿನಲ್ಲಿ ಯಾವುದೇ ಸೈದ್ಧಾಂತಿಕ ಬೆಳವಣಿಗೆ ಸಾಧ್ಯವಿಲ್ಲದೆ, ಅವರು ಭೌತಿಕ ಮತ್ತು ಸಮಾಜಶಾಸ್ತ್ರಗಳಲ್ಲಿ, ಮನುಷ್ಯನ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳ ನೆಲೆಯನ್ನು ಹುಡುಕತೊಡಗಿದರು. ಜೈಲಿನಿಂದ ಹೊರಬಂದನಂತರ ಅವರು ನಿಧಾನವಾಗಿ ಭೌತಿಕವಾದದಿಂದ ಮಾನವತಾವಾದಕ್ಕೆ ಬದಲಾದರು. ರಾಜಕೀಯ ನಾಯಕನಾಗುವುದರ ಬದಲು ತತ್ವಜ್ಞಾನಿಯಾದರು. ರಾಯ್‌ರ "ನವಮಾನವತಾವಾದ" ಕೃತಿ ಒಂದು ರೀತಿಯಲ್ಲಿ Polemical ಹೌದು. ಈ ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ರಾಯ್‌ರವರ ರಾಜಕೀಯ ಜೀವನದ ಪ್ರಸ್ತಾವನೆ ಅವಶ್ಯ. ಆದರೆ ಮೂಲದಲ್ಲಿರುವ ಪ್ರಸ್ತಾವನೆ ಈ ಅನುವಾದದಲ್ಲಿ ಇಲ್ಲ. ಆದ್ದರಿಂದ ಕನ್ನಡದ ಓದುಗರಿಗೆ ಪ್ರಾರಂಭದಲ್ಲಿಯೇ ತೊಡರು ಉಂಟಾಗುತ್ತದೆ.

ಈ ಪುಸ್ತಕದ ಎಳೆತ ಕಮ್ಯುನಿಸಂನೊಂದಿಗೆ ವಾದ ಮಾಡುವುದಾಗಿದೆ. ಕಮ್ಯುನಿಸ್ಟ್ ಪ್ರಣಾಳಿಕೆಯಿಂದೀಚೆಗೆ ಪ್ರಗತಿಪರ ಚಿಂತಕರಲ್ಲಿ ಅದರ ಬಗ್ಗೆ ಆಕರ್ಷಣೆ ಹೋಗಿ, ದಿಗಿಲು ಪ್ರಾರಂಭವಾಗಿದೆ. ಮಾರ್ಕ್ಸ್ ಎಣಿಸಿದಂತೆ ವಿಶ್ವಕ್ರಾಂತಿ ಆಗಲಿಲ್ಲ. ಕ್ರಮೇಣ ಕಮ್ಯೂನಿಸಂ ಮೂಲಭೂತ ನೈತಿಕ ಆಕರ್ಷಣೆ ಮತ್ತು ಮಾನವೀಯ ರೋಮಾಂಚಕತೆಯ ಹೊಳಪನ್ನು ಕಳೆದುಕೊಂಡಿತು. ಕಾರ್ಮಿಕರ ಕ್ರಾಂತಿಯ ಯುಗ ವಿಶ್ವಕ್ರಾಂತಿಯಲ್ಲಿ ಮುಕ್ತಾಯಗೊಂಡು ಮನುಷ್ಯನ ಹೊಸ ಚರಿತ್ರೆಯ ಆರಂಭ ಎನ್ನುವುದೇ ತಪ್ಪುಕಲ್ಪನೆಯಿಂದ ಕೂಡಿದೆ. ಕಮ್ಯುನಿಸಂಗೆ ಪ್ರತಿಯಾಗಿ ಫ್ಯಾಸಿಸಂ ತಲೆಎತ್ತಿದೆ. ರಷ್ಯನ್ ಕ್ರಾಂತಿಯು ಪ್ರಳಯದರ್ಶನವಾಗಿದೆ. ಇಂದು ಮಾನವೀಯ ಪರಂಪರೆಯಿಂದ ಸ್ಫೂರ್ತಿ ಪಡೆದ ಸಮಾಜವಾದಿ ಪ್ರಜಾತಂತ್ರವಾದ ಮತ್ತು ಸರ್ವಾಧಿಕಾರಗಳ ಸಮನ್ವಯ ಸಾಧ್ಯವಿಲ್ಲ. ಹೀಗೆ ಹೇಳುತ್ತ ರಾಯ್ ಪ್ರಜಾಸತ್ತೆಯ

ಲೋಪದೋಷಗಳನ್ನು ಎತ್ತಿತೋರಿಸುತ್ತಾರೆ. ಫ್ಯಾಸಿಸಂನ ಉಗಮಕ್ಕೆ ಪ್ರಜಾಸತ್ತೆಯ ವಿಫಲತೆಯೇ ಕಾರಣ ಆದರೂ ಭವಿಷ್ಯ ನಿರಾಶಾದಾಯಕವಲ್ಲ. ಮನುಷ್ಯನ ಸಾಂಸ್ಕೃತಿಕ ಮೌಲ್ಯಗಳನ್ನು ಆಧರಿಸಿದ ಪರಿಹಾರ ಸಾಧ್ಯ.

ಮಾರ್ಕ್ಸ್‌ವಾದವನ್ನು ವಿಮರ್ಶಿಸುತ್ತಾ ಅವರು ರಷ್ಯಾದ ಕ್ರಾಂತಿ ವಿಶ್ವಕ್ರಾಂತಿಯಾಗುವ ಸಾಧ್ಯತೆ ೧೯೨೧ರ ಹೊತ್ತಿಗೆ ಇಲ್ಲವಾಯಿತು. ಸಮಾಜವಾದಿ ಕ್ರಾಂತಿ ಎಂದೂ ಮಾರ್ಕ್ಸ್ ಎಣಿಸಿದಂತೆ ನಡೆಯಲಿಲ್ಲ. ಹೊಸ ಸಮಾಜದ ಬಗ್ಗೆ ಯಾವುದೇ ಕಲ್ಪನೆ ಇಲ್ಲದ ಲೆನಿನ್, ಸ್ಟಾಲಿನ್‌ರು ಹೊಸ ಸಮಾಜದ ನಿರ್ಮಾಣದ ಹೆಸರಿನಲ್ಲಿ ಮನುಷ್ಯನ ಅಸ್ತಿತ್ವವನ್ನೇ ನಾಶಮಾಡಲು ಹೊರಟರು. ಮಾರ್ಕ್ಸ್ ನಿರೀಕ್ಷಿಸಿದಂತೆ ಇಂಗ್ಲೆಂಡಿನಲ್ಲಿ ನಡೆಯಬೇಕಾದ ಕ್ರಾಂತಿ ರಷ್ಯಾದಲ್ಲಿ ನಡೆದುದು ಇತಿಹಾಸದ ಆಕಸ್ಮಿಕ. ವಿಶ್ವಕ್ರಾಂತಿ ನಿಧಾನವಾಗಿ ರಷ್ಯಾದ ಪ್ರಭುತ್ವವನ್ನು ರಕ್ಷಿಸುವ ಸಾಧನವಾಯಿತು.

ಈಗ ಮಾರ್ಕ್ಸ್‌ನ ವಿಧಿವಾದ (Fatalism) ದ ವಿರುದ್ಧ ಬಂಡೇಳಬೇಕು. ಊನವಾದ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗಿ, ಸರ್ವಗ್ರಾಹಿ ಚರಿತ್ರೆಯ ತತ್ವಜ್ಞಾನ ಇಂದು ಅವಶ್ಯವಾಗಿದೆ. ಮಾರ್ಕ್ಸ್ ಮೂಲತಃ ಮಾನವತಾವಾದಿ, ನೈತಿಕತೆಯಲ್ಲಿ ನಂಬಿಕೆಯಿಟ್ಟವನು. ಆತನ ಸಿದ್ಧಾಂತದ ಆರ್ಥಿಕ ನಿಯತವಾದ (Economic determinism) ದಿಂದ ಬಿಡುಗಡೆ ಪಡೆದರೆ, "ಮಾರ್ಕ್ಸ್‌ವಾದ, ಮಾನವೀಯ, ಸ್ವಾತಂತ್ರ್ಯವಾದಿ, ನೈತಿಕ ಚೇತನವು ನಮ್ಮ ಕಾಲದ ಹೊಸಧರ್ಮವನ್ನು ಸೃಜಿಸಲು ಅಣಿಯಾಗುವುದು." ಅದು ಮಾನವನ ಪರಂಪರೆಯ ಸಂಚಿತ ಬಂಡವಾಳದ ಭಾಗ. ಇವನ್ನು ಭವಿಷ್ಯದ ನಿರ್ಮಾಪಕರು ಬಳಸಬೇಕು. ಮಾರ್ಕ್ಸ್‌ನ ವಿಚಾರಧಾರೆ ಆರ್ಥಿಕವಾಗಿ ಉದಾರವಾದಿ ಪರಂಪರೆಯಿಂದ ಹುಟ್ಟಿದುದು. ನೈತಿಕತೆ ಬೂರ್ಜ್ವಾ ಉಪಯುಕ್ತವಾದಕ್ಕೆ (Utilitarianism) ನೈತಿಕ ತೀವ್ರಗಾಮಿತ್ವವೇ (Moral radicalism) ತತ್ವಜ್ಞಾನದ ಬಲವಾದ ಆಕರ್ಷಣೆಯಾಗಿತ್ತು. ಮಾರ್ಕ್ಸ್‌ವಾದದ ಆ ಸಾರಸತ್ವವನ್ನು ಸಾಂಪ್ರದಾಯಿಕ ಮಾರ್ಕ್ಸ್‌ವಾದಿಗಳು ಮರೆತರು ಮತ್ತು ಅದನ್ನು ಒಂದು ರಾಜಕೀಯ ಪಾದ್ರಿವಾದ (Jesuitism) ಮಾಡಿದ್ದಾರೆ.

ಮಾರ್ಕ್ಸ್‌ನ ಸಿದ್ಧಾಂತದ ತಿರುಳಾದ ಮಿಗುವ ಮೌಲ್ಯ (Surplus value) ವನ್ನು ಅವರು ವಿಮರ್ಶಿಸುತ್ತಾ, ಬಂಡವಾಳ ಶಾಹಿಯ ಗುಣವಾದ ಮಿಗುವ ಮೌಲ್ಯ ಹೊಸವ್ಯವಸ್ಥೆಯಲ್ಲಿಯೂ ಮುಂದುವರೆಯುವುದು. ಇದನ್ನು ಕಬಳಿಸುವುದು ಕಾರ್ಮಿಕವರ್ಗವಷ್ಟೇ. ಹೀಗಾಗಿ ಸಮಾಜವಾದಿ ಸಮಾಜದಲ್ಲಿ ಕಾರ್ಮಿಕರ ಶೋಷಣೆಯಿದೆ.

ಮಧ್ಯಮವರ್ಗದ ಬಗ್ಗೆ ಮಾರ್ಕ್ಸ್‌ನ ನಿಲುವು ತಪ್ಪಾದದ್ದು. ಅವನು ಅಂದುಕೊಂಡಂತೆ ಅದು ಅದೃಶ್ಯವಾಗಲಿಲ್ಲ. ತದ್ವಿರುದ್ಧವಾಗಿ, "ಮೊದಲನೇ ಮಹಾಯುದ್ಧವು ಉಂಟುಮಾಡಿದ ಆತಂಕಕಾರಿ ಪರಿಸ್ಥಿತಿಯಲ್ಲಿ, ಮಧ್ಯಮವರ್ಗದ ಬೌದ್ಧಿಕ ರಾಜಕೀಯ ಮಹತ್ವ ಅತ್ಯಂತ ನಿರ್ಣಾಯಕ ಎನ್ನುವುದು ಖಚಿತವಾಯಿತು."

ನಂತರ ಅವರು ಮಧ್ಯಮವರ್ಗದ ಪಾತ್ರವನ್ನು ಕೊಂಡಾಡುತ್ತಾ, 'ಮಧ್ಯಮವರ್ಗ ಮಾತ್ರ, ಅನುದ್ವಿಗ್ನತೆಯಿಂದ ಪ್ರಕೃತ ಆರ್ಥಿಕ ಸಂಕಷ್ಟಗಳನ್ನಷ್ಟೇ ಗಣನೆಗೆ ತೆಗೆದುಕೊಳ್ಳದೆ, ಸಾಮಾಜಿಕ ನ್ಯಾಯ ಒದಗಿಸಬಲ್ಲ... ವ್ಯಕ್ತಿಗಳನ್ನು ಕೊಡಬಲ್ಲದು' ಬಂಡವಾಳಶಾಹಿ ಮತ್ತು ಕಮ್ಯುನಿಸಂ ಎರಡೂ ಸರ್ವಾಧಿಕಾರದ ಗುರಿಹೊಂದಿವೆ. ಇವುಗಳನ್ನು ಮೀರಬಲ್ಲ ಶಕ್ತಿ ಇರುವುದು ಮಧ್ಯಮವರ್ಗಕ್ಕೆ ಮಾತ್ರ ಎನ್ನುತ್ತಾರೆ.

ಬಂಡವಾಳಶಾಹಿ ಮತ್ತು ಕಮ್ಯೂನಿಸಂ ಎರಡನ್ನೂ ತೀವ್ರವಾಗಿ ವಿಮರ್ಶಿಸಿದ ಅವರು ತಮ್ಮ ವಿಚಾರಧಾರೆ–ತೀವ್ರಗಾಮಿ ಮಾನವತಾವಾದವನ್ನು ಮುಂದಿಡುತ್ತಾರೆ.

ಕ್ರಾಂತಿಯು ತತ್ವಜ್ಞಾನ ಸಮಾಜದ ಬೇರಿನಿಂದಲೇ ಆಗಬೇಕು. ಇಲ್ಲಿಯತನಕ ಸಂಪಾದಿಸಿದ ಮನುಷ್ಯನ ಒಟ್ಟು ಅನುಭವದ ನೆಲೆಯಲ್ಲಿ ಸಿದ್ಧಾಂತವನ್ನು ವಿಶದಪಡಿಸಬೇಕು. ಅದರ ಆಧಾರದ ಮೇಲೆ ರಾಜಕೀಯ ಆಚರಣೆ, ಆರ್ಥಿಕ ಮರುಸಂಘಟನೆಯ ಗುರಿಯನ್ನು ನಿರ್ಧರಿಸಬೇಕು ಅದೇ ತೀವ್ರಗಾಮಿತ್ವ. ಈ ಸಿದ್ಧಾಂತದ ಪ್ರಕಾರ ಸ್ವಾತಂತ್ರ್ಯವೆಂದರೆ, ವ್ಯಕ್ತಿಸ್ವಾತಂತ್ರ್ಯ. ಆದ್ದರಿಂದ ಇದನ್ನು ನವಮಾನವತಾವಾದವೆಂದು ಕರೆಯಬಹುದು, ಇದಕ್ಕೆ ದೇಶದೇಶಗಳ ನಡುವಿನ ಗೋಡೆಗಳಿಲ್ಲ.

ನವಮಾನವತಾವಾದದ ಆಧಾರದ ಮೇಲೆ ಅವರು ತೀವ್ರಗಾಮಿ ಪ್ರಜಾತಂತ್ರವನ್ನು ವ್ಯಾಖ್ಯಾನಿಸುತ್ತಾರೆ. ಮನುಷ್ಯನಿಗೆ ಭವಿಷ್ಯದ ಬಗ್ಗೆ ಆಸೆ ಹುಟ್ಟಿಸಬೇಕಾದರೆ, ಸ್ವಾತಂತ್ರ್ಯದ ಕಲ್ಪನೆಗೆ ಮೂರ್ತಸ್ವರೂಪ ಕೊಡಬೇಕು. ಸಮಾಜದ ಅರ್ಥವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಸದೆಬಡಿಯಬೇಕು. ಈ ಉದ್ದೇಶಕ್ಕಾಗಿ ಅವರು ತೀವ್ರಗಾಮಿ ಪ್ರಜಾಸತ್ತೆಯ ತತ್ವಗಳನ್ನು ಹೇಳುತ್ತಾರೆ.

ಮನುಷ್ಯನ ಪ್ರಗತಿಯ ಮುಖ್ಯಪ್ರೇರಣೆ ಸ್ವಾತಂತ್ರ್ಯಾನ್ವೇಷಣೆ ಮತ್ತು ಸತ್ಯಶೋಧನೆಗಳು. ಈ ಹಿನ್ನೆಲೆಯಲ್ಲಿ ಮಾರ್ಕ್ಸವಾದಿ ಭೌತವಾದಕ್ಕೆ ಹೊಸ ಅರ್ಥ ನೀಡಲು ಪ್ರಯತ್ನಿಸುತ್ತಾರೆ. ಕಮ್ಯೂನಿಸಂ ಮತ್ತು ಬಂಡವಾಳಶಾಹಿ ಪ್ರಜಾಸತ್ತೆಗೆ ತೀವ್ರಗಾಮಿ ಪ್ರಜಾಸತ್ತೆ ಹೇಗೆ ಭಿನ್ನವೆಂದು ವಿವರಿಸುತ್ತಾರೆ. ಇದರ ಗುರಿ ಸ್ವಾತಂತ್ರ್ಯ, ವಿಜ್ಞಾನ, ವ್ಯಕ್ತಿಯ ಬದುಕಿನ ಸಮನ್ವಯವೆಂದು ಹೇಳುತ್ತಾರೆ. ಇದನ್ನು ಸಾಧಿಸಲು ರಾಜಕೀಯ ಪಕ್ಷದ ಅವಶ್ಯಕತೆಯಿಲ್ಲ. ಬುದ್ಧಿಜೀವಿಗಳನ್ನು ಆಧರಿಸಿದ ಜನ ಆಂದೋಲನ ಸಾಕೆನ್ನುತ್ತಾರೆ. ವ್ಯಾಪಕ ಸಾಮಾಜಿಕ ಆಂದೋಲನದ ಮೂಲಕ ಹೊಸ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಗುವುದು. ರಾಜಕೀಯ ಪಕ್ಷದ ಮೂಲಕವಲ್ಲ. ಚಳುವಳಿಯ ಮಾರ್ಗ ಹೀಗಿದೆ–'ವಿವೇಚಕ ಜವಾಬ್ದಾರಿಯುತ ಮತ್ತು ಸ್ವಾತಂತ್ರ್ಯಪ್ರೇಮಿ ಸದಸ್ಯರನ್ನೊಳಗೊಂಡ ಜನಸಮಿತಿಗಳು, ಸಾರ್ವಭೌಮಾಧಿಕಾರವುಳ್ಳ ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳ ಘಟಕಗಳಾಗಿ ಬೆಳೆಯುತ್ತವೆ.' ಈ ಸಮಿತಿಗಳ ಜಾಲಗಳು ದೇಶದಲ್ಲೆಲ್ಲಾ ಪೂರ್ತಿಯಾಗಿ ವಿಸ್ತರಿಸಿದಾಗ, ನಿಜವಾದ ಪ್ರಜಾಪ್ರಭುತ್ವದ ಸಾಧ್ಯತೆ ರೂಪುಗೊಳ್ಳುತ್ತದೆ. ಇದೇ ಅವರ ಮಾರ್ಗ.

ರ್‍ಯಾಡಿಕಲ್ ಮಾನವತಾವಾದ (ನನ್ನ ಪ್ರಕಾರ ತೀವ್ರಗಾಮಿ ಪದ ಸ್ವಲ್ಪ ಆಭಾಸ ಉಂಟುಮಾಡುತ್ತದೆ.) ಕಮ್ಯುನಿಸಂ ಮತ್ತು ಬಂಡವಾಳಶಾಹಿ ಎರಡನ್ನೂ ತಿರಸ್ಕರಿಸಿ, ಹೊಸದಾರಿ ಹಿಡಿಯಲು ಪ್ರಯತ್ನಿಸುತ್ತದೆ. ಅದು ಮಾರ್ಕ್ಸ್‌ನ ಮೂಲ 'Concern' ಆದ ಮನುಷ್ಯನ ಅಸ್ತಿತ್ವದಿಂದಲೇ ಪ್ರಾರಂಭಿಸಿ, ಜನರ ರಾಜಕೀಯ ಆಂದೋಲನದಿಂದ ಸಮಾಜವನ್ನು ಬದಲಾಯಿಸಿ, ಸ್ವಾತಂತ್ರ್ಯಕ್ಕೆ ಹೊಸ ಅರ್ಥ ನೀಡುವ ಪ್ರಯತ್ನವನ್ನು ಮಾಡಿದೆ. ಆದರೆ ಕಮ್ಯೂನಿಸಂನ್ನು ಬೆಂಬಲಿಸಿದ ಅಥವಾ ಅದಕ್ಕೆ ಪೂರ್ಣವಾಗಿ ವಿರೋಧಿಯೂ ಅಲ್ಲದ ಎಡಬಿಡಂಗಿ ಸಿದ್ಧಾಂತವಿದು. ರಾಜಕೀಯ ಅಧಿಕಾರದ ಗುರಿ ಎಂದಿಗೂ ಇದಕ್ಕೆ ಇಲ್ಲ. ವರ್ಗ ಹೋರಾಟವನ್ನೇ ನಿರಾಕರಿಸಿದ ಈ ಸಿದ್ಧಾಂತ ಭಾರತದಲ್ಲಿ ರಾಯ್‌ ಕನಸಿದ ಯಾವುದೇ 'ಜನಾಂದೋಲನ'ವಾಗಿ ಬೆಳೆಯಲಿಲ್ಲ. ಮಾರ್ಕ್ಸ್‌ವಾದದ ಮೂಲಭೂತ ಅಂಶವಾದ 'ದುಡಿಯುವ ವರ್ಗದ ನಾಯಕತ್ವವನ್ನು ತಿರಸ್ಕರಿಸಿದ ರ್‍ಯಾಡಿಕಲ್ ಮಾನವತಾವಾದವು, ಪರ್ಯಾಯವಾಗಿ ಯಾರು ಸಾಮಾಜಿಕ ಬದಲಾವಣೆಯ ನಾಯಕತ್ವ ವಹಿಸಬೇಕೆಂದು ಪ್ರಬಲವಾಗಿ ವಾದಿಸುವುದಿಲ್ಲ. ಮಧ್ಯಮವರ್ಗದ ಬಗ್ಗೆ ಕೆಲವೆಡೆ ಒತ್ತು ಕೊಡಲಾಗಿದೆ. ರ್‍ಯಾಡಿಕಲ್ ಮಾನವತಾವಾದ ಭಾರತದ ವಿಶಿಷ್ಟಸಮಸ್ಯೆಗಳಾದ ಜಾತಿವ್ಯವಸ್ಥೆ, ರಾಷ್ಟ್ರೀಯತೆಗಳ ಸಮಸ್ಯೆ, ಅಲ್ಪಸಂಖ್ಯಾತರ ಸಮಸ್ಯೆಗಳು, ಊಳಿಗಮಾನ್ಯ ಮೌಲ್ಯಗಳು ಇತ್ಯಾದಿಗಳ ಬಗ್ಗೆ ಈ ಪ್ರಣಾಳಿಕೆಯಲ್ಲಿ ಎಲ್ಲೂ ಯಾವುದೇ ಚಕಾರವೆತ್ತುವುದಿಲ್ಲ. ಯಾರಾದರೂ ಇದು ಮಾರ್ಕ್ಸ್‌ವಾದದ 'ಭಾರತೀಕರಣ' ಎಂದುಕೊಂಡರೆ ತಪ್ಪಾಗುತ್ತದೆ. ವಾಸ್ತವವಾಗಿ ನನ್ನ ದೃಷ್ಟಿಯಲ್ಲಿ ರ್‍ಯಾಡಿಕಲ್ ಮಾನವತಾವಾದ ಸ್ಟಾಲಿನ್ ಕಾಲದ 'ತಿರುಚು'ಗಳ ವಿರುದ್ಧದ ಪ್ರತಿಕ್ರಿಯೆಯಷ್ಟೇ.

ಈ ಕೃತಿಯಲ್ಲಿ ಅನೇಕ ಕಡೆ ಭಾಷಾಂತರ ಸಂಸ್ಕೃತಮಯವಾಗಿದ್ದು ಒರಟಾಗಿದೆ. ಕನ್ನಡದಲ್ಲಿ ರಾಜಕೀಯ ಪರಿಭಾಷೆಯ ಬೆಳವಣಿಗೆಯ ಕೊರತೆ ಇದಕ್ಕೆ ಕಾರಣವಿರಬಹುದು. ಏನೇ ಆದರೂ, ಕಮ್ಯೂನಿಸಂನಿಂದ ಹೊರಬಿದ್ದು ಹೊಸ ಸವಾಲು ಹಾಕಲು ಪ್ರಯತ್ನಿಸಿದ ರಾಯ್‌ರ ಪ್ರಮುಖಕೃತಿಯನ್ನು ಕನ್ನಡದಲ್ಲೂ ತಂದ ಲೇಖಕರ ಪ್ರಯತ್ನ ಅಭಿನಂದನಾರ್ಹ.

—ಡಾ. ವಿ. ಲಕ್ಷ್ಮೀನಾರಾಯಣ

ಕೆ.ಸಂ. ೩೧೭೬—ಎಂ.ಯು.ಪಿ.ಎಂ.—೮೨೫—೨೧-೭-೯೦

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬